ಯಾತ್ರಿಕ



ಲೇಖಕರು :
ರಂಗನಾಥ ದಿವಾಕರ

ಮನೋಹರ ಗ್ರಂಥಮಾಲೆಯ ೧೨೭ನೆಯ ಕುಸುಮ

ಯಾತ್ರಿಕ

(ತತ್ವಜಿಜ್ಞಾಸಿಯ ವಿಚಾರಲಹರಿ)

ಬರೆದವರು :
ಶ್ರೀ. ರಂಗನಾಥ ದಿವಾಕರ

ಅಗಸ್ಟ
೧೯೫೪

ಬೆಲೆ :
೨-೦-೦

ಮನೋಹರ ಗ್ರಂಥಪ್ರಕಾಶನ ಸಮಿತಿ, ಧಾರವಾಡ

ಪ್ರಕಾಶಕರು :
ಜಿ. ಬಿ. ಜೋಶಿ
ಮನೋಹರ ಗ್ರಂಥಮಾಲೆ
ಧಾರವಾಡ

ಮುದ್ರಕರು :
ಹ. ರಾ. ಪುರೋಹಿತ
ಸಂಯುಕ್ತ ಕರ್ನಾಟಕ ಮುದ್ರಣಾಲಯ
ಹುಬ್ಬಳ್ಳಿ

ನಮ್ಮ ಮಾತು

ಗ್ರಂಥಮಾಲೆಯ ಇಪ್ಪತ್ತೆರಡನೆಯ ವರ್ಷವು ರಾಜ್ಯಪಾಲರಾದ ಪೂಜ್ಯ ಶ್ರೀ. ರಂಗನಾಥ ದಿವಾಕರ ಅವರು ಬರೆದ 'ಯಾತ್ರಿಕ' ಎಂಬ—ಜೀವನ ದರ್ಶನದ ವಿವಿಧ ಮುಖಗಳನ್ನು ತೋರಿಸುವ ಜ್ಞಾನದಾಯಕ—ಗ್ರಂಥದಿಂದ ಪ್ರಾರಂಭವಾದುದು ಒಂದು ವಿಶೇಷ ಯೋಗಾಯೋಗವಲ್ಲದೆ, ಗ್ರಂಥ ಮಾಲೆಯು ಈ ವರೆಗಿನ ತನ್ನ ಸರಸಸಾಹಿತ್ಯಮಾರ್ಗದಿಂದ ವಿಚಾರವಾಙ್ಮಯ ದತ್ತ ದೃಷ್ಟಿ ಹೊರಳಿಸಿದ ಮುನ್ಸೂಚನೆಯೂ ಆಗಿದೆ. ನಮ್ಮ ಗ್ರಾಹಕರೂ ಇದನ್ನು ಸಹೃದಯಭಾವದಿಂದ ಸ್ವಾಗತಿಸುವರೆಂದು ನಂಬಿದ್ದೇನೆ.

ಶ್ರೀ. ದಿವಾಕರಅವರ ಅಧ್ಯಾತ್ಮದೃಷ್ಟಿಗೆ ಕಂಡ ಜೀವನದರ್ಶನಸಾರವೆ ಈ ಗ್ರಂಥದಲ್ಲಿ ತುಂಬಿ ಬಂದಿದೆಯೆಂದರೆ ಅನುಚಿತವಾಗಲಾರದು. ಜೀವನ-ಮಾರ್ಗದಲ್ಲಿ ಅವರು ಅರವತ್ತು ಮೈಲು ನಡೆದು ಮುಗಿಸಿ ಅರವತ್ತೊಂದರ ಸೀಮೆಯಲ್ಲಿ ಕಾಲಿಟ್ಟಾಗ, ಈ ಜಗತ್ತಿಗೂ ಆ ಜಗತ್ತಿಗೂ ಸೀಮಾಪುರುಷ ನಾಗಿ ನಿಂತಾಗ, ಹಿಂದೂ ಮುಂದೂ ಚಾಚಿದ ತಮ್ಮ ಕಣ್ಣಿಗೆ ಕಾಣುತ್ತಿರುವ ಎರಡೂ ಜಗತ್ತಿನ ಗುರುತಾಗಿ ಈ ಕೃತಿಸಂಕೇತವನ್ನು ನಿಲ್ಲಿಸಿದ್ದಾರೆ, ಆ ದಾರಿ ಯಿಂದ ಸಾಗಿರುವ ಯಾತ್ರಿಕರಿಗೆ ದಾರಿ ತಪ್ಪದಿರಲೆಂದು.

ಈ ಗ್ರಂಥವನ್ನು ಶ್ರೀ. ದಿವಾಕರಅವರ ಷಷ್ಟ್ಯಬ್ಧಪೂರ್ತಿಯ ಸುಸಮ-ಯಕ್ಕೇ ಹೊರತರಬೇಕೆಂಬ ಸಂಕಲ್ಪವಿದ್ದಿತಾದರೂ ಅದು ಸಾಧ್ಯವಾಗದೆ ಹೋಯಿತು, ಅನೇಕ ಅನಿರೀಕ್ಷಿತ ತೊಂದರೆಗಳಿಂದ. ಈಗಾದರೂ ಇದು ಪ್ರಕಟವಾಗಿ ಹೊರಕ್ಕೆ ಬರುವುದು ಸಾಧ್ಯವಾಯಿತಲ್ಲಾ ಎಂದು ಸಂತೋಷ-ಪಡಬೇಕಾಗಿದೆ.

ನಮ್ಮ ಈ ಗ್ರಂಥಮಾಲೆಯಲ್ಲಿ ಪ್ರಕಟಿಸಲು ತಮ್ಮ ಇಂತಹ ಕೃತಿ ಯೊಂದನ್ನು ದಯಪಾಲಿಸಿ ಶ್ರೀ. ದಿವಾಕರಅವರು ಮಾಲೆಯನ್ನು ಗೌರವಿ ಸಿದ್ದಾರೆ; ನನ್ನ ಮಾತಿಗೂ ಬೆಲೆ ತಂದುಕೊಟ್ಟಿದ್ದಾರೆ; ಧೈರ್ಯ ಹೇಳಿ ಉತ್ಸಾಹ ತುಂಬಿದ್ದಾರೆ. ಗ್ರಂಥಮಾಲೆಗೆ ಅವರ ಈ ಕೃತಿ ಒಂದು ಹರಕೆ. ಇದನ್ನು ದಯಪಾಲಿಸಿದ್ದಕ್ಕಾಗಿ ಪೂಜ್ಯರಾದ ಶ್ರೀ. ದಿವಾಕರ ಅವರಿಗೆ ನಾನು ಅತ್ಯಂತ ಕೃತಜ್ಞನಾಗಿದ್ದೇನೆ.

ಗ್ರಂಥಮಾಲೆಗೆ ಹೊಸ ವರ್ಷದಿಂದ ಆಜೀವ ಚಂದಾದಾರರಾಗಲ
ನೆರವಿತ್ತು ಪೋಷಿಸಿದ ಸರ್ವಶ್ರೀ. ಅಂದಾನೆಪ್ಪ ದೊಡ್ಡಮೇಟಿ (ಜಕ
ಕ್ಯಾಪ್ಟನ್ ಆರ್. ಎಚ್. ದೇಸಾಯಿ (ಬೆಳಗಾವಿ), ಎ ಸ್, ಸಿ. ಯಳ
(ಗದಗ), ಪಿ. ಆರ್. ಗದಗಕರ (ಪಾಟ್ನಾ), ಜಿ. ಬಿ. ಶೆಟ್ಟಿ (ಲಕ್ಷ್ಮೇಶ
ಮೈಲಾರಗೌಡ ಮೇಲ್ಗಿರಿಗೌಡ ಪಾಟೀಲ (ಕುರ್ತಕೋಟಿ), ದೇ
ರಾಮಚಂದ್ರ ಪಾಟೀಲ (ಕೋಳಿವಾಡ), ರಾಮರಾವ ನಾಗೇಶ
ದೇಸಾಯಿ (ಕುಂದಗೋಳ), ಪಾಂಡುರಂಗ ವ್ಹಿ. ದೇಸಾಯಿ (ಕಿನ್ನಾ
ಡಿ. ಜಿ. ಕಟ್ಟಿಮನಿ (ಗದಗ), ಎಸ್. ವ್ಹಿ. ಮಳಗಿ (ಗದಗ), ಎ. ಎ
ಪಾಟೀಲ (ಗದಗ), ಬಿ. ಡಿ. ಕುಲಕರ್ಣಿ (ಹಿರೇಹಂದಿಗೋಳ), ಬಿ.
ಪಾಟೀಲ (ಇಟಿಗಿ), ರಂಗನಾಥ ವೆಂಕಟೇಶ ಪಾಟೀಲ (ತಮನಾ
ಷಣ್ಮುಖಗೌಡ ಸೋಮನಗೌಡ ಪಾಟೀಲ (ಹರ್ಲಾಪುರ), ಕೃಷ್ಣಮೂ
ವಾಸುದೇವರಾವ ಪಾಟೀಲ (ಹೊಂಬಳ), ಪಾರ್ಥಸಾರಥಿ ಗುಂಡೇರಾ
ಕೌಕೂರ (ಬಾಗಿಲುಕೋಟೆ), ವೆಂಕಟರಾವ ಆರ್. ವಡವಡ
(ಬಾಗಿಲುಕೋಟೆ), ಕೃಷ್ಣರಾವ ರಾಮರಾವ ದೇಸಾಯಿ (ಗದಗ
ಡಾ. ಜಿ. ಎಸ್. ಕುಲಕರ್ಣಿ (ಗದಗ), ಗುರುರಾವ ವ್ಹಿ. ಅಪರಂಜಿ (ಗದಗ
ಗಣಪತರಾವ ಶಂಕರರಾವ ದೇಸಾಯಿ, (ತಿಮ್ಮಾಪುರ), ಈರಪ್ಪ ಚೆನ್ನಬಸ
ವಾಣಿ (ಧಾರವಾಡ) ಈ ಮಹನೀಯರೆಲ್ಲರಿಗೂ ಗ್ರಂಥಮಾಲೆಯು ತನ
ಕೃತಜ್ಞತಾಪೂರ್ವಕ ಅಭಿವಂದನೆಗಳನ್ನು ಸಲ್ಲಿಸುತ್ತದೆ.

ಈ ಗ್ರಂಥವನ್ನು ಅಚ್ಚು ಹಾಕಿಸುವ ಕಾರ್ಯದಲ್ಲಿ ನನಗೆ ಅನೇಕ ರೀ
ಯಿಂದ ನೆರವಾದ ಶ್ರೀಮಾನ್ ವ್ಹಿ. ಬಿ. ನಾಯಿಕ ಅವರಿಗೂ ಶ್ರೀಯುತ
ಡಿ. ಎಲ್. ಕೆರೂರ ಅವರಿಗೂ ನಾನು ತುಂಬಾ ಉಪಕೃತನಾಗಿದ್ದೇನೆ.

ಈ ಗ್ರಂಥಕ್ಕೆ ಹೊದಿಕೆ ಚಿತ್ರವನ್ನು ತೆಗೆದುಕೊಟ್ಟುದಲ್ಲದೆ ಒಳಗಿನ ಎಲ್ಲ
ಚಿತ್ರಗಳನ್ನೂ ಕಲ್ಪನೆಗೆ ಅರ್ಥ ಬರುವಂತೆ ತೆಗೆದುಕೊಟ್ಟ ಕಲಾವಿದ ಶ್ರೀ.
ಅನುಕೂಲಚಂದ್ರ ಬ್ಯಾನರ್ಜಿಯವರಿಗೂ, ಈ ಗ್ರಂಥವನ್ನು ಮುದ್ರಿಸಿಕೊಡು-
ವುದರಲ್ಲಿ ಬೆನ್ನಾಸರಾಗಿ ನೆರವಿಗೆ ಬಂದ ಹಿರಿಯರಾದ ಶ್ರೀ. ಮೊಹರೆ
ಹಣಮಂತರಾಯರಿಗೂ, ಅಲ್ಪಾವಕಾಶದಲ್ಲಿಯೆ ಇದನ್ನು ಮುದ್ರಿಸಿಕೊಟ್ಟ
ಸಂಯುಕ್ತ ಕರ್ನಾಟಕ ಮುದ್ರಣಾಲಯದ ಕೆಲಸಗಾರರಿಗೂ, ಗ್ರಂಥದ ಅಂದ
ಹೆಚ್ಚಾಗುವದಕ್ಕೆ ಅನೇಕರೀತಿಯಿಂದ ಸಲಹೆಯಿತ್ತು ಸಹಕರಿಸಿದ ಶ್ರೀ. ವ್ಹಿ.
ವಾಯ್. ಜತಾರ ಅವರಿಗೂ ನನ್ನ ಕೃತಜ್ಞತೆಯ ವಂದನೆಗಳು.

—ಸಂಪಾದಕ

ಮುನ್ನುಡಿ

ಈ ಚಿಕ್ಕ ಪುಸ್ತಕ ಬರೆಯುವ ಕುರಿತು ಒಂದು ಸಣ್ಣ ಸಂದರ್ಭ ಇದೆ: ಮನೋಹರ ಗ್ರಂಥಮಾಲೆಯ ಸಂಯೋಜಕರಾದ ಜೋಶಿಯವರು ಹಲವು ವರುಷಗಳಿಂದ ತಮ್ಮ ಮಾಲೆಗಾಗಿ ನನ್ನಿಂದ ಒಂದು ಪುಸ್ತಕವನ್ನು ಬೇಡುತ್ತಲಿದ್ದರು. ನನ್ನದೆಂದೆನಿಸುವ ಅಧ್ಯಾತ್ಮ ಕಾರ್ಯಾಲಯದ ಪುಸ್ತಕಮಾಲೆಯೆ 'ಆ' ಎಂದು ಹೊಸ ಪುಸ್ತಕಗಳಿಗಾಗಿ ಬಾಯ್ತೆರೆದು ಕುಳಿತಿರುವಾಗ ನಿಮ್ಮ ಮಾಲೆಗಾಗಿ ನಾನು ಬರೆಯುವ ಬಗೆ ಯಾವ್ರದು, ಎಂದು ಕೇಳುತ್ತ ಈ ಕೆಲಸವನ್ನು ಮುಂದೆ ಹಾಕಿದ್ದೆನು. ಆದರೆ ಇದರಲ್ಲಿ ನಾನೇ ಸೋತೆನು. ಅವರ ಅಕ್ಕರದ ಬೇಡಿಕೆ ನನ್ನನ್ನು ಜಯಿಸಿಬಿಟ್ಟಿತೆನ್ನಬಹುದು. ಕೊನೆಗೆ ಬರೆಯಲೊಪ್ಪಿದೆ.

ಆದರೆ ವಿಷಯವೇನಿರಬೇಕು, ಎಂಬ ಪ್ರಶ್ನೆ ಎದುರಾಯಿತು. ಈ ವಿಷಯದಲ್ಲಿ ಅವರು ನನಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟುಬಿಟ್ಟರು. ಸ್ವಲ್ಪ ವಿಚಾರದ ನಂತರ, ಮಾನವಜೀವನ, ಅದರ ಸಮಸ್ಯೆಗಳು, ವಿವಿಧ ಸಂದರ್ಭಗಳು, ಅನುಭವ ಮುಂತಾದವುಗಳನ್ನು ಕುರಿತು ನಾಲ್ಕು ಮಾತು ಬರೆಯಬೇಕೆಂದು ನಿಶ್ಚಯಿಸಿದೆನು.

ನಾನು ಬರೆದುದು ಒಂದು ವ್ಯವಸ್ಥಿತವಾದ ಇಲ್ಲವೆ ತರ್ಕಶುದ್ಧವಾದ ವಿವೇಚನೆ ಇಲ್ಲವೆ ಮೀಮಾಂಸೆ ಎನಿಸಲಾರದು. ಇದೊಂದು ಹುರುಳಿನ ಹರಟೆಯ ರೂಪದಲ್ಲಿಯೆ ಇದೆ ಎನ್ನಬಹುದು. ಅಥವಾ ಇದಕ್ಕೆ ಹುರುಳಿಸದೆನ್ನಲಿಕ್ಕಾದರೂ ನನಗೇನು ಅಧಿಕಾರ? ಹಲವರು ಇದೊಂದು ಹಾಳುಹರಟೆಯೆಂದರೂ ನನಗೆ ಸಿಟ್ಟಿಲ್ಲ!

ನಮ್ಮ ಜೀವನದತ್ತ ನಾವು ಅನೇಕ ದೃಷ್ಟಿಯಿಂದ ನೋಡುವದುಂಟು. ಹಲವರು ನಾಟಕವೆಂದು, ಕೆಲವರು ಕಂಟಕವೆಂದು, ಇನ್ನು ಕೆಲವರು ಸುಸಂಧಿಯೆಂದು, ಮತ್ತೆ ಹಲವರು ಭವಸಾಗರವೆಂದು, ಹೀಗೆ ಒಂದಲ್ಲ ಎರಡಲ್ಲ, ತಮ್ಮ ತಮ್ಮ ದೇಶಕಾಲಪರಿಸ್ಥಿತಿ, ಅನುಭವ, ವೃತ್ತಿ, ಭಾವನೆ, ತತ್ವದರ್ಶನ ಮುಂತಾದವುಗಳಿಗನುಸರಿಸಿ ಜನರು ಜೀವನವನ್ನು ಬೆಲೆ ಕಟ್ಟುವರು. ಇಷ್ಟೇ ಅಲ್ಲ. ಒಂದೇ ವ್ಯಕ್ತಿ ಕೂಡ ಸಂದರ್ಭ-ಸನ್ನಿವೇಶಾನುಸಾರವಾಗಿ ಜೀವನದ ಕಡೆಗೆ

ಬೇರೆ ಬೇರೆ ರೀತಿಯಿಂದ ನೋಡುವನು. ಆಯಾ ವ್ಯಕ್ತಿಯ ದೃಷ್ಟಿಯಿಂ
ಆಯಾ ಕಾಲಕ್ಕೆ ಅದು ಅವನ ಅನುಭವದ ಒರೆಗಲ್ಲಿಗೆ ಇಳಿಯುವದರಿಂದ
ವಟ್ಟಿಗೆ ಅವನಿಗೆ ಅದೇ ಸತ್ಯವೆಂದು ತೋಚುವದು ಆಶ್ಚರ್ಯದ ಮಾತ್ರ
ಯಾಕಂದರೆ ಆಯಾ ಮನುಷ್ಯನ ವಿಚಾರ-ಭಾವನಾದಿಗಳಿಗೆ ಅವನ ಅನುಭವ
ಮೂಲಾಧಾರವು.

ಪ್ರತಿಕ್ಷಣ ತನಗೆ ಆಗುತಿರುವ ಅನೇಕ ಹಾಗೂ ವಿವಿಧ ಅನುಭವಗಳನ್ನ
ವ್ಯಕ್ತಿಯು ಸರಳಗೊಳಿಸಿ ಆ ಅನುಭವಮಾಲೆಯೊಳಗಿಂದ ಹಾಯುವ ಸೂತ್ರ
ವನ್ನು 'ನಾನು' ಎಂದು ಕರೆಯುವನು. ಆ ಬಿಡಿಬಿಡಿಯಾದ ಅನುಭವಗಳಿಗೆ
ಏಕಸೂತ್ರತೆ ಬರುವದಾದರೂ ಆ 'ನಾನು' ಎಂಬುದರಿಂದಲೆ. ಆ 'ನಾನು'
ಎಂಬುದನ್ನು ಅನುಭವಮಾಲೆಯೊಳಗಿಂದ ತೆಗೆದೊಗೆದುಬಿಟ್ಟರೆ, ಸೂತ್ರ
ಸರಿದು ಹೋದ ಸರದ ಮಣಿಗಳೆಲ್ಲ ಚಲ್ಲಾಪಿಲ್ಲಿಯಾಗುವಂತೆ, ಅನುಭವಗಳಾ
ದರೂ ದಿಕ್ಕೆಟ್ಟುಹೋಗುವವು. ಸ್ಥೂಲಮಾನದಿಂದ ನೋಡಿದರೆ, ವ್ಯಕ್ತಿಯ
ಮೇಲೆ ಆಗುವ ಸಂಸ್ಕಾರ ಹಾಗೂ ಅದರ ಅರಿವು ಇವೆರಡೂ ಕೂಡಿ ಒಂದು
ಅನುಭವ ಎನಿಸುವದು. ಮನುಷ್ಯನ ಶರೀರಕ್ಕೆ ಬೆಂಕಿ ತಗಲಿದರೆ 'ಬಿಸಿ'
ಎಂಬನುಭವ ಅವನಿಗೆ ಬರುವದು. ಅಂಥ ಅನುಭವಗಳಿಗೆ ಅವನು ಸುಖ
ದುಃಖ ಎಂದು ಸಂದರ್ಭಾನುಸಾರವಾಗಿ ಹೆಸರಿಡುವನು. ಮನುಷ್ಯನಿಗೆ
ಜ್ಞಾತಾಜ್ಞಾತವಾಗಿ ಸತತವೂ ಅನುಭವಗಳಾಗುತಿರುವದುಂಟು. ಆದರೆ
ಎಲ್ಲ ಅನುಭವಗಳನ್ನೂ ಚನ್ನಾಗಿ, ಸ್ಪಷ್ಟವಾಗಿ ಗುರುತಿಸುವಷ್ಟು ಸೂಕ್ಷ್ಮತೆ
ಶಕ್ತಿ ಮಾನವನಲ್ಲಿಲ್ಲ. ಪ್ರತಿಕ್ಷಣವೂ ಅವನ ಮೇಲೆ ಆಗುತಿರುವ ಗುರುತ್ವಾ-
ಕರ್ಷಣ ಶಕ್ತಿಯ ಸಂಸ್ಕಾರದ ಅರಿವು ಸಹ ಅವನಿಗೆ ಇರುವುದಿಲ್ಲ. ನಮ್ಮ
ಕಣ್ಣು ಒಂದು ಸೆಕೆಂಡಿನ ಸುಮಾರು ಆರಾಂಶದಷ್ಟರೊಳಗಾಗಿ ಆಗುವ ಚಲನ
ವಲನಗಳನ್ನು ಗುರುತಿಸಲಾರದು. ಈ ಮಾತಿನ ಆಧಾರದ ಮೇಲೆಯೆ ಚಲ-
ಚ್ಚಿತ್ರಗಳ ರಚನೆಯಾಗಿರುವದು. ಆದರೆ ಇದರ ಮೇಲಿಂದ ಆಯಾ ಸಂಸ್ಕಾರ
ಗಳೇ ಮಾನವನ ಮೇಲೆ ಆಗುವದಿಲ್ಲವೆಂತಲ್ಲ. ಆ ಸಂಸ್ಕಾರ ಹಾಗೂ ಆ
ಅನುಭವ ಇವೆಲ್ಲವೂ ಸತತ ಆಗುತಿರುವವು. ಅವುಗಳಲ್ಲಿ ಹಲವುಗಳ ಅರಿವು
ಮಾತ್ರ ನಮಗೆ ಆಗಿ ಅವುಗಳಿಗೆ ನಾವು ನಮ್ಮ ಅನುಭವ ಎನ್ನುವೆವು ಹಾಗೂ
ಅವುಗಳನ್ನು ನಮ್ಮ ಸುಖದುಃಖ ಇತ್ಯಾದಿ ಅಳತೆಗಳಿಂದ ಅಳೆಯುವೆವು.
ನಮಗೆ ಪ್ರತ್ಯಕ್ಷವಾಗುವ ಅನುಭವಗಳ ಕ್ಷೇತ್ರ ಸೀಮಿತವಾಗಿರುವದು. ಆ
ಅನುಭವಗಳನ್ನೆ ಆಧಾರವಾಗಿಟ್ಟುಕೊಂಡು ಅನುಮಾನಾದಿಗಳ ಸಹಾಯದಿಂದ

ನಾವು ವಿಚಾರಮಾಡುವೆವು. ಆದುದರಿಂದ ಆ ವಿಚಾರಗಳ ಕ್ಷೇತ್ರವಾದರೂ ಸ್ವಾಭಾವಿಕವಾಗಿ ಸೀಮಿತವೆ ಇರುವದು.

ಈಚೆಗೆ ಮನುಷ್ಯನು ತನ್ನ ಇಂದ್ರಿಯಗಳಿಗೆ ಅನೇಕ ಸೂಕ್ಷ್ಮ ಸಾಧನಗಳನ್ನು ಒದಗಿಸಿಕೊಟ್ಟು ಅವುಗಳ ಜ್ಞಾನಶಕ್ತಿಯನ್ನು, ಅದರೊಡನೆ ಅವುಗಳ ಅನುಭವಶಕ್ತಿಯನ್ನು ಬೆಳೆಸಿರುವನು. ದುರ್ಬೀನು, ಭಾವಚಿತ್ರ ಮುಂತಾದವುಗಳ ಮೂಲಕ ಮನುಷ್ಯನ ಕಣ್ಣಿನ ಶಕ್ತಿಯು ಲಕ್ಷಾಂತರಪಟ್ಟು ಹೆಚ್ಚಾಗಿದೆ ಎಂದು ಹೇಳಬಹುದು. ಹೀಗೆಲ್ಲ ಆಗಿದ್ದರೂ ಒಟ್ಟಿಗೆ ಯಾವದೇ ಸಾಧನ ಸಾಮಗ್ರಿಗಳಿಂದ ಮನುಷ್ಯನಿಗೆ ಆಗುವ ಅನುಭವವೆ ಅವನ ವಿಚಾರಾದಿಗಳಿಗೆ ಆಧಾರಭೂತವು. ವಿಶ್ವದಲ್ಲಿ ಸತತವೂ ನಡೆದ ಕ್ರಿಯಾ-ಪ್ರತಿಕ್ರಿಯಾರೂಪ ಅನಂತಪ್ರವಾಹದಲ್ಲಿ ತೇಲುತಿರುವ ವ್ಯಕ್ತಿ, ತನಗಾಗುವ ಅನುಭವಗಳನೆಲ್ಲ 'ನಾನು' ಎಂಬ ಚಿತ್ಕಣದಲ್ಲಿ ಕೇಂದ್ರೀಕರಿಸುತ್ತ ಮುಂದೆ ಮುಂದೆ ಸಾಗುತಿರುವನು. ಒಂದು ರೀತಿ ನೋಡಿದರೆ, ಈ ಅನುಭವಪರವಶ ಚಿತ್ಕಣವೇ ಜೀವ, ಈ ಅನುಭವಮಾಲೆಯೆ ಜೀವನ. ಆದುದರಿಂದಲೆ, ದಾಸರು, 'ಯಾಕೆ ಬಂದಿ ಜೀವ, ಲೋಕದ ಅನುಭವ ಬೇಕಾಯ್ತೆ ನಿನಗೆ ?' ಎಂದು ಪ್ರಶ್ನೆಮಾಡಿರುವರು.

ಬರೆಬರೆಯುತ್ತ ನಾನು ಸ್ವಲ್ಪ ಆಳ ನೀರಿನಲ್ಲಿ ಸೇರುತಿರುವಂತೆ ತೋರುವದು. ಇಲ್ಲಿ ಹಾಗೆ ಮಾಡುವದು ನನ್ನ ವಿಚಾರವಿಲ್ಲ. ಏಕೆ, ಏನು, ಎಂದು, ಹೇಗೆ, ಮುಂತಾದ ಪ್ರಶ್ನೆಗಳನ್ನು ಕೇಳದೆ ನನ್ನಂತಹ ಅನಂತಾನಂತ ಚಿತ್ಕಣಗಳಲ್ಲಿ ನಾನೂ ಒಬ್ಬ ಎಂದುಗ್ರಹಿಸಿಯೆ ನಾನು ಮುಂದಡಿಯಿಡಬೇಕೆನ್ನುವೆ. ಈ ಅನುಭವವಿಶ್ವದಲ್ಲಿ ಅಥವಾ ಅನುಭವಸಾಗರದಲ್ಲಿ ನಾನೊಬ್ಬ ಯಾತ್ರಿಕ ಎಂಬ ಭಾವದಿಂದಲೆ ಹೊರಡುವದು ಯೋಗ್ಯವೆಂದು ನನಗೆ ತೋರುವದು. ಹಾಗೆ ಮಾಡಲು ಯತ್ನಿಸುವುದರಿಂದಲೆ ಈ ವಿಶ್ವದ ಒಗಟು ಸ್ವಲ್ಪಾದರೂ ನಮಗೆ ತಿಳಿಯುವ ಸಂಭವವಿರುವದು. ಇಲ್ಲದಿದ್ದರೆ ಇದಕ್ಕೆ ಅಂತವಿಲ್ಲ, ಪಾರವಿಲ್ಲ, ಅರ್ಥವಿಲ್ಲ. ಸಾಮಾನ್ಯ ಯಾತ್ರಿಕನು ಸದಾ ಪ್ರವಾಸಿಯಾಗಿ ತೀರ್ಥದಿಂದ ತೀರ್ಥಕ್ಕೆ ಕ್ಷೇತ್ರದಿಂದ ಕ್ಷೇತ್ರಕ್ಕೆ ಹೋಗುತ್ತಲೆ ಇರುವನು. ಆದರೆ ಇಷ್ಟದೇವತೆಯ ದರ್ಶನ, ಎಂಬ ಪವಿತ್ರ ಉದ್ದೇಶವು ಅವನ ಮುಂದೆ ಯಾವಾಗಲೂ ಕಟ್ಟಿರುವದು. ಅದೇ ಬಗೆಯಾಗಿ ಈ ಜೀವನವೆ ಒಂದು ಯಾತ್ರೆ, ಎಂದು ತಿಳಿದುಕೊಂಡು, ಈ ವಿಶ್ವದ ಗುಟ್ಟುಗುರಿಗಳಿಗೆ ಅರ್ಥಾತ್ ಸತ್ಯ, ಬ್ರಹ್ಮ, ಪರಮಾತ್ಮ ಇವೆ ಇಷ್ಟಸಾಧ್ಯ ಎಂಬ ಭಾವನೆಯಿಂದ ಹೊರಡುವದು ಜೀವನಕ್ಕೆ

ಒಂದು ಅರ್ಥವನ್ನು ಕೊಡಬಲ್ಲದು. ಬಳಿಕ ಪ್ರತಿ ಕ್ಷಣಕ್ಕಾಗುವ ಪ್ರತ್ಯನುಭವದಲ್ಲಿಯೂ ಸತ್ಯದಭ್ಯಾಸದ ಪ್ರಯತ್ನವನ್ನು ಮಾಡಲು ಅವಕಾಶವುಂಟಾಗುವದು.

ಈ ಮಾತು ಸುಲಭವಿಲ್ಲ ಎಂಬುದು ಪ್ರತ್ಯಕ್ಷ ಅನುಭವದ ಮಾತಾಗಿದೆ. ಆದರೆ ಇದರ ಹೊರತು ಜೀವನಪೂರ್ತಿಯಾಗುವದೂ ಕಠಿಣವಿದೆ ಎಂಬುದು ಅಷ್ಟೇ ಸ್ಪಷ್ಟವಿರುವದು. ಯಾತ್ರಿಕನು ತನ್ನ ಗುರಿಯನ್ನು ಮುಟ್ಟಿಯೇತೀರಬೇಕೆಂಬ ಹವ್ಯಾಸವುಳ್ಳವನಾಗಿದ್ದರೂ ಪ್ರತಿ ಯಾತ್ರಿಕನು ಅದನ್ನು ಮುಟ್ಟಿಯೇ ಮುಟ್ಟುವನೆಂದು ಹೇಳಲಿಕ್ಕಾಗುವದಿಲ್ಲ. ಸರಿಯಾದ ಗುರಿ, ಯೋಗ್ಯವಾದ ದಾರಿ, ಇವುಗಳನ್ನಿಟ್ಟುಕೊಂಡು ಸಾಗುವದಷ್ಟೇ ಯಾತ್ರಿಕನ ಕೈಯಲ್ಲಿರ ಬಹುದಾದ ಮಾತು. ಗುರಿ ಕೈವಶವಾಗುವದು, ಆಗದಿರುವದು ವಿಶ್ವಸಂಕಲ್ಪ ಅಥವಾ ವಿಶ್ವನಾಥನ ಸಂಕಲ್ಪ ಇವುಗಳನ್ನು ಅವಲಂಬಿಸಿರುವದು.

ಅಮೃತತ್ವ ಹಾಗೂ ಮಾನವೀ ಜೀವನದ ಉದ್ದೇಶ ಇವುಗಳನ್ನು ಕುರಿತು ಹೇಳುವಾಗ ಶ್ರೇಷ್ಠ ಪಾಶ್ಚಾತ್ಯ ತತ್ವಜ್ಞನಾದ ವ್ಹಾಯಿಟ್‌ಹೆಡ್ ಇವನು ಇದೇ ಬಗೆಯ ಎರಡು ಮಾತು ಹೇಳಿರುವನು: 'ಪರಮಾತ್ಮನು ಈ ವಿಶ್ವದಲ್ಲಿಯೆ ಈ ವಿಶ್ವವನ್ನು ವ್ಯಾಪಿಸಿ ಇರುವನು, ಇಲ್ಲವೆ ಅವನು ಎಲ್ಲಿಯೂ ಇಲ್ಲವೆ ಇಲ್ಲ'……………'ಪರಮಾತ್ಮನ ವಿಶ್ವನಿರ್ಮಾಣಕಾರ್ಯದಲ್ಲಿ ಭಾಗಿಯಾಗಿರುವ ಮಟ್ಟಿಗೆ ಮನುಷ್ಯನು ಕೂಡ ಪರಮಾತ್ಮನ ಅಂಶನೆ ಇರುವನು' ಈ ರೀತಿ ನಿಮಿತ್ತಮಾತ್ರನಾಗಿರುವುದೆ ಮನುಷ್ಯನ ಅಮೃತತ್ವವು. ಈ ದೃಷ್ಟಿಯಿಂದ ನೋಡಿದರೆ ಪೂರ್ವಜನ್ಮ ಪುನರ್ಜನ್ಮಾದಿಗಳು ಗೌಣ ಪ್ರಶ್ನೆಗಳಾಗಿ ಬಿಡುವವು. ವಿಶ್ವಾತ್ಮನ ವಿಶ್ವಕರ್ಮದಲ್ಲಿ ಪೂರ್ಣ, ಬುದ್ಧಿಪುರಸ್ಸರ ಸಹಯೋಗಿತ್ವವೆ ಮಾನವನ ನಿಜವಾದ ದಿವ್ಯ ಭವಿತವ್ಯವು. ಮಾನವನ ಪರಮ ಪ್ರತಿಷ್ಠೆ ಹಾಗೂ ಅವನ ಭವ್ಯತೆ ಇದರಲ್ಲಿಯೆ ಅಡಕವಾಗಿರುವದು.

ಏನೇ ಇರಲಿ. ಯಾವದೇ ಒಂದು ಭಾವನೆಯಿಂದ ಏಕಾಗಲೊಲ್ಲದು, ಇಲ್ಲಿ ನಾನು ಬರೆದ ನಾಲ್ಕು ಮಾತುಗಳು ಸರ್ವರಿಗೂ ವಿಚಾರಪ್ರವರ್ತಕ ಹಾಗೂ ಕಾರ್ಯಪ್ರಚೋದಕವಾಗಲೆಂದು ಹಾರೈಸಿ ಇವುಗಳನ್ನು ವಾಚಕರಿಗೆ ನಮ್ರಭಾವದಿಂದ ಅರ್ಪಿಸುವೆ. ಇವು ಎಲ್ಲರಿಗೂ ಸವಿಯಾಗಲಿ, ರುಚಿಸಲಿ ಎಂದು ಇಚ್ಛಿಸುವೆ.

—ರಂಗನಾಥ ದಿವಾಕರ.

ಪಟನಾ

೬-೧೨-೧೯೫೪

ಮುಂದಿನ ಗ್ರಂಥ

ಗೃಹದೇವತೆ

(ಸರೂ)

(ಹೃದಯಸ್ಪರ್ಶಿಯಾದ ಒಂದು ಸಾಮಾಜಿಕ ಕಾದಂಬರಿ)

ಬರೆದವರು :

ಶ್ರೀಮತಿ ಬಿ. ವ್ಹಿ. ಚಂಪಕಮಾಲಾ

ಪರಿವಿಡಿ



ಗ್ರಂಥಕರ್ತ

ಯಾಂತ್ರಿಕ

ತನ್ನ ಹಾಗೂ ತನ್ನ ಬಾಂಧವರ ಜೀವನವು ಅರ್ಥವಿಹೀನವೆಂದು ಭಾವಿಸುವವನು ದುರ್ದೈವಿಯಷ್ಟೇ ಅಲ್ಲ, ಅವನು ಜೀವನವನ್ನು ಸರಿಯಾಗಿ ಸಾಗಿಸಲು ತೀರ ಅಯೋಗ್ಯನು. — ಆಯಿನ್‌ಸ್ಟಾಯಿನ್

೧

ಜೀವನದ ಒಂದು ಸಮಸ್ಯೆ

ನಮ್ಮ ಇಂದ್ರಿಯಗಳಿಗೆ ಗೋಚರವಾಗುವ ವಸ್ತುಗಳಲ್ಲಿ ನಾವು ಸಾಮಾನ್ಯವಾಗಿ ಜಡ ಮತ್ತು ಚೇತನ ಎಂದು ಎರಡು ವರ್ಗಗಳನ್ನು ಮಾಡುವೆವು. ಜಡ ಮತ್ತು ಚೇತನ ಇವುಗಳ ನಡುವಿನ ಆತ್ಯಂತಿಕ ಸೂಕ್ಷ್ಮಭೇದದ ಬಗ್ಗೆ ಇನ್ನೂ ವೈಜ್ಞಾನಿಕರಲ್ಲಿ ಮತಭೇದವಿದ್ದರೂ ನಾವು ವ್ಯವಹಾರದ ಮಟ್ಟಿಗೆ ಜಡದಿಂದ ಚೇತನವನ್ನು ಕೂಡಲೇ ಬೇರ್ಪಡಿಸಬಲ್ಲೆವು. ಆ ವ್ಯಾವಹಾರಿಕ ದೃಷ್ಟಿಯಿಂದ ನೋಡಿದರೆ ಜಡ-ಚೇತನ ವಸ್ತುಗಳ ಲಕ್ಷಣಗಳು ಬೇರೆ ಇದ್ದುದು ನಮಗೆ ಕಂಡುಬರುವದು. ಜಡದಲ್ಲಿ ಚೈತನ್ಯಾಂಶವು ಇಲ್ಲೇ ಇಲ್ಲ, ಎಂದು ತಾತ್ವಿಕ ದೃಷ್ಟಿಯಿಂದ ಪ್ರತಿಪಾದಿಸುವದು ಕಠಿಣವಿದ್ದರೂ ಮನುಷ್ಯನ ಇಂದ್ರಿಯಗಳಿಗೆ ಗೋಚರವಾಗುವಷ್ಟು ಆ ಅಂಶವು ಸ್ಪಷ್ಟವಿಲ್ಲ ಎಂದು ಹೇಳಲು ಅಡ್ಡಿ ಇಲ್ಲ. ಇನ್ನು ಚೇತನ ವಸ್ತುಗಳ ಮುಖ್ಯ ಲಕ್ಷಣವೆಂದರೆ, ಅವುಗಳಲ್ಲಿ ಜಡವಸ್ತುಗಳ ಅಂಶಗಳೆ ತುಂಬಿಕೊಂಡಿದ್ದರೂ ಅವೆಲ್ಲ ಭೌತಿಕ, ರಾಸಾಯನಿಕ ಹಾಗೂ ಯಾಂತ್ರಿಕ ಶಾಸ್ತ್ರಗಳ ನಿಯಮ ನಿಯಂತ್ರಣಗಳಿಗೆ ಒಳಗಾಗಿದ್ದರೂ ಚೈತನ್ಯ ಎಂಬ ವಿಶೇಷ ಶಕ್ತಿ ಅವುಗಳಲ್ಲಿ ಪ್ರತೀತವಾಗುವದು. ಚೇತನ ವಸ್ತುಗಳಲ್ಲಿ ವನಸ್ಪತ್ಯಾದಿ ಉದ್ಭಿಜಗಳೂ ಒಳಗೊಂಡಿರುವವು. ಅವುಗಳಿಗೆ ನಾವು

ಸ್ಥಿರಚೇತನಗಳೆನ್ನಬಹುದು. ಉಳಿದವು ಚರಚೇತನಗಳು. ಎರಡರಲ್ಲಿಯೂ ಚೇತನಶಕ್ತಿ ಇರುವದು. ಉದಾ: ಸಾಯುವ ಒಂದರೆಕ್ಷಣ ಮೊದಲು ಮನುಷ್ಯನು ಜೀವಂತನಿರುವಾಗ ಅವನು ಚೈತನ್ಯಯುಕ್ತನಿರುವನು. ಆದರೆ ಸತ್ತ ಮರುಕ್ಷಣವೆ ಅವನಲ್ಲಿಯ ಚೈತನ್ಯವೆಂಬುದು ಇಲ್ಲದಂತಾಗುವದು. ಅವನ ಶರೀರದ ಅವಯವಾದಿಗಳು ಹಾಗೂ ಅವನ ರಕ್ತಮಜ್ಜಾಮಾಂಸಾದಿ-ಗಳಲ್ಲಿರುವ ಅನೇಕಾನೇಕ ಧಾತುವಿಶೇಷಾದಿಗಳು ಇದ್ದಕ್ಕಿದ್ದ ಹಾಗೆ ಉಳಿದಿದ್ದರೂ ಚೈತನ್ಯ ಮಾತ್ರ ಹಾರಿಹೋದ ಅನುಭವವು ನಮಗೆ ಬರುವದು. ಇದೇ ಮಾತು ಒಂದು ವೃಕ್ಷಕ್ಕೂ ಅನ್ವಯಿಸುವದು. ಆ ಶಕ್ತಿವಿಶೇಷವಿದ್ದ ವಸ್ತುಗಳೆ ಚೇತನಗಳು. ಸ್ಥೂಲ ಸೂಕ್ಷ್ಮರೂಪದಲ್ಲಿ, ವ್ಯಕ್ತಾವ್ಯಕ್ತ ರೀತಿಯಲ್ಲಿ ಈ ಶಕ್ತಿಯಿರುವ ವಸ್ತುಗಳಿಗೆಲ್ಲ ನಾವು ಚೇತನವಸ್ತುಗಳೆನ್ನುವೆವು. ಇವುಗಳಿಗೆ ಒಮ್ಮೊಮ್ಮೆ ನಾವು ಪ್ರಾಣಿಗಳು, ಜೀವಗಳು ಎಂದೂ ಅನ್ನುವದುಂಟು.

ಚೇತನವಸ್ತುಗಳು ಅಥವಾ ಪ್ರಾಣಿಗಳು ಇಂತಿಷ್ಟೇ ಇರುವವು, ಇಷ್ಟು ತರಹದವಿರುವವು ಎಂದು ಹೇಳುವದು ಅಸಾಧ್ಯ. ಅಸಂಖ್ಯ, ಅನಂತ ಎಂದೇ ಅವುಗಳ ಗಣನೆ ಮಾಡುವದು ಯೋಗ್ಯವಾಗುವದು. ಈ ಪೃಥ್ವೀತಲದಲ್ಲಿ ವಾಸವಾಗಿರುವ ವಿಶಿಷ್ಟ ಬಗೆಯ ಪ್ರಾಣಿಗಳು ಯಾವ ಪರಿಸ್ಥಿತಿಯಲ್ಲಿ ಜೀವಿಸಬಲ್ಲವು ಎಂಬುದನ್ನು ಮಾತ್ರ ಸಾಮಾನ್ಯವಾಗಿ ಶೀತೋಷ್ಣಗಳ ಪರಿಭಾಷೆಯಲ್ಲಿ ಹೇಳಬಹುದು. ಸುಮಾರು ೨೦ರಿಂದ ೧೨೦ ಡಿಗ್ರಿ ಫಾರನ್‌ಹೈಟ್ ಉಷ್ಣತಾಮಾನವಿದ್ದಲ್ಲಿ ಮಾತ್ರ ಅವು ಬದುಕಬಲ್ಲವು. ಹೆಚ್ಚು ಇಲ್ಲವೆ ಕಡಿಮೆ ಇದ್ದಲ್ಲಿ ಅವಾವೂ ಬಾಳಲಾರವು. ಪ್ರಾಣವಾಯುವು ಎಂಬುದು ಅವುಗಳಿಗೆ ಅತ್ಯಂತ ಆವಶ್ಯಕ. ತನ್ನಂಗದ ಹೊರಗಿನ ಜಲ ವಾಯು ವಸ್ತುಗಳ ಸೇವನ ಹಾಗೂ ಪಚನ, ತನ್ಮೂಲಕ ಶಕ್ತಿಸಂಚಯ, ಚಲನವಲನಾದಿ ಕಾರ್ಯಗಳ ಮೂಲಕ ಶಕ್ತಿಯ ವಿನಿಯೋಗ, ವೃದ್ಧಿಕ್ಷಯ, ಮುಪ್ಪು, ಸಾವು, ಸಂವೇದನೆ ಹಾಗೂ ಇಚ್ಛಾಶಕ್ತಿ, ದಣಿವು, ನಿದ್ರೆ, ಭಯ, ತನ್ನಂಗದಿಂದಲೆ ತನ್ನಂತಹ ಹೊಸ ಪ್ರಾಣಿಗಳ ಉತ್ಪಾದನ ಇವು ಸಾಧಾರಣತಃ ಎಲ್ಲ ಚೇತನವಸ್ತುಗಳ ಲಕ್ಷಣಗಳು. ಇವು ಹೆಚ್ಚುಕಡಿಮೆ ಪ್ರಮಾಣದಲ್ಲಿ ಸ್ಥೂಲ ಸೂಕ್ಷ್ಮರೂಪದಲ್ಲಿ ಎಲ್ಲ ಚೇತನವಸ್ತುಗಳಲ್ಲಿ ಇದ್ದುದು ಅನುಭವಕ್ಕೆ ಬರುವದು. ವೈಜ್ಞಾನಿಕ ದೃಷ್ಟಿಯಿಂದ ವನಸ್ಪತಿಸೃಷ್ಟಿಯು ಕೂಡ ಚೇತನವರ್ಗವನ್ನೆ ಸೇರಿದುದು ಎಂಬುದನ್ನು ಮೇಲೆಯೇ ಹೇಳಿದ್ದಾಗಿದೆ. ಅವುಗಳಲ್ಲಿಯ ಮುಖ್ಯ ಭೇದ

ವೇನಂದರೆ, ವನಸ್ಪತಿಗಳು ನಿಂತಲ್ಲಿಯೇ ನಿಲ್ಲುವವು ಹಾಗು ಅವುಗಳಲ್ಲಿಯ ಚೇತನಾಂಶವು ಕೇಂದ್ರಿತವಾಗಿರದೆ ವಿಕೇಂದ್ರಿತವೂ ವಿಸ್ತರಿತವೂ ಆಗಿರು-ವದು. ಅವುಗಳಲ್ಲಿ ಮಿದುಳಿನಂಥ ಸಂವೇದನಾಕೇಂದ್ರವು ಕಾಣಬರುವದಿಲ್ಲ.

ಒಂದು ಚೇತನವಸ್ತು ಅಥವಾ ಪ್ರಾಣಿಯು ಇನ್ನೊಂದು ತನ್ನಂತಹ ಪ್ರಾಣಿಯಿಂದಲೆ ಹುಟ್ಟುವದು ಎಂಬುದನ್ನು ನಾವು ನೋಡುವೆವು. ವಿಜ್ಞಾನವಾದರೂ ಇದೇ ಮಾತನ್ನು ಒತ್ತಿ ಹೇಳುವದು. ಹೀಗಿದ್ದ ಪಕ್ಷದಲ್ಲಿ ಮೊಟ್ಟ ಮೊದಲಿನ ಪ್ರಾಣಿಯು ಹೇಗೆ ಹುಟ್ಟಿತು, ಎಂಬುದೊಂದು ದೊಡ್ಡ ಪ್ರಶ್ನೆ ಉದ್ಭೂತವಾಗುವದು. ಈ ಭೂಗೋಲವು ಒಂದು ಕಾಲಕ್ಕೆ ಅಗ್ನಿಮಯವಿತ್ತು, ಅದು ಬರಬರುತ್ತ ಆರಿ, ಹೆಪ್ಪುಗಟ್ಟಿ, ಅದರ ಮೇಲಿನ ಕವಚವು ಮಾತ್ರ ಈಗ ಸ್ಥಿರಚರಪ್ರಾಣಿಗಳ ವಾಸಕ್ಕೆ ಯೋಗ್ಯವಾಗಿರುವದು, ಅದರ ಗರ್ಭ-ದಲ್ಲಿ ಇನ್ನೂ ಅಗ್ನಿಜ್ವಾಲೆ ಕುದಿಯುತಿರುವದು, ಎಂದು ವಿಜ್ಞಾನಿಗಳು ಹೇಳುವರು. ಭೂಕಂಪ, ಜ್ವಾಲಾಮುಖಿ ಮುಂತಾದವುಗಳನ್ನು ನಾವು ನೋಡಿದೆವೆಂದರೆ ಅವರ ಮಾತು ನಿಜವೆಂದು ತೋರುವದು. ಭೂಮಂಡಲದ ಅಂಥ ಪರಿಸ್ಥಿತಿಯಲ್ಲಿ ಜೀವಜಂತುವಿನ ಹೆಸರು ಸಹ ಇರುವದು ಸಾಧ್ಯವಿಲ್ಲ. ಉಷ್ಣತಾಮಾನವು ೧೨೦ ಡಿಗ್ರಿಗಿಂತ ಮಿಕ್ಕಿರುವಾಗ ಯಾವ ಪ್ರಾಣಿಯೂ ಇಲ್ಲಿ ಬದುಕಿರುವದು ಸಾಧ್ಯವಿರಲಿಲ್ಲ. ಅಗ್ನಿಗೋಲವು ಆರಿದ ಬಳಿಕ ಇಲ್ಲಿ ಪ್ರಥಮ ಜೀವದ ಅವತಾರವು ಹೇಗಾಯಿತು? ಈ ಮೊದಲೆ ಪ್ರಾಣಿಗಳ ವಾಸ್ತವ್ಯಕ್ಕೆ ಯೋಗ್ಯವಾದ ಇನ್ನೊಂದು ಗ್ರಹದಿಂದ ಪ್ರಾಣವು ಹಾರಿ ಇಲ್ಲಿ ಬಂದಿತೊ, ಅಥವಾ ಇಲ್ಲಿಯೆ ಅನುಕೂಲಪರಿಸ್ಥಿತಿಯುಂಟಾದುದರಿಂದ ಅವ್ಯಕ್ತವಾಗಿರುವ ಪ್ರಾಣ ಪ್ರಕಟವಾಯಿತೋ? ಇನ್ನೊಂದು ಗ್ರಹದಿಂದ ಬಂದಿತು ಎಂದು ಗ್ರಹಿಸಿದರೆ, ಆ ಗ್ರಹಕ್ಕೆ ಮತ್ತೆಲ್ಲಿಂದ ಬಂದಿತು, ಎಂಬ ಪ್ರಶ್ನಪರಂಪರೆ ಉಂಟಾಗಿ ಅನವಸ್ಥಾಪ್ರಸಂಗವು ಬರುವದು. ಆದುದರಿಂದ ಅನುಕೂಲ ಪರಿಸ್ಥಿತಿಯ ಮೂಲಕ ಇಲ್ಲಿಯೆ ಪ್ರಕಟವಾಗಿ ಬೆಳೆಯಿತು ಎನ್ನುವದೆ ಹೆಚ್ಚು ಸಮಂಜಸವಾಗುವದು. ವಿದ್ಯುತ್ತು, ಅಗ್ನಿ, ಅಣುಶಕ್ತಿ ಮುಂತಾದವುಗಳಂತೆ ಚೈತನ್ಯ, ಪ್ರಾಣ, ಇದೂ ಒಂದು ಶಕ್ತಿವಿಶೇಷವು. ವಿದ್ಯುದಾದಿಗಳು ಅನುಕೂಲ ಪರಿಸ್ಥಿತಿ ಇದ್ದಲ್ಲೆಲ್ಲ ಪ್ರಕಟವಾಗುವಂತೆ, ಈ ಶಕ್ತಿಯಾದರೂ ತನಗೆ ಅನುಕೂಲ ಪರಿಸ್ಥಿತಿ ಇದ್ದಲ್ಲಿ ಈ ವಿಶ್ವದಲ್ಲಿ ಬೇಕಾದಲ್ಲಿ ಪ್ರಕಟವಾಗುವದು. ಈ ಪೃಥ್ವಿಯ ಪೃಷ್ಠಭಾಗವು ಸಾಕಷ್ಟು ತಂಪಾಗಿ ಇಲ್ಲಿ ಜಲವಾಯುಗಳ

ಸಂಚಾರವಾಗಲಾರಂಭಿಸಿದ ನಂತರ 'ಪ್ರೊಟೀನ' ಎಂಬ ಜೀವನತತ್ವದ ಒಂದು ಅಣುವು ತನ್ನ ಬದಿಗಿನ ಇನ್ನೊಂದು ಅಣುವನ್ನು ಆತ್ಮಸಾತ್ ಮಾಡಿಕೊಳ್ಳುವ ಸಾಮರ್ಥ್ಯವನ್ನು ಪಡೆದೊಡನೆ ಮೊಟ್ಟಮೊದಲಿನ ಜೀವನಕ್ರಿಯೆಗೆ ಪ್ರಾರಂಭ ವಾಯಿತು, ಎಂದು ವೈಜ್ಞಾನಿಕರು ಅನುಮಾನಮಾಡಿರುವರು. ಈ ಭೂಮಂಡಲದಲ್ಲಿ ಜೀವದ ಅದೇ ಪ್ರಥಮ ಆವಿರ್ಭಾವ ಎಂದು ಅವರು ಸಾರುವರು. ಇದು ನಿಜವಿದ್ದಪಕ್ಷದಲ್ಲಿ ಇದೇ ಬಗೆಯ ಆವಿರ್ಭಾವ ಈಗ್ಯೂ ಅಂಥ ಪರಿಸ್ಥಿತಿಯಲ್ಲಿ ನಡೆದಿರಲಿಕ್ಕೆ ಸಾಕು.

ಸರಿ. ಒಂದು ಬಗೆಯ ಜೀವಶಕ್ತಿಯು ಪ್ರಕಟನೆಯು ವಿಶಿಷ್ಟ ಅನುಕೂಲ ಪರಿಸ್ಥಿತಿಯಲ್ಲಿ ಆಗಬಲ್ಲದೆಂಬದನ್ನು ಒಪ್ಪಿದರೂ ಈ ಅಸಂಖ್ಯ ತರತರದ ಜೀವರಾಶಿ, ಅದರಲ್ಲಿಯ ವೈವಿಧ್ಯ, ಮಾನವನಂಥ ಒಂದು ವಿಲಕ್ಷಣ ಜೀವದ ನಿರ್ಮಾಣ, ಇವುಗಳ ಬಗ್ಗೆ ಯಾವ ಕ್ರಮವನ್ನು ಹೇಳಬೇಕು, ಈ ಪ್ರಶ್ನೆ ಹಾಗೆಯೆ ಉಳಿಯುವದು. ಇದಕ್ಕೆ ವಿಕಾಸವಾದವೆ ಸಮಾಧಾನವು. ಜೀವ ಇದೊಂದು ಶಕ್ತಿವಿಶೇಷವಿರುವದರಿಂದ ಅದರ ಆವಿರ್ಭಾವದಲ್ಲಿ ದೇಶ ಕಾಲಪರಿಸ್ಥಿತಿಗನುಸರಿಸಿ ಬದಲಾವಣೆಗಳಾಗುವದು ಸಹಜವು. ಉತ್ಕ್ರಾಂತಿ ಅಥವಾ ಕ್ರಮವಿಕಾಸದ ತತ್ವಗಳಿಗನುಸರಿಸಿ ಏಕಾಣುಜೀವದಿಂದ ಅನೇಕಾಣು ಪ್ರಾಣಿಗಳು ನಿರ್ಮಾಣವಾಗಿ ಕೊನೆಗೆ ಮಾನವಪ್ರಾಣಿಯು ಉದಯವಾಗಿರುವದು. ಅದೇ ಕ್ರಮವಿಕಾಸವು ಅಥವಾ ವಿಕಾಸದ ಕ್ರಮವು ಈಗಲೂ ಇದ್ದು ಮುಂದೆ ಇದೇ ರೀತಿ ಅತಿಮಾನವಾದಿ ಜೀವಗಳು ಹುಟ್ಟಿದರೆ ಅದು ಆಶ್ಚರ್ಯದ ಮಾತಾಗಿರದೆ ಸ್ವಾಭಾವಿಕವೆ ಸೈ. ಕಣ್ಣಿಗೆ ಹಾಗೂ ಸೂಕ್ಷ್ಮದರ್ಶಕಯಂತ್ರಕ್ಕೆ ಸಹ ನಿಲುಕದ ಸೂಕ್ಷ್ಮಾತಿಸೂಕ್ಷ್ಮ ಜೀವಜಂತುಗಳನ್ನು ಮೊದಲು ಮಾಡಿ ನೂರಾರು ಅಡಿ ಉದ್ದ ಹಾಗೂ ನೂರಾರು ಟನ್ನಿನಷ್ಟು ಜಡವಿರುವ ತಿಮಿಂಗಿ-ಲಾದಿ ಪ್ರಾಣಿಗಳವರೆಗೆ ಕೋಟ್ಯಂತರ ವಿಚಿತ್ರ ವಿವಿಧ ಪ್ರಾಣಿಗಳು ಜಲ, ಸ್ಥಲ, ವಾಯು, ಆಕಾಶಗಳಲ್ಲಿ ಕಿಕ್ಕಿರಿದು ತುಂಬಿಕೊಂಡಿವೆ. ಇಷ್ಟೆಲ್ಲ ವೈವಿಧ್ಯ ಹಾಗೂ ವಿಪುಲತೆ ಇದ್ದರೂ ಅವುಗಳ ಮುಖ್ಯ ಲಕ್ಷಣಗಳು ಮಾತ್ರ ಮೇಲೆ ಹೇಳಿದಂತೆ ಎಲ್ಲವುಗಳಿಗೂ ಸಾಮಾನ್ಯವಾಗಿರುವವು.

ಈ ಎಲ್ಲ ಪ್ರಾಣಿಗಳ ಲಕ್ಷಣಗಳು ಹಾಗು ಅವು ಮಾಡುವ ಕ್ರಿಯೆಗಳು ಒಂದೇ ಇದ್ದುದರಿಂದಲೆ ಇವೆಲ್ಲವುಗಳಲ್ಲಿ ಒಂದೇ ಒಂದು ಬಗೆಯ ಜೀವಶಕ್ತಿ ಕಾರ್ಯ ಮಾಡುತಿರುವದು ಎಂದು ಹೇಳಬೇಕಾಗಿದೆ. ಪ್ರಾಣಿಗಳಲ್ಲಿ ಸ್ಥಿರ-ಚರ

ಎಂಬ ಎರಡು ಸ್ಥೂಲಭೇದಗಳನ್ನು ಮೇಲೆಯೆ ಹೇಳಿರುವೆ. ಆದರೆ ಚರ ಪ್ರಾಣಗಳಲ್ಲಿ ಅಸಂಖ್ಯ ಪ್ರಾಣಿಗಳು ಏಕಾಣುವಿದ್ದು ಅವುಗಳಿಗೆ ಯಾವದೇ ಇಂದ್ರಿಯಗಳೆಂಬವು ಇದ್ದುದು ಕಂಡುಬರುವದಿಲ್ಲ. ಅವು ನಿಯಮಿತ ಕಾಲಕ್ಕೆ ತಮ್ಮಷ್ಟಕ್ಕೆ ತಾವೆ ಒಂದರಿಂದ ಎರಡು, ಎರಡರಿಂದ ನಾಲ್ಕು, ನಾಲ್ಕರಿಂದ ಎಂಟು ಹೀಗೆ ವಿಭಕ್ತವಾಗುತ್ತ ಹೋಗಿ ತಮ್ಮ ಸಂತತಿ ಯನ್ನು ಬೆಳೆಸುವವು. ಅಸಂಖ್ಯ ಪ್ರಾಣಿಗಳಲ್ಲಿ ಗಂಡುಹೆಣ್ಣೆಂಬ ಭೇದವಿಲ್ಲ. ಹೀಗೆ ಒಂದಲ್ಲ ಎರಡಲ್ಲ, ಅಸಂಖ್ಯವಾದ ಬಾಹ್ಯಭಿನ್ನತೆ ಈ ಪ್ರಾಣಿಮಾತ್ರ ದಲ್ಲಿ ಇದ್ದುದು ಕಂಡುಬರುವದು. ಹೀಗಿದ್ದರೂ ಪ್ರಾಣವಾಯುವಿನಿಂದ ಜೀವನ ಇತ್ಯಾದಿ ಮೇಲೆ ಹೇಳಿದ ಲಕ್ಷಣಗಳೆಲ್ಲ ಪ್ರತಿ ಪ್ರಾಣಿಯಲ್ಲಿಯೂ ಕಂಡುಬರುವವು. ಜೀವಶಕ್ತಿಯ ಅಗಾಧತ್ವವು ಈ ಮಾತಿನಲ್ಲಿಯೆ ಅಡಕ ವಾಗಿದೆ. ವಿದ್ಯುತ್ತಿನಿಂದ ನಡೆಯಬಹುದಾದ ಹಾಗೂ ನಡೆಯುತಿರುವ ಕ್ರಿಯೆಗಳು ವಿವಿಧ ಹಾಗೂ ಬಹುಮುಖವಿದ್ದರೂ ವಿದ್ಯುತ್‌ಶಕ್ತಿ ಎಂಬುದು ಒಂದೇ ಇರುವಂತೆ, ವಿಶಿಷ್ಟ ಪರಿಸ್ಥಿತಿ ಇದ್ದಲ್ಲಿ ಅದು ಆವಿರ್ಭೂತವಾಗುವಂತೆ, ಜೀವಶಕ್ತಿ ಒಂದೇ ಇದ್ದು ಅದರ ಆವಿರ್ಭಾವವು ವಿಶಿಷ್ಟ ಪರಿಸ್ಥಿತಿಯಲ್ಲಿ ವಿವಿಧ ರೀತಿ ಆಗುವದು. ಪರಿಸ್ಥಿತಿಗನುಸರಿಸಿ ಅದರ ವ್ಯಕ್ತರೂಪದಲ್ಲಿ ಭಿನ್ನತೆ ಕಂಡುಬಂದರೂ ಕಾರ್ಯಮಾಡುವ ರೀತಿಯಲ್ಲಿ ವೈವಿಧ್ಯವಿದ್ದರೂ ಜೀವನಶಕ್ತಿ ಹಾಗೂ ಅದರ ಕ್ರಿಯೆ ಎಂಬುದು ಹಾಗೂ ಅದರ ವಿಕಾಸದ ನಿಯಮಾದಿಗಳು ಒಂದೇ ಇರುವವು.

ಈ ಭೂಗೋಲದ ಮೇಲೆ ಮೊಟ್ಟಮೊದಲಿನ ಜೀವವು ಪ್ರಕಟವಾದುದಕ್ಕೆ ಕೋಟ್ಯಂತರ ವರುಷಗಳಾಗಿ ಹೋಗಿರುವವು. ಆದರೆ ಅಂದಿನಿಂದ ಜೀವಗಳಲ್ಲಿ ಕ್ರಮವಿಕಾಸವು ಸಾಗಿಬರುತ್ತಲೆ ಇದೆ. ಅದರ ಕಥೆಯು ಬಹಳ ಮನೋ-ವೇಧಕವಿದ್ದರೂ ಅದನ್ನು ಇಲ್ಲಿ ಹೇಳಲವಕಾಶವಿಲ್ಲ. ಆ ವಿಕಾಸದ ಫಲ-ವಾಗಿಯೆ ಮಾನವನು ಈ ಲೋಕದಲ್ಲಿ ಹುಟ್ಟಿದನು. ಅಂದಿನಿಂದ ಅವನ ಶಕ್ತಿಗಳ ವಿಕಾಸವೂ ಆಗುತ್ತಲೆ ಇದೆ. ಮಾನವನಲ್ಲಿ ಆದ ವಿಕಾಸದ ಮಾತನ್ನು ಮುಂದೆ ಮತ್ತೆ ಬೇರೆ ಪ್ರಕರಣದಲ್ಲಿ ಎತ್ತಬೇಕಾಗಿದೆ. ಆದರೆ ಕ್ರಮವಿಕಾಸದ ಬಗ್ಗೆ ಹಾಗೂ ಮಾನವೇತರ ಪ್ರಾಣಿಗಳನ್ನು ಕುರಿತು ಎರಡು ಮಾತು ಹೇಳಿ ಜೀವನವೇ ಒಂದು ಎಲ್ಲಕ್ಕೂ ಹೆಚ್ಚಿನ ಸಮಸ್ಯೆ ಇದ್ದುದನ್ನು ಇಲ್ಲಿ ವಿವರಿಸುವ ವಿಚಾರವಿದೆ.

ಕ್ರಮವಿಕಾಸವೆಂಬುದು ಒಂದು ದೊಡ್ಡ ಹಾಗೂ ಗಹನಗಂಭೀರವಾದ ವಿಷಯವೆಂಬುದೇನೋ ನಿಜ. ಆದರೆ ನಮಗೆ ಇಲ್ಲಿ ಬೇಕಾದುದು ಆ ಇಡೀ ಶಾಸ್ತ್ರದ ಪ್ರತಿಪಾದನೆಯಲ್ಲ. ಸ್ಥೂಲಮಾನದಿಂದ ಅದರ ತತ್ತ್ವಗಳು ನಮಗೆ ತಿಳಿದರೆ ಸಾಕು.

ಜಡವೇ ಇರಲಿ, ಚೇತನವೆ ಇರಲಿ, ಯಾವದೆ ವಸ್ತು ಈ ವಿಶ್ವದಲ್ಲಿ ಒಂದೇ ರೂಪದಲ್ಲಿ ಸ್ಥಿರವಿಲ್ಲ ಹಾಗೂ ಸ್ಥಿರವಿರಲರಿಯದು. ಕ್ಷಣಕ್ಷಣಕ್ಕೂ ಅದರಲ್ಲಿ ಬದಲಾವಣೆಯಾಗುತಿದೆ, ಅದು ಪಲ್ಲಟಿಸುತಿದೆ. ಯಾವುದು ಕಣ್ಣಿಗೆ ಅಥವಾ ಅತ್ಯಂತ ಸೂಕ್ಷ್ಮದರ್ಶಕ ಯಂತ್ರಕ್ಕೆ ಕೂಡ ಕಾಣುವದಿಲ್ಲವೊ ಅಂಥ ಪರಮಾಣುವಿನಲ್ಲಿ ಕೂಡ ಪ್ರತಿಕ್ಷಣ ಚಲನವಲನ ನಡೆದಿದೆ. ಸೂರ್ಯನ ಸುತ್ತಲೂ ಗ್ರಹಗಳು ಒಂದೇಸವನೆ ಹೆಚ್ಚುಕಡಿಮೆ ವೇಗದಿಂದ ಪ್ರದಕ್ಷಿಣೆ ಹಾಕುತಿರುವಂತೆ, ಪರಮಾಣುವಿನಲ್ಲಿಯ ಕೇಂದ್ರದ ಸುತ್ತಲೂ ವೇಗಾತಿಶಯದಿಂದ 'ಇಲೆಕ್ಟ್ರಾನ್' 'ಪ್ರೋಟಾನ್' ಎಂಬ ಕಣವಿಶೇಷಣಗಳು ತಿರುಗುತಿರುವವು. ಇದು ಈಗ ಪ್ರಯೋಗಸಿದ್ಧವಾದ ಮಾತು. ಇಷ್ಟೇ ಅಲ್ಲ. ಆ ಪರಮಾಣುವಿನಲ್ಲಿ ನಡೆದ ಈ ಕ್ರಿಯೆಯನ್ನು ತಡೆದು ಆ ಪರಮಾಣುವನ್ನು ಒಡೆಯಲೆತ್ನಿಸುವಾಗಲೆ ಪ್ರಚಂಡ ಅಣುಶಕ್ತಿಯ ಸ್ಫೋಟವಾಗುವದು. ಯುರೇನಿಯಮ್ ಎಂಬ ಧಾತುವಿನ ಪರಮಾಣುಗಳನ್ನು ಒಡೆಯುವದರಿಂದಲೆ ಅಣುಬಾಂಬಿನ ಶಕ್ತಿ ಎಂಬುದು ನಿರ್ಮಾಣವಾಗುವದು. ಇಲ್ಲಿ ಪ್ರಸ್ತುತ ವಿಷಯವೇನಂದರೆ, ನಾವು ಜಡ ಎಂದು ಯಾವುದಕ್ಕೆ ಅನ್ನುವೆವೊ ಅದರಲ್ಲಿ ಕೂಡ ಪ್ರತಿಕ್ಷಣಕ್ಕೂ ಪ್ರಚಂಡ ಪಲ್ಲಟ ನಡೆದಿದೆ, ಕ್ರಿಯೆ ನಡೆದಿದೆ ಎಂಬುದನ್ನು ತಿಳಿದುಕೊಳ್ಳುವದು. ಅರ್ಥಾತ್ ನಿಷ್ಕ್ರಿಯ ಅಥವಾ ಚಲನವಲನರಹಿತ ವಸ್ತು ಜಗತ್ತಿನಲ್ಲಿಲ್ಲೇ ಇಲ್ಲ. 'ಜಗತ್' ಶಬ್ದದ ಉತ್ಪತ್ತಿ ಕೂಡ 'ಗತಿಶೀಲ' ಎಂದೇ ಇರುವದು! ತಾತ್ಪರ್ಯವೇನಂದರೆ ಜಡ ಎನಿಸುವ ವಸ್ತುಗಳು ಸಹ ಅವುಗಳ ಅಣು ಪರಮಾಣುಗಳು ಸಹ ಸತತ ಚಲಾಯಮಾನವಿರುವವು ಹಾಗೂ ಅವು ಕೂಡ ಭೂತ-ವರ್ತಮಾನ-ಭವಿಷ್ಯಗಳಿಗೆ ಒಳಗಾಗಿರುವವು. ಎಲ್ಲವೂ ಗತಿಶೀಲವಿರುವುದರಿಂದ ಒಂದೇ ಸವನೆ ಪ್ರತಿಯೊಂದು ವಸ್ತುವಿನ ಮೇಲೆ ಇತರ ವಸ್ತುಗಳ ಸಂಸ್ಕಾರವಾಗುತಿರುವದು ಹಾಗೂ ಆ ವಸ್ತು ಇತರ ವಸ್ತುಗಳ ಮೇಲೆ ಸಂಸ್ಕಾರಮಾಡುತಿರುವದು. ಈ ದೃಷ್ಟಿಯಿಂದ ನೋಡಿದರೆ ಇದೊಂದು ಪ್ರಚಂಡ ಶಕ್ತಿವಿಶೇಷದ ಅಖಂಡ ಹೊಯ್ದಾಟವೆ ನಡೆದಿದೆ, ಎಂದು ಹೇಳ

ಹುದು. ಆದರೆ ಈ ಎಲ್ಲ ಆಟವು ಅಸ್ತವ್ಯಸ್ತವಾಗಿ ಇಲ್ಲವೆ ಪರಸ್ಪರ ಸಂಬಂಧವಿಲ್ಲದೆ ಅಥವಾ ಅಸಂಬದ್ಧ ರೀತಿಯಿಂದ, ವಿಸಂಗತವಾಗಿ ನಡೆದಿದೆ, ಎಂದು ಹೇಳಲಿಕ್ಕಾಗುವುದಿಲ್ಲ. ಎಲ್ಲವೂ ನಿಯಮಬದ್ಧವಾಗಿರುವದು. ಇದರ-ಲ್ಲೆಲ್ಲ ಒಂದು ಸುಸಂಗತಿ, ಸಮ್ಮೇಳನವಿದ್ದುದು ಕಂಡುಬರುವದು. ಕಾಣಲು ಅತೀವ ಭಿನ್ನತೆ ಇದ್ದರೂ ಅದು ಏಕತ್ವಮೂಲಕವೆ ಇರುವದು. ಎಲ್ಲೆಲ್ಲಿಯೂ ತಿಕ್ಕಾಟ ತಾಕಲಾಟಗಳ ತಾಂಡವ ನಡೆದಂತೆ ತೋರಿದರೂ ಅದರಲ್ಲಿ ತಾಲ ಬದ್ಧ ನೃತ್ಯದ ಮೇಲಾಪವಿರುವದು. ಇದೊಂದು ವಿಲಕ್ಷಣ ವಿಚಿತ್ರವಿಕಟ ವಿನೋದ ಇಲ್ಲವೆ ಅದ್ಭುತ ರಮ್ಯದೃಶ್ಯ ನಮ್ಮೆದುರು ನಡೆದಿರುವದು. ವ್ಯಕ್ತಿಯು ತನ್ನ ಇಷ್ಟಾನಿಷ್ಟತೆ ಇಲ್ಲವೆ ಸುಖದುಃಖ ಇವುಗಳ ದೃಷ್ಟಿಯನ್ನು ಬಿಟ್ಟು ಕೇವಲ ನಿರಪೇಕ್ಷ ಸಾಕ್ಷಿಯಾಗಿ ಈ ಜಡ ವಿಶ್ವದ ಸತತಾಟೋಪದತ್ತ ನೋಡಿದರೆ ಅವ ನಿಗೆ ಈ ವಿಶ್ವನಾಟ್ಯದಲ್ಲಿ ಕ್ರಮಬದ್ಧತೆ, ತಾಳಬದ್ಧತೆ, ಸುಸಂಗತಿ, ಕಟ್ಟು ಕಟ್ಟಾದ ನಿಯಮಾನುಸಾರಿತ್ವ ಇವು ಕಂಡುಬರುವವು. ಜಡದಲ್ಲಿ ಚೈತನ್ಯ ವೇನೂ ಇಲ್ಲ ಎಂದು ನಾವು ತಿಳಿದುಕೊಂಡು ನಡೆದರೂ ಚೈತನ್ಯಮಯರಾದ ನಮಗೆ ಈ ಜಡ ಸೃಷ್ಟಿಯ ಚಲನವಲನದಲ್ಲಿ ಕ್ರಮ, ನಿಯಮ, ತಾಲಬದ್ಧತೆ ಮುಂತಾದವುಗಳು ಪ್ರತೀತವಾಗುವವು. ಆದುದರಿಂದಲೆ ಹಲವು ವೈಜ್ಞಾನಿಕರು ಜಡದಲ್ಲಿ ಕೂಡ ಒಂದು ಬಗೆಯ ಸುಪ್ತ ಗುಪ್ತ ಚೈತನ್ಯವಿದೆ,ಎಂದು ಪ್ರತಿಪಾದಿ ಸುವರು. ಚೈತನ್ಯದ ಮುಖ್ಯ ಲಕ್ಷಣಗಳಲ್ಲಿ ಒಂದಾದ ಇಚ್ಛಾಶಕ್ತಿಯ ತೀರ ಅಪಕ್ವ ರೂಪವು ಅಣುಪರಮಾಣುಗಳಲ್ಲಿಯೂ ಇದೆ. ಆದುದರಿಂದಲೆ ಹೈಡ್ರೋಜನ್ ಆಕ್ಸಿಜನ್ ಕೂಡಿ ನೀರಾಗುವಾಗ ಆಯಾ ಹೈಡ್ರೋಜನ್ನಿನ ವಿಶಿಷ್ಟ ಅಣುಪರಮಾಣುಗಳೆ ಆಯಾ ಆಕ್ಸಿಜನ್ನಿನ ವಿಶಿಷ್ಟ ಅಣುಪರ ಮಾಣುಗಳೊಡನೆ ಹೊಂದಿಕೊಳ್ಳುವವು. ಜಡ ವಸ್ತುಗಳಲ್ಲಿ ಕೂಡ ಆಕರ್ಷಣ-ವಿಕರ್ಷಣಗಳು ಕಂಡುಬರುವವು. ಇದೆಲ್ಲ ಒಂದು ಬಗೆಯ ಸೂಕ್ಷ್ಮ ಇಚ್ಛಾ ಶಕ್ತಿಯ ಮೂಲಕವೆ, ಎಂದು ಅವರು ಹೇಳುವರು.

ಇನ್ನು ಜಡದಲ್ಲಿ ಕೂಡ ಚೈತನ್ಯಾಂಶವು ಒಂದಿಲ್ಲೊಂದು ರೂಪದಿಂದ ಇದ್ದೇ ಇರುವದೆಂದು ಹಲವು ವಿಜ್ಞಾನಿಗಳು ಹೇಳುತ್ತಿದ್ದರೆ ಈಚೆಗೆ 'ಜಡ' ಎಂಬ ವಸ್ತುವೇ ಇಲ್ಲ, ಎಲ್ಲವೂ ಶಕ್ತಿಸ್ವರೂಪವಿರುವದು. ಜಡ ಎಂಬುದು ಕೂಡ ಶಕ್ತಿಯ ವಿಶಿಷ್ಟ ರೂಪ ಎಂದು ಅನೇಕ ವಿಜ್ಞಾನಿಗಳು ಹೇಳುವರು. ವೇದಾಂತಿಗಳು ಇದರಾಚೆಗೆ ಹೋಗಿ ಜಡದಲ್ಲಿ ಚೈತನ್ಯಾಂಶವಿರುವದಿಷ್ಟೆ

ಅಲ್ಲ, ಜಡವು ಚೈತನ್ಯದ ಕೇವಲ ಒಂದು ರೂಪವು. ಇದ್ದುದೆಲ್ಲ ಚೈತನ್ಯವು, ವೈಜ್ಞಾನಿಕರು ಶಕ್ತಿ ಎಂದು ಯಾವುದಕ್ಕೆ ಅನ್ನುವರೊ ಅದು ಕೂಡ ಚೈತನ್ಯಸ್ವರೂಪವೆ. ಚೈತನ್ಯವೆಂಬ ಒಂದೇ ಒಂದು ಶಕ್ತಿ ಅನಂತಸ್ವರೂಪ ಗಳನ್ನು ಧರಿಸಿ ನಾನಾವಿಧವಾಗಿ ನಟಿಸುವದು ಎಂದು ವೇದಾಂತಿಗಳ ಪ್ರತಿ ಪಾದನವಿರುವದು. ಏನೇ ಇರಲಿ, ಇಲ್ಲಿ ನಮ್ಮ ಮುಖ್ಯ ಪ್ರಶ್ನೆಯೆಂದರೆ ನಾವು ಈ ಹೊತ್ತು ಯಾವುದಕ್ಕೆ ಜಡವಸ್ತು ಎಂದು ಅನ್ನುವೆವೊ ಅವುಗಳಲ್ಲಿ ಸಹ ಕ್ರಮವಿಕಾಸವೆಂಬುದೇನಾದರೂ ಇರುವದೊ ? ಪ್ರಾಣಿಕೋಟಿಯಲ್ಲಿ ಸ್ಪಷ್ಟ ವಾಗಿ ಕಂಡುಬರುವ ಕ್ರಮವಿಕಾಸವು ಜಡಸೃಷ್ಟಿಯಲ್ಲಿ ಕಂಡುಬರದಿದ್ದರೂ ಯಾವುದೋ ಒಂದು ಬಗೆಯ ಸತತ ಪಲ್ಲಟವು ಅವುಗಳಲ್ಲಿ ಕಾಣುತಿರುವದಲ್ಲದೆ ಕಾಲಗತಿಯಿಂದ ಅವುಗಳಲ್ಲಿ ಸಾಕಷ್ಟು ರೂಪಗುಣಶೀಲಭೇದಗಳು ಕಂಡು ಬರುತಿರುವವೆಂಬಲ್ಲಿ ಸಂಶಯವಿಲ್ಲ. ಧಾತುಪಲ್ಲಟ (ಟ್ರಾನ್ಸಮ್ಯುಟೇಶನ್ ಆಫ್ ಎಲೆಮೆಂಟ್ಸ) ಎಂಬುದು ಈಗ ಸ್ವೀಕೃತವಾದ ವೈಜ್ಞಾನಿಕ ಸತ್ಯವಾಗಿ ಬಿಟ್ಟಿದೆ. ವಿಜ್ಞಾನವು ಒಂದಿಲ್ಲೊಂದು ದಿನ ಜಡವಸ್ತುಗಳಲ್ಲಿ ನಡೆವ ಕ್ರಮ ವಿಕಾಸವನ್ನು ಕೂಡ ಪೂರ್ಣವಾಗಿ ಗೊತ್ತುಹಚ್ಚಬಹುದೆಂಬ ಆಶೆ ನನಗಿದೆ. ಅರ್ಥಾತ್ ಅವುಗಳಲ್ಲಿಯ ಕ್ರಮವಿಕಾಸವು ಒಂದೇ ದಿಕ್ಕಿನಿಂದ ಸಾಗುವದು ಶಕ್ಯವಿದೆ. ಅದಾವ ದಿಕ್ಕೆಂದರೆ, ಅವುಗಳಲ್ಲಿ ಹುದುಗಿಕೊಂಡಿರುವ ಚೈತನ್ಯದ ಪ್ರಗತಿಪರ ಹಾಗೂ ಉತ್ತರೋತ್ತರ ಪ್ರಕಾಶನವು.

ಇನ್ನು ಚೇತನಗಳ ಕ್ರಮವಿಕಾಸವು ಏಕಾಣುತ್ವದಿಂದ ಬಹ್ವಣುತ್ವದತ್ತ, ಒಂದೇ ವಿಧದ ಜೀವಾಣುಗಳ ಗುಂಪಿನಿಂದ ಬಹುವಿಧ ಜೀವಾಣುಗಳ ಗುಂಪಿನತ್ತ, ಜ್ಞಾನೇಂದ್ರಿಯ ಕರ್ಮೇಂದ್ರಿಯಗಳ ಶೂನ್ಯತ್ವದಿಂದ ಪಂಚ ಜ್ಞಾನೇಂದ್ರಿಯ ಪಂಚ ಕರ್ಮೇಂದ್ರಿಯಗಳ ಪ್ರಕಟನೆಯತ್ತ, ಮನವೆಂಬ ಇಂದ್ರಿಯದ ಪ್ರತ್ಯೇಕ ಅಸ್ತಿತ್ವವಿಲ್ಲದ ಸ್ಥಿತಿಯಿಂದ ಮನವೆಂಬ ಅಂತರಿಂದ್ರಿಯ ಹಾಗೂ ಜ್ಞಾನತಂತು ಮತ್ತು ಮಿದುಳೆಂಬ ಅದರ ಸಾಧನಗಳ ಉತ್ಪತ್ತಿಯತ್ತ ಆದುದು ನಮ್ಮೆಲ್ಲರಿಗೂ ಪ್ರತ್ಯಕ್ಷವಿದೆ. 'ಅಮೀಬಾ' ಎಂಬ ಏಕಾಣುಜೀವವು ಒಂದು ಸೂಕ್ಷ್ಮಾತಿಸೂಕ್ಷ್ಮ ಬಿಂದುವಿನಂತೆ ನೀರಿನಲ್ಲಿ ಸೂಕ್ಷ್ಮದರ್ಶಕ ಯಂತ್ರ ದಿಂದ ಮಾತ್ರ ಗೋಚರವಾಗುವದು. ಪ್ರಕಾಶವಿದ್ದ ದಿಕ್ಕಿಗೆ ಆ ಬಿಂದು ತನ್ನ ಶರೀರದ ಕೊಂಚು ಭಾಗವನ್ನು ಚಾಚುತಿರುವ ದೃಶ್ಯವನ್ನು ನೋಡಬಹುದು. ಅದೇ ಅದರ ಕಣ್ಣಿನೋಪಾದಿಯಲ್ಲಿ ವರ್ತಿಸುವಿಕೆ ಎಂದು ಹೇಳಬಹುದು.



ಜೀವನ ಒಂದು ಸಮಸ್ಯೆ

ಶಿಷ್ಟ ಆಯುರ್ಮಾನದ ನಂತರ – ಹಲವು ಘಳಿಗೆ – ಅದು ಇಬ್ಭಾಗವಾಗಿ
ನ್ನಂತಹ ಇನ್ನೊಂದು ಜೀವಕ್ಕೆ ಜನ್ಮಕೊಡುವದು. ಹೀಗೆ ಅದು ಆಯಾ
ರಿಸ್ಥಿತಿ ಅಂದರೆ ಉಷ್ಣತಾದಿಗಳು ಸ್ಥಿರವಾಗಿ ಇರುವ ವರೆಗೆ ಬದುಕಿ ಬಾಳಿ
ಂಖ್ಯೆಯಲ್ಲಿ ಬೆಳೆಯುತ್ತ ಹೋಗುವದು. ಮನುಷ್ಯನಂಥ ಬಹ್ವಣುಜೀವದಲ್ಲಿ
ನೇಕ ತರದ ಏಕಾಣುಜೀವಗಳು ರಕ್ತಮಾಂಸಮಜ್ಜಾ, ಕೂದಲು ತ್ವಚೆ
ಲಬು ಮುಂತಾದ ಶರೀರಧಾತುಗಳನ್ನು ನಿರ್ಮಿಸುವವು. ಅವುಗಳ
ಮೂಲಕವೆ ಅವನಿಗೆ ವಿವಿಧ ಇಂದ್ರಿಯಗಳು ವಿದ್ಯಮಾನವಿರುವವು, ಅವುಗಳ
ಮುಖಾಂತರ ಆವನಿಗೆ ಜ್ಞಾನವಾಗುವದು, ಕರ್ಮೇಂದ್ರಿಯಗಳ ಮುಖಾಂತರ
ವನು ಕರ್ಮಮಾಡಬಲ್ಲನು, ಗಂಡು ಹೆಣ್ಣು ಎಂಬ ಪ್ರತ್ಯೇಕ ಎರಡು ರೂಪ
ಳನ್ನು ತಾಳಿ ತನ್ನ ವಂಶವೃದ್ಧಿಯನ್ನು ಮಾಡುವನು. ಇಷ್ಟೇ ಅಲ್ಲ. ಅವನಿಗೆ
ನಾನು ' ಎಂಬರಿವು, ಸ್ಮರಣಶಕ್ತಿ ಮುಂತಾದವುಗಳು ಇತರ ಪ್ರಾಣಿಗಳಿ
ಂತ ಬಹಳೇ ಹೆಚ್ಚಿನ ಪ್ರಮಾಣದಲ್ಲಿರುವವು. ಈ ರೀತಿ ಜೀವಗಳ ಕ್ರಮ
ಕಾಸದ ಇತಿಹಾಸದಲ್ಲಿ ಮನುಷ್ಯನು ಸದ್ಯದ ಮಟ್ಟಿಗೆ ಕಲಶಪ್ರಾಯವಾದ
ಕೊನೆಯ ಪ್ರಾಣಿಯು ಎಂದು ಹೇಳಬಹುದು. ಇದರ ಅರ್ಥ ಈ ವಿಕಾಸವು
ಡೆದು ನಿಂತಿದೆ, ಅಥವಾ ಅವನಲ್ಲಿ ಆ ವಿಕಾಸವು ಯಾವ ರೀತಿಯಿಂದಲೂ
ಮುಂದೆ ನಡೆದಿಲ್ಲ ಎಂದಲ್ಲ. ಆ ವಿಕಾಸವು ಅವ್ಯಾಹತವಾಗಿ ನಡೆಯುತಿರುವ
ಂದು ಕ್ರಮವು. ಅದು ಎಂದೂ ನಿಲ್ಲದು. ಮನುಷ್ಯನು ಆ ಕ್ರಮದಲ್ಲಿ ಸದ್ಯಕ್ಕೆ
ಂದು ಮೆಟ್ಟಲು ಎಂದು ತಿಳಿದು ನಾವು ಅವನ ವಿಷಯದಲ್ಲಿಯೆ ಹೆಚ್ಚು
ಚಾರ ಮಾಡಬೇಕಾಗಿದೆ. ಹೀಗೆ ವಿಚಾರಮಾಡುವಾಗ ಕೂಡ ಈ ಜಡಸೃಷ್ಟಿ
ಂಬುದು ನಿಂತ ನೀರಲ್ಲ, ಒಂದು ಸತತ ಹರಿಯುತಿರುವ ಪ್ರವಾಹ, ಈ
ಜೀವಕೋಟಿ ಎಂಬುದು ಸಹ ಒಂದು ಮಟ್ಟಿಗೆ ಮುಟ್ಟಿದ ಜೀವರಾಶಿಯಲ್ಲ,
ಇದೊಂದು ಕ್ರಮಬದ್ಧವಾಗಿ ಪ್ರಗಮನಶೀಲವಿರುವ ಚೈತನ್ಯಪುಂಜ ಎಂಬು
ದನ್ನು ಯಾವಾಗಲೂ ಲಕ್ಷದಲ್ಲಿಟ್ಟುಕೊಳ್ಳಲಿಕ್ಕೆಬೇಕು.

ಮಾನವನಿಗೆ ಈ ಜೀವನವು ಯಾವ ದೃಷ್ಟಿಯಿಂದ ಹಾಗೂ ಯಾವ
ಬಗೆಯ ಸಮಸ್ಯೆ ಇರುವದು ಎಂಬುದನ್ನು ಸ್ವಲ್ಪ ವಿಚಾರಿಸುವ. ಇತರ
ಪ್ರಾಣಿಮಾತ್ರಗಳಿಗೆ ಇದು ಸಮಸ್ಯೆಯಾಗಿರುವದೊ ಇಲ್ಲವೊ ಅವು ಈ ಬಗ್ಗೆ
ವಿಚಾರ ಮಾಡುವವೊ ಇಲ್ಲವೊ ಇದನ್ನರಿಯುವದು ಬಹಳ ಕಠಿಣವಾದ
ಸಂಗತಿ. ಸ್ಮರಣಶಕ್ತಿ, ಸುಖದುಃಖಾದಿ ಸಂವೇದಗಳು, ರಾಗದ್ವೇಷಾದಿ

ಭಾವನೆಗಳು ಮನುಷ್ಯನಿಗೂ ಇತರ ಹಲವು ಪ್ರಾಣಿಗಳಿಗೂ ಕೆಲಮಟ್ಟಿಗೆ ಸಾಮಾನ್ಯವಾಗಿರುವವೆಂಬುದು ಕಂಡುಬರುವದು. ಆದರೆ ಇಡೀ ಜೀವನದ ಬಗ್ಗೆ ಅದು ಒಂದು ಸಮಸ್ಯೆ, ಎಂಬ ರೀತಿಯಲ್ಲಿ ಅದರ ವಿಚಾರವನ್ನು ಮನುಷ್ಯನನ್ನುಳಿದು ಇನ್ನಾವುದೇ ಪ್ರಾಣಿಯು ಮಾಡುತಿರುವದು ಎಂದು ಗಟ್ಟಿಯಾಗಿ ಹೇಳಲು ಸದ್ಯಕ್ಕೆ ಯಾವ ಆಧಾರವೂ ಇಲ್ಲ. ಆದುದರಿಂದ ಅವುಗಳಿಗೆ 'ಜೀವನದರ್ಶನ' ಅಥವಾ ಯಾವದೇ ಒಂದು ತತ್ವದರ್ಶನ ಎಂಬುದು ಇರುವದು ಎಂದು ವಿಧಾನ ಮಾಡಲು ಸಾಧ್ಯವಿಲ್ಲ. ಮನುಷ್ಯರಲ್ಲಿಯೂ ಕೂಡ ಎಲ್ಲರಿಗೂ ಜೀವನದ ಸಮಸ್ಯೆ ಅಷ್ಟೊಂದು ಸ್ಪಷ್ಟ ಸ್ವರೂಪದಲ್ಲಿ ಪ್ರತೀತವಾಗುವದಿಲ್ಲ ಎಂದು ಹೇಳಬಹುದು. ಅಂದ ಬಳಿಕ ಇತರ ಪ್ರಾಣಿಗಳ ಪಾಡೇನು ? ಆದರೆ ಅಸ್ಮಿತೆ, ಸ್ವಸಂವಿತ್ತು, ಆತ್ಮನಿರೀಕ್ಷಣೆ, ಜಿಜ್ಞಾಸೆ, ಜ್ಞಾನ ಸಾಧನಗಳು ಇತ್ಯಾದಿಗಳ ಮೂಲಕ ತಾನು ಯಾರು, ಈ ಜಗತ್ತಿನ ಮೂಲ-ವೇನು, ತನ್ನ ಹಾಗೂ ಜಗತ್ತಿನ ಸಂಬಂಧವೇನು, ಇತ್ಯಾದಿ ಸಮಸ್ಯೆಗಳು, ಅಥವಾ ಸಾಮೂಹಿಕವಾಗಿ ಜೀವನಸಮಸ್ಯೆ ಎಂಬುದು ವಿಚಾರಶೀಲನಾದ ಮನುಷ್ಯನಿಗೆ ಎದುರಾಗುವದು. ಈ ಸಮಸ್ಯೆಗೆ ತಕ್ಕಮಟ್ಟಿಗೆ ಸಮಾಧಾನ-ಕಾರಕ ಉತ್ತರ ಕೊಡುವದೆ ಒಂದು 'ದರ್ಶನ' ಎನಿಸುವದು. ಮನುಷ್ಯನಲ್ಲಿ ಮಾತ್ರ ಈ ವಿಚಾರಶಕ್ತಿ ಇರುವುದರಿಂದ ಅವನೇ ಈ ತತ್ವವಿವೇಚನೆಯ ಹೊಣೆಯನ್ನು ಹೊರುವದು ಅವಶ್ಯವಿರುವದು. ಅಥವಾ ಮಾನವೀ ಜೀವನದ ಮುಖ್ಯ ಕರ್ತವ್ಯವೆ ಇದು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಯಾವನ ಶಕ್ತಿ ಸಾಮರ್ಥ್ಯಗಳು ಹೆಚ್ಚೊ ಅವನ ಹೊಣೆಗಾರಿಕೆಯಾದರೂ ಹೆಚ್ಚಿನದಿರುವದು. ತನ್ನಲ್ಲಿ ಈ ಸಮಸ್ಯೆಯನ್ನು ಕುರಿತು ಹೆಚ್ಚಿನ ಜಾಗ್ರತಿಯನ್ನುಂಟುಮಾಡಿಕೊಂಡು ಇದರ ಯೋಗ್ಯ, ಸಪ್ರಮಾಣ, ಸ್ವಾನುಭವಪೂರ್ಣ ಉತ್ತರವನ್ನು ಕೊಡಲೆತ್ನಿಸುತ್ತ ಹೋಗುವುದೆ ಸತ್ಯಶೋಧನದ ಮಾರ್ಗ ಎನಿಸುವದು. ಸತ್ಯವೆಂದು ಹೊಳೆದ ಅನುಭವಕ್ಕನುಸಾರವಾಗಿ ಜೀವನವನ್ನು ನಡೆಯಿಸಿ ಅದರಂತೆ ಕಾರ್ಯರತನಾಗುವುದೆ ಜೀವನದ ಸಾರ್ಥಕ್ಯವೆನಿಸುವದು. ಒಂದು ಕಟ್ಟಿಗೆಯ ತುಂಡಿನ ಅಸ್ತಿತ್ವ ಹಾಗೂ ಒಂದು ಚೇತನ ವಸ್ತುವಿನ ಜೀವನ ಇವುಗಳಲ್ಲಿಯ ಮುಖ್ಯ ಭೇದವೇನು? ಕಟ್ಟಿಗೆಯ ತುಂಡು ನಿಸರ್ಗಶಕ್ತಿಗಳ ತಾಕಲಾಟಕ್ಕೆ ಸಿಲುಕಿ ತನ್ನದೆಂಬ ಅಸ್ತಿತ್ವದ ಅರಿವು ಇಲ್ಲದೆ ಅಲ್ಲಿ ಇಲ್ಲಿ ಇದ್ದು ಬಿದ್ದು ನಷ್ಟವಾಗಿ ಹೋಗುವದು. ಆದರೆ ಒಂದು ಚೇತನವಸ್ತು, ಅದು ಎಷ್ಟೇ ಕ್ಷುದ್ರವಿರಲಿ, ತನ್ನ

ಬ ಒಂದು ಇಚ್ಛಾಶಕ್ತಿಯನ್ನಿಟ್ಟುಕೊಂಡು ತನ್ನ ಬಾಳಿಗಾಗಿ ವಿರೋಧಶಕ್ತಿನ್ನು ಪ್ರತಿಭಟಿಸುತ್ತ ತನ್ನ ಅಸ್ತಿತ್ವವನ್ನು ಸಾಗಿಸುವದು. ಇಂಥ ಅಲ್ಪ ್ರಣಿಗೂ ಆನೆ, ಕುದುರೆ, ಒಂಟೆ, ಮಂಗ ಮುಂತಾದ ಪ್ರಾಣಿಗಳಿಗೂ ಇದ್ದ ತರವು ಸ್ಪಷ್ಟವಿರುವದು. ಇವುಗಳಲ್ಲಿ ಸಂವೇದಶಕ್ತಿಯ ಬೆಳವಣಿಗೆ ಸಾಕಷ್ಟು ದ್ದು ಕಂಡುಬರುವದು. ಇವು ಸಾಂಘಿಕ ಜೀವನವನ್ನು ನಡೆಸಲು ಸಮರ್ಥ ುವವು. ಆದರೆ ಮತ್ತೆ ಇವುಗಳಿಗೂ ಮನುಷ್ಯನಿಗೂ ಮಹದಂತರವಿರು ು. ಮನುಷ್ಯನ ಚಿಚ್ಛಕ್ತಿಯ ವಿಕಾಸವು ಬಹಳವಾಗಿರುವದರಿಂದ ತಾತ್ಪೂ ಕ ತಾತ್ಕಾಲಿಕ ವಿಚಾರ ಭಾವನಾದಿಗಳಿಂದ ಸಂತುಷ್ಟನಾಗದೆ, ಅವನು ುಗ್ರ ವಿಶ್ವದ ಆಳತೆಯನ್ನೆ ಮಾಡಲು ಉದ್ಯುಕ್ತನಾಗಿದ್ದಾನೆ. ಆದುದರಿಂದಲೆ ನಿಗೆ ಜೀವನಸಮಸ್ಯೆಯ ಆಕಲನವಾಗುವದು ಸಾಧ್ಯವಾಗುವಂತಿದೆ. ಹೀಗಿ ರೂ ಎಲ್ಲ ಮಾನವರಿಗೂ ಈ ಸಮಸ್ಯೆ ಹೊಳೆದೇತೀರುವದು ಅಥವಾ ರಿಂದ ಇದರ ಪರಿಹಾರವಾಗೇ ಆಗುವದು ಎಂದು ಹೇಳಲಿಕ್ಕಾಗುವದಿಲ್ಲ.

ಮನುಷ್ಯನ ಹೃದಯಗುಹೆಯಲ್ಲಿ ಈ ಸಮಸ್ಯೆಯನ್ನು ಅರಿತುಕೊಳ್ಳುವ ಗೂ ಇದನ್ನು ಬಗೆಹರಿಸುವ ಸಾಮರ್ಥ್ಯವಿದ್ದರೂ ಕಾರಣಾಂತರಗಳಿಂದ ್ಲ ಮಾನವರೂ ಅದನ್ನು ಮಾಡಲು ಹೋಗುವದಿಲ್ಲ ಎಂಬ ಮಾತು ತಿದು ಕಾಣುತಿದೆ. ಜಡತೆಯ ಮೂಲಕ, ಆಲಸ್ಯದ ಮೂಲಕ ಹಲವರು ಸಮಸ್ಯೆ-ಗಿಮಸ್ಯೆಗಳ ಗೋಜಿಗೆ ಹೋಗದೆ, ಹೇಗಾದರೂ ಜೀವನವನ್ನು ಗಿಸಿದರಾಯ್ತು, ಎಂದುಕೊಳ್ಳುವರು. ಹಲವರಿಗೆ ನಿತ್ಯಜೀವನಕ್ಕೆ ಅವಶ್ಯ ದ್ದ ಆಹಾರಾದಿಗಳನ್ನು ದೊರಕಿಸುವುದೆ ಒಂದು ಸಮಸ್ಯೆಯಾಗಿಬಿಟ್ಟು ದರಲ್ಲಿಯೆ ಅವರ ಶಕ್ತಿಸರ್ವಸ್ವವೆಲ್ಲ ತೊಡಗಿ ಬೇರೆ ವಿಚಾರಗಳಿಗೆ ಆಸ್ಪದ ಲ್ಲದಂಥ ಪರಿಸ್ಥಿತಿ ನಿರ್ಮಾಣವಾಗುವದು. ಹಸಿದವನೆದರು ದೇವರು ಸಹ ನ್ನದ ರೂಪವನ್ನು ತಾಳಿಯೆ ಪ್ರಕಟವಾಗಬಲ್ಲನು! ಬೇರೆ ರೂಪದಿಂದ ್ಯನ ಕೊಟ್ಟರೆ ಅವನ ಗುರುತು ಹಿಡಿಯುವರಾರು? ಹಲವರು ಮನುಷ್ಯ ಹಧಾರಿಗಳಾಗಿದ್ದರೂ ಇನ್ನೂ ಬಹುಮಟ್ಟಿಗೆ ಪಶುಜೀವನದ ಮಟ್ಟದಲ್ಲಿಯೆ ುವರು. ಈ ರೀತಿ ಹಲವಾರು ಕಾರಣಗಳ ಮೂಲಕ ಅನೇಕಾನೇಕ ನುಷ್ಯರು ಈ ಸಮಸ್ಯೆಯತ್ತ ಲಕ್ಷ್ಯಗೊಡದೆ ಹೋಗಬಲ್ಲರು. ಆದರೆ ಾರಿಗೆ ಈ ವಿಷಯದ ಮಹತ್ವವು ಗೊತ್ತಿರುವದೊ ಅವರು ಈ ಎಲ್ಲ ರಣಗಳು ನಷ್ಟವಾಗುವಂತೆ ಮಾಡಿ ಮಾನವ ಮಾತ್ರರಿಗೆ ಈ ಸಮಸ್ಯೆಯ

ಮಹತ್ವವು ಹೊಳೆಯುವಂತೆ, ತಿಳಿಯುವಂತೆ, ದುಡಿದು ಇದರತ್ತ ಎಲ್ಲ ಲಕ್ಷ್ಯವೂ ಎಳೆಯುವಂತೆ ಯತ್ನಿಸಿ, ಈ ಸಮಸ್ಯೆಯನ್ನು ಬಿಡಿಸುವ ಸಾಧ ಗಳನ್ನು ಅವರವರಿಗೆ ಒದಗಿಸಿಕೊಡಬಲ್ಲ ಶಿಕ್ಷಣ ಹಾಗೂ ಸಮಾಜರಚ ಯನ್ನು ಮಾಡಲು ಹೆಣಗಲಿಕ್ಕೆಬೇಕು.

ನಾವು ನಮ್ಮ ಜೀವನವನ್ನು ಸಾಗಿಸುವಾಗ ಉಂಟಾಗುವ ಅನೇಕಾನೇ ಸಮಸ್ಯೆಗಳನ್ನಂತೂ ಎದುರಿಸಲೇಬೇಕಾಗುವದು. ಆದರೆ ಜೀವನವೆ ಒಂದ ಸಮಸ್ಯೆ ಎಂದು ತಿಳಿದು ಅದರ ರಹಸ್ಯವನ್ನು ತಿಳಿದುಕೊಳ್ಳುವುದಕ್ಕೆ ನಾವ ಎಲ್ಲಕ್ಕೂ ಹೆಚ್ಚು ಮಹತ್ವ ಕೊಡಬೇಕು ಎಂಬುದಕ್ಕೆ ವಿಶೇಷ ಕಾರಣಗಳಿವೆ ಉಳಿದ ಸಮಸ್ಯೆಗಳೆಲ್ಲ ತಾತ್ಪೂರ್ತಿಕವಿದ್ದು ಅವು ಆಯಾ ಸಂದರ್ಭಗಳ ಮಟ್ಟಿಗೆ ಮಹತ್ವವುಳ್ಳವುಗಳಿರುವವು. ಆದರೆ ಈ ಸಮಸ್ಯೆ ಜೀವನವ್ಯಾಪಿ ಯಾಗಿದ್ದು ಈ ಬಗ್ಗೆ ನಾವು ನಿರ್ಧರಿಸಿದ ವಿಚಾರಪ್ರಣಾಲಿಯು ನಮ್ಮ ಜೀವನದ ಪ್ರತಿಯೊಂದು ಅಂಶದ ಮೇಲೂ ಪರಿಣಾಮವನ್ನುಂಟುಮಾಡು ವದು. ನಾವು ಈ ಜೀವನವೆಂಬುದು ಪಾಪಕೂಪ ಎಂಬ ಜುಗುಪ್ಸಾಭಾವ ದಿಂದ ನೋಡಿದರೆ, ಅಥವಾ ನಿರಾಶಾವಾದಿಗಳಾಗಿ ನೋಡಿದರೆ, ಅಥವಾ ಇದರತ್ತ ಒಂದು ಆಟಗಾರನ ದೃಷ್ಟಿಯಿಂದ ನೋಡಿದರೆ ಪ್ರತಿಯೊಂದು ಚಟು ವಟಿಕೆಯತ್ತ ನೋಡುವ ನಮ್ಮ ದೃಷ್ಟಿ ಬೇರೆಯಾಗಿ ಹೋಗುವದು. ಅದೇ ರೀತಿ ನಮ್ಮ ವೃತ್ತಿ, ಕಾರ್ಯಮಾಡುವ ರೀತಿ, ಇವೆಲ್ಲವೂ ಬೇರೆಯಾಗಿಬಿಡು ವವು. ಆದುದರಿಂದ ಜೀವನವೆಂಬ ಸಮಸ್ಯೆಯ ಪೂರ್ಣ ಅರ್ಥವನ್ನು ಚನ್ನಾಗಿ ತಿಳಿದುಕೊಳ್ಳುವದು, ಅದರ ಬುಡದಲ್ಲಿರುವ ಸತ್ಯವನ್ನು ಶೋಧಿಸು ವುದು ಇದು ಬಹಳ ಜೀವಾಳದ ಮಾತಾಗಿರುವದು. ಮೇಲಾಗಿ ಇದನ್ನು ನಾವು ತಿಳಿಯಲೆತ್ನಿಸದಿದ್ದರೆ ನಮ್ಮ ಜೀವನದ ಅರ್ಥವು ಸಹ ನಮಗೆ ಗೊತ್ತಾ ಗುವದು ಅಸಾಧ್ಯವು. ಇತರ ಪ್ರಾಣಿಗಳಂತೆ ಅಥವಾ ವಿಚಾರಹೀನ ಮೂಢ ಜನರಂತೆ ನಾವು ಜೀವನದ ಅನಂತ ಅನುಭವಗಳೊಳಗಿಂದ ಬರೀ ಹಾಯ್ದು ಒಂದು ದಿನ ಜೀವ ಬಿಟ್ಟುಹೋದರೆ, ನಮ್ಮ ಜನ್ಮದ ಸಾರ್ಥಕ್ಯ ವಾದರೂ ಏನು? ಮನುಷ್ಯನಿಗೆ ವಿದ್ಯೆ, ಬುದ್ಧಿ, ವಿಚಾರಶಕ್ತಿ, ಜಿಜ್ಞಾಸೆ, ಇತ್ಯಾದಿಗಳು ಇದ್ದು ಫಲವೇನು? ಒಂದು ಸುಂದರ ಸಂಗೀತ ಕಚೇರಿ ನಡೆ ದಿರುವಾಗ ಕೇವಲ ಒಂದೆರಡು ಆಲಾಪಗಳನ್ನು ಮಾತ್ರ ಕೇಳಿ ಸಂತೋಷ ಪಡುವವನಿಗೂ ಆ ಸಂಗೀತದ ಪೂರ್ಣ ಆನಂದವನ್ನು ಸೂರೆಗೊಳ್ಳುವ

ರ್ಮಜ್ಞನಿಗೂ ಯಾವ ಅಂತರವೊ ಅಷ್ಟೇ ಕೇವಲ ಬದುಕಿ ಬಾಳಿ ಒಂದು ರ ಸತ್ತುಹೋಗುವವನಿಗೂ ಜೀವನದ ರಹಸ್ಯವನ್ನರಿತು ಜ್ಞಾನಪೂರ್ವಕ ಗಿ ಜೀವಿಸುವವನಿಗೂ ಅಂತರವಿರುವದು.

ಇನ್ನು ಜೀವನದ ಸಮಸ್ಯೆ ಅಂದರೇನು? ಇಡೀ ಜೀವನದ ಆದ್ಯಂತ ತ್ವಿಕ ಜ್ಞಾನವನ್ನು ಮಾಡಿಕೊಳ್ಳುವುದೆ ಜೀವನದ ಸಮಸ್ಯೆ ಎನಿಸುವುದು. ಜೀವನದ ಸ್ವರೂಪವೇನು, ನಮ್ಮ ಅಸ್ತಿತ್ವದ ಅರ್ಥವೇನು, ನಮ್ಮ ಸುತ್ತ ನ ವಿವಿಧ ವಸ್ತುಗಳ ಹಾಗೂ ಶಕ್ತಿಗಳ ಸ್ವರೂಪವೇನು, ನಮಗೂ ಅವು ಗೂ ಇದ್ದ ಸಂಬಂಧವಾವುದು, ನಮ್ಮ ಪೂರ್ಣ ಶಕ್ತಿಯ ಅಳತೆಯೆಷ್ಟು, ಮ್ಮ ಜೀವನದ ಆತ್ಯಂತಿಕ ಉದ್ದೇಶ ಹಾಗೂ ಪರಮಾವಧಿಯ ಸಿದ್ಧಿ ಏನು ಬಲ್ಲದು, ಇವೆಲ್ಲವುಗಳ ತಳಬುಡಗಳನ್ನು ಅರಿತುಕೊಂಡು, ಆ ಜ್ಞಾನ ದ ಸನ್ನದ್ಧರಾಗಿ ಜೀವನದ ಪ್ರತಿಕ್ಷಣದಲ್ಲಿಯೂ ಪೂರ್ಣಸಿದ್ಧಿಯನ್ನು ಡೆಯಲೆತ್ನಿಸುವುದೆ ಒಂದು ರೀತಿ ನಮ್ಮ ಜೀವನದ ಸಾರಸರ್ವಸ್ವವಿರುವದು.

ಜೀವನಸಮಸ್ಯೆಯನ್ನು ನಾವು ಬಿಡಿಸಬೇಕು, ಜೀವನದ ಸವಿ ಜೇನನ್ನು ರ್ಣವಾಗಿ ಹಿಂಡಿ ತುಪ್ಪವನ್ನು ಯಥೇಚ್ಛವಾಗಿ ಸೇವಿಸಬೇಕು, ಎಂದು ಳುವದು ಸುಲಭವಿದ್ದರೂ ಇದನ್ನು ಸಾಧಿಸುವದು ಕಠಿಣ ಎಂದು ಹಲ ರು ಹೇಳುವರು. ಸರಿ. ಇದು ಗಡುಸಾದ ಮಾತು ಎಂದು ಒಪ್ಪಿದರೂ ಈ ವನದ ಪೂರ್ಣ ಲಾಭವನ್ನು ಪಡೆಯಲು ಇನ್ನೊಂದೇನಾದರೂ ಮಾರ್ಗ ರುವದೊ? ನೀರಿನಲ್ಲಿ ಬಿದ್ದವರು ಈಜುವದು ಕಠಿಣ ಎಂದರೆ, ಇಲ್ಲವೆ ಅಟ್ಟಡ ಯು ಪಾಲಾದವರು ದಾರಿ ನಡೆಯುವದು ಗಡುಸು ಎಂದರೆ, ಅವರ ಗತಿ ಂದೇ ಆಗಬಲ್ಲದು, ದುರ್ಮರಣ! ಆದುದರಿಂದ ನಿರಾಶೆಯಿಂದ ಇಲ್ಲವೆ ನೋದೌರ್ಬಲ್ಯದ ಮೂಲಕ ಕೈಕಾಲು ಬಿಟ್ಟು ನಡೆಯುವಂತಿಲ್ಲ. ದೊಂದು ಎದುರಾದ ಸಮಸ್ಯೆ, ತಪ್ಪಿಸಲಾರದ ಪ್ರಸಂಗ, ಎಂದು ಕ್ಷಾತ್ರ ತ್ತಿಯಿಂದ ಮುಂದೆ ಸಾಗುವದೇ ಉತ್ತಮೋಪಾಯವು. ಸಮಸ್ಯೆ ಗಡುಸಾ ಷ್ಟು, ಪ್ರಸಂಗ ಕಠಿಣವಿದ್ದಷ್ಟು ಆಂತರಿಕ ಶಕ್ತಿಗಳ ಜಾಗ್ರತಿ ಹೆಚ್ಚೆಚ್ಚು ಗುವದು, ಹೋರಾಡುವ ಹುರುಪು ಇಮ್ಮಡಿಸುವದು ಇದೇ ವೀರತ್ವದ ಮುಖ್ಯ ಲಕ್ಷಣ. ಮರಣದ ಇಲ್ಲವೆ ಸೋಲಿನ ಭಯಕ್ಕಿಂತ ರಣೋತ್ಸಾಹ ಚ್ಚು ಇರುವವನೆ ವೀರನೆನಿಸಬಲ್ಲನು. ಅವನಿಗಾಗಿಯೆ ಜೀವನದ ಮಧು ಸವು ಮೀಸಲು. 'ನಾಯಮಾತ್ಮಾ ಬಲಹೀನೇನ ಲಭ್ಯಃ', ಬಲಹೀನರಿಗೆ

ಆತ್ಮನು ದುರ್ಲಭನು, ಎಂದು ಉಪನಿಷತ್ಕಾರರು ಹೇಳಿದ್ದು ಇದೇ ಸಂದ
ದಲ್ಲಿ. ಆ ಬಲವಿಲ್ಲದವರು, ಹೇಡಿಯು ಹೆದರಿಕೆಯಲ್ಲಿಯೆ ದಿನ ರಾತ್ರಿ ತೊ
ಲಾಡುವವರು ಆ ವೀರನತ್ತ ನೋಡಿಯೇ ಸಮಾಧಾನ ಪಡಬೇಕು. ಅವನ
ಜೀವನಕುಂಭವನ್ನೆತ್ತಿ ತನಿರಸವನ್ನು ಗಟಗಟನೆ ಕುಡಿಯುತಿರುವಾಗ ಉಳಿ
ವರು ಅತ್ತಿತ್ತ ಸಿಡಿದಾಡುವ ಹನಿಗಳನ್ನು ನೆಕ್ಕಿ ಕೃತಾರ್ಥರಾಗಬೇಕು!

ಆಯಾ ಮನುಷ್ಯನಿಗೆ ತನ್ನ ಬಗ್ಗೆ ತಿಳಿವಳಿಕೆ ಹುಟ್ಟಿದಂದಿನಿಂದ ಅವನ
ಸಮಗ್ರಜೀವನ ಹಾಗೂ ಜೀವನವೆಂಬ ಸಮಸ್ಯೆ ಇವುಗಳ ಬಗ್ಗೆ ಗಂಭೀ
ಭಾವದಿಂದ ವಿಚಾರಮಾಡಲಾರಂಭಿಸುವದು ಅತ್ಯಾವಶ್ಯಕವು. ತನ್ನ ಹೊ
ಬಟ್ಟೆ, ಸಂಸಾರ, ಮಡದಿ-ಮಕ್ಕಳು ಮುಂತಾದವುಗಳನ್ನು ಕುರಿತು ವಿಚಾ
ಮಾಡುವದು ಇದ್ದೇ ಇದೆ. ಅದು ಮನುಷ್ಯನಿಗೂ ಇತರ ಉಚ್ಚ ಕೋಟಿಯ
ಹಲವು ಪ್ರಾಣಿಗಳಿಗೂ ಕೆಲಮಟ್ಟಿಗೆ ಸಾಮಾನ್ಯವಿರುವದೆಂದರೂ ಸಲ್ಲುವದು
ಆದರೆ ಮುಖ್ಯವಾಗಿ ತಾನು ಯಾರು, ಜೀವನದ ಉದ್ದೇಶವೇನು, ತನ್ನ ಶಕ್ತಿ
ಗಳ ಪೂರ್ಣ ವಿಕಾಸ ಹಾಗೂ ಉತ್ತಮ ಉಪಯೋಗ ಹೇಗೆ ಆಗಬಲ್ಲದ
ಎಂಬುದನ್ನು ವಿಚಾರಿಸಿ, ನಿರ್ಧರಿಸಿ, ಅದರಂತೆ ಆಚರಿಸುವದರಲ್ಲಿಯೆ
ಮನುಷ್ಯನ ಮನುಷ್ಯತ್ವವಿರುವದು. ಜೀವನರಹಸ್ಯದ ಬಗ್ಗೆ ಆತ್ಯಂತಿ
ಜಿಜ್ಞಾಸೆ ಇದೇ ಮೊದಲನೆ ಮೆಟ್ಟಲು. ಧರ್ಮಜೀವನಕ್ಕೆ ಅಲ್ಲಿಂದಲೆ ಪ್ರಾರಂಭ
ಎಂದು ಹೇಳಬಹುದು. ಆ ಜಿಜ್ಞಾಸೆಯ ಎಳೆ ಹಿಡಿದುಕೊಂಡು ಹೋಗ
ವವನು ಸಾಧಕನಾಗುವನೆಂಬಲ್ಲಿ ಸಂಶಯವಿಲ್ಲ. ಸಾಧಕನಾದವನೆ ಒಂ
ಲ್ಲೊಂದು ದಿನ ಸಿದ್ಧಿಯನ್ನು ಪಡೆಯಬಲ್ಲನು. ಸತ್ಯವನ್ನು ಶೋಧಿಸಿಯೆ
ತೀರಬೇಕು ಎಂದು ನಿರ್ಧರಿಸಿದವನೆ ಸತ್ಯದ ಯಾತ್ರಿಯಾಗಬಲ್ಲನು. ಅವನೆ
ಸರ್ವ ಕಷ್ಟನಷ್ಟಗಳನ್ನು ಸಹಿಸಿ ತನ್ನ ಇಷ್ಟ ಸ್ಥಾನವನ್ನು ಮುಟ್ಟುವನು
ಕೊನೆಯ ಸತ್ಯ ಹಾಗೂ ಪೂರ್ಣ ಜೀವನ ಇವುಗಳ ಬಗ್ಗೆ ಆತ್ಯಂತಿಕ ಜಿಜ್ಞಾಸೆ
ಅದನ್ನು ಕೈವಶಮಾಡಿಕೊಂಡೇ ತೀರುವೆನೆಂಬ ನಿಷ್ಠೆ ಮತ್ತು ನಿರ್ಧಾರ
ಸತತ ಸಾಧನೆ ಮತ್ತು ಉದ್ಯೋಗ, ಜೀವನಸರ್ವಸ್ವವನ್ನು ಸತ್ಯಮಯ
ಮಾಡಿಬಿಡುವ ಆಕಾಂಕ್ಷೆ, ಹೆಜ್ಜೆಜ್ಜೆಗೂ ನವೋತ್ಸಾಹ ಇವೆಲ್ಲ ಇದ್ದ ಬಳಿಕ
ಸಾಧಕನನ್ನು ಸಿದ್ಧಿಯಿಂದ ದೂರವಿಡುವದು ಬ್ರಹ್ಮನಿಗೂ ಅಶಕ್ಯವಾದುದು.
ಮಾನವಜನ್ಮಕ್ಕೆ ಬಂದು ಆತ್ಮಸುಖದ ಶ್ರೇಯೋಮಾರ್ಗವನ್ನು ಹುಡುಕದೆ
ಕೇವಲ ಇಂದ್ರಿಯಸುಖಗಳ ಪ್ರೇಯೋಮಾರ್ಗವನ್ನರಸುವವನು, ಈ ಧರ್ಮ

ಜ್ಞಾಸೆ ಇಲ್ಲದವನು, ಈ ಮರ್ಮವನ್ನು ಕೈವಶಮಾಡಿಕೊಳ್ಳುವ ಮಹತ್ವಾಕಾಂಕ್ಷೆಯಿಂದ ರಹಿತನು, ಈ ಮಾರ್ಗದಲ್ಲಿ ಕಾಲಿಟ್ಟು ಪ್ರಯತ್ನಶೀಲನಾಗದೆ ರುವವನು, ಪಂಚಾಮೃತದ ಎಡೆ ಬಿಟ್ಟು ಒಣರೊಟ್ಟಿಗೆ ಕೈಯ್ಯೊಡ್ಡಿದಂತೆ, ಳೆನೀರು ಬಿಟ್ಟು ಮಂಜಿನ ನೀರು ಬೇಡಿದಂತೆ, ಹರಿಯುವ ಗಂಗೆಯನ್ನು ಕ್ಕರಿಸಿ ಮೃಗಜಲದ ಬೆನ್ನು ಬಿದ್ದಂತೆ.

ಜೀವನದ ಅರ್ಥವನ್ನು ಅದರ ಗುಟ್ಟುಗುರಿಗಳನ್ನು ಶೋಧಿಸುವ ಶುಭ
ಕಾರ್ಯದಲ್ಲಿ ಪೌರ್ವಾತ್ಯರು ಯಾವಾಗಲೂ ತೊಡಗಿರುವರು.

—ಆಲ್‌ಬರ್ಟ ಶ್ವೈಟ್ಝರ್

೨

ಜೀವನವೆ ಒಂದು ಯಾತ್ರೆ

ಜೀವನವೆ ಒಂದು ಎಲ್ಲಕ್ಕೂ ದೊಡ್ಡ ಸಮಸ್ಯೆಯಾಗಿದ್ದರೂ ಜೀವನಾಂತರ್ಗತವಾದ ಅನೇಕ ಸಮಸ್ಯೆಗಳು ನಮಗೆ ಹೆಜ್ಜೆಜ್ಜೆಗೆ ಎದುರಾಗುವದುಂಟು. ಹುಟ್ಟು, ಸಾವು, ಶಿಕ್ಷಣ, ಧರ್ಮಾಧರ್ಮ, ಸುಖ ದುಃಖ, ಸಂಸಾರ, ವಿವಾಹ, ಸಮಾಜ, ಹೀಗೆ ಒಂದಲ್ಲ ಎರಡಲ್ಲ, ಸಾವಿರಾರು ಸಮಸ್ಯೆಗಳ ಪರಂಪರೆಯೆ ಬೆಂಬತ್ತಿ ಬರುವದು. ಒಂದು ರೀತಿ ನೋಡಿದರೆ ಜೀವನದ ಸಮಸ್ಯೆಗಳು, ಎಂದು ಹೇಳುವದಕ್ಕಿಂತ ಸಮಸ್ಯೆಗಳೆಂದರೆಯೆ ಜೀವನ, ಎಂದು ಅನ್ನುವದು ಹೆಚ್ಚು ಅನ್ವರ್ಥಕವಾಗಬಲ್ಲದು. ಯಾಕೆಂದರೆ ಸಮಸ್ಯೆಗಳೆ ಇಲ್ಲದಿದ್ದರೆ ಜೀವನದಲ್ಲಿ ಸ್ವಾರಸ್ಯವೇನು? ಒಂದು ಸಮಸ್ಯೆ ಬಗೆಹರಿಸುವಷ್ಟರಲ್ಲಿ ಇನ್ನೊಂದು ಧುತ್ ಎಂದು ನಿಲ್ಲುವುದರಿಂದಲೆ ನಮಗೆ ಜೀವನದಲ್ಲಿ ಸಾಕಷ್ಟು ಉದ್ಯೋಗವುಂಟಾಗುವದು! ಸಮಸ್ಯೆಗಳಿಂದಲೆ ಜೀವನ, ಸಮಸ್ಯೆಗಳಿಂದಲೆ ಸಂಸಾರ, ಸಮಸ್ಯೆಗಳೆ ಚಟುವಟಿಕೆಗಳಿಗೆ ಕಾರಣ. ಸಮಸ್ಯೆ ಇಲ್ಲದವನೆ ಮುಕ್ತ. ಶ್ರೀಕೃಷ್ಣನಿಗೆ ಯಾವ ಸಮಸ್ಯೆಗಳೂ ಇರಲಿಲ್ಲ. ಆದುದರಿಂದ ತಾನು ಜೀವದಿಂದಿದ್ದು ಏನಾದರೂ ಮಾಡಬೇಕಾದರೆ ಸಮಸ್ಯೆಗಳನ್ನು ಹುಟ್ಟಿಸಿಕೊಳ್ಳಬೇಕಾಯಿತು! ನಾನು ಕರ್ಮ ಮಾಡದಿದ್ದರೆ ಈ ಲೋಕಗಳೇ ನಷ್ಟವಾಗುವವಲ್ಲ, ಎಂಬ ಸಮಸ್ಯೆಯ ಭಯವನ್ನು ಮನಸಿನಲ್ಲಿ ನಿರ್ಮಿಸಿಕೊಂಡಾಗಲೆ ಕೃಷ್ಣನಿಗೆ ಅತಂದ್ರಿತನಾಗಿ ಕಾರ್ಯನಿರತನಾಗಲು ಅನುವಾಯಿತು. ತೃಷ್ಣೆ, ವಾಸನೆ ಮತ್ತು ಅದರ ಪೂರೈಕೆ ಇವೇ ಸಂಸಾರದ ಕಾರಣ, ಎಂದರಿತು ಅವುಗಳನ್ನು ಪೂರ್ಣ

ಮಿಸಿ, ನಿರ್ವಾಣ ಪದವನ್ನು ಪಡೆಯಲರ್ಹನಾದ ಬುದ್ಧನು ಕೂಡಲೆ ನಿರ್ವಾಣ ರದೆ ಲೋಕ ದುಃಖದ ಪರಿಹಾರ, ಎಂಬ ಸಮಸ್ಯೆಯನ್ನು ಹುಟ್ಟಿಸಿಕೊಂಡ ಲೆಯೆ ತನ್ನ ಅವತಾರ ಕಾರ್ಯವನ್ನು ಮುಂದರಿಸಲವಕಾಶವಾಯಿತು. ಥಿತ್ ಸಮಸ್ಯೆಯೆ ಜೀವನ, ಸಮಸ್ಯೆಯೆ ಚಟುವಟಿಕೆಯ ಬೀಜ. ಅನಂತ ಸ್ಯೆಗಳ ಪರಂಪರೆಯೆ ಸಂಸಾರವೆಂಬ ಅಶ್ವತ್ಥ ವೃಕ್ಷದ ಶಾಶ್ವತ ಬೇರು. ಕ್ಕೊ ಸಾವಿದೆ ಆದರೆ ಸಮಸ್ಯೆಗೆ ಸಾವಿಲ್ಲ. ಸಮಸ್ಯೆ ಎಂಬುದು ಸತ್ತವ ನ್ನು ಸಹ ಸ್ಮಶಾನದಿಂದ ಎಬ್ಬಿಸಿ ತಂದು ಕೆಲಸದಲ್ಲಿ ತೊಡಗಿಸಬಲ್ಲದು. ಗಿದೆ ಸಮಸ್ಯೆಯ ಪ್ರತಾಪ!

ಈ ಸಮಸ್ಯಾಮಯವಾದ ಜೀವನ, ಅದರಲ್ಲಿಯ ಕ್ರಿಯೆಗಳು ಸಾಮಾನ್ಯ ಗಿ ಎಲ್ಲರ ಮಟ್ಟಿಗೆ ತತ್ವತಃ ಏಕರೂಪವಿದ್ದರೂ ಅನೇಕರು ಜೀವನದತ್ತ ೇಕ ರೀತಿಯಿಂದ ಏಕೆ ನೋಡುವರು, ಅದರ ತೂಕ ಕಟ್ಟುವಾಗ ಈ ರೆ ಬೇರೆ ತಕ್ಕಡಿಗಳೇಕೆ? ಅವರವರ ವಿವಿಧ ಅನುಭವಗಳೆ ಕಾರಣ, ಎಂದೇ ಳಬೇಕಾಗುವದು. ಜೀವನ ಎಂಬುದು ಹುಟ್ಟಿನಿಂದ ಸಾಯುವವರೆಗೆ ದು ಜೀವಕ್ಕೆ ಆಗುವ ಅನುಭವಪರಂಪರೆ.

ಇದರ ಅರ್ಥ ನಮ್ಮೆಲ್ಲರ ಜೀವನವೆ ಬೇರೆ ಬೇರೆ ಇದೆ ಎಂದಲ್ಲ. ನಮಗೆ ುವ ಅನುಭವಗಳ ಪರ್ಯಾಯಗಳು ಬೇರೆ ಬೇರೆ ಇವೆ. ಆ ಭೇದಗಳ ಟ್ಟಿಗೆ ನಾವು ಜೀವನದ ಬೆಲೆಯನ್ನು ಬೇರೆ ಬೇರೆಯಾಗಿ ಕಟ್ಟುವೆವು. ಇಷ್ಟೇ , ಒಂದೇ ವ್ಯಕ್ತಿಯು ದೇಶಕಾಲಕ್ಕನುಸರಿಸಿ ತನ್ನ ಜೀವನದತ್ತ ಬೇರೆ ರೆ ದೃಷ್ಟಿಯಿಂದ ನೋಡುವನು. ಒಮ್ಮೆ ಭಯಾನಕವಾದ ಭವಸಾಗರ ದು ಅದರತ್ತ ನೋಡಿದರೆ ಇನ್ನೊಮ್ಮೆ ಅದು ಪರಮಾತ್ಮನ ಲೀಲೆ, ಎಂದು ನು ಹೇಳಬಹುದು. ಆದುದರಿಂದ ಜೀವನದ ಅರ್ಥವನ್ನು ನಾವು ನಮ್ಮ ುಭವಗಳ ಆಧಾರದ ಮೇಲೆ ಮಾಡಿ ನಮ್ಮ ನಮ್ಮ ದೃಷ್ಟಿಗನುಸಾರವಾಗಿ ರ್ಯ ಮಾಡುತ್ತ ಸಾಗುವೆವು. ಜೀವನದ ಕಡೆಗೆ ನೋಡುವ ಹಲವು ಷ್ಟಿಗಳಿದ್ದರೂ, ಸಾಧಕ ದೃಷ್ಟಿಯೆ ಸಾಮಾನ್ಯರಿಗೆ ಹೆಚ್ಚು ಉಪಯುಕ್ತ ಗುವದೆಂಬಲ್ಲಿ ಸಂಶಯವಿಲ್ಲ.

ಇಡೀ ಜೀವನವೆ ಒಂದು ಸಮಸ್ಯೆ ಇರುವಾಗ ಅದನ್ನು ಬಿಡಿಸುವದಂತೂ ನುಪ್ರಾಪ್ತವಾದ ಮಾತು. ಒಂದೊಪ್ಪತ್ತು ನಾವು ಅದರತ್ತ ದುರ್ಲಕ್ಷ ಾಡಿದರೂ ಆ ಸಮಸ್ಯೆ ನಮ್ಮನ್ನು ದುರ್ಲಕ್ಷಿಸಲಾರದು. ನಾವು ಅದನ್ನು

ಬಿಟ್ಟರೂ ಅದು ನಮ್ಮನ್ನು ಬಿಡದು. ಮನಸಿನಲ್ಲಿ ವಿಚಾರಕ್ಕೆ ಸ್ವಲ್ಪ ಆಸ್ಪ
ವುಂಟಾದೊಡನೆ ಜೀವನಸಮಸ್ಯೆಯ ವಿವಿಧಾಂಗಗಳು ನಮ್ಮೆದುರು ಬಂ
ಕುಣಿದಾಡಲಾರಂಭಿಸುವವು. ಆದುದರಿಂದ ಅದನ್ನು ತಪ್ಪಿಸುವದಕ್ಕಿಂ
ಬಿಡಿಸಲೆತ್ನಿಸುವುದೆ ವೀರನ ಲಕ್ಷಣವು. ಜಯಾಪಜಯವನ್ನು ಲೆಕ್ಕಿಸ
ನಾವು ಮುಂದೆ ಸಾಗಲಿಕ್ಕೆಬೇಕು. ಸಿದ್ಧಿ ಎಂಬುದು ಯಾರ ಮನೆಯದ
ಅಲ್ಲ. ಆದರೆ ಸಾಧನೆ ಎಲ್ಲರ ಕೈಯಲ್ಲಿಯೂ ಇರುವದು. ಪ್ರತಿಯೊಬ್ಬನ
ಶಕ್ತ್ಯನುಸಾರವಾಗಿ ಸಾಧನೆ ಮಾಡುತ್ತಾ ಹೋಗುವುದೆ ಸಮಂಜಸವಾ
ದಾರಿಯು. ಸಾಧಕನಿಗೆ ಬೇಕಾಗುವ ಭಂಡವಲು ಬಹಳವಿಲ್ಲ. ತಾ
ಮಾಡುವುದೆಲ್ಲ ತನ್ನನ್ನು ತನ್ನ ಧ್ಯೇಯದತ್ತ, ಸಾವಕಾಶವಾಗಿಯಾದರ
ಒಯ್ಯುತಿದೆಯೋ ಇಲ್ಲವೋ ಎಂಬುದನ್ನೂ ನೋಡುತ್ತ ಹೋದರಾಯಿತ
ಅತ್ಯಲ್ಪ ಸಾಧನೆ ಕೂಡ ಕ್ಷೇಮಕರವಾಗುವದೆಂಬಲ್ಲಿ ಸಂಶಯವಿಲ್ಲ. ಜೀವ
ಸಮಸ್ಯೆಯನ್ನೆ ಬಿಡಿಸಬೇಕೆನ್ನುವ ಸಾಧ್ಯಕ್ಕಿಂತ ಹೆಚ್ಚಿನ ಸಾಧ್ಯವಾದರ
ಜೀವನದಲ್ಲಿ ಏನಿರಬಲ್ಲದು? ಈ ಸಾಧ್ಯದ ಸಾಧನವಲ್ಲದೆ ಇನ್ನಾವುದ
ಇಷ್ಟು ಉಪಕಾರವಾಗಬಲ್ಲದು?

ಈ ವರೆಗೆ ಅನೇಕ ಧರ್ಮಗಳು, ದಾರ್ಶನಿಕರು, ವಿಚಾರವಂತರ
ಸಾಹಿತ್ಯಕಾರರು ಜೀವನದತ್ತ ಬೇರೆ ಬೇರೆ ದೃಷ್ಟಿಯಿಂದ ನೋಡಿ ಅನುಭ
ಪಟ್ಟು ತಮ್ಮ ತಮ್ಮ ವಿಚಾರಪ್ರಣಾಲಿಗಳನ್ನು ಜಗತ್ತಿನೆದುರಿಗೆ ಇಟ್ಟಿದ್ದಾ
ಅವೆಲ್ಲವುಗಳಲ್ಲಿ ಅವರವರ ಅನುಭವಸರ್ವಸ್ವದ ಸಾರವಿರುವದರಿಂದ ಅ
ಗಳನ್ನು ಸಹಸಾ ಟೀಕಿಸುವದು ಸಾಹಸದ ಕೆಲಸವೇ ಸರಿ. ಇಲ್ಲಿ ಅದು ನ
ಉದ್ದೇಶವೂ ಇಲ್ಲ. ಟೀಕೆ, ವಿಮರ್ಶೆ ಒತ್ತಟ್ಟಿಗಿರಲಿ. ಅವುಗಳಲ್ಲಿ ಹಲವನ
ಇಲ್ಲಿ ಬರೀ ಕಾಣಿಸುವದು ಸಹ ಅಸಾಧ್ಯವಾದ ಸಂಗತಿ. ಆ ಗೋಜಿ
ಹೋಗದೆ ಜೀವನವು ಒಂದು ಯಾತ್ರೆ, ಎಂಬ ಭಾವನೆಯಿಂದ ಸಾಗುವ
ಬಹಳ ಉತ್ತಮ ಎಂಬ ಮಾತನ್ನು ಮಾತ್ರ ಇಲ್ಲಿ ವಿಶದಪಡಿಸಬೇಕೆನ್ನುವೆ.

ಜೀವನಸಮಸ್ಯೆಯ ಸ್ವರೂಪವನ್ನು ಸಂಕ್ಷೇಪದಿಂದ ಈ ಮೊದಲ
ಹೇಳಿದ್ದಾಗಿದೆ. ತನ್ನಂತಃಕರಣದೊಳಗಿನ ಅನೇಕ ತಂತ್ರತ್ವವನ್ನು ಹಾಗ
ಅತಂತ್ರತ್ವವನ್ನು ಹೋಗಲಾಡಿಸಿ ಏಕತಂತ್ರರೂಪವಾದ ಏಕಸೂತ್ರತೆಯ
ಮೂಲಕ ಎಲ್ಲ ಅಂತಃಶಕ್ತಿಗಳ ಸಮನ್ವಯವನ್ನೂ ಸಾಧಿಸಿ ಬಾಹ್ಯ ಜಗತ್ತ
ನೊಡನೆ ಸಮ್ಮೇಲವನ್ನು ಸ್ಥಾಪಿಸಿ ವಿಶ್ವಸಂಗೀತದೊಡನೆ ಸಮರಸವಾಗುವ

ೀವನಸಮಸ್ಯೆಯ ಪೂರ್ಣ ಪರಿಹಾರ ಎನ್ನಬಹುದು. ಒಂದು ವ್ಯಕ್ತಿ ಾಗೂ ಅಸುಗೊಳ್ಳದ ಹಲವು ಶಕ್ತಿಗಳು, ಇವುಗಳ ನಡುವೆ ಪ್ರಭುತ್ವದ ಗ್ಗೆ ಸಂಘರ್ಷ ನಡೆದಿರುವ ಒಂದು ನೋಟವು ನಮಗೆ ಮಾನವೀ ಅಂತಃಕರಣ ಲ್ಲಿ ಕಾಣುವದು. ಅದೊಂದು ಕುರುಕ್ಷೇತ್ರವೆ ಸೈ. ಆ ಶಕ್ತಿಗಳು ಪರಸ್ಪರ ರೋಧಿ ಇಲ್ಲವೆ ಪರಸ್ಪರ ಸಂಬಂಧವಿಲ್ಲದವು ಎಂದು ಮೊದಮೊದಲು ಂಡರೂ ವಸ್ತುಸ್ಥಿತಿ ಹಾಗಿಲ್ಲ. ಯಾಕೆಂದರೆ ಆ ಎಲ್ಲ ಶಕ್ತಿಗಳ ಉಗಮವು ತ್ಮಭೂಮಿಯಲ್ಲಿಯೆ ಆಗಿರುವದು ಹಾಗೂ ಅವೆಲ್ಲ ಒಂದೇ ವ್ಯಕ್ತಿಯ ೃದಯರಂಗದಲ್ಲಿರುವವು. ಈ ತಿಕ್ಕಾಟದಲ್ಲಿ ವ್ಯಕ್ತಿಯು ಅಥವಾ ಜೀವವು ಯಶಾಲಿಯಾಗಬೇಕೆಂಬುದು ಎಲ್ಲರ ಇಷ್ಟ ಧ್ಯೇಯವು. ಆ ಮಾತನ್ನು ಾಧಿಸುವಂತೆ ನಾವು ಜೀವನದತ್ತ ನೋಡಿ ನಮ್ಮ ಕಾರ್ಯಕ್ರಮವನ್ನು ನಿಶ್ಚಯಿ ುವದು ಯಥಾಯೋಗ್ಯವಾಗುವದು. ಒಮ್ಮೆ ಅಂತಃಕರಣದಲ್ಲಿ ಜಾಗ್ರತಿ ಾಗಿ, ಜೀವನಸಮಸ್ಯೆಯನ್ನು ಬಿಡಿಸಿಯೆ ತೀರಬೇಕೆಂಬ ನಿರ್ಧಾರವಾಯಿ ಂದರೆ ಕಠಿಣವೆಂದೆನಿಸುವ ಮಾತುಗಳು ಸಹ ಸುಲಭವಾಗುವವು. ಇನ್ನು ೀವನವು ಯಾವ ಅರ್ಥದಲ್ಲಿ ಯಾತ್ರೆ ಎನಿಸಬಲ್ಲದು ಹಾಗೂ ಜೀವನು ಯಾವ ೀತಿ ಯಾತ್ರಿಕನಾಗಬಲ್ಲನು ಇದನ್ನು ನೋಡಲು ಅಡ್ಡಿ ಇಲ್ಲ.

ಜೀವನದ ಅನುಭವಗಳು ಅತ್ಯಂತ ವಿವಿಧ ಹಾಗೂ ಕ್ಷಣಕ್ಷಣಕ್ಕೂ ಬದ ಾಗುವಂತಹವು ಇರುವವು. ಹೀಗಿರುವಾಗ ಇಡೀ ಜೀವನವೆ ಒಂದು ಾತ್ರೆಯ ರೂಪದಲ್ಲಿ ಮಾರ್ಪಟ್ಟಿತೆಂದರೆ ಆಯಾ ಅನುಭವಗಳನ್ನು ಯಾತ್ರಿ ನ ದೃಷ್ಟಿಯಿಂದಲೆ ನಾವು ನೋಡಬೇಕಾಗುವದು. ಯಾತ್ರೆ ಮತ್ತು ಾತ್ರಿಕ ಇವೆರಡರ ಪೂರ್ಣ ಅರ್ಥವನ್ನು ಮಾಡಿಕೊಂಡರೆ ಮುಂದೆ ುಲಭವಾಗಬಲ್ಲದು ಎಂಬ ಭಾವನೆಯಿಂದ ಮೊದಲು ಅತ್ತ ಲಕ್ಷಗೊಡುವ.

ಮನುಷ್ಯನು ಒಬ್ಬ ಯಾತ್ರಿಕನೆ ಸೈ. ಅವನ ಆಯುಷ್ಯವು ಒಂದು ್ಯಕ್ತಿಯ ದೃಷ್ಟಿಯಿಂದ ಬಹಳ ದೀರ್ಘವೆನಿಸಿದರೂ ಇಡೀ ಮಾನವ ಕುಲದ ತಿಹಾಸದ ದೃಷ್ಟಿಯಿಂದಾಗಲಿ, ವಿಶ್ವದ ದೃಷ್ಟಿಯಿಂದಾಗಲಿ, ಅದು ಬಹಳ ಲ್ಪವೆ ಎಂದು ಹೇಳಬೇಕಾಗುವದು. ಯಾತ್ರಿಕರು ಎಲ್ಲಿಂದಲೋ ಬಂದು ಂದೆರಡು ದಿನ ಧರ್ಮಶಾಲೆಯಲ್ಲಿದ್ದು ಯಾವ ರೀತಿ ಮುಂದೆ ಸಾಗುವರೋ ಾಗೆಯೇ ಮನುಷ್ಯವ್ಯಕ್ತಿಯ ಸ್ಥಿತಿಯಿರುವದು. ಅವನು ಬಂದುದು ಎಲ್ಲಿಂದ ದು ಗೊತ್ತಿಲ್ಲ, 'ಹೋಗುವದು ತನ್ನ ಧ್ಯೇಯದತ್ತ ಎಂಬುದು ಗೊತ್ತಿದ್ದರೂ

ಅವನು ಎಂದು ಮುಟ್ಟುವನು ಇದರ ಅಂದಾಜನ್ನು ಸಹ ಮಾಡುವದು ಕಠಿಣ. ನಿತ್ಯದಲ್ಲಿ ನಡೆಯುತ್ತ ಹೋಗಬೇಕು, ಹತ್ತಿದಲ್ಲಿ ಹತ್ತಿತು. ಈ ವಿಚಾರ ದಿಂದಲೆ ಅವನು ಸಾಗಬೇಕಾಗುವದು. ದಾರಿಯಲ್ಲಿ ಅವನಿಗೆ ಅನೇಕ ಗಂಡಾಂತರಗಳು ಬರಬಲ್ಲವು, ಅವನು ದಾರೀ ತಪ್ಪಿ ಅಡ್ಡದಾರಿಗೆ ಹೋಗ ಬಹುದು, ಕಳ್ಳರುಃಕಾಕರು ಅವನನ್ನು ಸೂರೆಗೊಳ್ಳಬಹುದು. ಹೀಗೆಲ್ಲ ಆದರೂ ಅವನು ಶ್ರದ್ಧೆಯಿಂದ ಮುಂದೆ ಸಾಗುತ್ತಲೆ ಇರಬೇಕು. ದಾರಿಯಲ್ಲಿ ಎಷ್ಟೋ ರಮ್ಯಸ್ಥಾನಗಳು, ಸುಂದರ ಉಪವನಗಳು, ದೊಡ್ಡ ಮಹಲುಗಳು, ನಗರಗಳು ಇದ್ದರೂ ಯಾತ್ರಿಕನು ಅಲ್ಲಿ ಸ್ವಲ್ಪೇ ಕಾಲ ತಂಗಿ ಗುಡಿಗುಂಡಾರ ಹುಡುಕುತ್ತ ತೀರ್ಥಕ್ಷೇತ್ರಗಳನ್ನು ಸುತ್ತುತ್ತ ಹೋಗಲಿಕ್ಕೆಬೇಕು. ಯಾಕಂದರೆ ಅವನ ಧ್ಯೇಯ ಸ್ವಾರ್ಥವಲ್ಲ, ಬಾಹ್ಯಸೌಂದರ್ಯವಲ್ಲ, ಇಂದ್ರಿಯ ಸುಖವಲ್ಲ, ಆದರೆ ಪರಾರ್ಥ, ಅಂತಃಸೌಂದರ್ಯ ಮತ್ತು ಆತ್ಮಸುಖ.

ಯಾತ್ರಿಕನ ಗುರಿ ಆಯಾ ತೀರ್ಥ ಇಲ್ಲವೆ ಕ್ಷೇತ್ರ ಇಲ್ಲವೆ ಪವಿತ್ರ ಸ್ಥಾನ. ಅಲ್ಲಿ ಹೋಗುವದರಿಂದಲೆ ತನ್ನ ಉದ್ಧಾರ ಎಂಬುದು ಅವನ ಭಾವನೆ. ಕಾಲಾವಧಿಯಿಂದ ಪಾವನವೆನಿಸಿದ, ಲಕ್ಷಾಂತರ ಯಾತ್ರಿಕರ ಹಾಗೂ ಅನ್ಯ ಜನರ ಸದ್ಭಾವನೆಯ ಮೂಲಕ ಒಂದು ಬಗೆಯ ವಿಶಿಷ್ಟ ವಾತಾವರಣವನ್ನು ಪಡೆದ, ಪರಂಪರೆಯಿಂದ ಹಾಗೂ ಗತಾನುಗತಿಕವಾಗಿ ಅಲ್ಲಿ ಪತಿತೋದ್ಧಾರಕ ಶಕ್ತಿ ಇದೆ ಎಂಬ ಶ್ರದ್ಧೆಗೆ ಆಸ್ಪದವಾದ ಸ್ಥಾನಗಳನ್ನು ಹುಡುಕಿ ಹುಡುಕಿ ಯಾತ್ರಿಕನು ತನ್ನ ಯಾತ್ರೆ ಮುಂದರಿಸುವನು. ಯಾತ್ರೆ ಇದೊಂದು ಪರಮಾರ್ಥಸಾಧನಮಾರ್ಗ ಎಂಬ ವಿಚಾರ ಸಾಧಕರಲ್ಲಿ ಬದ್ಧಮೂಲ ವಾಗಿದೆ. ಆದುದರಿಂದ ಲಕ್ಷಾಂತರ ಜನರು ಈ ನಮ್ಮ ಭರತಭೂಮಿಯಲ್ಲಿ ವರುಷದುದ್ದಕ್ಕೂ ಯಾತ್ರೆಯಲ್ಲಿ ತೊಡಗಿದ್ದುದು ಕಂಡುಬರುವದು. ಅವರಿಗೆ ಅಡಚಣಿಗಳ ಭಯವಿಲ್ಲ, ನೆಂಟರ ಇಷ್ಟರ ಹಂಗಿಲ್ಲ, ನಾಳೆ ಹೇಗೆ ಎಂಬ ಚಿಂತೆ ಇಲ್ಲ, ಎಲ್ಲಿ ಇಳುಕೊಳ್ಳಬೇಕು ಊಟ-ಉಪಚಾರಕ್ಕಾಗಿ ಏನು ಮಾಡ ಬೇಕು ಎಂಬ ಬಗ್ಗೆ ಪೂರ್ವವಿಚಾರವಿಲ್ಲ, ಹಗಲಿರುಳಿನ ಪರಿವೆಯಿಲ್ಲ. ನಡೆ ದಿದೆ ಇದೊಂದು ಪ್ರವಾಹ, ಪರಂಧಾಮ ಮುಟ್ಟಬೇಕೆಂದು. ಈ ಯಾತ್ರಿಕ ರಲ್ಲಿ ಎಷ್ಟು ಜನ ನಿಜವಾಗಿ ಪರಮಾರ್ಥವನ್ನು ಸಾಧಿಸುವರು, ಎಷ್ಟು ಜನರ ಜೀವನ ತೀರ್ಥಾಟನದ ಬದಲು ಕೇವಲ ಭಿಕ್ಷಾಟನವಾಗಿ ಪರಿಣಮಿಸುವದು ಇದನ್ನು ಹೇಳುವದು ಕಠಿಣ.

ಇದು ಸಾಮಾನ್ಯ ಯಾತ್ರಿಕರ ವಿಷಯವಾಯಿತು. ಆದರೆ ಇಲ್ಲಿ ಯಾತ್ರಿಕನ ವೃತ್ತಿ ಎಂಬುದೊಂದು ಮನೋವೃತ್ತಿ, ಒಂದು ವೃತ್ತಿವಿಶೇಷ ಹೊರತು ಅದೊಂದು ಆಶ್ರಮವಲ್ಲ, ಉದ್ಯೋಗವಲ್ಲ, ಅಥವಾ ವ್ಯವಸಾಯ ವಲ್ಲ. ಮನುಷ್ಯನು ಯಾವದೇ ವರ್ಣದವನಿರಲಿ, ಯಾವದೇ ಉದ್ಯೋಗ ಮಾಡುತಿರಲಿ, ಅವನು ಯಾತ್ರಿಕವೃತ್ತಿಯುಳ್ಳವನಿರಬಲ್ಲ. ಯಾಕಂದರೆ ಈ ವೃತ್ತಿಯ ಮುಖ್ಯ ಲಕ್ಷಣವಾದ, ಪ್ರತಿ ಅನುಭವದಲ್ಲಿಯೂ ಪರಮಾತ್ಮ ನನ್ನು ಕಾಣಬೇಕು ಎಂಬ ಆತುರವು ಯಾವನಲ್ಲಿರುವದೋ ಅವನೇ ಯಾತ್ರಿ ಕನು.

ಜೀವನವೆ ಒಂದು ಯಾತ್ರೆ ಎಂದು ತಿಳಿದು ಸಾಗಬೇಕಾದರೆ ಜೀವನ ದೊಳಗೆ ಆಗಬಲ್ಲ ವಿವಿಧಾನುಭವಗಳೆಲ್ಲ ಆತ್ಮಸಾಧನ ಸಾಮುಗ್ರಿಯಾಗ ಬೇಕು. ದೇಹವೆ ಒಂದು ರಥ ಇಲ್ಲವೆ ವಾಹನ ಎಂದು ತಿಳಿದು ಜೀವವು ನಿತ್ಯ ತನ್ನ ಧ್ಯೇಯದತ್ತ ಬಿಟ್ಟೂಬಿಡದೆ ಸಾಗಬೇಕು. ಇಂದ್ರಿಯಾದಿಗಳ ದ್ವಾರಾಂತರ ಆಗುವ ಸುಖಗಳು ಸಹ ಧ್ಯೇಯವಾದ ಪರಮಾತ್ಮಾಸಾಧನಕ್ಕೆ ಸಹಾಯಕವಾಗುವಂತೆ ಮಾರ್ಪಡಲಿಕ್ಕೆಬೇಕು. ಅಂದರೆ ಮಾತ್ರ ಜೀವನವು ಯಾತ್ರೆಯಾಗಿ, ಜೀವನು ಯಾತ್ರಿಕನಾಗಿ ಪರಿಣಮಿಸಬಲ್ಲನು.

ಮೇಲಿನಂತೆ ಹೇಳುವಲ್ಲಿ ಇನ್ನೊಂದು ಸಮರ್ಪಕತೆ ಇದೆ. ಒಂದು ರೀತಿ ನೋಡಿದರೆ ಪ್ರತಿ ಜೀವವೂ ಒಂದು ಪ್ರವಾಸಿಯೇ ಇರುವದು. ಅದರ ಪ್ರವಾ ಸದ ಆರಂಭ ಗೊತ್ತಿಲ್ಲ. ಈ ಜೀವನ ಮುಗಿದ ಮೇಲೆ ಹೋಗುವದೆಲ್ಲಿ ಎಂಬುದೂ ಗೊತ್ತಿಲ್ಲ. ಈ ಪ್ರವಾಸದ ಆರಂಭದ ಕಾರಣವೂ ಗೊತ್ತಿಲ್ಲ. ಆದರೆ ಇದೊಂದು ಪ್ರವಾಸವಿದೆ ಎಂಬುದು ನಿಜ. ಪ್ರವಾಸಿಯು ಸ್ಥಳದಿಂದ ಸ್ಥಳಕ್ಕೆ ಹೋಗುವಂತೆ, ಕೆಲಕಾಲ ಹಲವು ಸ್ಥಳಗಳಲ್ಲಿ ತಂಗುವಂತೆ ಜೀವ ವಾದರೂ ಅನುಭವದಿಂದ ಅನುಭವಕ್ಕೆ ತೆರಳುವದು. ಹಲವು ಅನುಭವಗಳಲ್ಲಿ ನಿಮುಮಾಣವಾದಂತೆ ತೋರುವದು, ಮತ್ತೆ ಮುಂದೆ ಸಾಗುವದು. ಈಚೆಗೆ ಪೃಥ್ವೀಪ್ರದಕ್ಷಿಣೆ ಮಾಡುವವರು ಹೊರಟಿದ್ದಾರೆ. ಅವರು ಜಗತ್ತನ್ನೆಲ್ಲ ಸುತ್ತುತ್ತಾರೆ. ಹಾಗೆ ಜೀವವು ಕೂಡ ಅನುಭವಗಳ ಬ್ರಹ್ಮಾಂಡವನ್ನೆ ತಿರುವಿ ಹಾಕುವದು. ಆದರೆ ಈ ತರದ ಪ್ರವಾಸಿಯಲ್ಲಿ ಹಾಗೂ ಯಾತ್ರಿಕನಲ್ಲಿ ಮಹದಂತರವಿದೆ. ಯಾತ್ರಿಕನು ಒಂದು ಪವಿತ್ರಭಾವನೆಯಿಂದ ಒಂದು ವರಿಷ್ಠ ಜೀವನೋದ್ದೇಶವನ್ನಿಟ್ಟುಕೊಂಡು ಪ್ರವಾಸಮಾಡುವನು. ಪ್ರವಾಸವೆ

ಒಂದು ಸುಖ ಎಂದು ತಿಳಿದು, ಇಲ್ಲವೆ ನಿತ್ಯ ಹೊಸ ಸ್ಥಾನಗಳನ್ನು ನೋಡು ವುದೇ ಒಂದು ಧ್ಯೇಯ ಎಂಬ ಭಾವನೆಯಿಟ್ಟುಕೊಂಡು, ಅಥವಾ ವೇಗದ ಅಲೆದಾಟವೆ ಆಹ್ಲಾದವೆಂದು ಮನ್ನಿಸಿ ಯಾತ್ರಿಕನು ಸಾಗುವದಿಲ್ಲ. ಅವ ನೆದುರು ಒಂದು ನಿರ್ಧಾರಿತವಾದ ನಿರ್ದಿಷ್ಟ ಧ್ಯೇಯವಿದೆ. ಅದನ್ನು ಮುಟ್ಟುವ ಸಾಹಸವನ್ನು ಅವನು ಕೈಕೊಂಡಿದ್ದಾನೆ. ಆ ಧ್ಯೇಯವು ಅತ್ಯಂತ ಪವಿತ್ರವಿರುವದು. ಸುಖಲೋಲುಪದೃಷ್ಟಿ ಅವನನ್ನು ಮುಟ್ಟದು. ಯಾತ್ರೆ ಯಲ್ಲಿ ಆಗಬಹುದಾದ ಸುಖವನ್ನು ಅವನು ಧಿಃಕರಿಸುವನೆಂದರ್ಥವಲ್ಲ. ಆದರೆ ಅದನ್ನು ದೊರಕಿಸುವದು ಅವನ ಧ್ಯೇಯವಲ್ಲ. ಅದರಲ್ಲಿ ತೊಡಕಿ ಬೀಳು ವದು ಅವನ ಶೀಲವಲ್ಲ. ಅವನು ಇಡುವ ಪ್ರತಿ ಹೆಜ್ಜೆಯಲ್ಲಿ ಅವನು ಪಡೆ ಯುವ ಪ್ರತಿ ಅನುಭವದಲ್ಲಿ ಈ ಪವಿತ್ರಭಾವವು ಸತತವಾಗಿ ದೃಗ್ಗೋಚರ ವಾಗುವದು. ಆದುದರಿಂದ ಧ್ಯೇಯವಿಹೀನ ಹಾಗು ಇಂದ್ರಿಯಸುಖ ಪ್ರಧಾನರಾದ ಆಧುನಿಕ ಪ್ರವಾಸಿಗಳಿಗೂ ಯಾತ್ರಿಕರಿಗೂ ಅಜಗಜಾಂತರ ವಿರುವದೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಕೇವಲ ಪ್ರವಾಸಿ ಎಂಬವನು ಹೂಮರಗಳು, ಪರ್ವತಶ್ರೇಣಿಗಳು, ಗಿರಿಗಂಹ್ವರಗಳು, ವಿವಿಧ ಜನಗಳು, ಮನೋಹರ ರಮಣಿಯರು ಇವುಗಳನ್ನೆಲ್ಲ ನೋಡಿ ಆನಂದಬಡುವನು. ಅದೇ ಅವನ ಧ್ಯೇಯ. ಆದರೆ ಯಾತ್ರಿಕನು ಇವುಗಳ ಆನಂದವನ್ನು ಪಡೆಯು ವದಲ್ಲದೆ ಅವುಗಳ ಅಂತರ್ಯವನ್ನು ಹುಡುಕಾಡಿ, ಇವುಗಳ ರಮಣೀಯತೆಯ ರಹಸ್ಯಕ್ಕೆ ಕೈಹಾಕಿ ಜೀವನಸಮಸ್ಯೆಯೆಂಬುದನ್ನು ಬಿಡಿಸಲು ಇವುಗಳನ್ನೆಲ್ಲ ಕೀಲಿಯ ಕೈಯಂತೆ ಉಪಯೋಗಿಸಿ ಕೊನೆಗೆ ಆತ್ಮದರ್ಶನವನ್ನು ಪಡೆದು ಧನ್ಯನಾಗುವನು.

ಪರಮಾರ್ಥದ ಇತರ ಮಾರ್ಗಗಳಿಗಿಂತ ಈ ಯಾತ್ರಿಕನ ಮಾರ್ಗದಲ್ಲಿ ಹಲವು ವಿಶೇಷ ಸೌಲಭ್ಯಗಳೂ ಕಂಡುಬರುವವು. ಯಾತ್ರಿಕನಾಗಲು ಯಾವದೊಂದು ಆಶ್ರಮವನ್ನು ತೊರೆಯುವದಾಗಲಿ ಹೊಸ ಆಶ್ರಮವನ್ನು ಕೊಳ್ಳುವದಾಗಲಿ ಅವಶ್ಯವಿಲ್ಲ. ಸದಾ ಸಂಚಾರಿಯಾದುದರಿಂದ ಯಾತ್ರಿಕ ನಿಗೆ ಜನಗಳ ಇಲ್ಲವೆ ಸ್ಥಾನಗಳ ಬೇಸರ ಬರಲು ಅವಸರವಿಲ್ಲ. ಯಾವದೇ ಒಂದು ಪಂಥವನ್ನು ಇಲ್ಲವೆ ಸಂಪ್ರದಾಯವನ್ನು ಸ್ವೀಕರಿಸುವ ಭಾರ ಯಾತ್ರಿ ಕನ ಮೇಲೆ ಇಲ್ಲ. ಅವನು ನೀರಕ್ಷೀರ ವಿವೇಕದಿಂದ ಸತ್ಯಶೋಧಕನಾಗಿ ಸಾಗಿದರೆ ಸಾಕು. ಇಂಥ ತೀರ್ಥಕ್ಷೇತ್ರಗಳಿಗೆ ಹೋಗಬೇಕು, ಇಂಥವುಗಳಿಗೆ

ೋಗಬಾರದೆಂಬ ನಿರ್ಬಂಧವು ಅವನ ಮೇಲೆ ಇಲ್ಲ. ಅನೇಕ ಭಿನ್ನಭಿನ್ನ ನರ ಹಾಗೂ ಸ್ಥಳಗಳ ಪರಿಚಯವು ಅವನಿಗೆ ಆಗುವುದರಿಂದ ಅವನಲ್ಲಿ ್ವಭಾವಿಕವಾಗಿ ಒಂದು ಬಗೆಯ ಬಹುಶ್ರುತತ್ವವು ಉಂಟಾಗುವದು. ವನ ಯಾತ್ರೆಗೆ ಮುಕ್ತಾಯವಿಲ್ಲದ್ದರಿಂದ ಮುಂದೆ ಏನು ಮಾಡಬೇಕು, ಂಬ ಪ್ರಶ್ನೆ ಅವನಿಗೆ ಎದುರಾಗಲಾರದು.

ಜೀವನವು ಯಾತ್ರೆಯಾಗಿ ಗೋಚರವಾಯಿತೆಂದರೆ ಆಯಾ ವ್ಯಕ್ತಿಯು ಾತ್ರಿಕನ ಭಾವದಿಂದ ಯುಕ್ತನಾಗಿ ಆಯುಷ್ಯಕ್ರಮವನ್ನು ಸಾಗಿಸ ಾರಂಭಿಸುವನು. ಇದರ ಅರ್ಥ ಅವನೊಬ್ಬ ದೊಡ್ಡಯೋಗಿ, ಸಿದ್ಧಪುರುಷ ಹಾತ್ಮಾ ಆಗಿಬಿಡುವನೆಂದು ಅಲ್ಲ. ಅವನೂ ಇತರರಂತೆ ಪಾಮರನಾಗಿಯೆ ಳಿಯುವನು. ಆದರೆ ಅವನು ಸಾಧಕವರ್ಗಕ್ಕೆ ಸೇರುವನು. ತನ್ನ ಯ ದೋಷಾದಿಗಳೊಡನೆ, ದೈನ್ಯದೌರ್ಬಲ್ಯಾದಿಗಳೊಡನೆ ಹೋರಾಡುತ್ತ ುಂದೆ ಸಾಗುವಾಗ ಅವನಲ್ಲಿ ಆ ಯಾತ್ರಿಕಭಾವವು ಬಿಟ್ಟುಬಿಡದೆ ಉಳಿದು ವನನ್ನು ಮುಂದೂಡುತ್ತ ಹೋಗುವದು. ಅವನು ಎಡವುತ್ತ ತಡವರಿಸುತ್ತ ೀಳುತ್ತ ಏಳುತ್ತ ಸಾಗಿದರೂ ಅವನ ಮನದಲ್ಲಿ ಶ್ರದ್ಧೆ ಹಾಗೂ ಆ ಪವಿತ್ರ ಾವನೆ, ತಾನು ಮೇಲಕ್ಕೆ ಹೋಗಬೇಕೆಂಬ ಉತ್ಸಾಹ ಮತ್ತು ಆಕಾಂಕ್ಷೆ ುತ್ತು ಒಂದು ದುರ್ದಮ್ಯವಾದ ಆಶಾಂಕುರ ಇವು ಸ್ಥಿರವಾಗಿರುವವು.

ಜೀವನದಲ್ಲಿ ನಿಜವಾದ ಸುಖಪ್ರಾಪ್ತಿ ಇದೇ ಮಾನವಕುಲದ ಯೋಗ್ಯ ಗುರಿಯು. ದೇಹ-ಮನ-ಆತ್ಮಗಳಲ್ಲಿ ಸ್ವಭಾವಸಿದ್ಧವಾಗಿರುವ ಸಮಸ್ವರ-ಸಮತಾನತೆಗಳ ಶೋಧ ಹಾಗೂ ಅದರ ಬೆಳವಣಿಗೆ ಇವೇ ಆ ಗುರಿಯ ಸಾಧನವಿಶೇಷಗಳು.

— ಶ್ರೀ ಅರವಿಂದ

ಒಂದು ಮಾನವವ್ಯಕ್ತಿಯ ನಿಜವಾದ ಬೆಲೆಯನ್ನು ಕಟ್ಟಬೇಕಾದರೆ ಅವನು ಯಾವ ಅರ್ಥದಲ್ಲಿ ಹಾಗೂ ಎಷ್ಟರ ಮಟ್ಟಿಗೆ ತನ್ನ ಅಹಂಭಾವದಿಂದ ಮುಕ್ತನಾಗಿರುವನು ಎಂಬುದನ್ನು ಪರಿಕಿಸಬೇಕು.

— ಆಯಿನ್‌ಸ್ಟಾಯಿನ್

೩

ನಮ್ಮ ಮಾನವ ಕುಲ

ನಮ್ಮ ಇಡೀ ಭೂಮಂಡಲದ ಆಯುಷ್ಯ ಹಾಗೂ ಇತಿಹಾಸ ಇವುಗಳಿಗೆ ಹೋಲಿಸಿ ನೋಡಿದರೆ ಮಾನವಕುಲ ತೀರ ಈಚೆಗಿನದು. ಸದ್ಯದ ಮಟ್ಟಿಗೆ ಮನುಷ್ಯನೆ ಪ್ರಾಣಿವರ್ಗದ ಶಿಖರಸ್ಥಾನದಲ್ಲಿರುವನು. ಅಗ್ನಿಮಯ ಭೂಗೋಲವು ತಂಪಾಗಿ ಹೆಪ್ಪುಗಟ್ಟಿ, ಹವೆ ನೀರುಗಳಿಂದ ಯುಕ್ತವಾಗಿ ಪ್ರಾಣಿವಾಸಕ್ಕೆ ಯೋಗ್ಯವೆನಿಸಿದ ನಂತರ ಕೋಟ್ಯಂತರ ವರ್ಷಗಳಾದ ಬಳಿಕ ಮೊಟ್ಟಮೊದಲಿನ ಪ್ರಾಣಿಯು ಇಲ್ಲಿ ಪ್ರಕಟವಾಗಿರಬೇಕು. ಆಮೇಲೆ ಮತ್ತೆ ಕೋಟ್ಯಂತರ ವರ್ಷಗಳ ಬಳಿಕ ಮನುಷ್ಯಪ್ರಾಣಿ ಜನ್ಮತಾಳಿರಲಿಕ್ಕೆ ಸಾಕು. ಇತರ ಪ್ರಾಣಿಗಳಂತೆ ಲಕ್ಷಾಂತರ ವರುಷ ಬಾಳಿದ ನಂತರ ಅವನಲ್ಲಿ ಒಡೆದು ಕಾಣಿಸಬಹುದಾದ ಪ್ರಗತಿಯಾಗುತ್ತ ನಡೆಯಿತು. ಉಳಿದ ಪ್ರಾಣಿಗಳು ಹುಟ್ಟಿದ ಸ್ಥಿತಿಯಲ್ಲಿಯೆ ಇದ್ದುಬಿಟ್ಟವು. ಆದರೆ ಮನುಷ್ಯನು ಮಿದುಳು ಹಾಗೂ ಕೈ ಇವುಗಳ ವಿಕಾಸ ಹಾಗೂ ಸಹಯೋಗದಿಂದ ವಿವಿಧ ಸಾಧನಗಳನ್ನು ನಿರ್ಮಿ-

ಸಿದನು. ಬೆಂಕಿ, ವಿವಿಧ ಧಾತುಗಳು ಮುಂತಾದವುಗಳನ್ನು ಉಪಯೋಗಿಸ ಲಾರಂಭಿಸಿದನು. ಪ್ರಾಣಿಗಳನ್ನು ಸಾಕಿ, ಆಹಾರಯೋಗ್ಯ ವನಸ್ಪತಿಗಳನ್ನು ಹುಡುಕಿ, ಗುಂಪುಗಳನ್ನು ಕಟ್ಟಿಕೊಂಡು ಇರಲಾರಂಭಿಸಿದನು. ಭಾಷೆ ಬರಹ ಗಳನ್ನು ಇತರ ಕಲೆಗಳನ್ನು ನಿರ್ಮಿಸಿ ಅವುಗಳನ್ನು ಭಾವ ಹಾಗು ವಿಚಾರ ವಾಹನಗಳನ್ನಾಗಿ ಮಾಡಿ ತನ್ನ ವಿದ್ಯೆ ಜ್ಞಾನಗಳು ಪರರಿಗೆ ಹಾಗೂ ಪರಂಪರೆ ಯಿಂದ ತನ್ನ ಸಂತತಿಗೆ ದೊರೆಯುವಂತೆ ಮಾಡಿದನು. ಮುಂದೆ ನಿಸರ್ಗಶಕ್ತಿ ಗಳ ಶೋಧ, ಅವುಗಳ ಉಪಯೋಗ ಇವು ಪ್ರಾರಂಭವಾಗಿ ಅವನು ಸದ್ಯದ ಸ್ಥಿತಿಗೆ ಬಂದು ಮುಟ್ಟಿದನು. ಈಗ ಇನ್ನೂ ಅದೇ ಕ್ರಮ ನಡೆದಿದೆ ಎಂದು ಹೇಳಬಹುದು.

ಮಾನವನು ಪ್ರಗತಿಶೀಲನಿರುವನೆಂಬುದಕ್ಕೆ ಬೇರೆ ನಿದರ್ಶನ ಬೇಡ. ಕ್ರಿಮಿ ಕೀಟ ಮೊದಲು ಮಾಡಿ ಮಾನವನನ್ನು ಹೋಲುವ ಮಂಗನ ವರೆಗೆ ಯಾವ ಪ್ರಾಣಿಗಳಲ್ಲಿಯಾಗಲಿ, ಅವುಗಳ ಇರುವಿಕೆಯಲ್ಲಿಯಾಗಲಿ ಕೋಟ್ಯಾನು ಕೋಟಿ ವರುಷಗಳಲ್ಲಿ ಬದಲಾವಣೆ ಎಂಬುದು ಆಗಿಲ್ಲ. ಮಂಗವು ಕೂಡ ಮೊಟ್ಟ ಮೊದಲು ಲಕ್ಷಾಂತರ ವರುಷದ ಹಿಂದೆ ಯಾವ ಬಗೆಯಾಗಿ ಇರು ತ್ತಿತ್ತೊ ಅದೇ ರೀತಿ ಈಗಲೂ ತನ್ನ ಆಯುಷ್ಯಕ್ರಮವನ್ನು ಸಾಗಿಸುತಿರು ವದು. ಮನುಷ್ಯನು ಪ್ರಗತಿಶೀಲನಿರುವದರಿಂದ ತನ್ನ ಜೀವನದ ರೀತಿಯಲ್ಲಿ ಅವನು ಅನೇಕಾನೇಕ ಮಾರ್ಪಾಡುಗಳನ್ನು ಮಾಡಿಕೊಂಡಿರುವನು. ಈಗ್ಯೂ ಮಾಡಿಕೊಳ್ಳುತಿರುವನು. ಇದೇ ಅವನ ಪ್ರಗತಿಶೀಲತೆಯ ಮುಖ್ಯ ಲಕ್ಷಣ.

ಮನುಷ್ಯನು ಬರೀ ಗತಿಶೀಲನಿರುವನು, ಆದರೆ ಪ್ರಗತಿಶೀಲನಿರುವವನೊ ಇಲ್ಲವೊ ಎಂಬ ಬಗ್ಗೆ ನಮಗೆ ಸಂಶಯ ಎಂದು ಹಲವರು ಹೇಳುವರು. ಗಾಣದೆತ್ತೂ ಗತಿಶೀಲವಿರುವದು. ಆದರೆ ಅದು ಪ್ರಗತಿಶೀಲವಿಲ್ಲ. ಅದು ತನ್ನ ವರ್ತುಲವನ್ನು ಬಿಟ್ಟು, ತನ್ನ ಪ್ರದಕ್ಷಿಣೆಯ ಆಚೆ ಒಂದು ಹೆಜ್ಜೆ ಸಹ ಸಾಗುವದಿಲ್ಲ. ಗತಿ ಮತ್ತು ಪ್ರಗತಿಗಳಲ್ಲಿ ಈ ಪ್ರಕಾರದ ದೊಡ್ಡ ಭೇದವಿದೆ. ಮನುಷ್ಯನ ಗತಿಯು ಅವನನ್ನು ಯಾವದೇ ರೀತಿ ಮುಂದಕ್ಕೆ ಒಯ್ದಿಲ್ಲ ಎಂಬುದೆ ಹಲವರ ದೃಢವಾದ ಮತವಿರುವದು. ಇದೊಂದು ಬಹಳ ದೊಡ್ಡ ಚರ್ಚಾವಿಷಯವು, ವಾದಗ್ರಸ್ತಪ್ರಶ್ನೆಯು.

ಈ ಪ್ರಶ್ನೆಯನ್ನು ಬಗೆಹರಿಸಬೇಕಾದರೆ ಪ್ರಗತಿಯೆಂದರೇನು, ಇದನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವದು ಅವಶ್ಯವು. ಪ್ರಗತಿ ಎಂದರೆ ಇದ್ದ ಸ್ಥಿತಿ

ಯಿಂದ ಅಥವಾ ಅವಸ್ಥೆಯಿಂದ ಮುಂದೆ ಹೋಗುವದು. ಇದ್ದಲ್ಲಿಯೇ ಇರುವದು ಅಗತಿ, ಹಿಂದೆ ಹೋಗುವದು ಅಪಗತಿ, ಮುಂದೆ ಹೋಗುವದು ಪ್ರಗತಿ. ಪ್ರಗತಿ ಎಂಬುದರಲ್ಲಿ ಗತಿ ಮುಖ್ಯವಲ್ಲ, ಮುಂದೆ (ಗತಿ) ಎಂಬುವದೆ ಮುಖ್ಯ. ಮನುಷ್ಯನ ಮಟ್ಟಿಗೆ ಅವನ ಸ್ಥಿತಿಯು ಎರಡು ಬಗೆಯದ್ದಿರುವದು : ಒಂದು ಬಾಹ್ಯಸ್ಥಿತಿ, ಇನ್ನೊಂದು ಅಂತಃಸ್ಥಿತಿ. ಅವುಗಳಿಗನುಸಾರವಾಗಿ ಅವನ ಪ್ರಗತಿಯಲ್ಲಿಯೂ ಬಾಹ್ಯಪ್ರಗತಿ ಹಾಗೂ ಅಂತಃಪ್ರಗತಿ ಎಂದು ಎರಡು ಬಗೆಗಳಿರುವವು. ಮನುಷ್ಯನ ಪ್ರಗತಿಯಾಗಿಲ್ಲ ಎಂದು ವಾದಿಸುವವರು ಅವನ ಅಂತಃಪ್ರಗತಿಯಾಗಿಲ್ಲ ಎಂಬರ್ಥವನ್ನು ವ್ಯಕ್ತಪಡಿಸಲಿಚ್ಛಿಸುವರು. ಬಾಹ್ಯ ಪ್ರಗತಿಯಾಗಿಲ್ಲ ಎಂದು ಅವರು ಹೇಳುವದು ಸಾಧ್ಯವಿಲ್ಲ. ಯಾಕಂದರೆ ಆ ಪ್ರಗತಿ ಉಗಿಬಂಡಿ ವಿಮಾನ ತಾರಾಯಂತ್ರಾದಿಗಳ ರೂಪದಲ್ಲಿ ಪ್ರತ್ಯಕ್ಷವಿದೆ.

ಇನ್ನು ಒಂದು ಮಗುವಿನ ಉದಾಹರಣೆಯನ್ನು ಕಂಡು ಈ ವಿಷಯವನ್ನು ಇನ್ನಷ್ಟು ಸ್ಪಷ್ಟಗೊಳಿಸಲೆತ್ನಿಸುವ. ಹುಟ್ಟಿದ ಮಗುವು ತೀರ ಅಸಹಾಯವಿರುವದು. ತಾಯಿಯ ಮೊಲೆಹಾಲಿನ ಸಹಾಯದಿಂದ ಬಲಗೊಂಡು ಮೆಲ್ಲಮೆಲ್ಲನೆ ಅದು ತನ್ನ ಚಲನವಲನಾದಿಗಳನ್ನು ಹೆಚ್ಚಿಸಿ, ಹರಿದಾಡಲು, ನಿಲ್ಲಲು, ಓಡಾಡಲು, ಕಲಿಯುವದು. ಅದೇ ರೀತಿ ತೊದಲ್ನುಡಿ ಮೊದಲ್ಗೊಂಡು ಮಾತಾಡಲು ಕಲಿಯುವದು. ತನ್ನ ಶಕ್ತಿಯ ವಿಕಾಸ ತನ್ನಿಚ್ಛೆಯಂತೆ ಬಾಹ್ಯವಸ್ತುಗಳ ನಿಯಮನ, ನಿಯಂತ್ರಣ, ಮತ್ತು ಉಪ-ಯೋಗ, ಇವೇ ಎಲ್ಲ ಕೂಡಿ ಆ ಮಗುವಿನ ಪ್ರಗತಿ ಎನಿಸುವದು. ಇದು ಬಾಹ್ಯಪ್ರಗತಿ ಯಾಕಂದರೆ ಇದು ತನ್ನ ವ್ಯಕ್ತಿತ್ವಕ್ಕೆ ಬಾಹ್ಯವಾಗಿರುವ ಜಡ ಇಲ್ಲವೆ ಚೇತನ ವಸ್ತುಗಳನ್ನು ತನ್ನಿಚ್ಛೆಗೆ ಬಂದಂತೆ ಉಪಯೋಗಿಸುವದೇ ಇದರಲ್ಲಿ ಮುಖ್ಯತಃ ಅಡಕವಾಗಿದೆ. ಇನ್ನು ಅಂತಃಪ್ರಗತಿ ಎಂದರೇನು? ಆಹಾರಾದಿ ಬಾಹ್ಯವಸ್ತುಗಳು, ವಿದ್ಯುದಾದಿ ಬಾಹ್ಯಶಕ್ತಿಗಳು ಇರುವಂತೆ ಆ ಮಗುವಿನ ಅಂತರ್ಯದಲ್ಲಿ ಇಚ್ಛಾವಾಸನಾದಿ ಪ್ರೇರಣೆಗಳಾಗಿ ರಾಗ ದ್ವೇಷಾದಿ ಭಾವನೆಗಳೂ ಅಸ್ಮತೆ ಅಹಂಕಾರಾದಿ ವ್ಯಕ್ತಿಮತ್ವಸೂಚಕ ಸ್ಥಿರಚಿರ ಭಾವಗಳೂ ಇರುವವು. ಇವುಗಳ ಮೇಲೆ ಪ್ರಭುತ್ವ, ಇವುಗಳ ಸಂಯಮ ಸಮ್ಮೇಲ ಸಮನ್ವಯಗಳೆ ಅಂತಃಪ್ರಗತಿ ಎನಿಸುವದು. ಮಗುವು ಬೆಳೆಯುತ್ತ ಹೋದಂತೆ ಅದು ಅಂತಃಪ್ರಗತಿಯನ್ನು ಸಹ ಸಾಧಿಸಲು ಯತ್ನಿಸುವದು. ತೀರ ಚಿಕ್ಕಂದಿನಲ್ಲಿ ಅದು ಕೇವಲ ಒಂದು ಪಶುವಿನಂತೆ ಸಂಯಮವಿಹೀನ

ವೃತ್ತಿಯಿಂದ ವರ್ತಿಸುವದು. ನೀತಿ ನ್ಯಾಯಾದಿಗಳ ಅರಿವು ಕೂಡ ಆಗ ಅದಕ್ಕೆ ಇರುವುದಿಲ್ಲ. ಆದರೆ ಬರಬರುತ್ತ ಅದು ಸಂಯಮಾದಿಗಳನ್ನು ಕಲಿತು ಮಾನವಸಮಾಜಕ್ಕೆ ಯೋಗ್ಯವಾದ ವರ್ತನವನ್ನು ಮಾಡಲಾರಂಭಿಸುವದು. ಆ ವಿಷಯದಲ್ಲಿ ಆ ಮಗು ಮುಂದಡಿ ಇಟ್ಟ ಮಟ್ಟಿಗೆ ಅದು ಅದರ ಅಂತಃಪ್ರಗತಿ ಎನಿಸುವದು.

ಇವೇ ಮಾತುಗಳನ್ನು ನಾವು ಇಡೀ ಮಾನವಕುಲಕ್ಕೆ ಅನ್ವಯಿಸಿ ನೋಡಿದರೆ ಆದರ ಬಾಹ್ಯಪ್ರಗತಿ, ಅಂತಃಪ್ರಗತಿ ಇವುಗಳ ಅರ್ಥವು ಚನ್ನಾಗಿ ಹೊಳೆಯುವದು. ಈ ಬಗ್ಗೆ ಚರ್ಚಿಸುವವರಾರೂ ಬಾಹ್ಯಪ್ರಗತಿಯಾಗಿಲ್ಲ ಎಂದು ಹೇಳುವದಿಲ್ಲ. ಜಲವಾಯು, ಅಗ್ನಿವಿದ್ಯುತ್ತು, ಅಣುಪರಮಾಣು, ಮುಂತಾದ ನಿಸರ್ಗವಸ್ತುಗಳಲ್ಲಿ ಅಡಕವಾಗಿರುವ ಶಕ್ತಿಗಳ ಮೇಲೆ ಮನುಷ್ಯನು ಸ್ಥಾಪಿಸಿದ ಪ್ರಭುತ್ವವು ಬಾಹ್ಯಪ್ರಗತಿಯ ಪ್ರತ್ಯಕ್ಷ ಪ್ರಮಾಣವು. ಇನ್ನು ಅಂತಃಪ್ರಗತಿಯ ವಿಷಯ. ಅದು ಸಾಕಷ್ಟು ಆಗಿಲ್ಲ ಎಂಬುದು ಒಪ್ಪಲೇಬೇಕಾದ ಮಾತು. ಆದರೆ ಅಂತಃಪ್ರಗತಿ ಆಗಿಯೇ ಇಲ್ಲ, ಅಥವಾ ಆಗುವುದೇ ಇಲ್ಲ, ಅಥವಾ ಅಪಗತಿಯಾಗಿದೆ, ಅಧೋಗತಿಯಾಗಿದೆ ಎಂದು ಯಾರಾದರೂ ವಾದಿಸಿದರೆ ಅದು ಯಥಾರ್ಥವಾಗಲರಿಯದು. ಅದೊಂದು ನಿರಾಶಾವಾದದ ಲಕ್ಷಣ ಇಲ್ಲವೆ ಸಂಕುಚಿತ ಕಾಲಮರ್ಯಾದೆಯಲ್ಲಿ ಮಾತ್ರ ಆದ ಹಲವು ಘಟನೆ ಹಾಗೂ ಸಂಗತಿಗಳನ್ನು ನೋಡಿ ಮಾಡಿದ ಅನುಮಾನ, ಮಾನವ ಪ್ರಗತಿಯ ಸರ್ವಾಂಗೀನತ್ವದಲ್ಲಿಯ ಅಶ್ರದ್ಧೆ ಎಂದು ಹೇಳಬಹುದು.

ಬಾಹ್ಯಪ್ರಗತಿ ಇಷ್ಟಾಗಿದ್ದರೂ ಇದೆಲ್ಲ ಬಾಹ್ಯರೂಪದಲ್ಲಿ ಹಾಗೂ ಬಾಹ್ಯ ರೀತಿಯಲ್ಲಿ ಬದಲಾವಣೆಯಾದಂತೆ ಹೊರತು ಒಳಮನುಷ್ಯನು ಇದ್ದಕ್ಕಿದ್ದ ಹಾಗೆಯೆ ಇರುವನು, ಅಥವಾ ಹೆಚ್ಚು ಸ್ವಾರ್ಥಿ, ಹೆಚ್ಚು ಕ್ರೂರ, ಹೆಚ್ಚು ಶೋಷಣಶೀಲನಾಗಿರುವನು, ಎಂದು ಹಲವರು ವಾದಿಸಬಹುದು. ಕಾಣಲು ಒಮ್ಮೊಮ್ಮೆ ಈ ಮಾತು ನಿಜವೆನಿಸಬಹುದು. ತೀರ ಪ್ರತಿನಿತ್ಯದ ಹಲವು ಉದಾಹರಣೆಗಳನ್ನು ನೋಡುವ. ಮನುಷ್ಯನು ಈಚೆಗೆ ನಾನಾತರಹದ ಆಹಾರಾದಿಗಳನ್ನು ಅಡಿಗೆಮಾಡಿ, ಬಗೆಬಗೆಯ ಪಾತ್ರೆಗಳಲ್ಲಿ ಬಗೆಬಗೆಯ ರೀತಿಯಿಂದ ಊಟಮಾಡುವನು. ಆದರೆ ಹಸಿವೆ ಹಾಗೂ ಆದರ ಪರಿಹಾರಕ್ಕಾಗಿ ಆಹಾರಸೇವನೆ ಈ ಮೂಲಭೂತವಾದ ಇಚ್ಛೆ ಹಾಗೂ ಅದರ ಪೂರ್ತಿ ಇವುಗಳಲ್ಲಿ ಏನೂ ಹೆಚ್ಚುಕಡಿಮೆ ಇಲ್ಲ, ಎಂದು ಪೂರ್ವಪಕ್ಷದವನು ಹೇಳ

ಬಹುದು. ಅದೇ ರೀತಿ ಒಂದು ಸಮಾಜದಲ್ಲಿ ಶಕ್ತಿವಂತರು ಮೊದಲು ತಮ್ಮ ಪಾಶವೀ ಬಲದಿಂದ ಇತರರ ಮೇಲೆ ಪ್ರಭುತ್ವವನ್ನು ನಡೆಸುತ್ತಿದ್ದರು. ಈಗ ಅದಕ್ಕೆಯೆ ವಿಧಾನಯುಕ್ತ ರಾಜಸತ್ತೆ ಇಲ್ಲವೆ ಪ್ರಜಾಸತ್ತೆ ಎಂಬ ಹೆಸರಿಟ್ಟು ಪರ್ಯಾಯದಿಂದ ಪ್ರತಿಯೊಂದು ಸಮಾಜದಲ್ಲಿ ಶಕ್ತಿಶಾಲಿಗಳೆ ರಾಜ್ಯವನ್ನಾಳುವರು, ಎನ್ನಬಹುದು. ಮೊದಲು ಸೈನಿಕರು ಕತ್ತಿಕಠಾರಿಗಳಿಂದ ಯುದ್ಧಮಾಡುತಿದ್ದರೆ ಈ ಹೊತ್ತು ಬಾಂಬು ಮುಂತಾದವುಗಳ ಸಹಾಯದಿಂದ ಯುದ್ಧಮಾಡುವರು. ಆದರೆ ಹಿಂಸೆ, ವಿಧ್ವಂಸ, ಕ್ರೂರತೆ ಇವುಗಳಲ್ಲಿ ಆದ ಭೇದವೇನು, ಎಂದು ವಾದಿಸಬಹುದು. ಈ ಮುಂತಾದ ಬಾಹ್ಯಪ್ರಗತಿಗೆ ತಕ್ಕಂತೆ ಅಥವಾ ಆ ಪ್ರಮಾಣದಲ್ಲಿ ಅಥವಾ ಇದರ ಪೂರ್ಣ ಲಾಭವು ಮಾನವಕುಲಕ್ಕೆ ಆಗುವಂತೆ ಅಂತಃಪ್ರಗತಿಯಾಗಿಲ್ಲ ಎಂಬುದನ್ನು ನಾವು ಒಪ್ಪಿದರೂ ಅಂತಃಪ್ರಗತಿಯಾಗಿಯೇ ಇಲ್ಲ ಎಂದು ಹೇಳಲಿಕ್ಕಾಗದು. ಯಾಕೆಂದರೆ ಪ್ರತಿ ಬಾಹ್ಯಪ್ರಗತಿಯ ಪ್ರಸಂಗದಲ್ಲಿ ಕೆಲಮಟ್ಟಿಗೆ ಕೆಲವು ತರದ ಅಂತಃಪ್ರಗತಿಯಾಗಿಯೇ ತೀರಬೇಕಾಗುವದು. ಚಿತ್ತದ ಏಕಾಗ್ರತೆ, ಚಿತ್ ಶಕ್ತಿಯ ಸಂಯಮ ಮತ್ತು ಸಂಗ್ರಹ, ಸಂಕಲ್ಪಶಕ್ತಿಯ ನಿರ್ಧಾರ ಇತ್ಯಾದಿಗಳ ವಿನಾ ಯಾವ ಹೊಸ ಶೋಧಗಳೂ ಆಗಿಲ್ಲ. ಕಾಲಕ್ರಮೇಣ ಆ ಶೋಧಗಳ ಉಪಯೋಗ ಎಲ್ಲ ಮಾನವರಿಗೂ ಆಗಬೇಕೆಂಬ ಭಾವವು ಶೋಧಕರಲ್ಲಿ ಉದ್ದೀಪ್ತವಾದುದು ಅಂತಃಪ್ರಗತಿಯ ಸ್ಪಷ್ಟಲಕ್ಷಣವು. ಯಾವದೇ ಬಾಹ್ಯಪ್ರಗತಿಯ ಪರಿಣಾಮವು ಪ್ರತ್ಯಕ್ಷ ಅಪ್ರತ್ಯಕ್ಷ ರೀತಿಯಿಂದ ಕೂಡಲೆ ಇಲ್ಲವೆ ಸಾವಕಾಶವಾಗಿ ಅಂತಃಪ್ರಗತಿಯನ್ನು ಮುಂದುವರಿಸುವಲ್ಲಿ ಆಗಿಯೆ ತೀರುವದೆಂಬಲ್ಲಿ ಸಂಶಯವಿಲ್ಲ. ಉದಾ: ಯಂತ್ರಗಳ ಉಪಯೋಗವನ್ನೆ ತೆಗೆದುಕೊಳ್ಳುವ. ತಾನು ಮಾಡಬೇಕಾದ ಕಾರ್ಯವನ್ನು ಅಲ್ಪಕಾಲದಲ್ಲಿ ಸ್ವಲ್ಪ ಶಕ್ತಿಯಿಂದ ಹೆಚ್ಚು ಅಚ್ಚುಕಟ್ಟಾಗಿ ಮಾಡಿಬಿಡಬೇಕೆಂಬ ಪ್ರಬಲ ಇಚ್ಛೆಯೆ ಎಲ್ಲ ಯಂತ್ರಗಳ ಶೋಧದ ಮೂಲವು. ಇದೊಂದು ಅತ್ಯಂತ ಸ್ವಾಭಾವಿಕವಾಗಿರುವ ಮಾನವಮನೋವೃತ್ತಿ. ಇದನ್ನು ಹತ್ತಿಕ್ಕಿಬಿಡುವದು, ಇದರ ಪೂರ್ಣ ದಮನಮಾಡುವದು ಅಸಾಧ್ಯವೆ. ಆತ್ಮನ ಮೂಲ ಯಾವ ಆವಿರ್ಭಾವೇಚ್ಛೆಯ ಮೂಲಕ ಪ್ರಾಣಿಗೆ ಹಲವಾರು ಇಂದ್ರಿಯಗಳು ಉತ್ಪನ್ನವಾದವೊ ಅದೇ ಆವಿರ್ಭಾವೇಚ್ಛೆಯ ಮೂಲಕ ಮನುಷ್ಯನು ಯಂತ್ರಾದಿ ಅನೇಕ ಸಾಧನಗಳನ್ನು ನಿರ್ಮಿಸುವನು. ಯಾವದೇ ಕಾರ್ಯಮಾಡಲು

ಪ್ರತಿ ಹೊಸ ಸಾಧನವನ್ನು ಒಬ್ಬ ಅಥವಾ ಹಲವು ವ್ಯಕ್ತಿಗಳು ನಿರ್ಮಿಸಿದಾಗ ಮೊದಮೊದಲು ಹಲವಾರು ಸಾಧನಗಳು ಇತರರಿಗೆ ಸಂಶಯಾಸ್ಪದ, ಭಯಂಕರ, ಭಯಾನಕ, ಪ್ರತ್ಯಕ್ಷಾಪ್ರತ್ಯಕ್ಷವಾಗಿ ವಿನಾಶಕ ಎಂದೇ ಎನಿಸಿದವು. ಆ ರೀತಿ ಆಯಾ ಶೋಧಗಳ ದುರುಪಯೋಗವಾದುದೂ ಉಂಟು. ಮೊಟ್ಟಮೊದಲು ಅಗ್ನಿನಿರ್ಮಾಣ ಮಾಡಿದವನು, ಗಾಲಿಯನ್ನು ಯೋಜಿಸಿದವನು, ದನಗಳನ್ನು ಸಾಕಿದವನು ಮಾನವನಿಗೆ ಅಪಕಾರಕವೆಂದೇ ಬಹಿಷ್ಕೃತನಾಗಿರಬೇಕು. ಶೋಧಕರೆಲ್ಲರೂ ಕೇವಲ ತಮ್ಮ ವೈಯಕ್ತಿಕ ಸ್ವಾರ್ಥಕ್ಕಾಗಿ ಶೋಧಗಳನ್ನು ಮಾಡುವರು ಎನ್ನುವದೂ ಅನ್ಯಾಯದ್ದಾಗುವದು. ನಿಸರ್ಗ ನಿಯಮಗಳ ರಹಸ್ಯವನ್ನು ಹುಡುಕುತ್ತ ಹೊರಟು ತನ್ಮಯರಾದಾಗ ಬಹುಶಃ ಈ ಎಲ್ಲ ಶೋಧಗಳು ಆಗಿರುವವು. ಮುಂದೆ ಬರಬರುತ್ತ ಹೊಸವೆಂಬುದರ ಉಪಯುಕ್ತತೆ, ಅದರಿಂದಾಗುವ ಉಪಕಾರ ಇವು ದೃಗ್ಗೋಚರವಾಗಿ ಎಲ್ಲರೂ ಅವುಗಳನ್ನು ಸ್ವೀಕರಿಸುವ ಪ್ರಸಂಗ ಬಂದುಬಿಟ್ಟಿತು. ನಿಸರ್ಗ ನಿಯಮಗಳನ್ನರಿತು ಬಾಹ್ಯವಸ್ತು ಹಾಗೂ ಶಕ್ತಿಗಳನ್ನು ಸ್ವಾಧೀನಪಡಿಸಿಕೊಳ್ಳಬೇಕು, ಎಂಬ ಪ್ರಬಲ ಇಚ್ಛೆ ಕೂಡ ಅಂತಃಶಕ್ತಿಗೆ ಪೋಷಕವು ಹಾಗೂ ಅಂತಃಪ್ರಗತಿಗೆ ಸಾಧಕವು. ಅಂತಃಶಕ್ತಿಗಳ ವಿಕಾಸವಾಗಲು ಇದೊಂದು ದೊಡ್ಡ ಸಾಧನ. ಕೆಲಮಟ್ಟಿಗೆ ಅಂತಃಶಕ್ತಿಗಳ ವಿಕಾಸವಾಗದೆ ಬಾಹ್ಯ ಪ್ರಗತಿ ಕೂಡ ಆಗದು. ಉದಾ: ಹೊಸ ಹೊಸ ಸವಿಸವಿಯಾದ ಖಾದ್ಯ ಪದಾರ್ಥಗಳ ನಿರ್ಮಾಣ ಕೂಡ ರುಚಿಭೇದಾದಿಗಳ ಸೂಕ್ಷ್ಮತೆ, ಅನೇಕ ಪದಾರ್ಥಗಳ ಗುಣಾವಗುಣ ಮುಂತಾದವುಗಳ ಜ್ಞಾನ ಇವು ಹೆಚ್ಚಾಗದೆ ಶೀತೋಷ್ಣಾದಿಗಳ ಯೋಗ್ಯ ಉಪಯೋಗದ ಕೌಶಲ್ಯವಿಲ್ಲದೆ ಆಗದ ಮಾತು.

ಇನ್ನು ಆಯಾ ಬಾಹ್ಯಪ್ರಗತಿಯ ಸದುಪಯೋಗ ಇಲ್ಲವೆ ದುರುಪಯೋಗ ಇದು ಪ್ರತ್ಯೇಕ ಪ್ರಶ್ನೆಯು. ಆ ಬಾಹ್ಯಪ್ರಗತಿ ಎಂಬುದು ಸುಷ್ಟವೂ ಅಲ್ಲ ದುಷ್ಟವೂ ಅಲ್ಲ. ಅಗ್ನಿ, ಧಾತು, ವಿದ್ಯುತ್ತು ಆದಿಗಳ ಶೋಧ, ರೇಲು, ವಿಮಾನ, ತಾರಾಯಂತ್ರ ಆದಿಗಳ ಆವಿಷ್ಕಾರ ಇವುಗಳ ದುರುಪಯೋಗ, ಸದುಪಯೋಗ ಎರಡೂ ಆದದ್ದುಂಟು. ದುರುಪಯೋಗಕ್ಕಿಂತ ಸದುಪಯೋಗವೇ ಹೆಚ್ಚು ಆಗಿದೆ ಎಂದು ಸಾರಬಹುದು. ಯಾಕಂದರೆ ಈಗ ಒಟ್ಟಿಗೆ ಲಕ್ಷಾಂತರವೇಕೆ ಕೋಟ್ಯಂತರ ಜನರು ಇವುಗಳ ವಿವಿಧ ಲಾಭಗಳನ್ನು ಪಡೆದು ಸುಖಬಡುತಿರುವರು. ಒಳ್ಳೇ ಅಡಿಗೆ ತನ್ನಷ್ಟಕ್ಕೆ ತಾನೆ ಒಳಿತೂ

ಅಲ್ಲ ಕೆಡಕೂ ಅಲ್ಲ. ಆದರೆ ಎರಡಕ್ಕೂ ಅದನ್ನು ಉಪಯೋಗಿಸಬಹುದು. ಕೇವಲ ನಾಲಿಗೆಯ ರುಚಿಗಾಗಿ ಉಪಯೋಗಿಸಿ ಹೊಟ್ಟೆ ಕೆಡಿಸಿಕೊಳ್ಳಬಹುದು. ಇಲ್ಲವೆ ಆರೋಗ್ಯದಾಯಕವಾಗುವಂತೆ ಅದರ ಸೇವನೆ ಮಾಡಬಹುದು. ಈ ರೀತಿ ಬಾಹ್ಯ ಹಾಗೂ ಅಂತಃಪ್ರಗತಿಯ ಸಂಬಂಧವು ನಿಕಟವು, ಅಪರಿ-ಹಾರ್ಯವು, ಹಾಗೂ ಒಂದೇ ನಾಣ್ಯದ ಅದಿಬದಿಯಿದ್ದಂತೆ ಇರುವದು.

ಸದ್ಯಕ್ಕೆ ಬಾಹ್ಯಪ್ರಗತಿ ಆದ ಪ್ರಮಾಣದಲ್ಲಿ ಮತ್ತು ಅದರ ಪೂರ್ಣ ಲಾಭವು ಮಾನವಕುಲಕ್ಕೆ ಆಗುವಂತೆ ಮಾಡಿಕೊಳ್ಳುವಷ್ಟು ಅಂತಃಪ್ರಗತಿಯು ಆಗಿಲ್ಲವೆಂಬುದು ನಿಜ.

ಸದ್ಯದ ಮಾನವಕುಲದ ಪ್ರಗತಿಯಲ್ಲಿಯ ದೋಷವು ಬಹುಮಟ್ಟಿಗೆ ಈ ಮಾತಿನಲ್ಲಿಯೆ ಇದೆ. ಬಾಂಬು ಮಾಡುವ ಶಕ್ತಿ ಜ್ಞಾನಾದಿಗಳು ಇದ್ದರೂ ಅದರ ಸದುಪಯೋಗ ಮಾಡಿಕೊಳ್ಳುವ ಜಾಣತನ ಇನ್ನೂ ಬಂದಿಲ್ಲ. ಆದರೆ ಈ ಹೊತ್ತಿಲ್ಲ ನಾಳೆ ಆ ಜಾಣತನ ಬಂದೇ ತೀರುವದೆಂಬ ಭರವಸೆಯಿದೆ. ತತ್ಕಾಲದ ಪರಿಸ್ಥಿತಿಯನ್ನಷ್ಟೆ ನೋಡಿ ನಿರಾಶಾವಾದಕ್ಕೆ ತುತ್ತಾಗುವದು ಯೋಗ್ಯವಾಗಲರಿಯದು. ಮನುಷ್ಯನು ಬಾಹ್ಯಜಗತ್ತಿನ ಪರಿಶೋಧವನ್ನು ನಡೆಯಿಸಿ ಲಕ್ಷಾಂತರ ವರುಷಗಳಾದವು. ಆದರೆ ಅವನಿಗೆ ತನ್ನ ಅಂತರ್ಜಗತ್ತಿನ ಅರಿವು ಈಚೀಚಿಗೆ ವೇದಾದಿಗಳ ಕಾಲದಿಂದ ಆಗ ಲಾರಂಭಿಸಿದೆ. ತನ್ನ ಮನಸು, ಚಿತ್ತ, ಭಾವನೆಗಳು ಮುಂತಾದವುಗಳ ಜ್ಞಾನ ಋಷಿ ಮುನಿಗಳಿಂದ ಹೇಳಲಾಗಿದ್ದರೂ ಇನ್ನೂ ಜನಸಾಮಾನ್ಯರಿಗೆ ತೀರ ಹೊಸದು. ಬಾಹ್ಯಜಗತ್ತನ್ನು ಯಾವ ತೀವ್ರತೆಯಿಂದ ಅವನು ಕೈವಶ ಮಾಡಿಕೊಳ್ಳಲೆತ್ನಿಸುತಿರುವನೊ ಅದೇ ಆತುರದಿಂದ ಅಂತರ್ಜಗತ್ತನ್ನು ತಿಳಿದುಕೊಂಡು ಅದನ್ನು ಯೋಗಾದಿ ಮಾರ್ಗಗಳಿಂದ ಸ್ವಾಧೀನಪಡಿಸಿ ಕೊಳ್ಳಲು ಅವನು ದೊಡ್ಡ ಪ್ರಮಾಣದಲ್ಲಿ ಬೇಗನೆ ಉದ್ಯುಕ್ತನಾಗುವನೆಂಬಲ್ಲಿ ಸಂಶಯವಿಲ್ಲ. ನಿಸರ್ಗತಃ ಮನುಷ್ಯನು ಸಮಾಜನಿಷ್ಠನು, ಸಮಾಜಶೀಲನು, ಸಮಾಜಪ್ರಿಯನು. ತನ್ನ ಸಮಾಜವನ್ನು ಬೆಳೆಸಬೇಕು, ಒಲಿಸಬೇಕು. ಎಂಬ ಲವಲವಿಕೆ ಅವನಿಗೆ ಸ್ವಭಾವಸಿದ್ಧವು. ಅವನು ಮಾನವಕುಲದ ಉದ್ಧಾರವನ್ನೇ ಮಾಡುವನು ಹೊರತು ಅವನು ಎಂದೆಂದಿಗೂ ಸಮಾಜಘಾತ ಮಾಡಿ ಆತ್ಮಘಾತಮಾಡಿಕೊಳ್ಳಲಾರನು. ಅಂತರ್ಜಗತ್ತಿನ ಸಂಯಮ ನಿಯಮನದ ವಿನಾ ಬಾಹ್ಯಪ್ರಗತಿಯ ಪೂರ್ಣಲಾಭವನ್ನು ತಾನು ಮಾಡಿ

ಕೊಳ್ಳಲಾರನೆಂಬ ಪ್ರತೀತಿ ಅವನಿಗೆ ಕ್ಷಣಕ್ಷಣಕ್ಕೆ ಆಗತೊಡಗಿದೆ. ಈ ಪ್ರತೀತಿಯೆ ಅವನ ಅಂತಃಪ್ರಗತಿಗೆ ಪ್ರಚೋದಕವು ಎಂಬಲ್ಲಿ ಸಂಶಯವಿಲ್ಲ.

ಆದರೆ ಇದೆಲ್ಲ ಆಗುವುದೆಂದು? ಈಗ ನಡೆದುದಂತೂ ನಮ್ಮನ್ನು ವಿನಾಶ ದತ್ತ ಒಯ್ಯುತ್ತಿರುವಂತೆ ತೋರುವದು. ಆ ಬುದ್ಧಿ ಬರುವದರೊಳಗಾಗಿ ಮಾನವಕುಲವೆ ನಷ್ಟವಾದರೆ ಅದರಿಂದ ಲಾಭವೇನು, ಕದಾಚಿತ್ ಅಷ್ಟರಲ್ಲಿ ಭೂಕಂಪ, ಗ್ರಹತಾರಕೆಗಳ ತಾಕಲಾಟ ಇತ್ಯಾದಿ ಉತ್ಪಾತವಾಗಿಯೂ ಈ ಮಾನವಕುಲ ನಷ್ಟವಾಗಿ ಹೋಗಬಲ್ಲದು, ಎಂಬ ಮುಂತಾದ ನಿರಾಶಾಜನಕ ವಿಚಾರಗಳು ನಮ್ಮ ಮನಸಿನಲ್ಲಿ ಬಲವಾಗಿ ಬರುವದುಂಟು. ಆದರೆ ಅವು ಗಳಿಗೆ ಸಮಾಧಾನವಿಷ್ಟೆ. ನಾವು ಮಾನವಕುಲದತ್ತ ನೋಡುವಾಗ ಕೇವಲ ಒಂದು ಚಿಕ್ಕಪುಟ್ಟ ಕಾಲಖಂಡವನ್ನು ಮಾತ್ರ ಅಥವಾ ಕೇವಲ ನಮ್ಮ ವೈಯಕ್ತಿಕ ಜೀವಮಾನದ ಅಳತೆಯಿಂದ ನೋಡಿದರೆ ಆಗದು. ಇಡೀ ಇತಿಹಾಸದತ್ತ ವಿಹಂಗಮದೃಷ್ಟಿಯಿಂದ ನಿರೀಕ್ಷಿಸಬೇಕಾಗುವದು. ಅಂದರೆ ಮಾತ್ರ ಪ್ರಗತಿಪಥದ ವಿಶಾಲಪಟವು ಕಣ್ಣೆದುರು ನಿಲ್ಲುವದು. ವಿಶ್ವವೆ ನಷ್ಟವಾಗಬಹುದಲ್ಲ ಎಂದು ಭಯಪಡುವವರಿಗೆ, ಆದರಾಯಿತು, ಅದೇನು ನಾವು ಮಾಡಿದ ಮಾತಲ್ಲ, ಅದಕ್ಕೆ ದುಃಖವೇಕೆ, ಎಂದೂ ಉತ್ತರ ಕೊಡ ಬೇಕಾಗುವದು. ಮನುಷ್ಯನು ವಿಚಾರಪೂರ್ವಕವಾಗಿ ತನ್ನ ಶಕ್ತಿಯುಕ್ತಿಗಳ ಅಳತೆಯಲ್ಲಿದ್ದುದನ್ನು ವಿವೇಕದಿಂದ ಮಾನವಕುಲದ ಪ್ರಗತಿಗಾಗಿ ಮಾಡುತ್ತ ಹೋಗುವದೆ ಅವನೆದುರಿನ ಸಮಸ್ಯೆ, ಹಾಗೆ ಮಾಡುತ್ತ ಹೋಗಲು ಪ್ರೇರಕ ವಾಗುವಷ್ಟು ಆಶಾಕಿರಣಗಳು ಕ್ಷಿತಿಜದ ಮೇಲೆ ಇವೆ, ಇಷ್ಟೇ ಇಲ್ಲಿ ಹೇಳ ಬಹುದು. ಈ ವರೆಗೆ ಆದ ಪ್ರಗತಿ ಕನಸೂ ಅಲ್ಲ, ಚೇಷ್ಟೆಯೂ ಅಲ್ಲ. ಮುಂದೆ ಆಗಬಹುದೆಂಬುದಕ್ಕೆ ಹಿಂದಾದುದೆ ಸಾಕ್ಷಿ. ಅಷ್ಟೊಂದು ಕೈಕಾಲು ಕಳಕೊಳ್ಳುವಂಥ ಸಂದರ್ಭವೇನೂ ಇಲ್ಲ ಎಂದು ದೃಢವಾಗಿ ನಂಬಿ ಮುಂದೆ ಸಾಗಲು ಯಾವ ಅಡ್ಡಿಯೂ ಇಲ್ಲ ಎಂದೇ ಗಟ್ಟಿಯಾಗಿ ಹೇಳಬಲ್ಲೆ.

ಮಾನವಕುಲದ ಅಂತರ್ಬಾಹ್ಯ ಪ್ರಗತಿಯನ್ನು ಇನ್ನೊಂದು ಬಗೆಯಾಗಿ ಅಳೆದು ನೋಡಬಹುದು. ಪ್ರಗತಿಯೆಂದರೆ ಮಾನವನ ಎಲ್ಲ ಶಕ್ತಿಗಳ ವಿಕಾಸ ಮತ್ತು ವೃದ್ಧಿ, ಹೊಸ ಶಕ್ತಿಗಳ ಪ್ರಾದುರ್ಭಾವ, ಪರಿಣಾಮತಃ ಶಾಂತಿ, ತುಷ್ಟಿ, ಪುಷ್ಟಿಗಳ ಹೆಚ್ಚಳ ಇಲ್ಲವೆ ಆನಂದದ ಉದ್ಭವ ಮತ್ತು ಹೆಚ್ಚುವಿಕೆ. ಆಂತರಿಕ ಪ್ರಗತಿ ಯಾವುದು ಎಂಬುದನ್ನು ಉಪನಿಷತ್ತು ಒಂದು

ಬಗೆಯಾಗಿ ಹೇಳಿರುವದು. 'ಅಸತ್ಯದಿಂದ ಸತ್ಯದತ್ತ, ತಮಸ್ಸಿನಿಂದ ಬೆಳಕಿನತ್ತ (ಅಜ್ಞಾನದಿಂದ ಜ್ಞಾನದತ್ತ), ಮತ್ತು ಮೃತ್ಯುವಿನಿಂದ ಅಮೃತ ದತ್ತ ನನ್ನನ್ನು ಪರಮಾತ್ಮನು ಒಯ್ಯಲಿ' ಎಂದು ಕೇಳಿಕೊಳ್ಳುವಾಗ ಋಷಿಯು ಪ್ರಗತಿಯ ದಿಕ್ಕನ್ನೆ ಸ್ಪಷ್ಟೀಕರಿಸಿರುವನು. ಅದೇ ರೀತಿ ತೈತ್ತಿರೀಯವು ಆನಂದಮೀಮಾಂಸೆಯನ್ನು ಮಾಡುವಾಗ ಆತ್ಯಂತಿಕ ಆನಂದದ ಪರಿಸೀಮೆಯನ್ನು ವಿವರಿಸಿರುವದು. ಆದಾದರೂ ಆ ದೃಷ್ಟಿಯಿಂದಲೆ. ಬಾಹ್ಯ ಪ್ರಗತಿಯ ಪ್ರಶ್ನೆಯು ಆಷ್ಟೊಂದು ತೊಡಕಿನದಲ್ಲ. ಮಾನವ ಶರೀರವು ಹೆಚ್ಚು ಆರೋಗ್ಯಪೂರ್ಣ, ರೋಗರಹಿತ, ದೀರ್ಘಾಯು, ಸುಂದರ, ಸಂಯಮಿ ಹಾಗೂ ಶಕ್ತಿಶಾಲಿ ಆಗುವುದೆ ಅದರ ಪ್ರಗತಿ ಎನಿಸುವದು. ಮಾನವ ಮನಸ್ಸು ಹೆಚ್ಚು ಗ್ರಾಹಕಶಕ್ತಿಯುಳ್ಳದ್ದು, ಸ್ಮರಣಶೀಲವು, ಪ್ರಭಾವಿಯು ಹಾಗೂ ತೇಜಸ್ವಿಯು ಆಗುವದೆ ಅದರ ಪ್ರಗತಿ ಎನಿಸುವದು. ಪರಸ್ಪರ ಪ್ರೇಮ ಮತ್ತು ಸಹಯೋಗ, ಸಮಾಜಧಾರಣೆ ಪೋಷಣೆಗೆ ಅವಶ್ಯವಾದ ಗುಣಗಳ ವಿಕಾಸ ಇವು ನೈತಿಕ ವಿಕಾಸದ ಲಕ್ಷಣಗಳು.

ಈ ಎಲ್ಲ ದೃಷ್ಟಿಯಿಂದಲೂ ಮಾನವನು ಪ್ರಗತಿ ಹೊಂದಿರುವನೆಂದು ಹೇಳಲು ಅಡ್ಡಿ ಇಲ್ಲ. ಮಾನವಕುಲದ ಸಂಖ್ಯೆ ಈ ಹೊತ್ತು ೨೪೫೦ ದಶ ಲಕ್ಷಕ್ಕೆ ಮಿಕ್ಕಿರುವದು, ನಿತ್ಯ ೭೦೦೦೦ ದಷ್ಟು ಹೆಚ್ಚಾಗುತಿರುವದು. ಒಟ್ಟಿಗೆ ನೋಡಲಾಗಿ ಮಾನವನ ಆಯುರ್ಮರ್ಯಾದೆಯು ಬೆಳೆದಿರುವದು. ಹಲವು ಹೊಸ ರೋಗಗಳು ಹುಟ್ಟಿದ್ದರೂ ಅವುಗಳನ್ನು ನಿರ್ಮೂಲ ಮಾಡುವ ಔಷಧಿಗಳೂ ಹೆಚ್ಚು ಸುಲಭವಾಗಿ ದೊರೆಯುತಿರುವವು. ಶರೀರಯಷ್ಟಿಯಲ್ಲಿ ಅನೇಕ ದೇಶಗಳಲ್ಲಿ ಚನ್ನಾಗಿ ಸುಧಾರಣೆಯಾಗಿದೆ ಎಂಬುದು ಕಂಡು ಬಂದಿರುವದು. ಅದೇ ರೀತಿ ಮನುಷ್ಯನಿಗೆ ಮೊದಲಿದ್ದ ಕಣ್ಣು ಕಿವಿ ಮೂಗು ಮೊದಲಾದ ಇಂದ್ರಿಯಗಳೇ ಇದ್ದರೂ ದೂರದರ್ಶಕ ಯಂತ್ರ ಸೂಕ್ಷ್ಮದರ್ಶಕ ಯಂತ್ರ ಫೋಟೋ ಮುಂತಾದ ಅನೇಕಾನೇಕ ಸಾಧನಗಳಿಂದ ಅವುಗಳ ಶಕ್ತಿ ಹಾಗೂ ಮರ್ಯಾದೆ ಎಷ್ಟೋ ಪಟ್ಟು ಬೆಳೆದಿದೆ ಎಂದು ಹೇಳಬಹುದು. ಮನಸ್ಸು ಹಾಗೂ ಮಿದುಳಿನ ಶಕ್ತಿಯೂ ಬೆಳೆದಿದೆ, ಇಷ್ಟೇ ಅಲ್ಲ, ಪುಸ್ತಕ, ಅಚ್ಚುಕೂಟ ಮುಂತಾದ ಸಾಧನಗಳ ಮೂಲಕ ಅವುಗಳ ಶಕ್ತಿ ಹಾಗೂ ಪ್ರಸಾರ ಸಾಮರ್ಥ್ಯ ಹೆಚ್ಚಾಗಿದೆ ಎಂಬಲ್ಲಿ ಸಂಶಯವಿಲ್ಲ. ಯಾವದೇ ಹೊಸ ಶಕ್ತಿಗಳ ಪ್ರಾದುರ್ಭಾವವು ಆದುದು ಕಂಡುಬರದಿದ್ದರೂ ವಿಮಾನ,

ರೇಡಿಯೋ, ಮುಂತಾದ ವೈಜ್ಞಾನಿಕ ಶೋಧನೆಗಳ ಮೂಲಕ ಇದ್ದ ಶಕ್ತಿಗಳ ವಿಕಾಸವು ಕಲ್ಪನಾತೀತವಾಗಿ ಆಗಿದೆ ಎಂಬುದು ಸ್ಪಷ್ಟವಿರುವದು.

ಇನ್ನು ಪರಿಣಾಮತಃ ಶಾಂತಿಸಮಾಧಾನಾದಿಗಳಾಗಲಿ, ಪುಷ್ಟಿತುಷ್ಟಿಗಳಾಗಲಿ, ಆನಂದವಾಗಲಿ ಹೆಚ್ಚಾಗಿದೆಯೋ ಇಲ್ಲವೊ ಎಂಬ ಪ್ರಶ್ನೆ. ಅವು ಅಳೆದು ಹೇಳಲು ಬರುವ ವಿಷಯುಗಳಲ್ಲ. ಇವುಗಳ ಬಗ್ಗೆ ಮತಭೇದವೂ ಆಗಬಲ್ಲದು. ಆದರೆ ಒಂದು ಮಾತನ್ನು ನಾವು ಇಲ್ಲಿ ಚನ್ನಾಗಿ ಲಕ್ಷ್ಯದಲ್ಲಿಟ್ಟುಕೊಳ್ಳಲಿಕ್ಕೆ ಬೇಕು. ಅದೇನಂದರೆ, ಪ್ರತಿಯೊಂದು ಬಗೆಯ ಶಕ್ತಿಯ ವಿಕಾಸವು ಯಾವಾಗಲೂ ಆಂತರಿಕ ಆನಂದವನ್ನು ಕೊಡುವಂತಹದೇ ಇರುವದು. ವಿಕಾಸ ಹಾಗೂ ಆನಂದ ಇವು ಬಿಡಿಸಲಿಕ್ಕೆ ಬಾರದ ದಾಂಪತ್ಯವಿದ್ದಂತೆ. ವಿಕಾಸವಾಗುವಾಗ ಕದಾಚಿತ್ ಒಮ್ಮೊಮ್ಮೆ ಬಾಹ್ಯದುಃಖದಂತೆ ಕಂಡರೂ ಅದರಲ್ಲಿ ಅಂತರಾನಂದವು ಅಡಕವಾಗಿಯೇ ಇರುವುದು ಎಂಬುದು ಅನುಭವದ ಮಾತು. ತಾಯಿ ಮಗುವನ್ನು ಹಡೆಯುವಾಗ ಪ್ರಸವವೇದನೆಯಿಂದ ತ್ರಸ್ತಳಿದ್ದುದು ಕಂಡುಬಂದರೂ ಆ ನೋವಿನಿಂದಾಗುವ ದುಃಖಕ್ಕಿಂತ ತಾನು ಹೊಸ ಜೀವದ ಜನ್ಮದಾತ್ರಿ ಎಂಬ ಆನಂದವು ಆಕೆಗೆ ಹೆಚ್ಚು ಇರುವದು. ವಿಕಾಸದ ಮೂಲವೆ ಆನಂದವು, ವಿಕಾಸದ ಪರಿಣಾಮವೂ ಆನಂದವೆ. 'ಏಕೋಹಂ ಬಹುಸ್ಯಾಮ' ಎಂಬ ಉಚ್ಚಾರದ ಮೂಲಕ ಮೂಲ ಸೃಷ್ಟಿಯಾಗುವಾಗ ಯಾವ ಆನಂದೋದ್ರೇಕವಾಗುವದೊ ಅದರ ಅಂಶ ಮಾತ್ರವು ಪ್ರತಿವಿಕಾಸ ಕಾರ್ಯದಲ್ಲಿಯೂ ಅವತರಿಸುವುದು.

ಈ ರೀತಿ ಯಾವ ದೃಷ್ಟಿಯಿಂದ ನೋಡಿದರೂ ಮಾನವಕುಲವು ಕೇವಲ ಗತಿಶೀಲವಿರದೆ ಪ್ರಗಮನಶೀಲವೂ ಅಂತರ್ಬಾಹ್ಯ ಪ್ರಗತಿಶೀಲವೂ ಇರುವದು ಎಂಬುದು ಸ್ಪಷ್ಟವು.

ಏಕಂ ಸದ್ವಿಪ್ರಾ ಬಹುಧಾ ವದಂತಿ ।

— ವೇದ

೪

ವಿವಿಧತೆಯಲ್ಲಿ ಏಕತೆ

ಜೀವರಾಶಿಗಳಲ್ಲಿ ವಿವಿಧತೆ ತುಂಬಿಕೊಂಡಿದೆ. ಜೀವಗಳಲ್ಲಿ ಅನೇಕಾನೇಕ ವರ್ಗಗಳು ಇರುವಂತೆ ಅವುಗಳಲ್ಲಿ ವಿವಿಧತೆಯೂ ಕಲ್ಪನಾತೀತವಿರುವದು. ವನಸ್ಪತಿಗಳಲ್ಲಿ ಬೂಳಸು ಮೊದಲು ಮಾಡಿಕೊಂಡು ವಟವೃಕ್ಷದ ವರೆಗೆ, ಪ್ರಾಣಿಗಳಲ್ಲಿ ಏಕಾಣುಜೀವ ಮೊದಲು ಮಾಡಿ ಮಾನವನ ವರೆಗೆ ಜೀವಶಕ್ತಿ ಎಂಬುದು ಅನಂತ ವಿಧದಿಂದ ಆವಿರ್ಭವಿಸಿ ತನ್ನ ಕಾರ್ಯವನ್ನು ಮಾಡುವದು. ನಾಮ-ರೂಪ-ಗುಣ ಕಾರ್ಯಗಳಲ್ಲಿ ಇಷ್ಟು ವಿವಿಧತೆ ಇದ್ದರೂ ಎಲ್ಲ ಜೀವಗಳ ಮುಖ್ಯ ಲಕ್ಷಣಗಳು ಒಂದೇ ಇರುವವು. ರಜಃಕಣದ ಒಂದು ಸಾವಿರ ಅಂಶದಷ್ಟು ಸೂಕ್ಷ್ಮ ಗಾತ್ರವಿದ್ದ ಹಾಗೂ ತೀರ ಪ್ರಾಕೃತಿಕ ಸ್ವರೂಪದ ಇಚ್ಛಾಶಕ್ತಿಯುಳ್ಳ ಏಕೇಂದ್ರಿಯ ಅಣುಜೀವ, ಹಾಗೂ ಏಕಾದಶ ಇಂದ್ರಿಯಗಳಿಂದ ಕೂಡಿದ ಅತ್ಯಂತ ಸೂಕ್ಷ್ಮ ಜ್ಞಾನತಂತುಗಳಿಂದ ಯುಕ್ತವಾದ ಮಾನವೀ ಜೀವ, ಇವುಗಳಲ್ಲಿ ತಾತ್ವಿಕ ಏಕತೆ ಮತ್ತು ಮುಖ್ಯ ಲಕ್ಷಣಗಳ ಸಾಧರ್ಮ್ಯ ಇವು ಸ್ಪಷ್ಟವಾಗಿ ಕಂಡುಬರುವವು. ಆ ಮುಖ್ಯ ಲಕ್ಷಣಗಳಾವವು ಎಂಬುದನ್ನು ಈ ಮೊದಲೆ ಹೇಳಲಾಗಿದ್ದರಿಂದ ಪುನರುಚ್ಚಾರದ ಅವಶ್ಯಕತೆ ಇಲ್ಲ. ಪರ್ವತಶಿಖರದ ಮೇಲೆ ಆದ ಮಳೆ-ನೀರು ಹಲವೆಡೆಗೆ ಕೆರೆ ಕಟ್ಟಿ ನಿಂತರೆ ಇನ್ನೊಂದೆಡೆ ಶಾಂತ ಪ್ರವಾಹವಾಗಿ ಹರಿಯುವದು, ಮತ್ತೊಂದೆಡೆ ಬಂಡೆಯಿಂದ ಬಂಡೆಗೆ ಹಾರುತ್ತ ತಡಸಲವಾಗಿ ಸಾಗುವದು, ಇನ್ನೂ ಒಂದೆಡೆ ನಿರ್ಮಲ ನಿರ್ಝರವಾಗಿ ಸೂಸುವದು. ಆದರೆ ಅದೆಲ್ಲ ಒಂದೇ ಒಂದು ನೀರು ಹಾಗೂ ಅದರ ಪ್ರವಾಹವು ತನ್ನ ಪ್ರವಾಸದಲ್ಲಿ ಬಂದ ಅಡೆತಡೆಗಳಿಗನುಸಾರ

ವಾಗಿ, ಅನುಕೂಲ ಪ್ರತಿಕೂಲ ಸಂದರ್ಭಗಳನ್ನವಲಂಬಿಸಿ, ಆ ಪ್ರವಾಹವು ಆಯಾ ನಾಮರೂಪಗಳನ್ನು ಧರಿಸಿ ಬೇರೆ ಬೇರೆಯಾಗಿ ದೃಗ್ಗೋಚರವಾಗು ವದು. ನಭೋಮಂಡಲದಲ್ಲಿಯ ಮೇಘಗಳೇ ಆ ಪ್ರವಾಹಗಳ ಮೂಲೋದ್ಗಮವಿರುವಂತೆ ಸಮುದ್ರವೆ ಅವೆಲ್ಲವುಗಳ ಪರಾಯಣ ಅಥವಾ ಕೊನೆಯ ಆಶ್ರಯವಿರುವಂತೆ ಜೀವಗಳೆಲ್ಲ ಆ ಚೇತನಶಕ್ತಿಯ ಮೂಲಪ್ರವಾಹದಿಂದಲೆ ಹುಟ್ಟಿ ಅದರಲ್ಲಿಯೆ ಲಯಹೊಂದುವಂತಹವುಗಳು.

ಮಾನವನು ಕೂಡ ಒಂದು ಜೀವ. ಜೀವಲಕ್ಷಣಗಳಿಂದ ಲಕ್ಷಿತನಾದುದರಿಂದ ಅವನು ಜೀವವರ್ಗಕ್ಕೆ ಸೇರಿದವನು. ಆದರೆ ಮಾನವನಕುಲದಲ್ಲಿ ಕೂಡ ಬೇಕಾದಷ್ಟು ವಿವಿಧತೆ ಇದೆ. ಗಂಡು ಹೆಣ್ಣು ಎಂಬುದೊಂದು ದೊಡ್ಡ ವೈವಿಧ್ಯ. ಬಿಳಿಯ, ಕರಿಯ, ಅರಿಸಿನ, ಕಂದೀ ಮುಂತಾದ ವರ್ಣಗಳ ವಿವಿಧತೆಯ ಮೂಲಕ, ಬಹಳ ದೊಡ್ಡ ದೊಡ್ಡ ಮಾನವೀಯ ಗುಂಪುಗಳಲ್ಲಿ ಭೇದವು ಕಲ್ಪಿಸಲಾಗಿದೆ. ಇದಲ್ಲದೆ ಸಭ್ಯತೆಯಲ್ಲಿಯ ಹೆಚ್ಚುಕಡಿಮೆ, ಧರ್ಮ, ಭಾಷೆ ಮುಂತಾದ ಅನೇಕ ಕಾರಣಗಳ ಮೂಲಕ ವೈವಿಧ್ಯ ಉಂಟಾಗಿದೆ. ಆದರೆ ಸೂಕ್ಷ್ಮವಾಗಿ, ತಾತ್ವಿಕ ದೃಷ್ಟಿಯಿಂದ ಮತ್ತು ವೈಜ್ಞಾನಿಕ ಒರೆಗಲ್ಲಿಗೆ ಹಚ್ಚಿ ನೋಡಿದರೆ ಈ ವಿವಿಧತೆಯೆಲ್ಲ ತೋರಿಕೆಯದು, ಎಂದು ಕಂಡುಬರುವದು. ಮಾನವಕುಲವೆಲ್ಲ ಪ್ರಾಣಿಶಾಸ್ತ್ರದ ದೃಷ್ಟಿಯಿಂದ ಒಂದೇ ಒಂದು ಇರುವದು. ಕತ್ತೆ, ಕುದುರೆ, ಆಕಳು, ಎಮ್ಮೆ ಮುಂತಾದವುಗಳಲ್ಲಿ ಯಾವ ಬಗೆಯ ಭೇದವಿರುವದೋ ಆ ಬಗೆಯ ಭೇದವು ಯಾವುದೇ ಮನುಷ್ಯ-ಮನುಷ್ಯರ ನಡುವೆ ಇಲ್ಲ. ಅರ್ಥಾತ್ ಇವೆಲ್ಲ ವಿವಿಧತೆಗಳು ಮೇಲೆ ಮೇಲೆ ಕಾಣಿಸುವಂಥವುಗಳು, ಇವುಗಳಿಗೆ ತಾತ್ವಿಕ ಆಧಾರವಾವುದೂ ಇಲ್ಲ. ಸಾಮಾನ್ಯವಾಗಿ ತನ್ನಿಂದ ಭಿನ್ನವಿರುವ ಯಾವುದೇ ಬಗೆಯ ಭಿನ್ನ ಜನಗಳ ಬಗ್ಗೆ ಅಥವಾ ಹೊಸ ಜನರ ಬಗ್ಗೆ ಒಂದು ಭಯ, ಅಥವಾ ಪೂರ್ವಗ್ರಹ ಇರುವದುಂಟು. ಆ ಮೂಲಕ ಉಂಟಾದ ಜುಗುಪ್ಸೆ ಇತ್ಯಾದಿಗಳೇ ಅಪರಿಚಿತ ಜನರನ್ನು ಹಾಗೂ ಜನರ ಗುಂಪುಗಳನ್ನು ದೂರದೂರವಿಡಲು ಕಾರಣವಾಗುವವು ಹೊರತು ಮತ್ತೇನಿಲ್ಲ. ಆ ಜುಗುಪ್ಸೆ ತೊರೆದು ಅವರು ಕೂಡಿ ವ್ಯವಹರಿಸಿದರೆ ಅವರಲ್ಲಿಯ ಸಮಾನತ್ವ, ಸಾಮಾನ್ಯತ್ವ, ಹಾಗೂ ಏಕತೆ ಕೂಡಲೇ ಒಡೆದು ಕಾಣಿಸಬಲ್ಲದು. ಉದಾ: ಅಮೇರಿಕೆಯಲ್ಲಿಯ ಬಿಳಿಯರಿಗೂ ನಿಗ್ರೋ ಜನರಿಗೂ ಬಾಹ್ಯ ವಿವಿಧತೆಗಳು ಎಷ್ಟೋ ಇರುವವು.

ಅವುಗಳ ಮೂಲಕ ಅವರ ನಡುವೆ ಸಾಕಷ್ಟು ಪೂರ್ವಗ್ರಹಾದಿ ದೋಷಗಳೂ ಇವೆ. ಆದರೆ ಅವರಲ್ಲಿ ಕಾರಣಾಂತರಗಳಿಂದ ನಡೆದು ಹೋದ ವಿವಾಹಾದಿ ಗಳಿಂದ ಯಾವದೇ ಬಗೆಯ ರಾಕ್ಷಸರು ನಿರ್ಮಾಣರಾಗಿಲ್ಲ ಅಥವಾ ಉತ್ಪಾತ ಗಳಾಗಿಲ್ಲ. ಬಿಳಿಯರು ಹಾಗೂ ಅರಿಸಿನ ಬಣ್ಣದ ಚೀನಿ-ಜಪಾನಿ ಜನರು ಇವರ ನಡುವೆ ಆದ ನೆಂಟತನದಿಂದಲೂ ಕ್ರಾಂತಿ ಉಂಟಾಗಿಲ್ಲ!

ಮಾನವರಲ್ಲಿ ಸಂಸ್ಕೃತಿಯ ಭಿನ್ನತೆ ಹಾಗೂ ವಿವಿಧತೆಯ ವಿಷಯವೂ ಹೀಗೆಯೆ ಇರುವದು. ವ್ಯಾವಹಾರಿಕ ದೃಷ್ಟಿಯಿಂದ ನಮ್ಮ ದೇಶದ ಸಂಸ್ಕೃತಿ ನಿಮ್ಮ ದೇಶದ ಸಂಸ್ಕೃತಿ, ಪಾಶ್ಚಾತ್ಯಸಂಸ್ಕೃತಿ, ಪೌರ್ವಾತ್ಯಸಂಸ್ಕೃತಿ ಇತ್ಯಾದಿ ಶಬ್ದಗಳನ್ನು ನಾವು ಉಪಯೋಗಿಸಿದರೂ ಮಾನವೀಸಂಸ್ಕೃತಿ ಎಂಬ ವಸ್ತು ಒಂದೇ ಒಂದು ಇರುವದು. ಭೂಗೋಲದ ಪಂಚಖಂಡಗಳಲ್ಲಿ ಎಲ್ಲಿಯೇ ಹೋದರೂ ಮಾನವನೆಂಬುವವನು ಮೂಲತಃ ಹಾಗೂ ತತ್ವತಃ ಒಂದೇ ಇರುವನೆಂದ ಬಳಿಕ ಅವನ ಸಂಸ್ಕೃತಿಯಾದರೂ ಒಂದೇ ಇರಬಲ್ಲದು. ಪಶುಸ್ಥಿತಿಯಿಂದ ಅಥವಾ ಪ್ರಾಕೃತಿಕ ಸ್ಥಿತಿಯಿಂದ ಒಂದೊಂದು ಹೆಜ್ಜೆ ಮುಂದೆ ಇಡುವುದೆ ಮಾನವನ ಸಂಸ್ಕೃತಿ ಎನಿಸುವದು. ಹಲವು ಗುಂಪುಗಳು ಹಿಂದೆ ಉಳಿದಿರಬಹುದು, ಹಲವು ಹೆಚ್ಚು ಮುಂದೆ ಹೋಗಿರಬಹುದು, ಹಲವು ವಿಶಿಷ್ಟ ವಿಷಯಗಳಲ್ಲಿ ಮುಂದರಿದಿರಬಹುದು, ಮತ್ತೆ ಹಲವು ಬೇರೆ ವಿಷಯಗಳಲ್ಲಿ ನಿಪುಣರಾಗಿರಬಹುದು. ಬಾಹ್ಯ ಹಾಗೂ ಅಂತಃಪ್ರಗತಿಗಳ ಅಳತೆಯಿಂದ ಸಂಸ್ಕೃತಿಯ ಈ ಹೆಚ್ಚುಕಡಿಮೆಗಳನ್ನು ಪರೀಕ್ಷಿಸಬೇಕಾಗುವದು. ಆದರೆ ತತ್ವತಃ ನೋಡಿದರೆ ಮಾನವಮಾತ್ರರೆಲ್ಲ ಒಂದೇ ಕುಲಕ್ಕೆ ಸೇರಿರುವದ ರಿಂದ ಅವರ ಪ್ರಗತಿಯ ದಿಕ್ಕು ಒಂದೇ ಇರಬಲ್ಲದು. ಆ ದಿಕ್ಕಿನಿಂದ ಮುಂದೆ ಸಾಗುವುದೆ ಅವರವರ ಸಂಸ್ಕೃತಿ ಎನಿಸುವದು. ಮಾನವ ಮಾನವರ ಸಂಸ್ಕೃತಿ ಯಲ್ಲಿ ತಾತ್ವಿಕ ಇಲ್ಲವೆ ಗುಣವಿಷಯಕ ಭಿನ್ನತೆ ಇರಲರಿಯದು. ನಿಸರ್ಗದ ಶಕ್ತಿಗಳ ರಹಸ್ಯವನ್ನರಿತು ಅವುಗಳ ನಿಯಮನದ ಮೂಲಕ ಪ್ರಭುತ್ವವನ್ನು ಸಂಪಾದಿಸುತ್ತ ಹೋಗುವದು ಮನುಷ್ಯನ ಬಾಹ್ಯಪ್ರಗತಿಯ ಹಾಗೂ ಬಾಹ್ಯ ಸಂಸ್ಕೃತಿಯ ಲಕ್ಷಣವು. ಅದೇ ರೀತಿ ಆಂತರಿಕ ಶಕ್ತಿಗಳ ಗುಟ್ಟನ್ನರಿತು ಸಂಯಮದ ಮುಖಾಂತರ ಪ್ರಭುತ್ವವನ್ನು ಸ್ಥಾಪಿಸುವದರಲ್ಲಿ ಜಯಶೀಲ ರಾಗುತ್ತ ನಡೆಯುವದು ಅಂತಃಸಂಸ್ಕೃತಿಯೆನಿಸುವದು. ಅಂತರ್ಬಾಹ್ಯ ಸಂಸ್ಕೃತಿಗಳಲ್ಲಿ ಸಮ್ಮೇಳನವನ್ನು ಸಿದ್ಧಿಸುವದು ಮನುಷ್ಯನ ಪೂರ್ಣಸಂಸತಿಯ

ಲಕ್ಷಣವಿರುವದು. ಈ ದೃಷ್ಟಿಯಿಂದ ನೋಡಿದರೆ ಅಂತರ್ಬಾಹ್ಯ ಶಕ್ತಿಗಳ ಪ್ರಭುತ್ವದತ್ತ, ಅಜ್ಞಾನದಿಂದ ಜ್ಞಾನದತ್ತ, ಸ್ವಾರ್ಥದಿಂದ ನಿಸ್ವಾರ್ಥ ದತ್ತ, ಆಸಕ್ತಿಯಿಂದ ಅನಾಸಕ್ತಿಯತ್ತ, ಹಿಂಸೆಯಿಂದ ಅಹಿಂಸೆಯತ್ತ, ಅಸತ್ಯದಿಂದ ಸತ್ಯದತ್ತ, ಅಮಂಗಲದಿಂದ ಮಂಗಲದತ್ತ, ಅಸೌಂದರ್ಯದಿಂದ ಸೌಂದರ್ಯದತ್ತ, ಅನಾತ್ಮಸಿಂದ ಆತ್ಮದತ್ತ ಸಾಗುವುದೆ ಸಂಸ್ಕೃತಿಯ ಮುಖ್ಯ ಲಕ್ಷಣವು. ಇದು ಇಡೀ ಮಾನವಕುಲಕ್ಕೆ ಅನ್ವಯಿಸುವದು. ಆದುದರಿಂದ ಯಾವದೇ ದೇಶದ, ಜನಾಂಗದ, ಸಮಾಜದ ಸಂಸ್ಕೃತಿಯನ್ನು ಅಳೆಯಬೇಕಾ ದರೂ ಇದೇ ಸರಿಯಾದ ಅಳತೆಗೋಲು.

ಈ ರೀತಿ ಜೀವಗಳು, ಮಾನವರು ಮತ್ತು ಸಂಸ್ಕೃತಿ ಇವುಗಳಲ್ಲಿ ಬೇಕಾ ದಷ್ಟು ಭಿನ್ನತೆ, ವಿವಿಧತೆ ಮುಂತಾದವುಗಳಿದ್ದರೂ, ಅವುಗಳಲ್ಲಿ ಪ್ರತ್ಯೇಕ ವಾಗಿ ತಾತ್ವಿಕ ಏಕತೆಯ ಸಾಮ್ರಾಜ್ಯವು ಇದೆ ಎಂಬುದು ಸ್ಪಷ್ಟವು. ಇದಲ್ಲದೆ ಜೀವಗಳ ಪ್ರಗತಿಯ ದಿಕ್ಕು ಮಾನವತೆಯತ್ತ, ಮಾನವರ ಪ್ರಗತಿಯ ದಿಕ್ಕು ಪೂರ್ಣಸಂಸ್ಕೃತಿಯತ್ತ, ಮತ್ತು ಪೂರ್ಣಸಂಸ್ಕೃತಿಯ ದಿಕ್ಕು ಮಾನವತೆಯನ್ನು ಮೀರಿರುವ ದೇವತ್ವದತ್ತ ಇರುವದೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನಾವು ಇಲ್ಲಿ ಸ್ಥೂಲಮಾನದಿಂದ ಹಾಗೂ ಲಕ್ಷಾಂತರ ಹಾಗೂ ಸಾವಿರಾರು ವರ್ಷಗಳ ಇತಿಹಾಸವನ್ನೂ ದೃಷ್ಟಿಸಿ ಈ ಮಾತುಗಳನ್ನು ಹೇಳುತಿರುವೆವು, ಹೊರತು ಚಿಕ್ಕ ಪುಟ್ಟ ಕಾಲಖಂಡಗಳನ್ನಾಗಲಿ, ಈ ಗುಂಪು, ಆ ಗುಂಪು, ಈ ದೇಶ, ಆ ದೇಶ ಇವಷ್ಟನ್ನೆ ನೋಡಿ ಹೇಳುತಿರುವುದಿಲ್ಲ. ಹೀಗಿರುವುದರಿಂದ ಮಾನ ವನು ಈ ಪರಿಸ್ಥಿತಿಯಲ್ಲಿ ಪ್ರಗತಿ ಸಂಸ್ಕೃತಿಗಳ ಪ್ರವಾಹದ ದಿಕ್ಕನ್ನು ನೋಡಿ ಕೊಂಡು ಆ ವಿಷಯದಲ್ಲಿ ಬುದ್ಧಿಪುರಃಸರವಾಗಿ ತಾನು ಕೈಕೊಳ್ಳಬೇಕಾದ ದಾರಿಯನ್ನು ತುಳಿಯಲಾರಂಭಿಸಬೇಕು. ಈ ವಿಷಯದಲ್ಲಿ ಚಿಕ್ಕ ದೃಷ್ಟಿ ಸಾಲದು. ಆಕಾಶವನ್ನು ಅಳೆಯಲು ಮೊಂಡಗೈಮೊಳವು ಸಲ್ಲದು. ಭೂಮಿ ಯನ್ನಳೆಯಲು ತ್ರಿವಿಕ್ರಮನೇ ಬೇಕು. ಅತ್ಯಂತ ವಿಶಾಲ ವೈಜ್ಞಾನಿಕ ದೃಷ್ಟಿಯೆ ಈ ವಿಷಯದಲ್ಲಿ ಕೆಲಸಮಾಡಬಲ್ಲದು.

ಕುತೂಹಲ ಎಂಬುದೆ ಜ್ಞಾನದ ಮೂಲವು.

—ಪ್ಲೇಟೋ

ಜ್ಞಾನದಷ್ಟು ಪವಿತ್ರವಾದುದು ಇಹಲೋಕದಲ್ಲಿ ಯಾವದೂ ಇಲ್ಲ.

—ಗೀತೆ

(೫)

ನೋಡುವ ದೃಷ್ಟಿ

ಯಾವದೇ ವಸ್ತು ಅಥವಾ ಮಾತು ಸಣ್ಣದಾಗಲಿ, ದೊಡ್ಡದಾಗಲಿ,ಅದರ ಕಡೆಗೆ ನಾವು ಯಾವ ದೃಷ್ಟಿಯಿಂದ ನೋಡಬೇಕು, ನೋಡುವಾಗ ನಮ್ಮ ವೃತ್ತಿ ಯಾವುದಿರಬೇಕು ಇದು ಬಹಳ ಮಹತ್ವದ ವಿಷಯ. ನಮ್ಮ ನಿತ್ಯದ ಆಹಾರದ ಸಮಸ್ಯೆ, ಇದು ಬಹಳ ದೊಡ್ಡ ಮಾತಲ್ಲ. ನಮ್ಮ ಇಡೀ ಜೀವನದ ಸಮಸ್ಯೆ ಇದು ಬಹಳ ದೊಡ್ಡ ಮಾತು. ಆದರೆ ಇಂಥ ಯಾವುದೇ ಮಾತುಗಳನ್ನು ಪರಿಶೀಲಿಸುವಾಗ ನಮ್ಮ ದೃಷ್ಟಿಯು ನಮ್ಮ ವೃತ್ತಿಯು ಒಳ್ಳೆ ಗಂಭೀರವಾದುದು, ಹಾಗೂ ಹಲವು ತತ್ವಗಳನ್ನನುಸರಿಸುವಂತಹದು ಇರುವದು ಅವಶ್ಯವು. ಯಾವದೇ ವಸ್ತುವಿನ ಸತ್ಯಜ್ಞಾನವಾಗಬೇಕಾದರೆ ನಮ್ಮ ದೃಷ್ಟಿಯು ದೋಷರಹಿತವಾಗಿ ಇರಬೇಕಾಗುವದು. ಇಲ್ಲದಿದ್ದರೆ ನಮಗೆ ವಿಕೃತಜ್ಞಾನವಾಗುವದು; ಕಾರ್ಯಮಾಡುವಾಗ ನಮ್ಮ ದಾರಿ ತಪ್ಪುವದು.

ನಾವು ಬುದ್ಧಿಪುರಃಸರವಾಗಿ ಯಾವದೇ ಮಾತನ್ನು ಮಾಡಬೇಕಾದರೆ ಅದರ ಜ್ಞಾನವೆಂಬುದು ಅವಶ್ಯ. ಆದುದರಿಂದಲೆ ಜ್ಞಾನಕ್ಕೆ, ಶುದ್ಧ ಜ್ಞಾನಕ್ಕೆ, ಸಿದ್ಧ ಜ್ಞಾನಕ್ಕೆ, ಸತ್ಯಜ್ಞಾನಕ್ಕೆ, ಸಂಶಯರಹಿತ ಜ್ಞಾನಕ್ಕೆ ಎಲ್ಲಕ್ಕೂ ಹೆಚ್ಚಿನ ಮಹತ್ವವು ಕೊಡಲಾಗಿದೆ. ಬಾಹ್ಯಸೃಷ್ಟಿ ನೋಡಲು ಕಣ್ಣು ಎಷ್ಟು ಅವಶ್ಯವೊ ಅಷ್ಟೇ ವಿಚಾರಸೃಷ್ಟಿಯಲ್ಲಿ, ಭಾವಸೃಷ್ಟಿಯಲ್ಲಿ, ಕಲ್ಪನಾಸೃಷ್ಟಿ

ಯಲ್ಲಿ ಅಥವಾ ಒಟ್ಟಿಗೆ ಅಂತಃಸೃಷ್ಟಿಯಲ್ಲಿ ಜ್ಞಾನವು ಅವಶ್ಯ. ಜ್ಞಾನವು ಎಲ್ಲಕ್ಕೂ ಪವಿತ್ರವಸ್ತು ಎನಿಸಿದೆ. ಜ್ಞಾನವಿಲ್ಲದವನು ಅಂಧನು ಎಂದು ಹೇಳಲಾಗಿದೆ. ಜ್ಞಾನವಿಲ್ಲದವನ ಬೆನ್ನುಬೀಳುವದೆಂದರೆ ಅಂಧನು ಅಂಧನ ಬೆನ್ನುಬಿದ್ದು ತಗ್ಗಿನ ಪಾಲಾದಂತೆ. ಎಲ್ಲ ಕರ್ಮಗಳ ಲಯವು ಜ್ಞಾನದಲ್ಲಿಯೆ ಆಗುವುದೆಂದು ತತ್ವವಿಚಾರವು ಹೇಳುವದು. ಜ್ಞಾನದಿಂದಲೆ ಮುಕ್ತಿ ಎಂದು ವೇದಾಂತವು ಸಾರುವದು. ಹೀಗೆ ಅನೇಕ ರೀತಿಯಿಂದ ಜ್ಞಾನದ ಮಹತ್ವ, ಅದರ ಪಾವಿತ್ರ್ಯ, ಅದರ ಅವಶ್ಯಕತೆ, ಅದರ ಅದ್ವಿತೀಯತೆ ಹೊಗಳಲಾಗಿದೆ. ಈ ಜ್ಞಾನವೆಂಬುದು ಯಥಾರ್ಥವಿರಬೇಕು, ಸತ್ಯವಿರಬೇಕು. ಯಾವಾಗಲೂ ಎಚ್ಚರದಿಂದಿರುವದು, ಮೈತುಂಬ ಕಣ್ಣುಬಿಟ್ಟುಕೊಂಡಿರುವದು, ಜ್ಞಾನಸಾಧನಗಳಾದ ಜ್ಞಾನೇಂದ್ರಿಯಗಳನ್ನು ಶುದ್ಧವಾಗಿಡುವದು, ಪೂರ್ವಗ್ರಹಾದಿ ದೋಷಗಳನ್ನು ದೂರವಿಡುವದು, ಪದಾರ್ಥಗಳತ್ತ ವಾಸ್ತವಿಕತೆಯ ಭಾವದಿಂದ ನೋಡುವದು, ಮುಂತಾದವುಗಳು ಸತ್ಯಜ್ಞಾನ ಮಾಡಿಕೊಳ್ಳಲು ನಮಗೆ ಸಹಾಯಕವಾಗುವವು.

ಪ್ರತ್ಯಕ್ಷ, ಅನುಮಾನ, ಆಪ್ತವಾಕ್ಯ ಇವು ಜ್ಞಾನಕ್ಕೆ ಪ್ರಮಾಣಗಳು ಎಂಬುದು ಪ್ರಸಿದ್ಧವೆ ಇದೆ. ಒಂದು ಬಗೆಯಾಗಿ ಇವು ಅಬಾಧಿತವಾದವುಗಳೆ. ಆದರೆ ಇವುಗಳಲ್ಲಿ ಕೂಡ ಒಂದು ತಾರತಮ್ಯವು ಉಂಟು. ಪ್ರತ್ಯಕ್ಷವು ಎಲ್ಲಕ್ಕೂ ಶ್ರೇಷ್ಠ ಪ್ರಮಾಣವು; ಅದರ ತರುವಾಯ ಅನುಮಾನ; ಆಪ್ತವಾಕ್ಯದ ಸ್ಥಾನವು ತದನಂತರ. ಪ್ರತ್ಯಕ್ಷದ ಮಹತ್ವವನ್ನು ಉಳಿದ ಯಾವ ಪ್ರಮಾಣಗಳೂ ಕಡಿಮೆ ಮಾಡಲಾರವು. ಪ್ರತ್ಯಕ್ಷ ಸೂರ್ಯನನ್ನು ನಾನು ಕಣ್ಣಿನಿಂದ ನೋಡುತಿರುವಾಗ ಯಾರಾದರೂ ಅವನು ಚಂದ್ರನು ಎಂದು ಅನುಮಾನದಿಂದ ಸಿದ್ಧಮಾಡಲೆತ್ನಿಸಿದರೆ ಇಲ್ಲವೆ ಆಪ್ತವಾಕ್ಯಗಳ ಪ್ರಮಾಣವನ್ನು ಕೊಟ್ಟರೆ, ನನ್ನ ಪ್ರತ್ಯಕ್ಷಜ್ಞಾನವು ಬಾಧಿತವಾಗಲಾರದು. ಇನ್ನು ನಮ್ಮ ಜ್ಞಾನೇಂದ್ರಿಯಗಳು ಈ ಮೇಲಿನ ಪ್ರಮಾಣಗಳ ಆಧಾರದಿಂದ ಜ್ಞಾನವನ್ನು ಪಡೆಯುತಿರುವಾಗ ವಸ್ತುಗಳನ್ನು ಹಾಗೂ ಜ್ಞಾನವನ್ನು ಕುರಿತು ನಮ್ಮ ದೃಷ್ಟಿ ಏನಿರಬೇಕು ಹಾಗೂ ಅವುಗಳ ಬಗ್ಗೆ ನಮ್ಮ ವೃತ್ತಿಯೇನಿರಬೇಕು ಇದನ್ನು ನೋಡುವ.

ಜಡ-ಚೇತನ ಸೃಷ್ಟಿಯೆಲ್ಲವೂ ಅಥವಾ ಅಂತರ್‌ಬಾಹ್ಯ ವಿಶ್ವವೆಲ್ಲವೂ ಗತಿಶೀಲವಿರುವದು, ಕ್ಷಣಶಃ ಅದು ಚಲಾಯಮಾನವಿರುವದು; ಅಲ್ಲದೆ ವಿಶ್ವ

ದಲ್ಲಿಯ ಪ್ರತಿಯೊಂದು ವಸ್ತು ಅಷ್ಟೇ ಅಲ್ಲ, ಪ್ರತಿ ವಸ್ತುವಿನ ಅಣುಕಣವು ಕೂಡ ಇತರ ವಸ್ತುಗಳ ಅಣುಕಣಗಳಿಂದ ಪರಿಣಾಮ ಹೊಂದುತಿರುವದು ಹಾಗೂ ತಾನು ಅವುಗಳ ಮೇಲೆ ಪರಿಣಾಮ ಮಾಡುತಿರುವದು. ಪ್ರತಿ ಕ್ಷಣಕ್ಕೆ ಅಸ್ತಿತ್ವದಲ್ಲಿದ್ದ ಅಣುಪರಮಾಣುಗಳ ವಿಚ್ಛಿನ್ನೀಕರಣ (ಡಿಸ್‌ಇಂಟಿಗ್ರೇಶನ್) ಇತರ ಅಣುಪರಮಾಣುಗಳ ಮೇಲೆ ಪರಿಣಾಮ, ಹೊಸ ಅಣುಪರಮಾಣಗಳ ನಿರ್ಮಾಣ, ಈ ಕಾರ್ಯಗಳು ಸತತ ನಡೆದಿವೆ. ಉದಾ: ಅಣುಬಾಂಬಿನ ಶಕ್ತಿಯ ಮುಖ್ಯ ರಹಸ್ಯ 'ಯುರೇನಿಯಮ್' ಧಾತುವಿನಲ್ಲಿಯ ಅಣುಪರಮಾಣುಗಳ ವಿಚ್ಛಿನ್ನೀಕರಣವಿರುವದು. ಸಾಮಾನ್ಯವಾಗಿ ಆ ಕೃತಿಯು ಯಾವ ಗತಿಯಿಂದ ನಡೆಯುವದೊ ಅದಕ್ಕೂ ಲಕ್ಷಾಂತರಪಾಲು ಹೆಚ್ಚು ಗತಿಯಿಂದ ಅದನ್ನು ಮಾಡಲೆತ್ನಿಸುವಾಗ ಆ ಕೃತಿಯು ಹೆಚ್ಚಿನ ಗತಿಯಿಂದ ಸಾಗಿ ಪ್ರಚಂಡ ಉಷ್ಣತಾ ಶಕ್ತಿ ಹುಟ್ಟುವದು. ಅದೇ ಅಣುಸ್ಫೋಟವನ್ನುಂಟುಮಾಡುವದು. ಸ್ಫೋಟವನ್ನುಂಟುಮಾಡಲು ಯಾವದೇ ಕೃತ್ರಿಮ ಉಪಾಯಗಳನ್ನು ಯೋಜಿಸದೆ ಹೋದರೂ ನೈಸರ್ಗಿಕವಾದ ವಿಚ್ಛಿನ್ನೀಕರಣವು ತಾನಾಗಿ ನಡೆದೇ ಇರುವದು ಹಾಗೂ ಕಾಲಾಂತರದಿಂದ ಆ ವಿಚ್ಛಿನ್ನೀಕರಣದ ಮೂಲಕ ಸೀಸೆಂಬ ಧಾತುವಿನ ನಿರ್ಮಾಣವಾಗುವದು. ಈ ಮಾತು ಯಾವ ರೀತಿ ಒಂದು ಯುರೇನಿಯಮ್ ಎಂಬ ಧಾತುವನ್ನು ಕುರಿತು ನಡೆದಿರುವದೊ ಅದೇ ವಿಶ್ವದಲ್ಲಿರುವ ಅನೇಕಾನೇಕ ಧಾತುಗಳ ಅಣುಪರಮಾಣುಗಳಲ್ಲಿಯೂ ಸತತ ನಡೆದಿರುವದು.

ಹೀಗೇಕೆ ನಡೆದಿರುವದು ಎಂಬ ಪ್ರಶ್ನೆಗೆ ಸದ್ಯಕ್ಕೆ 'ಸ್ವಭಾವ' ಎಂಬ ಒಂದೇ ಉತ್ತರ ಕೊಡಬೇಕಾಗುವದು. ಈ ಕ್ರಮ ಯಾವಾಗ ಪ್ರಾರಂಭವಾಯಿತು ಎಂಬ ಪ್ರಶ್ನೆಗೆ ಈ ಕ್ರಮ ಕೇವಲ ಅಜ್ಞಾತ–ಆದಿಯಲ್ಲ, ಆದರೆ ಅನಾದಿ ಎಂದು ಉತ್ತರ ಕೊಡಬೇಕಾಗುವದು. ಅನಾದಿ ಇದ್ದುದರಿಂದ ಇದು ಅನಂತವೂ ಇರುವದು. ಹಾಗೆ ಇಲ್ಲ, ಇದು ಒಂದಿಲ್ಲೊಂದು ದಿನ ಅಂತವನ್ನು ಹೊಂದೇ ತೀರುವದು, ಎಂದು ಯಾರಾದರೂ ವಾದಿಸಿದರೆ, ಈ ಕ್ರಮ ಈ ರೂಪದಲ್ಲಿ ಅಂತವನ್ನು ಹೊಂದುವದು ಎಂದು ಒಪ್ಪತ್ತು ಒಪ್ಪಿದರೂ ಈ ಕ್ರಮದ ಪರ್ಯಾಯವೊಂದು ನಡೆದೇ ತೀರುವದು ಎಂದು ಪ್ರತಿಪಾದಿಸಬೇಕಾಗುವದು. ಅಸ್ತಿತ್ವವು ಸನಾತನವು ಅರ್ಥಾತ್ ಅನಾದಿ ಅನಂತವು.

ವಿಶ್ವವೆಲ್ಲ ಈ ರೀತಿ ಗತಿಶೀಲವಿರುವುದರಿಂದ ಅದರಲ್ಲಿ ನವೀನತೆ, ನಿತ್ಯ

ನವೀನತೆ, ಕ್ಷಣಕ್ಷಣಕ್ಕೂ ನವೀನತೆ ಉಂಟಾಗುವದು. ನಿಜವಾದ ನಿರ್ಮಾಣ ಶಕ್ತಿಯುಳ್ಳ ಕವಿಪ್ರತಿಭೆ ನವನವೋನ್ಮೇಷಶಾಲಿನಿ ಎಂದು ವರ್ಣಿಸಲ್ಪಟ್ಟಿದೆ. ಈ ಬಗೆಯ ನವನಿರ್ಮಾಣಶಕ್ತಿ ಮೂಲದಲ್ಲಿ ಇಲ್ಲದೆ ಹೋಗಿದ್ದರೆ ಕೇವಲ ಒಂದೇ ಬಗೆಯ ಯಾಂತ್ರಿಕ ಗತಿ ಮಾತ್ರ ಗೋಚರವಾಗುತ್ತಿತ್ತು. ಒಂದು ದೊಡ್ಡ ಯಂತ್ರವು ಕೆಲಸ ಮಾಡುತ್ತಿರುವದನ್ನು ಅದರ ಸಾವಿರಾರು ಗಾಲಿಗಳು ಒಂದೇ ಸವನೆ ತಿರುಗುತ್ತಿರುವುದನ್ನು ನೋಡಿದರೆ ನಮಗೆ ಕೇವಲ ಯಾಂತ್ರಿಕ ಗತಿಯ ಯಥಾರ್ಥ ಕಲ್ಪನೆ ಆಗುವದು. ವಿಶ್ವದ ಗತಿಶೀಲತೆ ಈ ಬಗೆಯದಿಲ್ಲ. ಇದರಲ್ಲಿ ಕ್ಷಣಶಃ ಹೊಸ ಹೊಸ ಸೃಜನವು ನಡೆದಿರುವದು. ಆದುದರಿಂದ ಇದಕ್ಕೆ ಸೃಜನಶೀಲ ಗತಿ ಎನ್ನುವದು ಒಳಿತಾಗುವದು.

ಈ ಸೃಜನಶೀಲ ಗತಿಯುಳ್ಳ ವಿಶ್ವವು ಭೂತ-ವರ್ತಮಾನ-ಭವಿಷ್ಯಗಳ ಕಾಲಪಟದಲ್ಲಿ ನಮಗೆ ದೃಗ್ಗೋಚರವಾಗುವದು. ವಿಶ್ವಕ್ಕೆ, ಅದೇ ರೀತಿ ವಿಶ್ವದಲ್ಲಿಯ ಪ್ರತಿಯೊಂದು ವಸ್ತುವಿಗೆ ಭೂತ-ವರ್ತಮಾನ-ಭವಿಷ್ಯಗಳು ಇರುವವು. ಪ್ರತಿಯೊಂದಕ್ಕೂ ಹಿಂದೆ-ಇಂದೆ-ಮುಂದೆ ಇರುವವು. ಅರ್ಥಾತ್ ಎಲ್ಲವುಗಳಿಗೂ ಇತಿಹಾಸವಿರುವದು. ಒಂದು ವಸ್ತು ನಮ್ಮ ಕಣ್ಣೆದುರಿಗೆ ನಾಶಹೊಂದಿದಂತೆ ಕಂಡರೂ ಅದರ ಅಣುಪರಮಾಣುಗಳ ಮೂಲವು ಒಂದಿಲ್ಲೊಂದು ರೂಪದಲ್ಲಿ ಅಸ್ತಿತ್ವದಲ್ಲಿದ್ದೇ ಇರುವದು. ಅದರ ಇತಿಹಾಸ ವನ್ನೆಲ್ಲ ತಿಳಿದುಕೊಳ್ಳುವ ಸಾಮರ್ಥ್ಯ ನಮಗಿಲ್ಲ; ಆ ಮಾತು ಬೇರೆ. ವಿಶ್ವದಲ್ಲಿ ಬಿಡಿಬಿಡಿಯಾಗಿ ಕಾಣುವ ನಾಮರೂಪಯುಕ್ತ ಅನಂತ ವಸ್ತು ಗಳಿಗೆ ಉತ್ಪತ್ತಿ-ಸ್ಥಿತಿ-ಲಯ ಮತ್ತು ಅವುಗಳ ಇತಿಹಾಸ ಇದ್ದರೂ ನಮ್ಮೆದುರು ವಿಶಿಷ್ಟ ನಾಮರೂಪ ಧರಿಸಿ ಈ ಕ್ಷಣಕ್ಕೆ ಚಲಾಯಮಾನವಿರುವ ವಿಶ್ವಕ್ಕೆ ಕೂಡ ಉತ್ಪತ್ತಿ-ಸ್ಥಿತಿ-ಲಯಗಳು ಇದ್ದರೂ ವಿಶ್ವದ ಮೂಲ ವಸ್ತು–ಅನಾದ್ಯನಂತಶಕ್ತಿ—ಮಾತ್ರ ಉತ್ಪತ್ತಿ-ಸ್ಥಿತಿ-ಲಯಾದಿಗಳಿಂದ ಸದಾ ಮುಕ್ತವೂ ದಿಕ್ಕಾಲಾತೀತವೂ ಇರುವದು. ಅದೊಂದೇ ಸ್ವಯಂಭುವು ಸ್ವತಂತ್ರವು. ಯಾವ ವಸ್ತು ಒಂದೆಡೆಗೆ ಇದೆ ಇನ್ನೊಂದೆಡೆಗೆ ಇಲ್ಲ ಯಾವ ವಸ್ತು ಈ ಕ್ಷಣ ಇದೆ ಇನ್ನೊಂದು ಕ್ಷಣಕ್ಕೆ ಬದಲಾಗುತಿದೆ ಅಥವಾ ಇಲ್ಲದಂತಾಗುತ್ತದೆ, ಅದು ದಿಕ್ಕಾಲಗಳಿಗೆ ವಶವಿರುವದು. ಆದರೆ ಯಾವ ಒಂದು ಎಲ್ಲೆಲ್ಲಿಯೂ ಏಕಕಾಲಕ್ಕೆ ಇರುವುದೊ ಅದಕ್ಕೆ ದಿಗ್ಬಂಧನವಿಲ್ಲ, ಅದಕ್ಕೆ ದಿಙ್ಮರ್ಯಾದೆ ಇಲ್ಲ. ಅದು ದೇಶಾಧೀನವಲ್ಲ. ಅದೇ ರೀತಿ ಯಾವ

ದೊಂದು ಎಂದೆಂದಿಗೂ ಇರುವುದೊ ಯಾವ ಕ್ಷಣಕ್ಕೂ ಇಲ್ಲದಂತಾಗುವ
ದಿಲ್ಲವೊ ಅದಕ್ಕೆ ಕಾಲಬಂಧನವಿಲ್ಲ, ಕಾಲಮರ್ಯಾದೆ ಇಲ್ಲ, ಅದು ಕಾಲಾ
ಧೀನವಲ್ಲ. ದೇಶಕಾಲಗಳಿಗೆ ಒಳಗಾಗದೆ ಇರುವ ವಸ್ತುವಿಗೆ ಪರಿಸ್ಥಿ
ಎಂಬುದು ಇರಲರಿಯದು. ಈ ರೀತಿ ಆ ವಸ್ತು ದೇಶಕಾಲಪರಿಸ್ಥಿತಿಗಳಿಗೆ
ಹೊರಗು, ನಿತ್ಯಸತ್ಯ ನಿಬ್ಬಯಲು, ಅದೇ ಎಲ್ಲಕ್ಕೂ ಆಧಾರಭೂತವು
ಸಾಕ್ಷೀಭೂತವು, ಶಕ್ತಿಮಯವು, ಸಕಲ ಸೃಷ್ಟಿಗೆ ಕಾರಣವು.

ಸಕಲ ವಸ್ತುಗಳು ಭೂತ-ವರ್ತಮಾನ-ಭವಿಷ್ಯಗಳಿಗೆ ಒಳಗಾಗಿರುವ
ವೆಂದು ಮೇಲೆ ಹೇಳಲಾಗಿದೆ. ಆದರೆ ಈ ಭೂತವರ್ತಮಾನಾದಿ ಕೂಡ ನಾವು
ನಮ್ಮ ಮರ್ಯಾದಿತ ಶಕ್ತಿಗೆ ಅನುಸರಿಸಿ ಕಾಲದಲ್ಲಿ ಕಲ್ಪಿಸಿದ ಖಂಡಗಳು
ನಿನ್ನೆ, ಈ ಹೊತ್ತು, ನಾಳೆ ಇವೇ ಭೂತ-ವರ್ತಮಾನ-ಭವಿಷ್ಯಗಳ ಪ್ರತಿನಿಧಿ
ಗಳೆಂದು ತಿಳಿದರೆ ಇವುಗಳಲ್ಲಿ 'ನಾಳೆ' ಎಂಬುದು ನಾಳೆ 'ಈ ಹೊತ್ತು'
ಆಗಿಬಿಡುವದು; 'ಈ ಹೊತ್ತು' ಎಂಬುದು 'ನಿನ್ನೆ' ಆಗಿಬಿಡುವದು;
'ನಿನ್ನೆ' ಎಂಬುದು ಮೊನ್ನೆ 'ನಾಳೆ' ಎಂಬುದಿತ್ತು; 'ನಿನ್ನೆ' 'ಈ ಹೊತ್ತು'
ಇತ್ತು. ಹೀಗೆ ವಿವಿಧನಾಮಗಳಿದ್ದರೂ ಕಾಲಪ್ರವಾಹವು ಒಂದೇ ಒಂದು.
ಆದರ ದಂಡೆಯ ಮೇಲೆ ನಾವು ಯಾವ ಸ್ಥಲದಲ್ಲಿ ನಿಂತು ಎಣಿಕೆ ಹಾಕು
ವೆವೊ ಆ ಪ್ರಕಾರ ಅದು ನಿನ್ನೆ, ಈ ಹೊತ್ತು, ನಾಳೆ ಎಂಬ ನಾಮಾಭಿಧಾನ
ಗಳಿಗೆ ಪಾತ್ರವಾಗುವದು. ಈ ರೀತಿ ಸಂತತವಾಗಿ ಹರಿಯುವ ಕಾಲನದಿಯು
ಈ ವಿಶ್ವವನ್ನ ತೇಲಿಸಿಕೊಂಡು ಪ್ರತಿಕ್ಷಣವೂ ಹೊಸ ಹೊಸ ಅನುಭವಗಳಿಂದ
ಯುಕ್ತವಾಗಿ ಎಲ್ಲಿಂದಲೊ ಹೊರಟು ಎಲ್ಲಿಯೊ ಸಾಗುತಿರುವದು. ಅದು
ಮುಂದರಿಯುತಿರುವದು ಎಂಬುದು ಮಾತ್ರ ಸ್ಪಷ್ಟ. ಆಡಿದ ಮಾತು, ಒಡೆದ
ಮುತ್ತು ಮರಳಿಬರಲಾರವು ಎನ್ನುವಂತೆ ಹರಿದುಹೋದ ಪ್ರವಾಹ ಹಿಂತಿರು
ಗದು. ಮುಂದೆ ಸಾಗಿ ಹೋದುದು ಹೋಗಿಬಿಟ್ಟಿತು. ದಂಡೆಗೆ ನಿಂತವರು
ಒಂದೇ ಒಂದು ಪ್ರವಾಹವನ್ನು ಮಾತ್ರ ನೋಡುತಿರುವಂತೆ ಅನುಭವಿಸಿದರೂ
ಅವರು ಸ್ಥಿರಚರ ಹಳೆಯ ದಂಡೆಗಳಲ್ಲಿ ಹೊಸ ನೀರು ಹರಿಯುವದನ್ನು
ನೋಡುತಿರುವರು, ಹೊಸ ಅನುಭವವನ್ನು ಪಡೆಯುತಿರುವರು.

ಈ ವಿಷಯದ ಮಹತ್ವವೇನು ಎಂದು ಹಲವರು ಕೇಳಬಹುದು. ವಿಶ್ವದ
ಗತಿಶೀಲತೆ, ನವೀನತೆ, ಕಾಲದ ನಿರಂತರ ಪ್ರವಾಹ ಇವುಗಳನ್ನು ಸರಿಯಾಗಿ
ಆಕಲಿಸಿ ನಾವು ಅನುಭವಿಸದಿದ್ದರೆ ಜೀವನವೆಲ್ಲ, ವಿಶ್ವವೆಲ್ಲ. ಒಂದು ಕೇವಲ

ತ್ರಾಂತ್ರಿಕ ಕ್ರಿಯೆ, ಬೇಸರಗೊಡುವ ಅರ್ಥಹೀನ ಗಾಣದೆತ್ತಿನ ಸುತ್ತುವಿಕೆ, ಎಂಬ ಭಾವನೆಯುಂಟಾಗುವದು. ಈ ಭಾವನೆಯುಂಟಾದಾಗೆಲ್ಲ, ಇದು ನಮ್ಮ ಜಡತೆಯು ಅಥವಾ ತಮಸ್ಸಿನ ಪರಿಣಾಮ ಹೊರತು ವಸ್ತುಸ್ಥಿತಿಯ ನಿಜ ರೂಪವಲ್ಲ, ಎಂಬ ಅರಿವು ನಮಗಾಗುವದು. ಯಂತ್ರದಲ್ಲಿ ಹಾಗೂ ಯಾಂತ್ರಿಕ ಕ್ರಿಯೆಯಲ್ಲಿ ಸೃಜನಶಕ್ತಿ, ನಿತ್ಯನವೀನತೆ, ಇರಲರಿಯವು. ಅವು ಇಚ್ಛಾಶಕ್ತಿ ಯುಳ್ಳ ಆದಿಚೈತನ್ಯದಲ್ಲಿಯೇ ಇರಬಲ್ಲವೆಂಬುದನ್ನು ನಾವು ಅರಿತಿರಬೇಕು.

ಇನ್ನೊಂದು ಸಾಮಾನ್ಯವಾಗಿರುವ ರೂಢಭಾವನೆಯಿಂದಲೂ ನಾವು ನಮ್ಮ ಮನಸ್ಸನ್ನು ಸಂರಕ್ಷಿಸಿಕೊಳ್ಳಬೇಕು. ಒಳ್ಳೆಯದೆಂಬುದೆಲ್ಲ ಹಿಂದೆ ಆಗಿಹೋಯಿತು, ಭೂತಕಾಲವೆ ಸುವರ್ಣಕಾಲವು, ಜಾಣತನ, ಜ್ಞಾನ ಮುಂತಾದವುಗಳೆಲ್ಲ ಹಿಂದಿನವರಿಗೆ ಮಾತ್ರ ಪ್ರಾಪ್ತವಿದ್ದವು, ಹೊಸದು ಮಾಡುಕತಕ್ಕದ್ದೆಂಬುದಾಗಲಿ ಹೊಸದು ತಿಳಿದುಕೊಳ್ಳತಕ್ಕದ್ದಾಗಲಿ, ಹೊಸ ಅನುಭವವಾಗಲಿ ಯಾವದೂ ಇರಲರಿಯದು, ಎಲ್ಲ ಮಾತುಗಳಿಗೂ ಹಿಂದಿನವರದೇ ಪ್ರಮಾಣ— ಅದು ಯಾವದೇ ವಿಷಯವಿರಲಿ— ಎಂಬ ಮುಂತಾದ ವಿಚಾರಗಳು ಕೂಡ ನಮ್ಮ ಜಡತ್ವ, ನಮ್ಮ ಸಾಹಸದ ಅಭಾವ, ಆತ್ಮ ವಿಶ್ವಾಸಹೀನತೆ ಇವುಗಳನ್ನೆ ವ್ಯಕ್ತಮಾಡುವವು. ಹಳೆಯವರು, ಪುರಾತನರು ಹೇಳಿದ ಮಾತುಗಳನ್ನು ಕೂಡ ನಾವು ಹೊಸ ದೃಷ್ಟಿಯಿಂದ, ಹೊಸ ಕಾಲ ದಲ್ಲಿ, ಹೊಸರೀತಿಯಿಂದ ಹೊಸ ಅರ್ಥವನ್ನು ಹಚ್ಚಿ ನೋಡುತಿರುವೆವು, ಎಂಬುದನ್ನು ನಾವು ಮರೆತುಬಿಡುತ್ತೇವೆ. ಹಳೆಯದರ ಬಗ್ಗೆ ಸಾಕಷ್ಟು ಆದರವಿಟ್ಟುಕೊಂಡು, ನಮ್ಮ ನಮ್ರತೆ ಶಾಲೀನತೆಗಳಲ್ಲಿ ಎಳ್ಳಷ್ಟು ಕಡಿಮೆ ಮಾಡದೆ ನಾವು ವರ್ತಮಾನ ಮತ್ತು ಭವಿಷ್ಯ ಇವುಗಳಿಗೆ ಯೋಗ್ಯವಾದ ಮಹತ್ವ ಕೊಡುವದು ಹಾಗೂ ನಮ್ಮ ಸ್ವಂತ ಅನುಭವಗಳನ್ನು ಕೂಡ ಚೆನ್ನಾಗಿ ಲಕ್ಷಿಸುವದು ಅವಶ್ಯವಿದೆ. ಹೀಗೆಲ್ಲ ನಾವು ಮಾಡುವದು ಯುಥೋಚಿತವೆಂಬುದು ಮೇಲೆ ಹೇಳಿದ ಮಾತುಗಳಿಂದ ವ್ಯಕ್ತವಾಗುವದು.

ತಾತ್ಪರ್ಯವೇನಂದರೆ ನಾವು ಅನುಭವ ಪಡೆಯುವಾಗ, ವಸ್ತುಗಳ ಗುಣ ಧರ್ಮಗಳನ್ನು ಪರೀಕ್ಷಿಸುವಾಗ, ಘಟನೆಗಳನ್ನು ನೋಡುವಾಗ, ವಿಚಾರ ಗಳನ್ನು ವಿಮರ್ಶಿಸುವಾಗ ಐತಿಹಾಸಿಕ ದೃಷ್ಟಿಯನ್ನಿಟ್ಟುಕೊಳ್ಳಬೇಕು. ಇಲ್ಲ ದ್ದರೆ ಈ ಸೃಷ್ಟಿಯ ವಯಸ್ಸು ನಾಲ್ಕುಸಾವಿರ ವರುಷವಿರುವದೆಂದು ಬಾಯಬಲ್ಲಿನ ಆಧಾರದಿಂದ ಹೇಳುವ ಒಬ್ಬ ಆರ್ಚ್‌ಬಿಶಪ್ಪನ ಪಾಡಾಗು

ವದು! ಇಲ್ಲಿ ಇತಿಹಾಸದೃಷ್ಟಿಯೆಂದರೆ ಇತಿಹಾಸದ ವಿಜ್ಞಾನಿಗ
ಹೇಳುವ ಕೇವಲ ಮಾನವಕುಲದ ಜ್ಞಾತ ಇತಿಹಾಸ ಮತ್ತು ಆದರ ದೃ
ಎಂತಲ್ಲ. ಯಾವದೇ ಪ್ರಸ್ತುತ ವಿಷಯದ ಪೂರ್ವಾಪರ, ಪಾರ್ಶ್ವಭೂಮಿ
ಆದರ ಭೂತ-ವರ್ತಮಾನ-ಭವಿಷ್ಯಗಳು, ವಿಶ್ವದ ಗತಿಶೀಲತೆ ಮತ್ತು ಸತ
ಮುಂದರಿಯುವಿಕೆ ಇತ್ಯಾದಿಗಳನ್ನೆಲ್ಲ ಲಕ್ಷಿಸುವುದೆ ಐತಿಹಾಸಿಕದೃ
ಎನಿಸಬಲ್ಲದು.

ಇದೇ ಬಗೆಯಾಗಿ ನಮ್ಮ ದೃಷ್ಟಿ ವೈಜ್ಞಾನಿಕವಾಗಿರಬೇಕು. ಯಾವದ
ಒಂದು ವಸ್ತುವಿನ ಅಭ್ಯಾಸ, ವಿಶ್ಲೇಷಣ ಮಾಡುವಾಗ ವಿಜ್ಞಾನಿಯ
ಮೂಲತಃ ಸತ್ಯಾನ್ವೇಷಿಯಾಗಿರುವನು. ಅವನು ಸತ್ಯದ ಪಕ್ಷಪಾತಿಯ
ಇಷ್ಟ ಅನಿಷ್ಟ, ಯೋಗ್ಯ ಅಯೋಗ್ಯ, ಒಳಿತು ಕೆಡಕು ಎಂಬ ಮುಂತಾ
ಪೂರ್ವಗ್ರಹಗಳಿಂದ ಅವನು ಬದ್ಧ ಅಥವಾ ಪೀಡಿತನಿರುವುದಿಲ್ಲ. ತಾನ
ಶೋಧಿಸುತಿರುವ ಸತ್ಯದಿಂದ ತನಗೆ ಆಗಬಹುದಾದ ಲಾಭಹಾನಿಗಳನ್ನು
ಅವನು ಲೆಕ್ಕಿಸುವದಿಲ್ಲ. ಸತ್ಯದ ಪೂರ್ಣದರ್ಶನವಾಗುವವರೆಗೆ ಅವನ
ಪ್ರಯೋಗಗಳನ್ನು ಮಾಡುತ್ತಲೆ ಇರುವನು. ಪರಂಪರೆಯಿಂದ ಬಂದ
ಗ್ರಂಥಸ್ಥವಾದ, ಸ್ನೇಹಿತರು ಹೇಳಿದ ಮಾತುಗಳಿಗೆ ಸಾಕಷ್ಟು ಶ್ರದ್ಧೆಯಿಂದ
ಅವನು ಕಿವಿಗೊಡುವನು. ತನ್ನ ಸತ್ಯಶೋಧನದಲ್ಲಿ ಅವೆಲ್ಲವುಗಳ ಉಪ
ಯೋಗವನ್ನು ಮಾಡಿಕೊಳ್ಳುವನು. ಆದರೆ ಅವೇ ಸತ್ಯ ಎಂದು ತಿಳಿಯದೆ
ಅವೆಲ್ಲ ಸತ್ಯಶೋಧನದ ಸಾಧನಗಳೆಂದು ತಿಳಿದು ತನ್ನ ಪ್ರಯೋಗಗಳಲ್ಲಿ
ಮಗ್ನನಾಗುವನು. ಈ ಬಗೆಯ ನಿರಪೇಕ್ಷತೆ, ನಿರ್ಲಿಪ್ತತೆ, ಸತ್ಯಪಕ್ಷಪಾತ,
ಪ್ರಯೋಗ ಹಾಗೂ ಪ್ರತ್ಯಕ್ಷ ಅನುಭವ ಇವುಗಳ ಮೇಲೆ ಹೆಚ್ಚಿನ ಭರವಸೆ
ಇವೇ ಸತ್ಯಾನ್ವೇಷಣದ ಕಾರ್ಯದಲ್ಲಿ ಆತ್ಯಂತಿಕ ಉಪಯುಕ್ತ ಸಾಧನಗಳು.
ಇವೇ ವೈಜ್ಞಾನಿಕ ವೃತ್ತಿಗೆ ಪೋಷಕ.

ಪ್ರಾಣಿಮಾತ್ರಗಳ ಮುಖ್ಯ ಲಕ್ಷಣಗಳೆಲ್ಲವೂ ಒಂದೇ ಇದ್ದುದರಿಂದ
ಜೀವಕೋಟಿ ಎಂಬುದು ಒಂದು ಹಾಗೂ ಮಾನವಮಾತ್ರರ ಲಕ್ಷಣಗಳು
ಒಂದೇ ಇದ್ದುದರಿಂದ ಮಾನವಕುಲ ಎಂಬುದು ಒಂದೇ. ಈ ಮಾತನ್ನು
ಮೊದಲೇ ಹೇಳಿದ್ದಾಗಿದೆ. ತತ್ವತಃ ಈ ಮಾತು ನಿಜವಿದ್ದರೂ ಕಾರಣಾಂತರ
ಗಳಿಂದ ಮಾನವರಲ್ಲಿ ವರ್ಣಭೇದ, ದೇಶಭೇದ, ಭಾಷಾಭೇದ, ಧರ್ಮ-
ಭೇದ, ರೀತಿ ನೀತಿಗಳ ಭೇದ ಇತ್ಯಾದಿ ಬಾಹ್ಯಭೇದಗಳು ಆಗಿವೆ. ನಾವು

ಾಮಾನ್ಯವಾಗಿ ವಿಚಾರಮಾಡುವಾಗ ಈ ಭೇದಗಳ ಮೂಲಕ ಉಂಟಾದ ುಂಪುಗಳ ಪರವಾಗಿ ಇಲ್ಲವೆ ಗುಂಪುಗಳ ವಿಷಯದಲ್ಲಿ ಮಾತ್ರ ವಿಚಾರ ಾಡುವೆವು. ಕೆಲವೊಂದು ಸಂದರ್ಭಗಳಲ್ಲಿ ವ್ಯವಹಾರಿಕ ದೃಷ್ಟಿಯಿಂದ ೀಗೆ ಒಂದು ಅಥವಾ ಹೆಚ್ಚು ಗುಂಪುಗಳನ್ನು ಕಣ್ಣೆದುರು ಇಟ್ಟುಕೊಂಡು ಚಾರಿಸುವದು ಯೋಗ್ಯವೂ ಕ್ರಮಪ್ರಾಪ್ತವೂ ಇರುವದು. ಅದೇಕೆ, ಒಂದೇ ್ಯಕ್ತಿಯ ಬಗ್ಗೆ ಸಹ ಪ್ರತ್ಯೇಕವಾಗಿ ವಿಚಾರಮಾಡುವದು ಅನೇಕ ಸಾರೆ ವಶ್ಯವಿರುವದು. ಆದರೆ ಈಚೆಗೆ ಪ್ರವಾಸ, ಸಾರಿಗೆ, ಸುದ್ದಿ ಮುಂತಾದವು ಳನ್ನು ಮುಟ್ಟಿಸುವಿಕೆ, ಪರಸ್ಪರರೊಡನೆ ಘನವಾದ ವ್ಯಾಪಾರ ವ್ಯವಹಾರಾದಿ ಳ ಹೆಚ್ಚಳ, ಆರ್ಥಿಕ ಹಾಗೂ ರಾಜಕೀಯ ವಿಷಯಗಳಲ್ಲಿ ಅತ್ಯಂತ ಪರ ್ಪರಾವಲಂಬನ ಇತ್ಯಾದಿಗಳು ಹೆಚ್ಚು ಬೆಳೆದುಬಿಟ್ಟದ್ದರಿಂದ ಮಾನವಕುಲದ ಿತಸಂಬಂಧಗಳೆಲ್ಲ ಒಂದು ಎಂಬ ಭಾವನೆ ಹೆಚ್ಚೆಚ್ಚು ಪ್ರತೀತವಾಗತೊಡ ಿದೆ. ಭೂಮಂಡಲದಲ್ಲೆಲ್ಲ ಒಂದೇ ರಾಜ್ಯಘಟನೆ ಇರಬೇಕು, ಯುದ್ಧಾದಿ ಳಿಲ್ಲದೆ ಪರಸ್ಪರರ ತಿಕ್ಕಾಟಗಳನ್ನು ಬಗೆಹರಿಸಬೇಕು, ಇತ್ಯಾದಿ ವಿಚಾರ ಳು ಈಗ ಎಲ್ಲ ದೇಶಗಳಲ್ಲಿ ಪ್ರಮುಖವಾಗಿ ಮುಂದೆ ಬರತೊಡಗಿವೆ. ಜಗ ್ತಿನ ಯಾವದೇ ಒಂದು ಮೂಲೆಯಲ್ಲಿ ಒಂದು ಘಟನೆ ನಡೆದರೂ ಅದರ ಪರಿಣಾಮವು ಈಗ ಜಗತ್ತಿನ ಎಲ್ಲ ದೇಶಗಳ ಮೇಲೂ ಆಗುತಿರುವದು ಕಂಡು ಬಂದಿದೆ. ಎಲ್ಲಿ ಹೋದರೂ ಮನುಷ್ಯನ ಸ್ವಭಾವ ಸಾಧಾರಣವಾಗಿ ಒಂದೇ ಬಗೆಯದ್ದಿರುವದು, ಎಲ್ಲರ ಸುಖದುಃಖಗಳೂ ಒಂದೇ ಇರುವವು, ರೀತಿನೀತಿ ಗಳಲ್ಲಿ ಒಮ್ಮೊಮ್ಮೆ ಆತ್ಯಂತಿಕ ಭಿನ್ನತೆ ಕಂಡರೂ ಅವುಗಳ ತಳಹದಿ ಎಷ್ಟೋ ಮಟ್ಟಿಗೆ ಒಂದೇ ಇರುವದು, ಧರ್ಮಧರ್ಮಗಳಲ್ಲಿರುವ ಭಿನ್ನತೆ ಕೂಡ ತಾತ್ವಿಕ ಕ್ಕಿಂತ ತೋರಿಕೆಯದೇ ಹೆಚ್ಚು ಇರುವದು, ಈ ಮುಂತಾದ ವಿಚಾರಗಳಿಗೆ ಪ್ರಾಬಲ್ಯವು ಬರಲಾರಂಭಿಸಿದೆ. ಹೀಗೆ ಆಗುವದು ಯೋಗ್ಯವು ಹಾಗೂ ಕ್ರಮಪ್ರಾಪ್ತವು. ಇದರಿಂದ ಸಿದ್ಧವಾಗುವ ಮಾತೇನೆಂದರೆ, ಅಜ್ಞಾನ ದಿಂದಾಗಲಿ, ಸಂಕುಚಿತ ಭಾವನೆಯಿಂದಾಗಲಿ, ಸ್ವಾರ್ಥಮೂಲಕವಾಗಲಿ ನಾವು ಗುಂಪುಕಟ್ಟಿಕೊಂಡು ಜೀವನಮಾಡಿ ನಮ್ಮ ನಮ್ಮ ಮಟ್ಟಿಗೆ ಮಾತ್ರ ಸದ್ಯಕ್ಕೆ ವಿಚಾರಮಾಡುತಿದ್ದರೂ ಮಾನವಮಾತ್ರರ ಜೀವನದ ರಹಸ್ಯ, ಪ್ರಗತಿಯ ನಿಯಮಗಳು, ಮೂಲಭೂತವಾದ ಹಿತಸಂಬಂಧಗಳು, ಭವಿ- ತವ್ಯವು ಒಂದೇ ಇರುವದು. ಆದುದರಿಂದ ಈ ಸಂಗತಿಗಳನ್ನು ಕುರಿತು

ವಿಚಾರಿಸುವಾಗ, ಪ್ರಮೇಯಗಳನ್ನು ಕಟ್ಟುವಾಗ ಇಡೀ ಮಾನವಕುಲವನ್
ನಮ್ಮ ಕಣ್ಣಮುಂದಿಟ್ಟುಕೊಳ್ಳುವದು ಅವಶ್ಯವಿರುವದು. ಅದೇ ರೀತಿ
ಇಡೀ ಮಾನವಕುಲದ ಇತಿಹಾಸ, ರೂಢಿ, ಸ್ವಭಾವ ಇವುಗಳನ್ನು ನಾವ
ನಿಃಪಕ್ಷಪಾತಭಾವದಿಂದ ಅಭ್ಯಸಿಸಿ ಅನುಮಾನಗಳನ್ನು ಮಾಡುವದು ವಿಹಿ
ವಾಗುವದು. ಈ ವಿಶಾಲದೃಷ್ಟಿಯನ್ನು ಇಟ್ಟುಕೊಂಡರೆ ಮಾತ್ರ ನಾವ
ಮಾನವರೆಲ್ಲರೂ ಒಂದು ಎಂಬ ಭಾವನೆಗೆ ಯೋಗ್ಯವಾದ ಎಡೆಗೊಟ್ಟಂತಾಗ
ವದು. ನಮ್ಮ ವಿಚಾರಗಳು ಸಹ ಸರಿಯಾದ ಮಾರ್ಗದಿಂದ ಸಾಗಲ
ಆಸ್ಪದವಾಗುವದು.

ಇಡೀ ಮಾನವಕುಲದ ವಿಚಾರವನ್ನು ಹಿನ್ನೆಲೆಯಲ್ಲಿಟ್ಟುಕೊಂಡು ನಾವು
ಸತ್ಯಶೋಧನೆ ಹಾಗೂ ಹಿತಸಾಧನೆ ಮಾಡುತಿರಬೇಕಲ್ಲದೆ ಈ ಮಾನವಕುಲವು
ಒಟ್ಟಿಗೆ ಪ್ರಗತಿಶೀಲಮಾರ್ಗದಲ್ಲಿದೆ ಎಂಬುದನ್ನೂ ಲಕ್ಷಿಸಬೇಕು. ಹಲಕೆಲವು
ಪ್ರಸಂಗಗಳಲ್ಲಿ ಇಲ್ಲವೆ ಕೆಲವೊಂದು ಕಾಲಖಂಡಗಳಲ್ಲಿ ಮಾನವರು ಹಿಂಬರಿಕೆ
ಹೋಗುತಿರುವರೆಂಬ ಆಭಾಸವೂ ಆಗಬಹುದು. ಆದರೆ ನಾವು ಒಟ್ಟಿಗೆ
ನೋಡಬೇಕೇ ಹೊರತು ಹಲವೊಂದು ಪ್ರಸಂಗಳನ್ನಷ್ಟೆ ಎತ್ತಿ ನೋಡಿ ನಿರ್ಣ
ಯಕ್ಕೆ ಬರುವದು ಯೋಗ್ಯವಲ್ಲ. ಸಮುದ್ರದಂಡೆಯಿಂದ ಹಿಮಾಚಲದತ್ತ
ಸಾಗಿ ಮೇಲೆ ಏರುವಾಗ, ಹಲವು ಸ್ಥಳಗಳಲ್ಲಿ ಕೊಳ್ಳ ಮುಂತಾದವುಗಳನ್ನು
ದಾಟುವಾಗ ನಾವು ಕೆಳಗೆ ಇಳಿಯುಬೇಕಾಗುವದು. ಆದರೆ ಅದು ಮತ್ತೆ
ಏರುವದರ ಸಲುವಾಗಿಯೆ ಹೊರತು ಮತ್ತೇನಲ್ಲ. ಮುಂದೆ ಮುಂದೆ ಸಾಗಿ
ದಂತೆ ನಾವು ಸಮುದ್ರದ ಸಮತಲದಿಂದ ಮೇಲೇರುತಿರುವದೆ ನಮಗೆ ಕಂಡು
ಬರುವದು. ಆ ದೃಷ್ಟಿಯಿಂದ ಮಾನವಕುಲವು ಈ ಹೋದ ಲಕ್ಷಾಂತರ
ವರುಷಗಳಲ್ಲಿ ಪ್ರಗತಿಯನ್ನೆ ಹೊಂದಿದೆ ಎಂಬಲ್ಲಿ ಸಂಶಯವಿಲ್ಲ. ಅಂತರ್
ಬಾಹ್ಯ ಲೋಕಗಳ ಮೇಲೆ ಮಾನವೀಯ ಪ್ರಭುತ್ವವು ಒಟ್ಟಿಗೆ ಹೆಚ್ಚೇ
ಆಗಿದೆ ಹಾಗೂ ಆಗುತ್ತ ನಡೆದಿದೆ. ಮುಂದೆ ಕೂಡ ವಿಕಾಸವು ಆ ದಿಕ್ಕಿ
ನಲ್ಲಿಯೇ ನಡೆಯುವದು ಎಂದು ಹೇಳಲು ಸಾಕಷ್ಟು ಸ್ಪಷ್ಟ ಚಿನ್ಹಗಳಿವೆ.
ಆದುದರಿಂದ ಮಾನವವಿಕಾಸದಲ್ಲಿ ಪೂರ್ಣವಿಶ್ವಾಸವಿಟ್ಟು ಅತ್ಯಂತ ಆಶಾ
ವಾದಿತ್ವದಿಂದ ನಾವು ವಿಚಾರಸೃಷ್ಟಿಯಲ್ಲಿ ವಿಹರಿಸುವದು ಅಗತ್ಯವು.

ಮಾನವಕುಲದ, ವಿಚಾರ ಮಾಡುವಾಗ ಸ್ವಾಭಾವಿಕವಾಗಿಯೆ ಮನುಷ್ಯ
ನಿಗೆ ತನ್ನ ಸ್ವಂತದ ವಿಚಾರವೂ ಹೊಳೆಯುವದು. ಅಥವಾ ಯಥಾರ್ಥ

ಾಗಿ ನೋಡಿದರೆ ಸ್ವಂತ ತನ್ನ ಹಿತದ ಹಾಗೂ ಉದ್ಧಾರದ ವಿಚಾರವೆ ೊದಲು ಬರುವದು. ಇನ್ನು ವ್ಯಕ್ತಿಯು ತನ್ನ ಉದ್ಧಾರದ ವಿಚಾರಕ್ಕೆ ್ರಥಮಸ್ಥಾನ ಕೊಡಬೇಕೋ ಸಮಾಜದ ಇಲ್ಲವೆ ಇಡೀ ಮಾನವಕುಲದ ುದ್ಧಾರದತ್ತ ನೋಡಬೇಕೊ? ಇದು ಕಾಣಲು ಬಹಳ ಜಟಿಲ ಪ್ರಶ್ನೆ ುರುವದು. ಆದರೆ ವ್ಯಕ್ತಿ ಮತ್ತು ಸಮಾಜ ಇವುಗಳ ಪರಸ್ಪರ ಸಂಬಂಧ ನ್ನು ಸೂಕ್ಷ್ಮವಾಗಿ ಪರೀಕ್ಷಿಸಿ ನೋಡಿದರೆ ಮಾನವನ ಮಟ್ಟಿಗೆ ಅವೆರಡೂ ನ್ಯೋನ್ಯಸಂಬಂಧವುಳ್ಳವುಗಳಿರುವವು, ಇಷ್ಟೇ ಅಲ್ಲ, ಅವು ಸಂಪೂರ್ಣವಾಗಿ ರಸ್ಪರಾವಲಂಬಿಗಳಿರುವವು. ಒಂದನ್ನು ಬಿಟ್ಟು ಇನ್ನೊಂದಿರುವದು ಾಧ್ಯವೇ ಇಲ್ಲ. ಪ್ರತಿವ್ಯಕ್ತಿಯು ತನ್ನ ಅಸ್ತಿತ್ವ, ಬೆಳೆವಣಿಗೆ ಮತ್ತು ತಿಹಾಸವನ್ನು ನೋಡಿದರೆ ಸಮಾಜಾವಲಂಬನವು ಆ ವಿಷಯದಲ್ಲಿ ಷ್ಟು ಇರುವದು ಎಂಬುದು ಸ್ಪಷ್ಟವಾಗುವದು. ವ್ಯಕ್ತಿ ತಾನು ಈ ಹೊತ್ತು ಯಾವ ಸ್ಥಿತಿಯಲ್ಲಿರುವನೊ ಆ ಸ್ಥಿತಿಗೆ ಸಮಾಜದ ಸಹಾಯಸಹಕಾರಗಳೆ ರ್ವಥಾ ಕಾರಣ. ಮನುಷ್ಯನು ಪೂರ್ಣತಯಾ ಸಾಮಾಜಿಕ ಪ್ರಾಣಿ ರುವನು. ಸಮಾಜವನ್ನು ಬಿಟ್ಟು ಅವನು ವಿಕಾಸಹೊಂದುವದು ಾಧ್ಯವೇ ಇಲ್ಲ. ಅವನ ವಿಚಾರಸೃಷ್ಟಿ ಸಹ ಸಾಮಾಜಿಕ ವಿಚಾರ ಳಿಂದಲೆ ತುಂಬಿದೆ. ಅವನ ಸ್ವರ್ಗ-ನರಕಗಳ ಕಲ್ಪನೆ, ದೇವದೇವತೆಗಳ ಲ್ಪನೆ ಇವೆಲ್ಲ ಸಮಾಜಮೂಲಕ ಹಾಗೂ ಸಮಾಜಮಯವಿರುವವು. ದೇ ರೀತಿ ಮಾನವಸಮಾಜವಾದರೂ ಮಾನವ ವ್ಯಕ್ತಿಗಳ ಸಮೂಹದಿಂದಲೆ ೂಡಿದ್ದಾಗಿದೆ. ವ್ಯಕ್ತಿಗಳನ್ನು ಬಿಟ್ಟುಬಿಟ್ಟರೆ ಸಮಾಜವೆಲ್ಲಿ? ಮಾನವನು ೇವಲ ತನ್ನ ತಲೆಮಾರಿನ ಸಮಾಜವನ್ನಷ್ಟೆ ತನ್ನ ವಿಕಾಸಕ್ಕಾಗಿ ಅವಲಂಬಿ ರುವನೆಂದಲ್ಲ. ಮೊಟ್ಟಮೊದಲಿನ ಸಂಸ್ಕೃತಿಯ ಪಾಠವನ್ನು ಮಾನವನು ಲಿತಂದಿನಿಂದ ಕುಲದಲ್ಲಿ ಸಂಗ್ರಹೀತವಾದ ಜ್ಞಾನ-ಸಂಸ್ಕಾರಾದಿಗಳನ್ನೆಲ್ಲ ಅವಲಂಬಿಸಿಕೊಂಡೆಯೆ ಈ ಹೊತ್ತು ಹುಟ್ಟುವ ಮಾನವ ವ್ಯಕ್ತಿಗಳು ತಮ್ಮ ವಿಕಾಸವನ್ನು ಮಾಡಿಕೊಳ್ಳುತಿರುವವು. ಇದನೆಲ್ಲ ನೋಡಿದರೆ ವ್ಯಕ್ತಿಯು ಕೇವಲ ತನ್ನೊಬ್ಬನ ಉದ್ಧಾರವನ್ನಷ್ಟೆ ಬಯಸಿದರೆ ಇಲ್ಲವೆ ಆ ಬಗ್ಗೆಯಷ್ಟೇ ಪ್ರಯತ್ನಪಟ್ಟರೆ ಅದು ಎಂತಹ ಕೃತಘ್ನತೆ ಎನಿಸುವದು, ಇದನ್ನು ಹೇಳ ಬೇಕೆ? ವ್ಯಕ್ತಿಗಳು ಬಿಡಿಬಿಡಿಯಾಗಿ ಆ ರೀತಿ ಉದ್ಧಾರ ಹೊಂದುವದು ಸಾಧ್ಯವಾದರೂ ಆಗಬಹುದೊ? ಯಾವದೇ ವ್ಯಕ್ತಿ ಕೇವಲ ತನ್ನೊಬ್ಬನ

ಇಚ್ಛಾಶಕ್ತಿಯಿಂದ ಮಾನವತೆಯೊಡನೆ, ವಿಶ್ವದೊಡನೆ, ಇಡೀ ಕರ್ಮಪ್ರವಾಹದೊಡನೆ ಇದ್ದ ತನ್ನ ಅಭೇದ್ಯ ಸಂಬಂಧವನ್ನು ಕಡಿದುಕೊಳ್ಳುವದು ಸಾಧ್ಯವೊ? ವ್ಯಕ್ತಿಯು ತನ್ನಿಚ್ಛೆಯಿಂದ, ತನ್ನ ವೈಯ್ಯಕ್ತಿಕ ಸಂಕಲ್ಪದಿಂದ ಈ ವಿಶ್ವದಲ್ಲಿ ಹುಟ್ಟಿಬಂದಿಲ್ಲ. ಈಶಸಂಕಲ್ಪ ಇಲ್ಲವೆ ವಿಶ್ವಸಂಕಲ್ಪ ಇಲ್ಲವೆ ಅನಾದಿಕರ್ಮ ಇವು ವ್ಯಕ್ತಿಯ, ಸಮಾಜದ ಹಾಗೂ ಮಾನವಕುಲದ ಜನ್ಮಕ್ಕೆ, ಜೀವನಕ್ಕೆ, ಕಾರಣ. ಅಂದಬಳಿಕ ವ್ಯಕ್ತಿಯು ಆ ವಿಶ್ವಸಂಕಲ್ಪದ ಮೇಲೆ ಪ್ರಭುತ್ವವನ್ನು ಪಡೆಯುವ ಬಗೆ ಯಾವುದು? ಅವನಿಗೆ ಸ್ವಾತಂತ್ರ್ಯವೇನೋ ಕೆಲಮಟ್ಟಿಗೆ ಇದ್ದಂತೆ ಕಾಣುವದು. ಆದರೆ ಅದು ಅತ್ಯಂತ ಅಲ್ಪವಿರುವದು, ಮರ್ಯಾದಿತವಿರುವದು. ನಾನು ಮನಸಿಗೆ ಬಂದಾಗ ಪಗ್ಗ ಹರಿದುಕೊಂಡು ಏಕಾಕಿಯಾಗಿ ಮುಕ್ತನಾಗಿ ಉದ್ಧೃತನಾಗಿ ಹೋಗಿಬಿಡುವೆ ಎನ್ನುವದು ಅವನ ಇಚ್ಛೆಯನ್ನು ವ್ಯಕ್ತ ಪಡಿಸಬಹುದು, ಅವನ ಆಕಾಂಕ್ಷೆಯನ್ನು ಸ್ಪಷ್ಟಗೊಳಿಸಬಲ್ಲದು, ಆದರೆ ಆದರಿಂದ ಅವನಿಗೆ ಮೂಲತಃ ಇಲ್ಲದ ಸಾಮರ್ಥ್ಯವು ಬರಲರಿಯದು. ಸಾಮರ್ಥ್ಯಕ್ಕಾಗಿ ಅವನು ಪರಮಾತ್ಮನತ್ತ, ವಿಶ್ವಶಕ್ತಿಯತ್ತಲೆ ನೋಡಬೇಕಾಗುವದು. ಆದುದರಿಂದ ವ್ಯಕ್ತಿಯು ಹೆಮ್ಮೆಯಿಂದಾಗಲಿ ಸ್ವಾರ್ಥದಿಂದಾಗಲಿ ತನ್ನೊಬ್ಬನ ಉದ್ಧಾರದ ಹವ್ಯಾಸವನ್ನಷ್ಟೆ ಹಿಡಿಯದೆ ತಾನು ಈ ಮಾನವಕುಲದ, ಈ ವಿಶ್ವದ ಅವಿಭಾಜ್ಯ ಅಂಗವಿದ್ದುದನ್ನು ಅರಿತುಕೊಂಡು 'ಸರ್ವೇತ್ರಸುಖಿನಃ ಸಂತು' ಮಂತ್ರವನ್ನೇ ಪಠಿಸುತ್ತ 'ಸರ್ವೇ ಭದ್ರಾಣಿ ಪಶ್ಯಂತು' ಎಂಬ ಸದಿಚ್ಛೆಯನ್ನು ಪೂರೈಸಿಕೊಳ್ಳಬೇಕು.

ಜೀವ, ಜೀವನ, ನಮ್ಮ ಆಯುಷ್ಯಕ್ರಮ ಮುಂತಾದವುಗಳನ್ನು ನಾವು ಚನ್ನಾಗಿ ವಿಶ್ಲೇಷಿಸಿ ನೋಡಿದರೆ ಅವೆಲ್ಲ ಸಂಪೂರ್ಣವಾಗಿ ಬಾಹ್ಯ ಇಲ್ಲವೆ ಆಂತರಿಕ ಕರ್ಮಮಯವಿರುವವು ಎಂಬುದು ಸ್ಪಷ್ಟವಾಗದೆ ಇರದು. ಕರ್ಮ ಅಂದರೆ ಗತಿ, ಚಲನವಲನ, ಒಂದೇ ಸ್ಥಿತಿಯಲ್ಲಿರದಿರುವಿಕೆ. ಈ ಲೆಕ್ಕದಿಂದ ನೋಡಿದರೆ ನಮ್ಮ ಶರೀರ, ಮನಸು ಇತ್ಯಾದಿಗಳೆಲ್ಲವೂ ಕರ್ಮದಲ್ಲಿ ಸತತ ತೊಡಗಿರುವದು. ಕಂಡುಬರುವದು. ವಿಶ್ವವೆಲ್ಲ ಒಂದು ಅನಂತಕ್ರಿಯಾಮಾಲೆ. ನಾವು ವ್ಯಕ್ತಿಶಃ ವಿಶ್ವದಲ್ಲಿಯ ಒಂದು ಕ್ಷುದ್ರ ರಜಕಿರಣ ಮಾತ್ರ. ನಾವೂ ಆ ಕ್ರಿಯಾಮಾಲೆಯಲ್ಲಿ ಒಳಗೊಂಡಿರುವೆವು. ಸ್ವರ್ಗಾದಿಗಳಲ್ಲಿ ಕೂಡ ಕರ್ಮ ಎಂಬುದು ಇದ್ದೇ ಇದೆ. ಸುಖಬಡುವುದೆಂಬುದು ಸಹ ಒಂದು ಕ್ರಿಯೆಯೆ

ರುವದು. ನಾವು ಧ್ಯಾನಮಾಡುತಿರುವಾಗ ಕೂಡ ಒಂದು ಬಗೆಯ ಕರ್ಮ
ನ್ನೆ ಮಾಡುತಿರುವೆವು. ಕಾಲಿನಿಂದ ನಡೆದರೆ ಕರ್ಮ, ಮನಸಿನಿಂದ ವಿಚಾರಿಸಿ
ರೆ ಕರ್ಮವಲ್ಲ, ಎಂದು ಹೇಳುವದು ತಪ್ಪು. ಲೌಕಿಕವಾಗಿ ನಾವು ಕೆಲವುಗಳಿಗೆ
ರ್ಮ, ಕೆಲವುಗಳಿಗೆ ವಿಶ್ರಾಂತಿ, ಕೆಲವುಗಳಿಗೆ ಆಟ-ನೋಟ, ಕೆಲವುಗಳಿಗೆ
ುಖ-ದುಃಖ ಎನ್ನುತಿರಬಹುದು. ಆದರೆ ಅವೆಲ್ಲವುಗಳಲ್ಲಿ ಒಂದಿಲ್ಲ ಒಂದು
ಗೆಯ ಸತತಕರ್ಮವು, ಮಾಡುವದು, ಕ್ರಿಯೆಯು ನಡೆದೇ ಇದೆ. ಜೀವನ
ದೊಂದು ಕರ್ಮವೇ ಇರುವದು. ಅದು ಕರ್ಮಮಯವೂ ಇರುವದು. ಮರಣ
ಂಬುದು ಸಹ ಒಂದು ಕರ್ಮವೇ ಸೈ. ಇಂತಹ ಸತತ ಸರ್ವವ್ಯಾಪಿಯಾದ
ರ್ಮದಿಂದ ಬಿಡುಗಡೆಹೊಂದುವದು ಬ್ರಹ್ಮದೇವನಿಗೂ ಶಕ್ಯವಿಲ್ಲ. ಅವನು ಸಹ
ೃಷ್ಟಿಕರ್ಮ ಎಂಬ ಮಹಾ ಕರ್ಮದಲ್ಲಿ ತೊಡಗಿಯೆ ಇರುವನು! ಅಂದ ಬಳಿಕ
ರ್ಮದಿಂದ ಮುಕ್ತಿ ಎಂಬುದು ಆಕಾಶಪುಷ್ಪದಂತೆಯೇ ಸೈ! ಹಲವರು ಜನನ
ಮರಣ ಮುಕ್ತಿಯನ್ನು ಬಯಸಿ ಸಾಧನೆ ಮಾಡುವರು. ಅವರಿಗೆ ಮರಣದಷ್ಟೆ
ಜನನದ ಭಯವೂ ಇದ್ದಂತಾಯಿತು. ಈ ಭಯ ಎಂಬುದು ಇರುವವರೆಗೆ
ಮುಕ್ತಿ ಎಲ್ಲಿಯದು? ಮೇಲಾಗಿ ಭಯಪಡುವದೂ ಕೂಡ ಒಂದು ಕರ್ಮವೇ!
ಾಗಾದರೆ ಕರ್ಮಮುಕ್ತಿ ಅಥವಾ ಮುಕ್ತಿ ಎಂದರೇನು ಈ ಪ್ರಶ್ನೆ ಉಂಟಾಗು
ದು. ಕರ್ಮ ಮಾಡಿಯೂ. ಕರ್ಮಬಂಧನದಿಂದ, ಕರ್ಮಗಳ ಒಳಿತು ಕೆಡಕು
ರಿಣಾಮಗಳಿಂದ, ಕರ್ಮಗಳ ಪ್ರತಿಕ್ರಿಯೆಗಳಿಂದ ಅಂತರಂಗದಲ್ಲಿ (ಶರೀರತಃ
ಲ್ಲ, ವಿಶ್ವನಿಯಮಗಳಂತೆ ಆಯಾ ಪ್ರತಿಕ್ರಿಯೆಗಳು ಆಗಿಯೇತೀರುವವು.)
ುಕ್ತನಿರುವುದು ಇದೇ ಮುಕ್ತಿಯು. ನಾನು ಕರ್ಮಮಾಡಿಯೂ ಮಾಡದವ
ಂತೆ ಇರುವೆನು ಎಂದು ಶ್ರೀಕೃಷ್ಣನು ಹೇಳುವಾಗ ಇದೇ ಬಗೆಯ ಮಾನಸಿಕ
ಥವಾ ಆಂತರಿಕ ಮುಕ್ತಿಯ ಲಕ್ಷಣವನ್ನು ಹೇಳಿರುವನು. ವಿವಿಧ, ಕ್ರಮ
ಪ್ರಾಪ್ತ, ಪ್ರವಾಹಪತಿತ, ಇಲ್ಲವೆ ಕರ್ತವ್ಯರೂಪ ಕರ್ಮಗಳನ್ನು ಮಾಡುತ್ತಿ
ರೂ ಅಂತರ್ಮುಕ್ತಿಯನ್ನು ಮನುಷ್ಯನು ಯಾವ ರೀತಿ ಪಡೆಯಬಲ್ಲನು,
ಥವಾ ಸಕಲ ಕರ್ಮಗಳನ್ನು ಲೀಲಾಭಾವದಿಂದ ಮಾಡುತ್ತ ಅವುಗಳಿಂದ
ದ್ಧನಾಗದೆ ಹೇಗೆ ಇರಬಲ್ಲನು ಎಂಬ ಮುಂತಾದ ವಿಷಯವು ಪ್ರತ್ಯೇಕ
ರುವದು. ಅನಾಸಕ್ತಿ, ಕರ್ಮಫಲತ್ಯಾಗ, ಸಮರ್ಪಣಪೂರ್ವಕ ಕರ್ಮ, ಬ್ರಹ್ಮ
ರ್ಮಸಮಾಧಿ ಇತ್ಯಾದಿ, ಪ್ರತ್ಯೇಕವಾಗಿ ಅಥವಾ ಸಾಮೂಹಿಕವಾಗಿ, ಆ
ಗೆಯ ಮುಕ್ತಿಯ ಸಾಧನಗಳಿರುವವು. ಆದರೆ ಇಲ್ಲಿಯ ಮುಖ್ಯ ವಿಷಯ

ವೇನೆಂದರೆ, ಸ್ವರೂಪತಃ ಕರ್ಮದಿಂದ ಮುಕ್ತಿ ಪಡೆಯುವ ಗೋಜಿಗೆ ಹೋಗುವು ದೆಂದರೆ ವಿಶ್ವಕರ್ಮವನ್ನೆ ತಡೆಯಲು ಹವ್ಯಾಸಪಟ್ಟಂತೆ. ಅದು ಸಾಧ್ಯವಾದ ಮಾತಲ್ಲ. ಆದುದರಿಂದ ಸಕಲೇಂದ್ರಿಯಗಳಿಂದಲೂ ಯೋಗ್ಯ ಸತ್ಕರ್ಮ ಗಳನ್ನು ಮಾಡುತಿರುವಾಗಲೂ ಅವುಗಳಿಂದ ಆಂತರಿಕ ಅಲಿಪ್ತತೆಯನ್ನು ಹೇಗೆ ಪಡೆಯಬೇಕು, ಇದೇ ಪ್ರಯತ್ನವಿಷಯವಾಗಬಲ್ಲದು ಎಂಬದನ್ನು ಲಕ್ಷಿಸಬೇಕು. ಮನುಷ್ಯನು ಯಾವದೇ ಕರ್ಮವನ್ನು ಮಾಡುತಿರಲಿ, ಅವನು ಕೂತಲ್ಲಿ, ನಿಂತಲ್ಲಿ, ಹೋದಲ್ಲಿ ಬಂದಲ್ಲಿ, ಎಚ್ಚರದಲ್ಲಿ ಸ್ವಪ್ನದಲ್ಲಿ, ಸುಷುಪ್ತಿ ಯಲ್ಲಿ ತುರೀಯದಲ್ಲಿ ಸತತವೂ ನಿತ್ಯಾನಿತ್ಯದ ನಿರೀಕ್ಷಣೆ, ಸತ್ಯಾಸತ್ಯದ ಶೋಧನೆ, ಆತ್ಮಾನಾತ್ಮವಿವೇಚನೆ ಇವುಗಳನ್ನು ಸಾಕ್ಷೀಭಾವದಿಂದ ಮಾಡು ತಿದ್ದರೆ ಅವನು ಅಂತರ್ಮುಕ್ತನೆ ಆಗುವನು.

ವ್ಯಕ್ತಿಗಳ ಹಾಗೂ ಜನಸಾಮಾನ್ಯರ ಭೌತಿಕ, ನೈತಿಕ, ಅಧ್ಯಾತ್ಮಿಕ ವಿಕಾಸವೆ ಸಭ್ಯತೆ, ಸಂಸ್ಕೃತಿ ಎನಿಸುವದು.

—ಆಲ್‌ಬರ್ಟ್ ಶ್ವೀಟ್‌ಝರ್

ಸಮಾಜದ ಪ್ರಗತಿಯು ಸೃಜನಶೀಲ ಸ್ವತಂತ್ರ ವಿಚಾರಶಕ್ತಿಯುಳ್ಳ ವ್ಯಕ್ತಿಗಳ ಮೇಲೆ ಅವಲಂಬಿಸಿರುವಂತೆ ವ್ಯಕ್ತಿಗಳ ಮತ್ತು ವ್ಯಕ್ತಿ ಮತ್ವದ ವಿಕಾಸವು ಅನುಕೂಲ ಮತ್ತು ಪೋಷಕ ಸಮಾಜದ ಮೇಲೆ ಅವಲಂಬಿಸಿದೆ.

—ಆಲ್‌ಬರ್ಟ್ ಶ್ವೀಟ್‌ಝರ್

೬

ನಮ್ಮ ಸಮಾಜ

ಜೀವಕೋಟಿಯಲ್ಲಿ ಜೇನು, ಇರುವೆ, ಗೆದ್ದಲಿ ಮುಂತಾದ ಕೀಟಕಗಳು; ಜಿಂಕೆ, ಕಾಡು ಕೋಣ, ಆನೆ, ಮಂಗ ಇತ್ಯಾದಿ ಪಶುಗಳು ಸಮಾಜ ವನ್ನು ಕಟ್ಟಿಕೊಂಡು ವಾಸ ಮಾಡುವವು. ಅದೇ ರೀತಿ ಮನುಷ್ಯನು ಕೂಡ ಸಾಮಾಜಿಕ ಪ್ರಾಣಿ ಎನಿಸು ವನು. ಸಾಮಾಜಿಕವೆನಿಸುವ ಇತರ ಪ್ರಾಣಿಗಳ ಸಮಾಜಗಳಿಗೂ ಮಾನವ ಸಮಾಜಕ್ಕೂ ಇದ್ದ ಭೇದವೇನಂದರೆ ಆ ಸಮಾಜಗಳು ಲಕ್ಷಾಂತರ ವರುಷ ಗಳಿಂದ ಹಲವೊಂದು ಕಟ್ಟುನಿಟ್ಟುಗಳಿಗೆ ಒಳಗಾಗಿ ಒಂದೇ ರೀತಿ ನಡೆ ಯುತ್ತ ಬಂದಿರುವವು. ಅವೆಲ್ಲ ಆಯಾ ಪ್ರಾಣಿಗಳ ಹುಟ್ಟುಬುದ್ಧಿಯನ್ನೇ ಅವಲಂಬಿಸಿರುವವು. ಅವುಗಳಲ್ಲಿ ಯಾವ ವಿಕಾಸವೂ ಈ ವರೆಗೆ ಆದುದು ಕಂಡುಬರುವದಿಲ್ಲ. ಆದರೆ ಮನುಷ್ಯನ ಸಮಾಜಗಳಲ್ಲಿ ಕ್ರಮವಿಕಾಸವಾಗುತ್ತ ಇದ್ದುದು ಹಾಗೂ ವಿವಿಧತೆ ಉಂಟಾದುದು ಕಂಡುಬರುವವು.

ಮಾನವಕುಲ ಎಂಬುದು ಬಹಳ ದೊಡ್ಡದು. ಅದು ಈಗಲೂ ಸಂಖ್ಯೆ

ಯಿಂದ ಬೆಳೆಯುತ್ತಲೆ ಇರುವದು. ಅದು ಇಷ್ಟು ದೊಡ್ಡದು ಎಂದೂ ಇರಲಿಲ್ಲ ಎಂದು ವಿಜ್ಞಾನಿಗಳು ಹಾಗೂ ಇತಿಹಾಸಕಾರರು ಹೇಳುವರು. ಇಡೀ ಮಾನವ ಕುಲವು ಅಲ್ಲಲ್ಲಿ ವಾಸವಾಗಿರುವ ಮಾನವ ಸಮಾಜಗಳಿಂದ ಅಥವಾ ಗುಂಪುಗಳಿಂದ ಕೂಡಿ ಆಗಿರುವದು. ಸಮಾಜವೆಂದರೆ ಒಂದೇ ಪಿತಸಂಬಂಧವುಳ್ಳ, ಒಂದೇ ಭಾಷೆ-ಧರ್ಮ-ರೀತಿ-ನೀತಿಗಳುಳ್ಳ ಮಾನವರ ಗುಂಪು ಎಂದು ಸಾಮಾನ್ಯವಾಗಿ ಹೇಳಬಹುದು. ಮಾನವರಲ್ಲಿ ಇಂಥ ಸಮಾಜಗಳು ಮೊಟ್ಟ ಮೊದಲಿನಿಂದಲೆ ಇವೆ ಎಂದರೆ ತಪ್ಪಾಗಲಿಕ್ಕಿಲ್ಲ. ಮನುಷ್ಯನು ಕೇವಲ ಏಕಾಕಿಯಾಗಿದ್ದುದು ತೀರ ವಿರಳ. ತಪಸ್ಸು ಇತ್ಯಾದಿ ಯಾವದೋ ಒಂದು ಉದ್ದೇಶದಿಂದ ಎಲ್ಲಿಯಾದರೂ ಹಲವು ವ್ಯಕ್ತಿಗಳು ಒಬ್ಬಂಟಿಗರಾಗಿ ಇದ್ದುದು ಕಂಡುಬರಬಹುದು. ಅದು ಅಪವಾದಾತ್ಮಕವೇ ಸೈ. ಬಹುಶಃ ಕೆಲವೊಂದು ಕುಟುಂಬಗಳು, ಕುಟುಂಬಗಳ ಗುಂಪುಗಳು, ತಮ್ಮದೊಂದು ಸಮಾಜವನ್ನು ಕಟ್ಟಿಕೊಂಡು ವಾಸಮಾಡುವದೇ ವಾಡಿಕೆಯಾಗಿದೆ. ಇಂಥ ಸಮಾಜಗಳು ಸಣ್ಣವಿರಬಹುದು ದೊಡ್ಡವಿರಬಹುದು, ಹಳೆಯುವಿರಬಹುದು ಹೊಸವಿರಬಹುದು. ಮಾನವೀಯ ಸಮಾಜಗಳು ಯಾವ ಕಾರಣದಿಂದ ರಚಿತವಾಗುವವು, ಅವುಗಳ ಬೆಳವಣಿಗೆಗಳ ಕ್ರಮ-ಕಾರಣಗಳೇನು, ಅವು ಅತ್ಯಂತ ಊರ್ಜಿತಸ್ಥಿತಿಗೆ ಬರಬೇಕಾದರೆ ಯಾವ ಬಗೆಯ ಪರಿಸ್ಥಿತಿಯ ಅವಶ್ಯಕತೆ ಇದೆ, ಅವುಗಳ ನಾಶವು ಯಾವ ಕಾರಣಗಳ ಮೂಲಕ ಆಗುವದು ಇತ್ಯಾದಿ ವಿಷಯಗಳ ಪರಿಶೋಧ ಇನ್ನೂ ಸಾಕಷ್ಟು ಆಗಿಲ್ಲ. ಅದು ಇನ್ನೂ ನಡೆಯುತ್ತ ಇದೆ. ಸಮಾಜಶಾಸ್ತ್ರವೆಂಬುದು ಅಥವಾ ಸಮಾಜವಿಜ್ಞಾನವು ಸದ್ಯಕ್ಕೆ ಬಾಲ್ಯಾವಸ್ಥೆಯಲ್ಲಿಯೆ ಇದೆ. ಮೇಲಾಗಿ ಈ ವರೆಗೆ ಆಗಿಹೋದ ಇಲ್ಲವೆ ಈಗ ಇದ್ದ ಸಮಾಜಗಳ ರಚನೆ, ಇತಿಹಾಸ ಮುಂತಾದವುಗಳನ್ನು ಅಭ್ಯಸಿಸಿಯೆ ಈ ಶಾಸ್ತ್ರವನ್ನು ಕಟ್ಟಬೇಕಾಗಿದೆ. ಇದಕಾಗಿ ಪ್ರಯೋಗಗಳನ್ನು ಮಾಡುವದು ಸಾಧ್ಯವಾಗಿಲ್ಲ. ಪ್ರಯೋಗಗಳನ್ನು ಮಾಡದೆ ಕಟ್ಟಿದ ಪ್ರಮೇಯಗಳು ಸರಿಯಾಗಿಯೇ ಇರುವವೆಂದು ಎದೆಯ ಮೇಲೆ ಕೈಯಿಟ್ಟು ಹೇಳುವದು ಕಠಿಣ. ಹೀಗಿದ್ದರೂ ಸಮಾಜವಿಜ್ಞಾನದತ್ತ ವಿಚಾರಶೀಲರ ಲಕ್ಷ್ಯವು ಹೆಚ್ಚೆಚ್ಚು ಆಕರ್ಷಿತವಾಗುತಿರುವದು. ಮನುಷ್ಯನ ಭವಿತವ್ಯದ ದೃಷ್ಟಿಯಿಂದ ಸಮಾಜವಿಜ್ಞಾನವು ಅತ್ಯಂತ ಮಹತ್ವದ ಶಾಸ್ತ್ರವು ಎಂಬುದು ಎಲ್ಲರಿಗೂ ಈಗ ಪ್ರತೀತವಾಗುತಿರುವದು. 'ಮನುಷ್ಯನೆ ಮನುಷ್ಯನ ಎಲ್ಲಕ್ಕೂ ಮಹ

ದ್ದ ಅಭ್ಯಾಸವಿಷಯು' ಎಂಬ ಮಾತು ಹೆಚ್ಚೆಚ್ಚು ಸ್ಪಷ್ಟರೀತಿಯಿಂದ
ಜ್ಞಾನಿಗಳಿಗೆ ಗೋಚರವಾಗುತ್ತಿದೆ.

ಒಂದು ಕುಟುಂಬವೆ ಮನುಷ್ಯನ ಎಲ್ಲಕ್ಕೂ ಚಿಕ್ಕ ಹಾಗೂ ಸರ್ವಪ್ರಥಮ ಸಮಾಜ ಎಂದು ಹೇಳಬಹುದು. ಗಂಡ, ಹೆಂಡತಿ, ಅಪತ್ಯ ಅಥವಾ ಇದನ್ನೇ ಬೇರೆ ಶಬ್ದಗಳಲ್ಲಿ ಹೇಳುವುದಾದರೆ ತಂದೆ, ತಾಯಿ, ಮಕ್ಕಳು ಇದೇ ಒಂದು ಕುಟುಂಬ ಎನಿಸುವದು. ಇದೇ ಮನುಷ್ಯನ ನೈಸರ್ಗಿಕ ಸಮಾಜವು. ಒಂದೇ ವ್ಯಕ್ತಿಯಿಂದ ಸಮಾಜವಾಗಲಾರದು. ಒಂದೇ ವ್ಯಕ್ತಿ ಸಮಾಜವೆನಿಸದು. ಎರಡು ವ್ಯಕ್ತಿಗಳು ಕಲೆತಲ್ಲಿ, ಅವರು ಮಿತ್ರರಿರಲಿ, ಶತ್ರುಗಳಿರಲಿ, ಒಂದೇ ಕುಟುಂಬದವರಿರಲಿ, ಬಿಡಲಿ, ಅಲ್ಲಿ ಸಾಮಾಜಿಕ ಸಂಬಂಧವು ಉಂಟಾಯಿತು ಎನ್ನಬಹುದು. ಹುಟ್ಟದೊಡನೆ ತಾಯಿಯು ಮಗುವನ್ನು ಬಿಟ್ಟುಬಿಟ್ಟರೆ ಅದನ್ನು ಇನ್ನಾರೂ ಎತ್ತಿ ಸಾಕದಿದ್ದರೆ ಅದರ ಗತಿ ಏನಾಗುವದು ಎಂಬುದು ಎಲ್ಲರಿಗೂ ಗೊತ್ತಿದ್ದ ಮಾತು. ಸಮಾಜದ ವಿನಾ ವ್ಯಕ್ತಿಯ ಜೀವನವು ಸಹ ಅಶಕ್ಯ, ಅಂದ ಬಳಿಕ ಬೆಳವಣಿಗೆ ಇಲ್ಲವೆ ವಿಕಾಸ ಎಲ್ಲಿಂದ ಬರಬೇಕು?

ಇನ್ನು ವ್ಯಕ್ತಿಗಳ ಸಾಮಾಜಿಕ ಸಂಬಂಧವು ಯಾವ ಬಗೆಯದಿದ್ದರೆ ವಿಕಾಸಕ್ಕೆ ಅನುಕೂಲವಾಗುವದು ನೋಡುವ. ತಂದೆ ತಾಯಿ ಮಕ್ಕಳು ಇವರ ಸಂಬಂಧವು ಸ್ವಾಭಾವಿಕ ಪ್ರೇಮದ್ದಿರುವದು. ಆದುದರಿಂದ ಅವರಲ್ಲಿ ನಿರ್ಭಯತೆ, ಪರಸ್ಪರ ಹಿತದ ಸಲುವಾಗಿ ಆಸ್ಥೆ, ಪರಸ್ಪರರ ಸೇವೆ ಮಾಡುವ ಬುದ್ಧಿ, ತ್ಯಾಗವನ್ನು ಮಾಡಿಯಾದರೂ ಪರಸ್ಪರರನ್ನು ರಕ್ಷಿಸುವ ವೃತ್ತಿ, ಸಹಕಾರ-ಸಹಯೋಗಗಳನ್ನು ನೀಡುವ ಲವಲವಿಕೆ ಇವೆಲ್ಲವೂ ದೃಗ್ಗೋಚರ ವಾಗುವವು. ಇವುಗಳ ಮೂಲಕ ಆಯಾ ಕುಟುಂಬದ ಜೀವನವು ಸುರಕ್ಷಿತ, ಪ್ರೇಮಪೂರ್ಣ ಆಗುವದು. ಆ ಕುಟುಂಬವು ಹೆಚ್ಚು ಕಾರ್ಯಗಳನ್ನು ಮಾಡ ಬಲ್ಲದು, ಹೆಚ್ಚು ಸುಖಸೌಕರ್ಯಗಳನ್ನು ಪಡೆಯಬಲ್ಲದು. ಇದಲ್ಲದೆ ಕುಟುಂಬ ದಲ್ಲಿಯ ಪ್ರತಿವ್ಯಕ್ತಿಯ ಶಾರೀರಿಕ, ಮಾನಸಿಕ, ನೈತಿಕ, ಭಾವನಾತ್ಮಕ, ಕಲಾತ್ಮಕ, ಅಧ್ಯಾತ್ಮಿಕ ಜೀವನವಿಕಾಸಕ್ಕೆ ಅನುಕೂಲವಾದ ವಾತಾವರಣವು ದೊರಕುವದು. ಇದರ ಅರ್ಥ ನೈಸರ್ಗಿಕ ರೀತಿಯಿಂದ ಜೀವನವನ್ನು ನಡೆಸುತ್ತಿ ರುವ ಒಂದು ಮಾನವ ಕುಟುಂಬದಲ್ಲಿ ತಿಕ್ಕಾಟ, ವಿರೋಧ, ವಾದವಿವಾದ ಮುಂತಾದವುಗಳು ಇರುವುದೇ ಇಲ್ಲ ಎಂದಲ್ಲ, ಇವೆಲ್ಲ ಇರುವವು. ಅವೂ ನಿಸರ್ಗದ ಒಂದು ಭಾಗವೇ. ಆದರೆ ಕುಟುಂಬದಲ್ಲಿಯ ವ್ಯಕ್ತಿಗಳ ಮೂಲ

ಸಂಬಂಧವು ಪ್ರೇಮದ ತಳಹದಿಯ ಮೇಲೆ ನಿಂತಿರುವದರಿಂದ ಆಯಾ ವಿರೋಧಾದಿಗಳೊಳಗಿಂದ ಸಹ ಸಾಮಾನ್ಯವಾಗಿ ಎಲ್ಲರಿಗೂ ಉಪಕಾರಕವಾದ ಮಾರ್ಗವೆ ದೊರೆಯುವದು.

ಇಲ್ಲಿ, ಕುಟುಂಬದ ವ್ಯಕ್ತಿಗಳಲ್ಲಿ ಪ್ರೇಮದ ಸಂಬಂಧವಿರುವದು, ಎಂದರೆ ಏನು ಅರ್ಥ? ಸಂಕ್ಷಿಪ್ತದಲ್ಲಿ ಹೇಳುವುದಾದರೆ, ಏಕತ್ವದ ಭಾವನೆಯೆ ಪ್ರೇಮವೆನಿಸುವದು. ಮಕ್ಕಳ ಮೇಲೆ ತಾಯ್ತಂದೆಗಳು ಪ್ರೇಮ ಮಾಡುವರು ಎಂದರೆ, ತಾವು ಮಕ್ಕಳು ಒಂದೇ, ಅವುಗಳ ಆತ್ಯಂತಿಕ ಹಾಗೂ ಸರ್ವಾಂಗೀಣ ಕಲ್ಯಾಣವನ್ನು ಸಾಧಿಸುವುದೆಂದರೆಯೆ ತಮ್ಮ ಸ್ವಂತ ಕಲ್ಯಾಣವನ್ನು ಮಾಡಿಕೊಂಡಂತೆ, ಅವುಗಳ ಹಿತಸಂಬಂಧ ತಮ್ಮ ಹಿತಸಂಬಂಧ ಇವುಗಳಲ್ಲಿ ಏನೂ ಭೇದವಿಲ್ಲ, ಎಂಬ ಮುಂತಾದ ಭಾವನೆಗಳಿಂದ ಪ್ರೇರಿತರಿರುವರು, ಎಂದರ್ಥ. ಈ ಮೂಲಭಾವನೆ ದೃಢಮೂಲವಿದ್ದಲ್ಲಿ ಬೆಳೆವಣಿಗೆಗೆ, ವಿಕಾಸಕ್ಕೆ, ಸಮೃದ್ಧಿಗೆ ಅನುಕೂಲವಾದ ವಾತಾವರಣವು ಸ್ಥಾಪಿತವಾಗುವದು. ಯಾಕಂದರೆ ಪ್ರೇಮವಿದ್ದಲ್ಲಿ ಅಹಿಂಸೆ ಹಾಗೂ ನಿರ್ಭಯತೆ ಇವು ತಾವಾಗಿಯೆ ನೆಲೆಸುವವು. ಭದ್ರತೆಯ ಭಾವವು ದೃಢವಾಗುವದು, ಸಹಕಾರಕ್ಕೆ ಬಲ ಬರುವದು, ವಿಧಾಯಕ ಕಾರ್ಯವನ್ನು ಪರಮಾವಧಿಗೆ ಮುಟ್ಟಿಸಲು ಅನುವು ಆಗುವದು. ಕುಟುಂಬದ ವಾತಾವರಣವನ್ನೆ ಬಹಳ ಕುಟುಂಬಗಳಿಂದ ಕೂಡಿದ ಸಮಾಜದಲ್ಲಿ, ಬಹಳ ಸಮಾಜಗಳಿಂದ ಕೂಡಿದ ಒಂದು ದೇಶದಲ್ಲಿ, ಬಹಳ ದೇಶಗಳಿಂದ ಕೂಡಿದ ಮಾನವಕುಲದಲ್ಲಿ ನಿರ್ಮಿಸಬೇಕೆಂದು ಸಂತಸಜ್ಜನರು ಧರ್ಮಾತ್ಮರು ಯಾವಾಗಲೂ ಹೆಣಗುವರು. ವಿಶ್ವಕುಟುಂಬ ಎಂಬುದರ ಅರ್ಥವೂ ಇದೇ ಇರುವದು. ವಿಶ್ವವೇ ಒಂದು ಕುಟುಂಬವಾಗಿ ಪರಿಣಮಿಸಿದರೆ ಪ್ರೇಮದ ರಾಜ್ಯವು ಅಲ್ಲಿ ನೆಲೆಯಾಗಿ ನಿಲ್ಲಲು ಯಾವ ಆತಂಕವೂ ಇಲ್ಲ. ನಿಜವಾದ ಕುಟುಂಬದ ವಾತಾವರಣ ಎಂದರೆ ಈ ಬಗೆಯ ಪ್ರೇಮದ ವಾತಾವರಣವು. ಪ್ರೇಮದ ವಾತಾವರಣ ಎಂದರೆ ಪರಸ್ಪರರ ಹಿತಸಂಬಂಧಗಳ ಏಕತ್ವದ ಭಾವನೆ, ಎಲ್ಲರ ಭವಿತವ್ಯ ಒಂದು ಎಂಬ ಪ್ರತೀತಿ ಮತ್ತು ತದನುಸಾರ ವರ್ತನ.

ಎಲ್ಲ ಕುಟುಂಬಗಳಲ್ಲಿ ಅಥವಾ ಸಮಾಜಗಳಲ್ಲಿ ಈ ಬಗೆಯ ಪ್ರೇಮದ ವಾತಾವರಣ ಇದ್ದೇತೀರುವದೆಂದು ಹೇಳಲಿಕ್ಕಾಗುವದಿಲ್ಲ. ಆದುದರಿಂದ ಕೇವಲ ಕೌಟುಂಬಿಕ ವಾತಾವರಣ ಎಂಬ ಶಬ್ದಪ್ರಯೋಗ ಮಾಡುವದು

ಯೋಗ್ಯವಾಗಲಿಕ್ಕಿಲ್ಲ. ಪ್ರೇಮದ ವಾತಾವರಣ ಎಂದು ಹೇಳುವದೇ ನಮ್ಮ ಪೂರ್ಣ ಅರ್ಥವನ್ನು ವ್ಯಕ್ತಪಡಿಸಬಲ್ಲದು. ಉದಾ : ಕೌರವ-ಪಾಂಡವರು ಒಂದೇ ಕುಟುಂಬದವರು. ಆದರೆ ಮಹಾಭಾರತದ ಯುದ್ಧದ ವೇಳೆ ಮುಷ್ಟೊತ್ತಿಗೆ ಅವರಲ್ಲಿ ದ್ವೇಷಾಸೂಯೆ, ಮಾತ್ಸರ್ಯಾದಿಗಳ ತಾಂಡವ ನಡೆದು ಹೋಗಿತ್ತು. ಅದರ ಪರಿಣಾಮವು ಭಯಂಕರವಾದ ಪರಸ್ಪರ ಸಂಹಾರದಲ್ಲಿ ಆಯಿತು. ಯಾದವರ ಹಣೇಬರಹವೂ ಹಾಗೆಯೆ ಆಯಿತು. ಆದುದರಿಂದ ಮುಖ್ಯವಾಗಿ ಬೇಕಾದುದು ಪ್ರೇಮಸಂಬಂಧ, ಪ್ರೇಮದ ಸಾಮ್ರಾಜ್ಯ, ಏಕತ್ವದ ಪ್ರತೀತಿಯಿಂದ ತುಂಬಿದ ವಾತಾವರಣ, ಕೇವಲ ಕೌಟುಂಬಿಕ ಸಂಬಂಧವಲ್ಲ. ಕೌಟುಂಬಿಕಾದಿ ಅತ್ಯಂತ ಹತ್ತಿರದ ರಕ್ತಸಂಬಂಧಾದಿಗಳು ಇದ್ದರೂ ಪರಸ್ಪರರ ನಡುವೆ ಪ್ರೇಮವಿಲ್ಲದಿದ್ದರೆ, ಔದಾಸಿನ್ಯ ಇಲ್ಲವೆ ದ್ವೇಷವಿದ್ದರೆ, ಅಸೂಯಾದಿಗಳಿದ್ದರೆ ಒಂದು ಪರಸ್ಪರ ಭಯದ ವಾತಾವರಣವು ನಿರ್ಮಾಣವಾಗುವದು; ಪರಸ್ಪರ ನಾಶದ ವಿಚಾರ, ಇಲ್ಲವೆ ಪರಸ್ಪರರ ಶೋಷಣದಿಂದ ಲಾಭಪಡೆಯುವ ವಿಚಾರ ಇವುಗಳ ತಾಂಡವವು ಪ್ರಾರಂಭವಾಗುವದು. ಅವುಗಳ ಪರಿಣಾಮವು ಒಂದೇ ಒಂದು ಆಗಬಲ್ಲದು, ಸರ್ವನಾಶ. ಈ ರೀತಿ ಸಮಾಜದಲ್ಲಿ, ಆ ಸಮಾಜ ಒಂದೇ ಕುಟುಂಬದ್ದಿರಲಿ, ಲಕ್ಷಾಂತರ ಕುಟುಂಬಗಳದ್ದಿರಲಿ, ಪ್ರೇಮದ ವಾತಾವರಣದಿಂದ ನಿರ್ಭಯತೆ, ಸುರಕ್ಷಿತತೆ, ಅಹಿಂಸೆ, ಪರಸ್ಪರವಿಕಾಸಭಾವನೆ, ಸೇವೆ ಹಾಗೂ ತ್ಯಾಗದ ಪ್ರವೃತ್ತಿ, ಪರಾರ್ಥ ಸಾಧಿಸುವ ಲವಲವಿಕೆ, ರಚನಾಕಾರ್ಯದ ಬಗ್ಗೆ ಆಸ್ಥೆ, ಶ್ರೇಯಸಾಧನೆಯ ಮಹತ್ವಾಕಾಂಕ್ಷೆ ಇತ್ಯಾದಿ ಮನೆಮಾಡುವವು. ತದ್ವಿರುದ್ಧವಾಗಿ ದ್ವೇಷಾದಿಗಳ ವಾತಾವರಣವಿದ್ದರೆ ಪರಸ್ಪರಭಯ, ಹಿಂಸಾವೃತ್ತಿ, ವಿನಾಶದ ಭಾವನೆ, ಸ್ವಾರ್ಥಲೋಲುಪತೆ ಇತ್ಯಾದಿಗಳು ಪ್ರಕಟವಾಗುವವು.

ವ್ಯಕ್ತಿ ಹಾಗು ಸಮಾಜ ಇವುಗಳ ಸಂಬಂಧವು ಅವಿಭಾಜ್ಯವೆ ಇರುವದು. ವ್ಯಕ್ತಿಯನ್ನು ಬಿಟ್ಟರೆ ಸಮಾಜವಿಲ್ಲ, ಸಮಾಜವನ್ನು ಬಿಟ್ಟರೆ ವ್ಯಕ್ತಿಯಿಲ್ಲ. ಆದರೂ ಇವುಗಳ ಆದರ್ಶಸಂಬಂಧವು ಹೇಗಿರಬೇಕು ಎಂಬ ಬಗ್ಗೆ ಪುರಾತನಕಾಲದಿಂದಲೂ ಚರ್ಚೆ ನಡೆಯುತ್ತಲೆ ಇದೆ. ವ್ಯಕ್ತಿಯು ಸಮಾಜಕ್ಕಾಗಿಯೋ ಸಮಾಜವು ವ್ಯಕ್ತಿಗಾಗಿಯೋ ಎಂಬ ಪ್ರಶ್ನೆ ಮೇಲಿಂದ ಮೇಲೆ ತಲೆಯೆತ್ತುತಿದೆ. ಕೊನೆಯ ಧ್ಯೇಯವು ಯಾವುದು, ಆದರ್ಶ ವ್ಯಕ್ತಿ

ಯನ್ನು ನಿರ್ಮಾಣ ಮಾಡುವುದೋ ಆದರ್ಶ ಸಮಾಜವನ್ನು ನಿರ್ಮಾಣ ಮಾಡುವುದೋ? ವ್ಯಕ್ತಿಗೆ ಹೆಚ್ಚು ಮಹತ್ವ ಕೊಟ್ಟರೆ ಅವನ ಸ್ವಾರ್ಥಬುದ್ಧಿ ಬೆಳೆದು ಅವನು ಸಮಾಜದ ಉಪಯೋಗವನ್ನು ತನ್ನ ಪ್ರತಿಷ್ಠೆ ಹೆಚ್ಚಿಸಲು ಮಾಡುವನು ಎಂಬ ಭಯ. ಸಮಾಜಕ್ಕೆ ಮಹತ್ವಕೊಟ್ಟರೆ ಸಮಾಜವು ವ್ಯಕ್ತಿಯ ಸ್ವಾತಂತ್ರ್ಯವನ್ನು ಕಸಿದುಕೊಂಡು ಅವನನ್ನು ಯಂತ್ರದಲ್ಲಿಯ ಒಂದು ಕಿರಿಗಾಲಿಯನ್ನಾಗಿ ಮಾಡಿಬಿಡುವದು ಎಂಬ ಭಯ. ಇಂಥ ಪ್ರಸಂಗದಲ್ಲಿ ಸಮನ್ವಯ ದೃಷ್ಟಿಯೆ ನಮಗೆ ಉಪಯುಕ್ತವಾಗಬಲ್ಲದು. ಅದರ ವಿಚಾರ ಮಾಡುವ ಮೊದಲು ಆದರ್ಶವ್ಯಕ್ತಿ ಇಲ್ಲವೆ ಪೂರ್ಣವ್ಯಕ್ತಿ ಹಾಗೂ ಪರಿಪೂರ್ಣ ಸಮಾಜ ಇಲ್ಲವೆ ಆದರ್ಶಸಮಾಜ ಇದರ ಕಲ್ಪನೆಯೇನು ಇದನ್ನು ನೋಡುವದು ಅವಶ್ಯವು.

ಮಾನವಕುಲವು ಕ್ರಮವಿಕಾಸ ಮಾರ್ಗದಿಂದ ಯಾವ ದಿಕ್ಕಿಗೆ ನಡೆದಿದೆಯೋ ಅದೇ ಪ್ರತಿ ವ್ಯಕ್ತಿಯ ಪ್ರಗತಿಯ ದಿಕ್ಕು ಎಂಬುದು ಸಹಜವಿದೆ. ಹಿಂದಿನ ವಿಕಾಸದ ಪ್ರಗತಿ, ಇಂದಿನ ಧೋರಣ, ಮುಂದಿನ ಶಕ್ಯಾಶಕ್ಯತೆ ಇವೆಲ್ಲವುಗಳನ್ನು ನೋಡಿ ಮಾನವವ್ಯಕ್ತಿಯ ಆತ್ಯಂತಿಕ ಪೂರ್ಣತ್ವದ ಕಲ್ಪನೆಯನ್ನು ನಾವು ಕಟ್ಟಬೇಕಾಗುವದು. ಸಾಮಾನ್ಯವಾಗಿ ಹೇಳುವುದಾದರೆ ಪಶುಜೀವನದಿಂದ ಮಾನವನ ಮಾರ್ಗವಾಗಿ ದೈವೀಜೀವನದತ್ತ ಮನುಷ್ಯನ ಪಯಣ ಸಾಗಿದೆ ಎಂದು ಹೇಳಲು ಅಡ್ಡಿ ಇಲ್ಲ. ಇನ್ನೊಂದು ರೀತಿ ಬೇರೆ ಶಬ್ದಗಳಲ್ಲಿ ಮಾನವನ ಪ್ರಗತಿಯನ್ನು ಈಗಾಗಲೆ ವರ್ಣಿಸಿದ್ದಾಗಿದೆ. ವ್ಯಕ್ತಿಯು ತನ್ನ ಅಂತರ್ಬಾಹ್ಯ ಶಕ್ತಿಗಳ ಮೇಲೆ ಪೂರ್ಣ ಪ್ರಭುತ್ವವನ್ನು ಸ್ಥಾಪಿಸುವದು ಅದರ ಪ್ರಗತಿಯ ಮುಖ್ಯ ಲಕ್ಷಣವಿರುವದು. ಹೀಗೆ ಮಾಡುವಾಗ ತನ್ನ ಶಕ್ತಿಗಳ ಪೂರ್ಣ ಆಕಲನ ಹಾಗೂ ಅವುಗಳ ಮರ್ಯಾದೆಯ ಜ್ಞಾನ ಇವು ಆಗುವವು. ಇದಲ್ಲದೆ ತನ್ನ ವ್ಯಕ್ತಿತ್ವದ ಬಗ್ಗೆ ಜಿಜ್ಞಾಸೆಯುಂಟಾಗಿ ಕೊನೆಗೆ ಆತ್ಮಜ್ಞಾನದ ಮಾರ್ಗವು ತೆರೆಯುವದು. ಆಗ ಆತ್ಮಪರಮಾತ್ಮರ ಸಂಬಂಧವು ಹೊಳೆದು ಆತ್ಮದರ್ಶನವಾಗುವದು. ಇದೇ ಮಾರ್ಗದಿಂದ ಸಾಗಿ ಮನುಷ್ಯನು ಸ್ವರಾಟ್-ಸಾಮ್ರಾಟ್ ಆಗಬಲ್ಲನು. ಸ್ವ-ರಾಟ್ ಎಂದರೆ ಅಂತರ್ಜಗತ್ತಿನ ಅರಸು. ಸಾಮ್ರಾಟ್ ಎಂದರೆ ಬಾಹ್ಯ ಜಗತ್ತಿನ ಅರಸು, ಎಂದು ತಿಳಿಯಲು ಅಡ್ಡಿ ಇಲ್ಲ. ಈಗಿನ ಅವನ ಅಜ್ಞಾನ, ದ್ವಂದ್ವಗಳೊಳಗಾಗಿ ತಲ್ಲಣಿಸುತಿರುವ ಅವನ ದೀನ ಸ್ಥಿತಿ ಇವು ಹೋಗಿ

ಅವನು ದಿವ್ಯ ಆನಂದವನ್ನನುಭವಿಸುತ್ತ ಪರಮಾತ್ಮಾರ್ಪಣಪೂರ್ವಕವಾಗಿ ಲೀಲಾಭಾವದಿಂದ ಮುಕ್ತಕರ್ಮದಲ್ಲಿ ರತನಾಗುವನು. ಅವನ ಈಗಿನ ದೇಹ, ಮನ, ಭಾವಾದಿಗಳೆಲ್ಲ ಸೂಕ್ಷ್ಮ ಹಾಗೂ ದಿವ್ಯರೂಪವನ್ನು ಹೊಂದುವವು. ಅವನ ಶಾರೀರಿಕ, ಮಾನಸಿಕ, ನೈತಿಕ, ಆತ್ಮಿಕ ಶಕ್ತಿಗಳ ಕೇವಲ ವಿಕಾಸವಷ್ಟೇ ಅಲ್ಲ, ಅವು ಹೆಚ್ಚು ತೇಜೋಮಯವೂ ಅವನ ದೇವತ್ವಕ್ಕೆ ಅನುರೂಪವೂ ಆಗುವವು. ಇದು ಪೂರ್ಣಮಾನವನ ರೇಖಾಚಿತ್ರ ಎನ್ನಬಹುದು.

ಇಂಥ ಮಾನವ ವ್ಯಕ್ತಿಗಳಿಂದ ಕೂಡಿದ ಸಮಾಜವೆ ನಿಜವಾಗಿ ಆದರ್ಶ ಸಮಾಜ ಇಲ್ಲವೆ ದಿವ್ಯಸಮಾಜ ಎನಿಸಿಕೊಳ್ಳಲು ಅರ್ಹವಾದುದು. ಸಮಾಜವೆಂಬುದೊಂದು ಪ್ರತ್ಯೇಕ ಸ್ವತಂತ್ರ ವಸ್ತು ಇಲ್ಲ. ವಿಶಿಷ್ಟಸಂಬಂಧಗಳಿಂದ ಸಂಬದ್ಧವಾದ ವ್ಯಕ್ತಿಗಳ ಗುಂಪೇ ಸಮಾಜವೆನಿಸುವದು. ಒಂದು ರೀತಿ ನೋಡಿದರೆ ಸಮಾಜವು ಆದರ್ಶವ್ಯಕ್ತಿಗಳ ನಿರ್ಮಾಣಕ್ಕಾಗಿ ಸಂಘಟಿತವಾದ ಒಂದು ಮಾನವಸಮೂಹವಿಶೇಷವು. ವ್ಯಕ್ತಿಯು ಸಮಾಜದ ಸೇವೆ ಮಾಡಬೇಕು, ಅಥವಾ ವ್ಯಕ್ತಿಯು ಸಮಾಜದ ಧಾರಣೆ ಪೋಷಣೆಗಾಗಿ ಬಾಳಬೇಕು ಎಂದು ಹೇಳುವಾಗ ಕೂಡ ವ್ಯಕ್ತಿಯು ಸಮಾಜದ ಘಟಕಗಳಾದ ವ್ಯಕ್ತಿಗಳ ಸೇವೆ ಮಾಡಬೇಕು, ಅವರ ಧಾರಣೆ ಪೋಷಣೆ ಮಾಡಬೇಕು ಎಂದು ಅರ್ಥವಾಗುವದು. ಸಮಾಜವನ್ನು ಸಂಘಟಿಸುವದಾಗಲಿ, ಅದನ್ನು ವಿಶಿಷ್ಟ ನಿಯಮನಿರ್ಬಂಧನೆಗಳಿಂದ ಗಟ್ಟಿಯಾಗಿ ಇರುವಂತೆ ಮಾಡುವದಾಗಲಿ, ಆಯಾ ಸಮಾಜದಲ್ಲಿಯ ವ್ಯಕ್ತಿಗಳ ಕಲ್ಯಾಣಕ್ಕಾಗಿಯೆ ಅಲ್ಲವೆ? ಆದರ್ಶ ಸಮಾಜ ಅಥವಾ ಪೂರ್ಣಸಮಾಜ ಅಂದರೆ ಪೂರ್ಣವ್ಯಕ್ತಿಗಳನ್ನು, ಆತ್ಯಂತಿಕ ವಿಕಾಸ ಹೊಂದಿದ ವ್ಯಕ್ತಿಗಳನ್ನು, ನಿರ್ಮಾಣಮಾಡಬಲ್ಲ ಮಾನವ ಸಮೂಹವಿಶೇಷ ಎಂದೇ ಹೇಳಬೇಕಾಗುವದು.

ಈ ದೃಷ್ಟಿಯಿಂದ ನೋಡಿದರೆ ವ್ಯಕ್ತಿ ಹಾಗೂ ಸಮಾಜ ಇವುಗಳಲ್ಲಿಯ ವಿರೋಧವು ಇಲ್ಲದಂತಾಗುವದು. ಒಂದು ವ್ಯಕ್ತಿಯ ಹಿತ ಹಾಗೂ ಅವನ ಕುಟುಂಬದೊಳಗಿನವರ ಹಿತ ಇವುಗಳ ನಡುವೆ ಯಾವ ಸಂಬಂಧವಿರಬೇಕೋ ಅದೇ ಸಂಬಂಧವು ವ್ಯಕ್ತಿ ಹಾಗೂ ಸಮಾಜ ಇವುಗಳ ನಡುವೆ ಇರಬೇಕು ಎನ್ನಬೇಕಾಗುವದು. ಅರ್ಥಾತ್ ಅದು ಯೋಗ್ಯ ಮತ್ತು ಆದರ್ಶಸಂಬಂಧವೆನಿಸಬೇಕಾದರೆ ಪ್ರೇಮದ ಸಂಬಂಧವೇ ಇರಬಲ್ಲದು. ಒಂದೇ ಒಂದು ಕುಟುಂಬದಲ್ಲಿಯ ವ್ಯಕ್ತಿಗಳು ಪರಸ್ಪರರ ಹಿತವನ್ನು ಸಾಧಿಸಲು ಯಾವ

ಪ್ರಕಾರವಾಗಿ ಹೆಣಗಿ ಅದು ತಮ್ಮ ಸ್ವಭಾವಸಿದ್ಧ ಸ್ವಧರ್ಮೋಚಿತ ಕರ್ತವ್ಯ ವೆಂದು ತಿಳಿಯುವರೊ ಅದೇ ರೀತಿ ಸಮಾಜವೆಂಬ ವಿಸ್ತರಿತ ಹಾಗೂ ವಿಶಾಲ ವಾದ ಕುಟುಂಬದಲ್ಲಿಯ ವ್ಯಕ್ತಿಗಳೂ ಹೆಣಗಾಡುವದು ಆದರ್ಶಸಮಾಜದ ಲಕ್ಷಣವೆನಿಸುವದು. ಆದರ್ಶಸಮಾಜದಲ್ಲಿ ಒಬ್ಬ ವ್ಯಕ್ತಿಯ ಹಿತ ಬೇರೆ ಸಮಾಜದಲ್ಲಿಯ ಇತರ ವ್ಯಕ್ತಿಗಳ ಹಿತ ಬೇರೆ ಎಂದು ತಿಳಿದು ನಡೆಯುವದು ಸಾಧ್ಯವಿಲ್ಲ. ಹಾಗೆ ತಿಳಿದ ಪಕ್ಷದಲ್ಲಿ ಪ್ರತಿ ವ್ಯಕ್ತಿಯ ಹಿತದ ವಿರುದ್ಧ ಆಯಾ ಸಮಾಜದಲ್ಲಿಯ ಇತರ ಎಲ್ಲ ವ್ಯಕ್ತಿಗಳ ಹಿತ (ಒನ್ ಅಗೇನ್ಸ್ಟ ಆಲ್) ಎಂಬ ಅನವಸ್ಥಾಪ್ರಸಂಗವು ಉಂಟಾಗಿ ಸಮಾಜವೆ ಕುಪ್ಪಳಿಸಿ ನೆಲಕ್ಕೆ ಬೀಳುವದು. ಆದರ್ಶಕುಟುಂಬಕ್ಕೆ ಅನ್ವಯಿಸಬಹುದಾದ ಹಾಗೂ ಪೂರ್ಣ ವಿಕಸಿತ ಕುಟುಂಬದ ವ್ಯಕ್ತಿಗಳಲ್ಲಿ ಇರಬೇಕಾದ ಆದರ್ಶಸಂಬಂಧವೆ ಒಂದು ಆದರ್ಶಸಮಾಜದಲ್ಲಿಯ ವ್ಯಕ್ತಿಗಳ ನಡುವೆ ಇರುವದು ಅವಶ್ಯ. ಇಡೀ ಮಾನವಕುಲಕ್ಕು ಇದೇ ಅನ್ವಯಿಸುವದು.

ಇನ್ನು ಪ್ರಸಂಗವಶಾತ್ ಒಂದು ಕುಟುಂಬದಲ್ಲಿ ಕೂಡ ಹಲವು ವ್ಯಕ್ತಿ ಗಳು ಹೆಚ್ಚು ದುಡಿಯುವ, ದುಃಖಪಡುವ, ಪ್ರಾಣಕೊಡುವ ಸಂದರ್ಭಗಳು ಉಂಟಾಗುವವು. ಆಗ ಆಯಾ ವ್ಯಕ್ತಿಗಳು ಆನಂದದಿಂದ ಹಾಗೂ ಕರ್ತವ್ಯ ಬುದ್ಧಿಯಿಂದ ಆಯಾ ಪ್ರಸಂಗಗಳಿಗೆ ಎದೆಗೊಡುವರು. ಸುಖಕ್ಕೆ ನಾನು ದುಃಖಕ್ಕೆ ನನ್ನಣ್ಣ, ಎಂಬ ನೀತಿ ಪ್ರೇಮದ ಮೇಲೆ ಆಧಾರಿತವಾಗಿರುವ ಕುಟುಂಬದಲ್ಲಿ ನಡೆಯಲಾರದು. ಸಮಾಜದಲ್ಲಿಯೂ ಕೂಡ ಅದರಲ್ಲಿಯ ವ್ಯಕ್ತಿಗಳ ಸಂರಕ್ಷಣಕ್ಕಾಗಿ, ಧಾರಣೆಪೋಷಣೆಗಾಗಿ ಹಲವಾರು ವ್ಯಕ್ತಿಗಳು ತಮ್ಮ ಸರ್ವಸ್ವವನ್ನು ಅರ್ಪಿಸುವ ಪ್ರಸಂಗಗಳು ಮೇಲಿಂದ ಮೇಲೆ ಬರುವವು. ಆಗ ವ್ಯಕ್ತಿಗಳು ಹಿಂದೆ ಮುಂದೆ ನೋಡಿ ನಡೆಯಲಾಗದು. ವ್ಯಕ್ತಿಗಳ ವಿವಿಧ ಶಕ್ತಿಗಳ ಪೂರ್ಣವಿಕಾಸಕ್ಕೆ ಎಡೆಕೊಡುವ ಹೊಣೆ ಆದರ್ಶಸಮಾಜದ ಮೇಲೆ ಇದ್ದಂತೆ ಆಯಾ ಸಮಾಜದ ಅಂದರೆ ಅದರಲ್ಲಿಯ ವ್ಯಕ್ತಿಗಳ ಹಿತ ಸಂಬಂಧಗಳ ಪ್ರಗತಿಗಾಗಿ ಪ್ರಾಣವನ್ನು ಕೂಡ ಕೊಡುವ ಪ್ರಸಂಗ ಉಂಟಾ ದಲ್ಲಿ ಅದನ್ನು ಸ್ವೇಚ್ಛೆಯಿಂದ ಅರ್ಪಿಸುವ ಸಿದ್ಧತೆ ವ್ಯಕ್ತಿಯಲ್ಲಿರಲಿಕ್ಕೆಬೇಕು. ಇಂಥ ವ್ಯಕ್ತಿಗೆ. ಹಾಗೂ ಇಂಥ ಸಮಾಜಕ್ಕೆ ಆದರ್ಶವ್ಯಕ್ತಿ ಮತ್ತು ಆದರ್ಶ ಸಮಾಜ ಎನ್ನಲು ಯಾವ ಅಡ್ಡಿಯೂ ಇಲ್ಲ.

ಈ ಒರೆಗಲ್ಲಿಗೆ ಹಚ್ಚಿ ನೋಡಿದರೆ ಈಗಿದ್ದ ಯಾವ ಸಮಾಜಗಳೂ

ಆದರ್ಶವೆನಿಸಲು ಅರ್ಹವಿಲ್ಲ ಎಂಬುದು ಸ್ಪಷ್ಟವಿದೆ. ಪ್ರತಿಯೊಂದು ಸಮಾಜ ದಲ್ಲಿಯೂ ಅನೇಕ ತರದ ದೋಷಗಳು ತುಂಬಿಕೊಂಡಿವೆ. ಅವುಗಳನ್ನು ಹೋಗಲಾಡಿಸುವ ಪ್ರಯತ್ನಗಳು ನಡೆದೇ ಇವೆ. ಆಧುನಿಕಸಮಾಜ ಶಾಸ್ತ್ರವೇತ್ತರು ಸಾಮಾನ್ಯವಾಗಿ ಪ್ರಚಲಿತವಿರುವ ದೋಷಗಳ ಮೂಲವೇನು ಎಂಬುದನ್ನು ಗೊತ್ತುಹಚ್ಚಲು ಯತ್ನಿಸುತಿರುವರು. ಆರ್ಥಿಕ-ಸಾಮಾಜಿಕ ವಿಷಮತೆ, ಉಚ್ಚ ನೀಚ ಭಾವಗಳು, ಒಂದೇ ಗುಂಪಿನಲ್ಲಿರುವವರ ನಡುವೆ ಸಹ ಪೂರ್ವಗ್ರಹಗಳ ಮೂಲಕ ಅವಿಶ್ವಾಸ, ಅಧಿಕಾರದ ಕೇಂದ್ರೀಕರಣ, ಹೀಗೆ ಅನೇಕಾನೇಕ ಕಾರಣಗಳನ್ನು ಅವರು ಎತ್ತಿ ತೋರುವರು. ಆದುದ ರಿಂದಲೆ ಪ್ರತಿಯೊಬ್ಬ ದಾರ್ಶನಿಕನು, ಧರ್ಮಪ್ರವರ್ತಕನು, ಸಮಾಜಸುಧಾರಕನು ಭವಿಷ್ಯವಾದಿಯು ಈಗಿದ್ದ ಸಮಾಜವನ್ನು ಬದಲು ಮಾಡಿ ಹೊಸ ಸಮಾಜ ರಚನೆ ಮಾಡಬೇಕೆನ್ನುವನು. ಆ ಬಗ್ಗೆ ವಿವಿಧ ಉಪಾಯಗಳನ್ನು ಸೂಚಿ ಸುವನು. ಹಲವರು ವರ್ಗವಿಹೀನ ಜಾತಿವಿಹೀನ ಸಮಾಜವನ್ನು ರಚಿಸ ಬೇಕೆಂದರೆ ಇನ್ನೊಬ್ಬರು ಶಾಸನವಿಹೀನ ಸಮಾಜವಿರಬೇಕು ಎನ್ನುವರು. ಮತ್ತೆ ಕೆಲವರು ಶೋಷಣವಿಹೀನ ಸಮಾಜವೆ ಶ್ರೇಷ್ಠ ಎನ್ನುವರು. ವ್ಯಕ್ತಿಸ್ವಾತಂತ್ರ್ಯ, ಆರ್ಥಿಕ-ಸಾಮಾಜಿಕ-ಧಾರ್ಮಿಕ ಸಮಾನತೆ ಇವೇ ಹೊಸ ಸಮಾಜದ ತಳಹದಿಯಾಗಿರಬೇಕೆಂದು ಮತ್ತೆ ಕೆಲವರು ಪ್ರತಿಪಾದಿಸುವರು. ಕೆಲವರು ಸರ್ವೋದಯದ ತತ್ವಗಳನ್ನು ಬಿತ್ತರಿಸುವರು. ಆದರೆ ಇದ್ದ ದೋಷಗಳು ಇಲ್ಲದಂತಾದಾಕ್ಷಣಕ್ಕೆ ಹೊಸ ಗಟ್ಟಿಯಾದ ತಳಹದಿಯ ಮೇಲೆ ಸಮಾಜವು ರಚಿತವಾದಂತಾಗಲಾರದು. ನಿಷೇಧಕ ಉಪಾಯಗಳೊಡನೆ ವಿಧಾಯಕರಚನೆಯೂ ನಡೆಯಲಿಕ್ಕೆಬೇಕು. ಆ ರಚನೆ, ಪರಸ್ಪರಪ್ರೇಮದ ಆಧಾರದ ಮೇಲೆಯೆ ಸ್ಥಿರವಾಗಿ ನಿಲ್ಲಬಲ್ಲದು. ಆದರೆ ಈ ಮಾತು ಕೇವಲ ಕಟ್ಟಳೆಗಳಿಂದ ಆಗತಕ್ಕ ವಿಷಯವಲ್ಲ. ದೋಷಗಳನ್ನು ಇಲ್ಲದಂತೆಮಾಡಲು ಅಥವಾ ದೋಷಿಗಳನ್ನು ದಂಡಿಸಲು ಕಟ್ಟಳೆ ಉಪಯುಕ್ತವಾಗಬಲ್ಲದು. ಸದ್ಗುಣಗಳ ಪ್ರಸಾರ ಇಲ್ಲವೆ ಪ್ರೇಮದ ಹಬ್ಬುಗೆ ಇವು ಕಟ್ಟಳೆಯಿಂದ ಆಗುವ ಮಾತುಗಳಲ್ಲ. ಅವು ಒಳ್ಳೆ ಸಂಸ್ಕಾರ, ಶಿಕ್ಷಣ, ಸಂತವಾಣಿ, ಸದಾ ಚಾರದ ಉದಾಹರಣೆ, ಇವುಗಳಿಂದಲೆ ಆಗಬಲ್ಲವು.

ಒಂದು ದೃಷ್ಟಿಯಿಂದ ಸೂಕ್ಷ್ಮವಾಗಿ ನೋಡಿದರೆ ಸಮಾಜದಲ್ಲಿಯ ದೋಷಗಳೆಲ್ಲ ವ್ಯಕ್ತಿಗಳ ಆಂತರಿಕ ದೋಷಗಳ ಪ್ರತಿಬಿಂಬಗಳೇ ಸೈ. ಉದಾ:

ನಾವು ಶಾಸನವಿಹೀನ ಸಮಾಜವಿರಬೇಕು, ಎನ್ನುತ್ತೇವೆ. ಶಾಸನದ ಅವಶ್ಯಕತೆಯೆ ಇಲ್ಲದಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದರೆ ನಿಜವಾಗಿಯೂ ಶಾಸನ ಎಂಬುದು ಬೇಡವೆ ಬೇಡ. ಈ ಬಗೆಯ ಸಮಾಜದ ಕೇವಲ ಕಲ್ಪನೆ ಮಾಡುವುದರಿಂದ ಅಥವಾ ಅದನ್ನು ಒಳ್ಳೆ ಸುಂದರ ಭಾಷೆಯಿಂದ ವರ್ಣಿಸುವದರಿಂದ ಅದು ಅಸ್ತಿತ್ವದಲ್ಲಿ ಬರಲಾರದು. ಸಮಾಜದಲ್ಲಿಯ ಪ್ರತಿಯೊಬ್ಬ ವ್ಯಕ್ತಿಯ ಹೃದಯದಲ್ಲಿ ವಿವೇಕದ ಸಾಮ್ರಾಜ್ಯವು ಸ್ಥಾಪಿತವಾಗಿ ಅವನು ತನ್ನ ಸಮಾಜಬಾಂಧವರೊಡನೆ ಪ್ರೇಮಪೂರ್ವಕವಾದ ವರ್ತನೆಯನ್ನು ಮಾಡಲಾರಂಭಿಸಿದನೆಂದರೆ ಶಾಸನದ ಅವಶ್ಯಕತೆ ಉಳಿಯಲಿಕ್ಕಿಲ್ಲ. ಅಲ್ಲಿಯವರೆಗೆ ಶಾಸನ ಎಂಬುದು ಒಂದಿಲ್ಲೊಂದು ಸ್ವರೂಪದಲ್ಲಿ ಇದ್ದೇತೀರಬೇಕಾಗುವದು. ಸಮಾಜದಲ್ಲಿಯ ವ್ಯಕ್ತಿಗಳ ಸ್ವಾರ್ಥ, ಅನ್ಯಾಯಮಾಡುವ ಪ್ರವೃತ್ತಿ ಇವೇ ಶಾಸನವನ್ನು ಅವಶ್ಯಗೊಳಿಸುವವು. ಅವು ಮಾಯವಾದ ದಿನವೆ ಶಾಸನಕ್ಕೆ ರಜೆಕೊಡಲು ಅಡ್ಡಿ ಇಲ್ಲ. ಅಂದಬಳಿಕ ಪ್ರತಿಯೊಬ್ಬ ಸಮಾಜಸೇವಕನೆದುರು ಇರುವ ಮುಖ್ಯ ಪ್ರಶ್ನೆಯೆಂದರೆ ಕೇವಲ ಕಟ್ಟಳೆ ಮಾಡುವುದಲ್ಲ ಅಥವಾ ಒಂದು ಸುಂದರ ಕಾಲ್ಪನಿಕ ಸಮಾಜದ ಚಿತ್ರವನ್ನು ರೇಖಿಸುವದಲ್ಲ. ಆದರೆ ವಕ್ತಿಗಳ ಅಂತರಂಗದಲ್ಲಿಯ ಯಾವ ದುಃಷ್ಪ್ರವೃತ್ತಿಗಳ ಮೂಲಕ ಸಮಾಜದಲ್ಲಿ ದೋಷಗಳು ಉಂಟಾಗುವವೋ ಆ ಪ್ರವೃತ್ತಿಗಳ ಪಲ್ಲಟ ಹಾಗೂ ಸತ್ಪ್ರವೃತ್ತಿಗಳ ಸ್ಥಾಪನೆ ಅರ್ಥಾತ್ ಪ್ರೇಮದ ಸ್ಥಾಪನೆ ಇದೇ ಅವನ ಮುಖ್ಯ ಹಾಗೂ ಏಕಮೇವ ಕರ್ತವ್ಯವಾಗಿರುವದು. ಅದನ್ನು ಅವನು ತನ್ನ ಸ್ವಂತ ಆಚರಣೆಯಿಂದ ಹಾಗೂ ಉದಾಹರಣೆಯಿಂದ ಮಾಡುವದಲ್ಲದೆ ಮನುಷ್ಯಸ್ವಭಾವದಲ್ಲಿಯೇ ಬದಲಾವಣೆಯಾಗಬೇಕೆಂಬ ಪ್ರಯತ್ನವನ್ನು ಕೂಡ ಅವನು ಧ್ಯಾನಾದಿ ಯೋಗಸಾಧನಗಳಿಂದ ಮಾಡುವದು ಅವಶ್ಯತೋರುವದು.

ಇಹಲೋಕದ ಮರ್ತ್ಯರ ಯಾತ್ರೆಗೆ ಬರುವವರು ಮೂಬಗೆಯ ಜನರು: ಹಲವರು ಕೊಡಕೊಳ್ಳಲು ಬಂದವರು, ಹಲವರು ಆಟನೋಟದಲ್ಲಿ ನಲಿದಾಡಲು ಬಂದವರು, ಮತ್ತೆ ಹಲವರು ಕೇವಲ ನೋಟಗಾರರು-ಇವರೇ ತತ್ವಜ್ಞರು.

— ಫಾಯಥ್ಯಾಗೋರಸ್

(೭)

ಯಾತ್ರೆಯ ತುದಿಮೊದಲುಗಳು

ಈ ನಮ್ಮ ಜೀವನ ಯಾತ್ರೆಯು ಜನ್ಮದಾರಭ್ಯ ಸಾಯುವ ವರೆಗೆ ನಡೆಯುವದು ಎಂಬುದಂತೂ ಸ್ಪಷ್ಟ. ಆದರೆ ನಾವು ಜನ್ಮಕ್ಕೆ ಬರುವ ಮೊದಲು ಹಾಗೂ ಸತ್ತ ಬಳಿಕ ನಮ್ಮ ಯಾತ್ರೆಯ ಗತಿಯೇನು, ಅಥವಾ ನಮ್ಮ ಗತಿಯಾದರೂ ..ನಿರುವದು, ಇದನ್ನು ನಿರ್ಧಾರವಾಗಿ ಹೇಳುವದು ಕಠಿಣವಿರುವದು. ಆದರ ..ಬಗ್ಗೆ ಯಾವದೇ ನಿಶ್ಚಿತವಾದ ಸಿದ್ಧಾಂತಗಳನ್ನು ಕಟ್ಟಿ ಅವುಗಳನುಸಾರವಾಗಿ ..ನಮ್ಮ ಸಾಧನಪಥದಲ್ಲಿ ಹೆಜ್ಜೆಯಿಡಬೇಕೆಂದರೆ ಅದು ಕಾಲಾಂತರದ ಮಾತಾ..ಗುವದು. ಆದುದರಿಂದ ಅವುಗಳ ಬಗ್ಗೆ ವಿಚಾರಮಾಡುತ್ತ ಇದ್ದು ನಮ್ಮ ..ಸಾಧನವನ್ನು ನಡೆಸುತ್ತಲೆ ಇರುವುದು ಸಮಂಜಸವಾಗುವದು.

ಜೀವನವೆಂಬುದು ಜನ್ಮದಿಂದ ಆರಂಭಿಸಿದರೂ ಸುಮಾರು ಹದಿನೆಂಟು ..ವರುಷ ಆಗಿ ವಯಸ್ಸಿಗೆ ಬರುವತನಕ ಮನುಷ್ಯನು ಕಾಯದೆಯ ಪ್ರಕಾರ ..ಹಲವಾರು ಮಾತುಗಳ ಬಗ್ಗೆ ಹೊಣೆಗಾರನಾಗಲಾರನೆಂದೇ ಸಮಾಜವು ..ಭಾವಿಸುವದು. ಅದೇ ರೀತಿ ಮನುಷ್ಯನಿಗೆ ತನ್ನ ಜೀವನದ ಉದ್ದೇಶ ಮುಂತಾ..ದವುಗಳ ಅರಿವು ಆಗುವ ವರೆಗೆ ಆವನು ಬುದ್ಧಿಪುರಃಸರವಾಗಿ ಯಾತ್ರೆಗೆ ..ಹೊರಟ ಸಾಧಕನಲ್ಲ ಎನ್ನಬೇಕಾಗುವದು. ಆತ್ಯಂತಿಕ ಸತ್ಯಶೋಧನೆ ತನ್ನ ..ಗುರಿ, ಪರಮಾವಧಿಯ ಉನ್ನತಿಯನ್ನು ಪಡೆಯುವದು ತನ್ನ ಕರ್ತವ್ಯ

ಇತ್ಯಾದಿ ಮಾತುಗಳ ನಿರ್ಧಾರವು ಅವರವರ ಮನಸ್ಸಿನಲ್ಲಿ ಆಗುವವರೆಗೆ ನಿಜವಾದ ಯಾತ್ರೆಗೆ ಪ್ರಾರಂಭವಾಯಿತೆನ್ನುವದು ಕಠಿಣ. ಆದುದರಿಂದ ಅಂಥ ಜಾಗ್ರತಿ, ಆ ಅರಿವು, ಆ ನಿರ್ಧಾರ ಇವೇ ಯಾತ್ರೆಯ ನಿಜವಾದ ಪ್ರಾರಂಭದ ಕುರುಹು. ಅದಕ್ಕೂ ಮೊದಲು ಆಯಾ ಮನುಷ್ಯನ ಮೇಲೆ ಆದ ಸಂಸ್ಕಾರಗಳೆಲ್ಲ ಸಾಧಕಬಾಧಕವಾಗಿ ಪರಿಣಾಮವನ್ನುಂಟುಮಾಡೇ ಮಾಡುವವು. ಅದು ತಪ್ಪಿದ್ದಲ್ಲ. ಅದು ಯಾತ್ರೆಯ ಅಜ್ಞಾತಕಾಲ; ಜಾಗ್ರತಿಯ ನಂತರದ ಕಾಲವು, ಮೇಲಿನ ನಿಜವಾದ ಯಾತ್ರೆಯ ಕಾಲವು.

ಇನ್ನು ಯಾತ್ರೆಯ ತುದಿ ಯಾವುದು? ಯಾತ್ರೆಯ ಗುರಿಯನ್ನು ಮುಟ್ಟುವದೆ ಅದರ ತುದಿಯು. ಕಾಶೀಯಾತ್ರೆಗೆ ಹೊರಟವರು ಕಾಶಿಯನ್ನು ಮುಟ್ಟಿದರೆ, ಅವರು ತಮ್ಮ ಯಾತ್ರೆಯನ್ನು ಮುಗಿಸಿದಂತಾಗುವದು. ನಮ್ಮ ಯಾತ್ರೆಯ ಗುರಿ ಯಾವದೊಂದು ತೀರ್ಥ ಇಲ್ಲವೆ ಕ್ಷೇತ್ರವಲ್ಲ; ಮಾನವೀ ವಿಕಾಸದ ಪೂರ್ಣತೆ ಹಾಗು ಚಿತ್ತದ ಕಟ್ಟುನಿಟ್ಟಾದ ಕೊನೆಯ ಮೆಟ್ಟಲು, ಇದೇ ನಮ್ಮ ಗುರಿ. ಸಾಯುವ ಪೂರ್ವದಲ್ಲಿಯೆ ಆ ಚಿದವಸ್ಥೆಯನ್ನು ಯಾತ್ರಿಕನು ಪಡೆದರೆ ಅವನು ಧನ್ಯನು. ಆ ಬಳಿಕ ಉಳಿದ ಆಯುಷ್ಯವನ್ನೆಲ್ಲ ಅವನು ತಾನು ತುಳಿದ ಮಾರ್ಗ, ಮುಟ್ಟಿದ ಗುರಿ ಇವುಗಳನ್ನು ಇತರರಿಗೆ ತಿಳಿಸಿ ಹೇಳುವದರಲ್ಲಿ ಕಳೆದು ಕೃತಾರ್ಥನಾಗಬಲ್ಲನು.

ಸಾಮಾನ್ಯ ಯಾತ್ರಿಕರಿಗೂ ನಮ್ಮ ಯಾತ್ರಿಕನಿಗೂ ಇನ್ನೊಂದು ದೊಡ್ಡ ಭೇದವಿರುವದು. ಯಾಕಂದರೆ ಇತರ ಯಾತ್ರಿಕರು ಯಾತ್ರೆಗೆ ಹೊರಡು-ವಾಗಲೆ ಸಾಂಪ್ರದಾಯಶರಣತೆಯ ಮೂಲಕ, ಇಲ್ಲವೆ ಪರಂಪರೆಗೆ ಅನುಸರಿಸಿ, ಅಥವಾ 'ಗತಾನುಗತಿಕೋ ಲೋಕಃ', ಎಂಬ ನ್ಯಾಯದಿಂದ ವಿಶಿಷ್ಟ ದೇವದೇವತೆಗಳನ್ನೂ, ತೀರ್ಥಕ್ಷೇತ್ರಗಳನ್ನೂ ಮುಂದಿಟ್ಟುಕೊಂಡು ಇಂತಿಷ್ಟು ಪರಿಶ್ರಮವನ್ನು ಮುಗಿಸಬೇಕೆಂದು ಹೊರಡುವರು. ಅದು ಅವರ ಮಟ್ಟಿಗೆ ಯೋಗ್ಯವೆ ಸೈ. ಆದರೆ ಈ ಯಾತ್ರಿಕನು ಸತ್ಯವೆ ತನ್ನ ದೇವರು ಅಥವಾ ಸತ್ಯದ ಶೋಧವೆ ತನ್ನ ಗುರಿ ಎಂದು ಹೊರಡುವನು. ಆ ಸತ್ಯದರ್ಶನದಿಂದ ಪುನೀತನಾಗುವದೆ ತನ್ನ ಪೂರ್ಣತ್ವವು ಎಂಬ ನಿರ್ಧಾರವು ಇವನದು. ವಿಶ್ವವೆ ಇವನ ಕ್ಷೇತ್ರವು, ಅನುಭವಸಾಮ್ರಾಜ್ಯದಲ್ಲಿ ವಿಹರಿಸುವದೆ ಇವನ ಪರ್ಯಟನವು. ಸತ್ಯದ ಪ್ರತೀತಿಯೆ ಇಷ್ಟದೇವತೆಯ ದರ್ಶನವು. ಆತ್ಯಂತಿಕ ಸತ್ಯವಂತೂ ಸೈ. ಅದರೊಡನೆಯೆ ಅಬಾಧಿತವಾದ ವಿಶ್ವ

ನಿಯಮಗಳು—ಯಾವ ನಿಯಮಗಳ ಮೂಲಕ ವಿಶ್ವದ ಸೃಷ್ಟಿ-ಸ್ಥಿತಿ-ಲಯ
ಗಳು ನಡೆಯುವವೊ ಅವು-ಮಾನವಸಮಾಜದ ನಿಯಮಗಳು ಇತ್ಯಾದಿ
ಇವೆಲ್ಲ ಅವನ ಮಟ್ಟಿಗೆ ಸತ್ಯದ ರೂಪಗಳೆ. ಉದಾ: ವಿಶ್ವದ ಮೂಲದಲ್ಲಿ
ಅನಾದ್ಯನಂತವಾದ ಒಂದು ಶಕ್ತಿ ಇರುವದು ಇದಷ್ಟೇ ಅವನಿಗೆ ಸತ್ಯವಲ್ಲ.
ಆ ಶಕ್ತಿ ಸತತವೂ ಅಣುರೇಣುತೃಣಕಾಷ್ಠಗಳಲ್ಲಿಯೂ ಸಕಲ ಜಡಚೇತನ
ವಸ್ತುಗಳಲ್ಲಿಯೂ ತುಂಬಿಕೊಂಡು ಅವುಗಳ ನಿಯಮನ ಮಾಡುತಿರುವದು,
ಎಂಬುದೂ ಅವನಿಗೆ ಸತ್ಯವು. ಒಂದು ಹಣ್ಣು ಗಿಡದಿಂದ ಕೆಳಕ್ಕೆ ಬೀಳು
ವದರಲ್ಲಿ ಅವನಿಗೆ ಒಂದು ಸತ್ಯಸ್ವರೂಪದ ದರ್ಶನವಾದರೆ, ಸುಂದರ ಹೂವಿನ
ಸೂಸುವ ಸುಗಂಧದಲ್ಲಿ ಅವನಿಗೆ ಇನ್ನೊಂದು ಸತ್ಯಸ್ವರೂಪದ ದರ್ಶನವಾಗು
ವದು. ಅನಂತ ಆಕಾಶದಲ್ಲಿ ಅಸಂಖ್ಯ ತಾರಾಮಂಡಲಗಳು ನಿಯಮಬದ್ಧ
ವಾಗಿ ಸಾಗುತಿರುವದೂ ಅವನಿಗೆ ಸತ್ಯಪ್ರತೀತಿಯ ಉದಾಹರಣೆಯು. ಈ
ರೀತಿ ಏಕಾಂತದಲ್ಲಿ ಸಮಾಧಿಸ್ಥನಾಗಿ ಅನುಭವಿಸುವ ಏಕತ್ವದ ಆನಂದದಷ್ಟೆ
ಆನಂದವು ಅವನಿಗೆ ವಿಶ್ವನಿಯಮಕ್ಕನುಸರಿಸಿ ತನ್ನ ಸುತ್ತಲೂ ನಡೆದಿರುವ
ಅನಂತ ನಿಸರ್ಗವ್ಯಾಪಾರಗಳನ್ನು ನೋಡಿ ಆಗಬಲ್ಲದು. ನಿರ್ದಿಷ್ಟವಾದ
ಗುಡಿಗುಂಡಾರಗಳಲ್ಲಿ ದೇವರಿದ್ದಾನೆ, ಸತ್ಯರೂಪವಿದೆ ಎನ್ನುವುದಕ್ಕಿಂತ
ಸತ್ಯವು, ದೇವರು ಎಲ್ಲೆಲ್ಲಿಯೂ ಇದ್ದಾನೆ, ಅವನ ಶಕ್ತಿ ಸುಖ-ದುಃಖಗಳಲ್ಲಿ,
ಒಳಿತು-ಕೆಡಕುಗಳಲ್ಲಿ ಎಲ್ಲೆಲ್ಲಿಯೂ ದೃಗ್ಗೋಚರವಾಗುತಿದೆ, ಆ ಶಕ್ತಿ
ತನ್ನದೇ ಆದ ಒಂದು ರೀತಿಯಿಂದ ನಿಯಮಬದ್ಧವಾಗಿ ಕೆಲಸಮಾಡುತಿದೆ,
ಎಂದು ತಿಳಿದು ಸಾಗುವುದೆ ಅವನಿಗೆ ಯೋಗ್ಯವೆನಿಸುವದು. ಈ ವಿಷಯದಲ್ಲಿ
ಈ ಮಟ್ಟಿಗೆ ಅವನು ಸಾಂಪ್ರದಾಯರಹಿತನು, ತನ್ನರಿವೇ ಗುರು, ತನ್ನ
ಅನುಭವವೆ ಸಾಕ್ಷಿ, ತನ್ನಂತರಾತ್ಮನೆ ಕೈದೀಪ, ತನ್ನಂತರಂಗವೆ ಪ್ರಯೋಗ
ಶಾಲೆ ಎಂದು ತಿಳಿಯುವವನು ಇದನೆಲ್ಲ ಲಕ್ಷಿಸಿದರೆ ಈ ಯಾತ್ರಿಕನ ಜೀವನ
ದಲ್ಲವೆ ಸಂಸಾರ ಎಂಬುದು ಬೇರೆ, ಯಾತ್ರೆ ಎಂಬುದು ಬೇರೆ ಎಂದು ಹೇಳಲು
ಆಸ್ಪದವೆ ಉಳಿಯುವದಿಲ್ಲ. ಅವನ ಜೀವನದ ಪ್ರತಿಕ್ಷಣವು ಅವನ ಜೀವನ
ಸರ್ವಸ್ವವೆಲ್ಲವೂ ಒಂದೇ ಒಂದು ಚಿರಂತನ ಯಾತ್ರೆ, ಎಂದು ಹೇಳುವದೇ
ಉಚಿತವಾಗುವದು.

ಯಾತ್ರಿಕನ ಜೀವಮಾನದಲ್ಲಿ ಅವನ ಗುರಿ ಸಾಧಿಸದೆ ಹೋದರೂ
ನಿರ್ಜನ್ಮಾದಿಗಳಿದ್ದ ಪಕ್ಷದಲ್ಲಿ ಅವನ ಸಾಧನವು ಮುಂದೆ ಸಾಗಿಯೆ ಸಾಗು

ವದು. ಆದುದರಿಂದ ಅವನಿಗೆ ಸಾಧನಭಂಗದ ಭಯವಿಲ್ಲ. ಪುನರ್ಜನ್ಮವನ್ನು ಒಪ್ಪದೆ ಇದ್ದ ಯಾತ್ರಿಕನಿಗೂ ಅವನ ನಿತ್ಯಸಾಧನೆ ನಡೆದಿರುವದರಿಂದ ಆದರಲ್ಲಿಯೆ ಅವನ ಧನ್ಯತೆ ಇದೆ. ಅಂತಃಕರಣಪೂರ್ವಕವಾಗಿ ನಿಷ್ಠೆಯಿಂದ ಸಾಧನೆ ಮಾಡುತಿರುವದು ಮನುಷ್ಯನ ಕೈಯಲ್ಲಿಯ ವಿಷಯ. ಆದರ ಫಲಪ್ರಾಪ್ತಿ ಇದು ಪರಮಾತ್ಮನ ಹೊಣೆ. ಈ ರೀತಿ ನೋಡಿದರೆ ನಿಜವಾದ ಯಾತ್ರಿಕನ ವೃತ್ತಿಯಿಂದ ಕೈಕೊಂಡ ಯಾತ್ರೆಗೆ ಯಾವ ಬಾಧಕವೂ ಇಲ್ಲ. ಜೀವನದ ಪೂರ್ವೋತ್ತರಗಳು ನಮಗೆ ಗೊತ್ತಾಗುವಂತಿದ್ದರೆ ನೆಟ್ಟಗಾಗು-ತಿತ್ತು, ಹೆಚ್ಚು ಸಮಾಧಾನವಾಗುತಿತ್ತು ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಮನುಷ್ಯನ ಜ್ಞಾನಶಕ್ತಿಯು ಮರ್ಯಾದಿತವಿರುವದರಿಂದ ಅದು ಸದ್ಯಕ್ಕೆ ಸಾಧ್ಯವಾಗಿಲ್ಲ. ವಸ್ತುಸ್ಥಿತಿ ಹೀಗಿದ್ದರೂ ಭಕ್ತಿಭಾವನೆಯಿಂದ ಪ್ರೇರಿತನಾದ ಯಾತ್ರಿಕನಿಗೆ ಯಾವ ಹಾನಿಯೂ ಇಲ್ಲ.

ಇನ್ನು ಪ್ರತಿಯೊಬ್ಬನಿಗೆ ತನ್ನ ಜೀವನ ಎಂಬುದು ಒಂದು ಯಾತ್ರೆ ಇದೆ, ಎಂಬರಿವು ಆದಷ್ಟು ಬೇಗನೆ ಆಗುವದು ಅವಶ್ಯ. ಜೀವನಕ್ಕೆ ಒಂದು ದಿಕ್ಕುದಿಶೆ ಹತ್ತಬೇಕಾದರೆ ಈ ಬಗೆಯ ಅರಿವೇ ಆಧಾರ. ಈ ಅರಿವು ಉಂಟಾಗಬೇಕಾದರೆ ತನ್ನ ಸ್ವರೂಪದ ಬಗ್ಗೆ, ಕರ್ತವ್ಯದ ಬಗ್ಗೆ, ಗುರಿಯ ಬಗ್ಗೆ ಜಿಜ್ಞಾಸೆ ಬೇಕು. ತಾನಾರೆಂಬುದನ್ನು ಚನ್ನಾಗಿ ಅರಿತುಕೊಂಡು ನಿಜವಾದ, ಸ್ವತಂತ್ರ, ನಿರಾಲಂಬ ಆನಂದವನ್ನೂ ಪಡೆದು ಅದನ್ನು ಎರಡನೇಯವರು ಪಡೆಯು-ವಂತೆ ಮಾಡುವುದೆ ಪುರುಷಾರ್ಥವು, ಎಂಬ ನಿರ್ಧಾರಕ್ಕೆ ಮನುಷ್ಯನು ಆದಷ್ಟು ಬೇಗನೆ ಬರಬೇಕಾಗುವದು. ಎಷ್ಟು ಬೇಗ ಈ ನಿಶ್ಚಯವನ್ನು ಮನಷ್ಯನು ಮಾಡುವನೊ ಅಷ್ಟು ಬೇಗ ಅವನ ಯಾತ್ರೆಯು ಪ್ರಾರಂಭವಾಗುವದು. ಒಮ್ಮೆ ಆ ವೃತ್ತಿ ನೆಲೆಗೊಂಡಿತೆಂದರೆ ಆಯಾ ಮನುಷ್ಯನ ಜೀವನದ ಉದ್ದೇಶಾದಿಗಳಲ್ಲಿ ಪಲ್ಲಟವಾಗಿಬಿಡುವದು. ತಾನೊಂದು ಮಹಾಮಾರ್ಗವನ್ನು ಸ್ವೀಕರಿಸಿರುವೆನೆಂಬ ಅಭಿಮಾನ ಅವನಲ್ಲಿ ನೆಲೆಯಾಗಿ ನಿಲ್ಲುವದು. ಪ್ರತಿ ಕರ್ಮದಲ್ಲಿಯೂ ಅವನಿಗೆ, ಇದೂ ಒಂದು ಯಾತ್ರೆಯ ಭಾಗ, ಎಂಬ ಭಾವನೆ ದೃಗ್ಗೋಚರವಾಗುವದು. ಈ ರೀತಿ ಜೀವನದ ಇಡೀ ಸ್ವರೂಪದಲ್ಲಿಯೆ ಒಂದು ಪವಿತ್ರ ಪಲ್ಲಟವಾಗಿಬಿಡುವದು. ಆಮೇಲೆ ಅವನಿಗೆ ಯಾವ ಬೇರೆ ಆಚಾರ ಉಳಿಯದೆ ಯಾತ್ರೆಯ ಆತ್ಯಂತಿಕ ಧ್ಯೇಯವಾದ ಪೂರ್ಣ ಪಾರ-ಮಾರ್ಥಿಕ ದೃಷ್ಟಿ ತನ್ನಲ್ಲಿ ಸತತವೂ ಯಾವಾಗ ಅಧಿಷ್ಠಿತವಾಗುವದು, ಎಂಬು

ೊಂದೇ ಚಿಂತೆಯುಂಟಾಗುವದು. ಒಂದು ರೀತಿ ಈ ಬಗೆಯ ಯಾತ್ರೆಯಲ್ಲಿ
ಾಧನ-ಸಿದ್ಧಿಗಳ ಏಕರೂಪತೆ ಕಂಡುಬರುವದು. ಪ್ರತಿಸಾಧನದ ಒಂದೊಂದು
ಜ್ಜೆಯು ಕೂಡ ಸಿದ್ಧಿಯ ರೂಪವನ್ನೆ ಧರಿಸಿ ಸಾಧಕನಿಗೆ ಆನಂದವನ್ನುಂಟು
ಾಡುವದು. ಸಿದ್ಧಿಯೆಂದರೊಂದು ಯಾವದೋ ಕಾಲದಲ್ಲಿ ಹೋಗಿ
ುಟ್ಟತಕ್ಕ ಸ್ಥಾನ ಎಂಬ ಭಾವವು ಬರಬರುತ್ತಾ ಅಳಿದು ಹೋಗಿ ಸಾಧನವು
ಷ್ಟು ತೀವ್ರವೊ ಅಷ್ಟು ಸಿದ್ಧಿಯು ಕೂಡಲೆ ಹಸ್ತಗತವಾಗಬಲ್ಲ ಆಂತರಿಕ
ರಭಾವ ಎಂಬುದು ಪ್ರತೀತವಾಗುತ್ತ ಹೋಗುವದು. ಸತ್ಯವ್ರತವನ್ನು
ಕೊಂಡ ಯಾತ್ರಿಕನ ಯಾತ್ರೆಯು ಅಜ್ಞಾತಾದಿಯಾಗಿ ಕಂಡರೂ ಈ
ಗೆಯ ಆನಂದರೂಪ ಫಲವನ್ನು ಹೆಜ್ಜೆಜ್ಜೆಗೂ ಪಡೆಯುತ್ತಹೋಗುವರಿಂದ
ನು ನಿತ್ಯವೂ ಪೂರ್ಣ, ಎಂಬ ಮಟ್ಟಕ್ಕೆ ಬರುವದು. ಬಳಿಕ ಆಂತರಿಕ ಆನಂದದ
ದ್ಗಮವಾಗಿ ಅವನು ಧನ್ಯಭಾವವನ್ನು ಪಡೆಯುತ್ತಾ ಹೋಗುವನು.
ಾನು ಯಾತ್ರಿಕ' ಎಂಬ ಅರಿವು ಮುಂತಾದವುಗಳು ಯಾವ ಸಂದರ್ಭದಲ್ಲಿ,
ಾರಿಗೆ ಆಗುವದು, ಅದರ ಲಕ್ಷಣಗಳೇನು ಎಂಬುದನ್ನು ಸ್ವಲ್ಪ ನೋಡುವ.

ಮಾನವಕುಲದಲ್ಲಿ ಹುಟ್ಟಿದವರೆಲ್ಲರಿಗೂ ನಾವು ಯಾತ್ರಿಕರು, ಎಂಬ
ಿವು ಹುಟ್ಟುವದಿಲ್ಲ. ಅದು ಉಂಟಾಗಲಿಕ್ಕೆ ಅನೇಕ ಸಾರೆ ಕಾಲಾಂತರವು
ಿದು ಹೋಗುವದು. ಆ ಅರಿವು ಹಲವರಿಗೆ ಮಾತ್ರ ಆಗುವದು, ಎಂದು
ೇಳಿದರೆ ತಪ್ಪಾಗದು. ಉಳಿದವರು ಜೀವನವನ್ನೆಲ್ಲ ಒಂದು ಬಗೆಯ ಅರ್ಥ
ಹೀನ 'ಚರ್ವಿತಚರ್ವಣ ಪಿಷ್ಟಪೇಷಣ'ದಲ್ಲಿ ಯಂತ್ರಾರೂಢರಾದವರಂತೆಯೇ
ಳೆಯುವರು. ಹುಟ್ಟುವದು ಬದುಕುವದು, ಬಾಳುವದು ಬೆಳೆಯುವದು,
ುಪ್ಪಾಗುವದು ಸಾಯುವದು, ಮುಂತಾದ ನೈಸರ್ಗಿಕ ಕ್ರಿಯೆಗಳೆಲ್ಲ ತಾವಾಗಿ
ೆಯುವಂತೆ ನಡೆದುಹೋಗುವವು. ಅವುಗಳನ್ನು ಯಾರೂ ತಡೆಯ
ಾರರು. ಅವುಗಳಲ್ಲಿ ಹೆಚ್ಚುಕಡಿಮೆಯಾಗಬಹುದು. ಆದರೆ ಅವುಗಳನ್ನು
ಪ್ಪಿಸಿದವರು ಯಾರೂ ಇಲ್ಲ. ಹಲವರು ಶರೀರತಃ ಚಿರಂಜೀವಿಗಳು ಎಂದು
ೇಳುವದುಂಟು. ಆದರೆ ಅದು ಈ ವಿಷಯದಲ್ಲಿ ಮಾನವನ ಕಲ್ಪನೆಯು
ೆಯ ಮಟ್ಟವನ್ನು ತೋರುವದೆ ಹೊರತು ಯಥಾರ್ಥವಾಗಿ ನಡೆದ ಸಂಗತಿ
ನ್ನಲ್ಲ.

ಅದೇ ರೀತಿ ಸಾಮಾನ್ಯರು ತಮ್ಮ ಜೀವನದಲ್ಲಿ ತಪ್ಪಿಸಲಿಕ್ಕೆ ಬಾರದ
ಖದುಃಖಗಳನ್ನು ಅಸಹಾಯರಾಗಿ ಅನುಭವಿಸುವರು. ತರುಮರಾದಿಗಳು

ನಿಂತಲ್ಲಿಯೆ ಅವುಗಳಿಗೆ ಈಡಾಗಿ, ನಗೆಹೊಗೆ ತೋರದೆ ಒಂದು ದಿನ ನಿರ್ನಾಮ ವಾಗಿ ಹೋಗುವವು. ಮಾನವರು ಚರಪ್ರಾಣಿಗಳಂತೆ ಸುಖದುಃಖಗಳ ಚಿನ್ಹೆ ಗಳಿಂದ ಹಾಸ್ಯ ಮತ್ತು ಅಶ್ರುಗಳಿಂದ ತಮ್ಮ ಭಾವಗಳನ್ನೂ ವ್ಯಕ್ತಗೊಳಿಸಿ ಇತರ ಜೀವಗಳಂತೆ ಮಾಯವಾಗಿ ಹೋಗುವರು. ಆದರೆ ತಮಗೆ ಆಗುತಿರುವ ವಿಚಿತ್ರ,ವಿವಿಧ ಅನುಭವದ ಅರ್ಥವೇನು,ಅದು ಏಕೆ, ಎಲ್ಲಿಂದ ಬಂದಿತು,ಅದೇನು ಒಂದು ತುದಿಮೊದಲಿಲ್ಲದ ನಾಟಕವೊ ಅರ್ಥಪೂರ್ಣ ಒಂದು ಸನ್ನಿವೇಶವೊ ಸಾಧ್ಯವೊ ಸಾಧನವೊ ಈ ಮುಂತಾದ ಪ್ರಶ್ನೆಗಳು ಹಾಗೆಯೆ ಉಳಿದು ಹೋಗುವವು. ಅವುಗಳನ್ನು ಕೇಳಬೇಕು, ಅವುಗಳ ಅರ್ಥ ತಮಗೆ ತಿಳಿಯ ಬೇಕು, ಎಂಬ ಜಿಜ್ಞಾಸೆ ಕೂಡ ಅತಿ ವಿರಳವಾದುದೆ. ಜಿಜ್ಞಾಸೆ, ಕುತೂಹಲ, ಆಶ್ಚರ್ಯಭಾವ, ಏಕೆ ಎಂದು ಪ್ರಶ್ನಿಸುವ ವೃತ್ತಿ, ಇವೇ ಜ್ಞಾನದ ಮೂಲಗಳು. ಇವೇ ಇಲ್ಲದಿದ್ದರೆ ಜ್ಞಾನವು ತಾನಾಗಿ ಹೊಳಯಲಾರದು. ಅದರ ಆವಿರ್ಭಾವಕ್ಕೆ ಒಂದು ಅನುಕೂಲ ಅವಸರ ಬೇಕು. ಅದು ಆಮಂತ್ರಣ, ಆದರಾತಿಥ್ಯ, ಇವು ಇಲ್ಲದೆ ಆಗಂತುಕವಾಗಿ ಬರುವ ವಸ್ತು ಅಲ್ಲ. ಈ ಬಗೆಯ ಜಿಜ್ಞಾಸೆ ಸ್ವಲ್ಪಮಟ್ಟಿಗೆ ಹುಟ್ಟುಗುಣವೂ ಆಹುದು, ಬೆಳಿಸಲು ಬರುವಂತಹದೂ ಆಹುದು. ಆದುದರಿಂದ ಸತ್ಸಂಗ, ಸದ್ವಿಚಾರ, ಸತ್ಕಾರ್ಯ ಮುಂತಾದವುಗಳಿಗೆ ಸತ್ಸಂಸ್ಕಾರಗಳು ಎಂಬ ದೃಷ್ಟಿಯಿಂದ ಬಹಳ ಮಹತ್ವವಿದೆ.

ಮನುಷ್ಯಪ್ರಾಣಿಯು ತನ್ನ ಪ್ರಗತಿಗಾಗಿ ನೈಸರ್ಗಿಕವಾದ ಹುಟ್ಟುಗುಣ ಗಳಿಗಿಂತ ಸತ್ಸಂಸ್ಕಾರಗಳನ್ನೇ ಹೆಚ್ಚು ಅವಲಂಬಿಸಿರುವನು. ಇತರ ಪ್ರಾಣಿ ಗಳಿಗೂ ಮನುಷ್ಯನಿಗೂ ಇದೊಂದು ಮಹದಂತರ ಎಂದು ಹೇಳಿದರೂ ಸಲ್ಲುವದು. ಪ್ರಾಣಿಗಳಲ್ಲಿ ಎಲ್ಲಕ್ಕೂ ಜಾಣವೆನಿಸಿದ ಹಾಗೂ ವಿಕಾಸಕ್ರಮ ದಲ್ಲಿ ಮನುಷ್ಯನಿಗೆ ತೀರ ಸಮೀಪವಿದ್ದ ಓರಂಗ-ಓತಂಗ ಎಂಬ ಮಂಗವು ಬಟ್ಟೆ ಹಾಕಿಕೊಳ್ಳುವ, ಕುರ್ಚಿಯ ಮೇಲೆ ಕೂಡ್ರುವ, ಸಿಗರೇಟ ಸೇದುವ, ಮುಂತಾದ ಚಿಲ್ಲರೆ ಸಂಸ್ಕಾರಗಳನ್ನು ಮಾತ್ರ ಗ್ರಹಿಸಬಲ್ಲದು. ಅದಕ್ಕೂ ಅದು ಮುಂದೆ ಹೋಗಲರಿಯದು. ಮನುಷ್ಯನು ಮಗುವು ಇರುವಾಗ ತೀರ ಇತರ ಪಶುಪ್ರಾಣಿಗಳಂತೆ ವರ್ತಿಸಿದರೂ ಸಂಸ್ಕಾರವಶಾತ್ ಅವನು ಐನ್‌ಸ್ಟಾಯಿನನಂಥ ವೈಜ್ಞಾನಿಕನ ಮಟ್ಟನ್ನೂ, ಗಾಂಧಿಯಂಥ ಮಹಾತ್ಮನ ಮಟ್ಟನ್ನೂ, ರವೀಂದ್ರನಂಥ ಕವೀಂದ್ರನ ಮಟ್ಟನ್ನೂ ಮುಟ್ಟಬಲ್ಲನು.

ಹೀಗಿರುವದರಿಂದಲೆ ಮನುಷ್ಯಮಾತ್ರನ ಪ್ರಗತಿಯ ಸಂದರ್ಭದಲ್ಲಿ ತ್ಸಂಸ್ಕಾರವು ಎಲ್ಲಕ್ಕೂ ಹೆಚ್ಚಿನ ಮಹತ್ವದ ಮಾತಾಗಿದೆ. 'ಜನ್ಮನಾ ಾಯತೇ ಶೂದ್ರಃ ಸಂಸ್ಕಾರಾತ್ ದ್ವಿಜ ಉಚ್ಯತೇ', ಎಂಬ ಮಾತು ಅಕ್ಷರಶಃ ತ್ಯವಿರುವದು. ಜನ್ಮತಃ ನಾವೆಲ್ಲರೂ ಕೇವಲ ಶೂದ್ರರೇ ಏಕೆ, ಸಾಕ್ಷಾತ್ ಶುಗಳು. ಪಶುವಿಗೂ ಮಗುವಿಗೂ ಏನೂ ಭೇದವಿಲ್ಲ. ಭೇದವು ಸಂಸ್ಕಾರ ್ರಹಣಶಕ್ತಿಯಲ್ಲೆ ಇರುವದು. ಆ ಸಂಸ್ಕಾರಗಳಾಗದಿದ್ದರೆ, ಅವುಗಳನ್ನು ಹಿಸಿ ಅರಗಿಸಿಕೊಳ್ಳುವ ಶಕ್ತಿ ಸಾಮರ್ಥ್ಯಗಳಿಲ್ಲದಿದ್ದರೆ ಮಾನವ-ಮಗುವು ಶುವಾಗಿಯೆ ಉಳಿಯುವದು. ಈ ವಿಷಯಕ್ಕೆ ಇಷ್ಟು ಮಹತ್ವವಿರುವದ ಂದಲೆ ಸಮಾಜದಲ್ಲಿ ಹುಟ್ಟಿಬಂದ ಮಗುವಿಗೂ ಸತ್ಸಂಸ್ಕಾರದ ಅವಕಾಶ ಾರೆಯುವದು ಅವಶ್ಯವಿರುವದು. ಅವಕಾಶವಿದ್ದರೂ ಸಂಸ್ಕಾರಗಳನ್ನು ರಗಿಸಿಕೊಳ್ಳದೆ ಹೋಗುವವರ ಮಾತು ಬೇರೆ. ಅವಕಾಶ ಕೊಡುವದು ಮಾಜದ ಕರ್ತವ್ಯ, ಅದರ ಲಾಭ ಪಡೆಯುವದು ವ್ಯಕ್ತಿಯ ಕರ್ತವ್ಯ.

ಇನ್ನು ನಾನೊಬ್ಬ ಯಾತ್ರಿಕ, ಎಂಬ ಮಹತ್ವದ ಅರಿವು ಯಾವಾಗ ಾರ ಸತ್ಸಂಸ್ಕಾರಗಳ ಮೂಲಕ, ಯಾವ ಸಂದರ್ಭಗಳಲ್ಲಿ ಹುಟ್ಟುವದು, ದು ಬಹಳ ಮನೋವೇಧಕವಾದ ವಿಷಯವಿದೆ. ನಿತ್ಯಜೀವನದ ಸುಖ ಃಖಪೂರ್ಣ ನಿಸರ್ಗನಿಯಮಿತ ದಿನರಾತ್ರಿಗಳನ್ನು ಯಾಂತ್ರಿಕವಾಗಿ ಹೊತ್ತು ಾಕುತಿರುವಾಗ ಅದರಲ್ಲಿ ಒಂದು ನೀರಸತೆ, ರುಕ್ಷತೆ, ಒಂದು ಅರ್ಥಹೀನತೆಯ ನುಭವ ಬಂದರೆ ಆಶ್ಚರ್ಯಕರವಲ್ಲ. ಆ ಅನುಭವವೆ ಅಸಮಾಧಾನದ ೀಜವು. ಮನಸಿನ ಈ ಬಗೆಯ ಅಸಮಾಧಾನದ ಅಂತಃಸ್ಥಿತಿಯೊಳಗಿನಿಂದಲೆ ರ್ಮಜಿಜ್ಞಾಸೆ ಹುಟ್ಟುವದು. ಇದೆಲ್ಲದರ ಅರ್ಥವೇನು, ಇದೆಲ್ಲ ಅಸಂಗತ ಸಂಗತ ವಸ್ತುಗಳ ಮೊಟ್ಟೆಯೊ, ಇದು ಕಾರ್ಯಕಾರಣನಿಯಮಕ್ಕೆ ಒಳ ಾಗದ ಒಂದು ಅಸ್ತಿತ್ವವೊ, ಅಪರಸ್ಪರಸಂಭೂತವಾಗಿರುವ ವಿಚಿತ್ರ ್ರಪಂಚವೊ ಕಾಮಪೂರ್ತಿಯೊಂದೇ ಇದರ ಅರ್ಥವೊ, ಇದರಲ್ಲಿ ಯೋಜನೆ, ಂಯೋಜನೆ, ಸಮನ್ವಯ, ಸಮ್ಮೇಲ ಇವುಗಳಿಗೆ ಸ್ಥಾನವೆ ಇಲ್ಲವೊ, ದೆಲ್ಲ ಶೀತೋಷ್ಣಾದಿ ನಿಸರ್ಗಸಿದ್ಧದ್ವಂದ್ವಗಳ ನಿರಂತರ ದ್ವಂದ್ವವೊ, ಈ ುಂತಾದ ಪ್ರಶ್ನಮಾಲಿಕೆ ಎದುರು ನಿಲ್ಲುವದು, ನಿತ್ಯವೂ ಹೆಜ್ಜೆಜ್ಜೆಗೂ ುತ್ತರವನ್ನು ಕೇಳುವದು. ಈ ಪ್ರಶ್ನೆಗಳ ಸಮಂಜಸ ಸಮಾಧಾನವೆ ಜೀವ ೀವನಗಳ ಗುಟ್ಟನ್ನು ಒಡೆದು ಬಿಚ್ಚಿ ಬಯಲಿಗೆ ಹಾಕುವದು.

ಈ ಪ್ರಶ್ನೆಗಳ ಬಿಡಿಸುವಿಕೆಯೆ ಅಂತಃಸಮಾಧಾನದ ಹಾಗೂ ಆತ್ಯಂತಿಕ ಸಮನ್ವಯದ ಮೂಲವು. ಆ ಸಮಾಧಾನವಾದಾಗಲೆ ಸಪ್ತಸ್ವರಗಳ ಸುಂದರ ಸಮ್ಮೇಲ, ಷಡ್ರಸಗಳ ಸವಿಯಾದ ಪಾಕ, ತ್ರಿಗುಣಗಳ ಸಮವಾದ ಸಮನ್ವಯ ಕಂಡುಬರುವವು. ಆಗ ಅಂತಃಕರಣದಲ್ಲಿಯ ಗಂಟು ಒಡೆದು ಎಲ್ಲ ಸಂಶಯಗಳ ಸಮೂಲ ಉಚ್ಛೇದವಾಗುವದು. ಅದೇ ಯಾತ್ರಿಕನ ಪರಂಧಾಮ, ಪರಮಗತಿ, ಪರಾತ್ಪರಸಾಧ್ಯ.

ಯಾತ್ರಿಕನು ಸಾಧ್ಯಕ್ಕಾಗಿ ಆತುರನಿರುವದು ಸ್ವಾಭಾವಿಕ. ಆದರೂ ಸಂತಾಪಗೊಳ್ಳದೆ ಅವನು ನಿಷ್ಕಾಮವಾಗಿ ಸತತವೂ ಸಾಧನದಲ್ಲಿ ನಿರತನಿರುವನು. ಒಮ್ಮೊಮ್ಮೆ, ಅದೇಕೆ ಹಲವು ಸಾರೆ ಅವನು, ನನಗೆ ಸಾಧನವೆ ಸಾಕು, ಸಾಧ್ಯದಿಂದ ಇನ್ನೇನು ಹೆಚ್ಚು ಗಳಿಸುವದಿದೆ, ಎಂದೂ ಅನ್ನುವದುಂಟು. ಅನೇಕ ಸದ್ಭಕ್ತರು ಸಹ ಮುಕ್ತಿಯ ಗೊಡವೆ ನಮಗೇಕೆ; ನಮಗೆ ಭಕ್ತಿಯೆ ಇರಲಿ, ಮುಕ್ತಿಯಲ್ಲಿನ್ನೇನಿದೆ, ಎಂದು ಹೇಳಿದುದುಂಟು. ಈ ಪರಮಾರ್ಥದ ಯಾತ್ರಿಕರಿಗೂ ಭಕ್ತರಿಗೂ ಸಾಧನಸಾಧ್ಯಗಳೆರಡೂ ಒಂದೇ ಎಂಬುದೆ ಇದರ ತಾತ್ಪರ್ಯವು.

'ಅಸಂತೋಷಃ ಶ್ರೀಯೋಮೂಲಂ' (ಅಸಂತೋಷವೆ ಸಕಲ ಸಮೃದ್ಧಿಗಳ ಮೂಲವು) ಎಂದು ಹೇಳುವಂತೆಯೆ, ಅಸಮಾಧಾನಃ ಶ್ರೇಯೋಮೂಲಂ' ಅಂತಃಕರಣದ ಅಸಮಾಧಾನವೆ ಆತ್ಮಶ್ರೇಯಸ್ಸಿನ ಮೂಲವು, ಎಂದು ಹೇಳಬೇಕಾಗುವದು. ಒಮ್ಮೆ ಅಂತಃಕರಣದಲ್ಲಿ ಅತ್ಯಂತ ಅಸಮಾಧಾನವು ಬೇರೂರಿತೆಂದರೆ ಜಿಜ್ಞಾಸೆಯು ಜಾಗ್ರತವಾಗುವದು. ಅದು ಸಾಧಕನನ್ನು ಎಡಬಿಡದೆ ಯಾತ್ರಿಕ ಪದವಿಗೆ ಒಯ್ದು ಮುಟ್ಟಿಸುವದು. ಹಗಲಿರುಳು ಎನ್ನದೆ ಕಷ್ಟನಷ್ಟಗಳನ್ನು ಲಕ್ಷಿಸದೆ ಮನೆಮಾರುಗಳನ್ನು ತೊರೆದು ಯಾತ್ರಿಕನು ತನ್ನ ಮಾರ್ಗಕ್ರಮಣವನ್ನೆ ಗುರಿಯನ್ನಾಗಿಟ್ಟುಕೊಂಡು ಮುಂದೆ ಸಾಗುವನು. ಆ ಬಗೆಯ ಲವಲವಿಕೆ ಅವನಲ್ಲಿ ಹುಟ್ಟುವದು. ಈ ವಿವಿಧ ವಿಚಿತ್ರ ವಿಶ್ವದಲ್ಲಿ ಏಕಸೂತ್ರತೆ ಏನಿದೆ, ನಾನು-ತಾನೆಂಬ ಅಹಂಕಾರದ ಮೂಲವೇನು, ಇತ್ಯಾದಿ ಅನೇಕಾನೇಕ ಪ್ರಶ್ನೆಗಳ ಅರ್ಥವನ್ನು ಹುಡುಕಾಡುವುದೆ ಅವನ ಯಾತ್ರೆಯ ಉದ್ದೇಶವಾಗಿಬಿಡುವದು. ಸತ್ಯಾನ್ವೇಷಿಯ ಜೀವನ ಯಾತ್ರಿಕನ ಜೀವನ ಇವುಗಳಲ್ಲಿ ಯಾವ ಭೇದವೂ ಇಲ್ಲ. ಒಬ್ಬನು ಗುಡಿ ಗುಂಪಾರಗಳ ಮುಖಾಂತರ, ಪರ್ಯಟನಾದಿಗಳ ಮೂಲಕ ನಿತ್ಯಸತ್ಯ

ನ್ನು ದರ್ಶಿಸಲನುವಾಗುವನು. ಇನ್ನೊಬ್ಬನು ತನ್ನ ಆಂತರಿಕ ಅನುಭವಗಳ ೂಲಕ, ಸುತ್ತಲಿನ ಸೃಷ್ಟಿಯ ನಿರೀಕ್ಷಣೆಯ ಮೂಲಕ, ಚಿಂತನ-ಮಂಥನಗಳ ೂಲಕ ಅದೇ ನಿತ್ಯಸತ್ಯವನ್ನು ಹುಡುಕಾಡುವನು. ಇಬ್ಬರ ಧ್ಯೇಯವೂ ಂದೇ. ಇಬ್ಬರೂ ತಮ್ಮ ಸಾಧನದಲ್ಲಿ ಸಿದ್ಧಿಗೆಯ್ಯಬೇಕಾದರೆ ಆತ್ಮಶುದ್ಧಿ, ಷ್ಠೆ, ಸಾತತ್ಯ, ಅಕಾಂಡಪ್ರಯತ್ನ ಇವು ಬೇಕೇಬೇಕು.

ಅನುಕೂಲ ಮನೋಭೂಮಿಕೆಯಲ್ಲಿ ವಿಶಾಲ-ವ್ಯಾಪಕವಾದ ಧರ್ಮ ಭಾವನೆಯನ್ನು ಜಾಗ್ರತಗೊಳಿಸಿ ಅದರ ವಿಕಾಸವಾಗುವಂತೆ ಮಾಡು-ವದು ಕಲೆ ಹಾಗೂ ವಿಜ್ಞಾನ ಇವುಗಳ ಹೊಣೆಯಿರುವದೆಂದು ನನ್ನ ಅಭಿಪ್ರಾಯು.

— ಆಯಿನ್‌ಸ್ಟಾಯಿನ್

ಗುರಿಯತ್ತ ಸಾಗುವ ನಮ್ಮ ದಾರಿ ಮಂಜಿನಿಂದ ಮುಸುಕಿರಬಹುದು ಆದರೆ ನಾವು ಸಾಗುವ ದಿಕ್ಕು ಸುಸ್ಪಷ್ಟವಿರುವದು.

— ಆಲ್‌ಬರ್ಟ್ ಶ್ವೇಟ್‌ಝರ

೮

ವಿವಿಧ ಯಾತ್ರಿಕರು

ನಾನು ಕಲ್ಪಿಸಿದ ಯಾತ್ರಿಕನು ಪ್ರವಾಸಿ ಇಲ್ಲವೆ ಸಂಚಾರಿ ಇರಲೇಬೇಕೆಂದು ನಾನು ತಿಳಿಯುವದಿಲ್ಲ. ಶರೀರತಃ ಇದ್ದಲ್ಲಿಯೆ ಇದ್ದರೂ ಮನಸಿನಿಂದ ಒಬ್ಬ ವ್ಯಕ್ತಿಯು ಒಂದೇ ಸವನೆ ಯಾತ್ರೆಮಾಡುತಿರುವದು ಸಾಧ್ಯವು. ಶ್ರದ್ಧೆಯಿಂದ ಉತ್ಕಟಭಾವದಿಂದ ಆತ್ಮವಂಚನೆಯ ಲವಲೇಶವೂ ಇಲ್ಲದೆ ಸತತ ದೇವರ ಶೋಧವು, ಸತ್ಯದ ಶೋಧವು ಇದೇ ಯಾತ್ರಿಕನ ಮುಖ್ಯವಾದ ಲಕ್ಷಣವು. ಇದು ಯಾರಲ್ಲಿ ಕಂಡುಬರುವದೋ ಅವರೆಲ್ಲರೂ ವಿಶ್ವರಂಗದಲ್ಲಿ ಯಾತ್ರಿಕರೇ ಸೈ. ಸಾಮಾನ್ಯಜನ ಹಾಗೂ ಯಾತ್ರಿಕ ಇವರಲ್ಲಿ ಒಡೆದು ಕಾಣುವ ಅಂತರವು ಅವರ ಶರೀರವ್ಯಾಪಾರಗಳಲ್ಲಿರದೆ ಜೀವನದತ್ತ ನೋಡುವ ಅವರವರ ದೃಷ್ಟಿ ಹಾಗೂ ಆಂತರಿಕವೃತ್ತಿ ಇವುಗಳಲ್ಲಿದೆ. ಯಾತ್ರಿಕನು ಜೀವನದ ಆಳವನ್ನು ಹುಡುಕಲು ಹೊರಟವನು, ಈ ಪ್ರಯತ್ನದ ಮುಖಾಂತರ ಅವನು ಆತ್ಯಂತಿಕ ಸತ್ಯವನ್ನು ಶೋಧಿಸಲನುವಾದವನು. ಶೋಧವು ಯಶಸ್ವಿಯಾಗಲಿ ಬಿಡಲಿ, ಆ ಪ್ರಯತ್ನದಲ್ಲಿಯೆ ಅವನಿಗೆ ಸಮಾ

ಾನ. ಆ ಶೋಧಕ್ಕಾಗಿ ಸರ್ವಸ್ವವನ್ನೂ ತ್ಯಾಗಮಾಡಲು, ದಣಿಯೆ ದುಡಿ
ಯಲು, ಹುಚ್ಚು ಹಿಡಿದವನಂತೆ ಅದಕಾಗಿ ಯತ್ನಿಸಲು ಅವನು ಸದಾ ಸಿದ್ಧನು.

ಆತ್ಯಂತಿಕ ನಿರಾಲಂಬ ಅಖಂಡ ಆನಂದ ಸ್ಥಿತಿಯನ್ನು ಇಲ್ಲವೆ ಪರಮಾತ್ಮ
ೂಡನೆ ಸಮರಸೈಕ್ಯಾನಂದವನ್ನು ಪ್ರತಿಜೀವವು ಜ್ಞಾತಾಜ್ಞಾತವಾಗಿ
ರಸುತಿರುವದು, ಎಂದು ನಾವು ಅನುಭವದಿಂದ ಹೇಳಬಹುದು. ತರ್ಕದಿಂದ
ದ್ಧಮಾಡಬಹುದು. ಆದರೆ ಇಲ್ಲಿ ಯಾತ್ರಿಕನ ವಿಷಯವೆ ಪ್ರಸ್ತುತವಿರುವದ
ಂದ ಬುದ್ಧಿಪುರಃಸ್ಸರವಾಗಿ ಆಯಾ ಯಾತ್ರಿಕನು ಏನು ಶೋಧಿಸುತಿರುವನು
ಂಬುದನ್ನು ನೋಡುವುದೆ ಹೆಚ್ಚು ಮಹತ್ವದ್ದಿರುವದು. ನಿತ್ಯಾನಂದವೆ ಪರಮ
್ಯೇಯವೆನಿಸಿದರೂ ವಿವಿಧ ಯಾತ್ರಿಕರು ವಿವಿಧ ಮುಖದಿಂದ ಹಾಗೂ
ವಿಧ ಮಾರ್ಗಗಳಿಂದ ಆ ಧ್ಯೇಯವನ್ನು ಸಾಧಿಸಲೆತ್ನಿಸುವರು ಎಂಬುದು
ಹಜವಾಗಿ ಕಂಡುಬರುವ ಮಾತು. ಹೀಗಿರುವದರಿಂದಲೆ ಜಗತ್ತಿನಲ್ಲಿ
ನಂದಮುಖಗಳ ವಿವಿಧತೆ ಹಾಗೂ ಸಾಧನಗಳ ಅನೇಕತೆ ದೃಗ್ಗೋಚರ
ಾಗುವದು.

ಅನಾದಿಕಾಲದಿಂದಲೂ ಮಾನವನು ತನ್ನ ಮನಸ್ಸನ್ನು ಮುಂಚಾಚಿ,
ನ್ನ ಕಲ್ಪನೆಯ ಕುದುರೆಯನ್ನೇರಿ, ತನ್ನ ಸ್ವಪ್ನಸಾಮ್ರಾಜ್ಯವನ್ನು ಬಿತ್ತ
ಸಿ, ಅನೇಕಾನೇಕ ಕನಸುಗಳನ್ನು ಕಾಣುತ್ತ ತನ್ನ ಮಹತ್ವಾಕಾಂಕ್ಷೆಯ
ರುಡಪಕ್ಷಿಯನ್ನು ಚಿದ್ಗಗನದಲ್ಲಿ ಹಾರುಬಿಟ್ಟಿದ್ದಾನೆ. ಮುಂದೆ ನಡೆ, ಮೇಲೆ
ೆಗೆ, ಎಂಬ ಒಂದೇ ಒಂದು ಮೂಕನಾದವು ಅವನ ಅಂತರಾಳವನ್ನು ತುಂಬಿ
ೂಂಡಿದೆ. ಮಾನವಪ್ರಾಣಿಯು ಎಷ್ಟೇ ಕ್ಷುದ್ರ-ದರಿದ್ರನಿದ್ದರೂ ಎಷ್ಟೇ
ರ್ಬಲ-ದುರ್ಬಲನಿದ್ದರೂ ಎಷ್ಟೇ ದುಃಖ-ಕಷ್ಟಗಳಿಂದ ತೊಳಲಾಡುತಿದ್ದರೂ
ವನ ಹಾರೈಕೆ ದೊಡ್ಡದು, ಅವನ ಆಶೆ ಅನಂತವಾದುದು, ಅವನ ಯತ್ನ
ತತವಾದುದು, ಅವನ ಉತ್ಸಾಹ ಅದಮ್ಯವಾದುದು. ಅವನು ಇರುವುದು
ಂದು ಅಣುಸಮಾನ. ಆದರೆ ಅವನು ಆಗಬೇಕೆನ್ನುವುದು ಮಹತೋ-
ಹೀಯನಂತೆ; ಅವನು ಮೃಣ್ಮಯನು. ಅವನ ಸುತ್ತಲೆಲ್ಲ ಮಣ್ಣೇ-
ಣ್ಣು, ಆದರೆ ಅವನು ಹುಡುಕುತಿರುವುದು ಪರಶಮಣಿಯನ್ನು; ಅವನು
ತ್ಯ ಸಾವುನೋವುಗಳಿಗೀಡಾಗಿರುವನು, ಆದರೆ ಅವನು ಹೆಣಗುತಿರುವದು
ಮರತ್ವಕ್ಕಾಗಿ; ಅವನು ಅಬಲನು ಆದರೆ ಅವನು ಇಚ್ಛಿಸುವುದು ಅನಂತ-
ಕ್ತಿಯನ್ನು; ಅವನು ಸತತವೂ ದುಃಖಪೀಡೆಗಳಿಗೀಡು, ಆದರೆ ಅವನು

ಹುಡುಕುತಿರುವುದು ಪರಮಾನಂದಸೌಭಾಗ್ಯವನ್ನು; ನಿರಾಶೆ-ನಿಷ್ಫಲತೆಗೆ ಯಾವಾಗಲೂ ಗುರಿಯಿದ್ದರೂ ಅವನು ಚಿಂತಾಮಣಿ-ಕಾಮಧೇನು-ಕಲ್ಪವೃಕ್ಷಗಳನ್ನು ಬೆಂಬತ್ತಿರುವನು. ತಾನು ಈಗಿಲ್ಲದ್ದು ಮುಂದಾಗಬೇಕು, ಈಗ ತನ್ನಲ್ಲಿಲ್ಲದ್ದು ಮುಂದೆ ತನಗೆ ದೊರೆಯಬೇಕು ಎಂಬುದೆ ಮಾನವನ ಅಕ್ಷಯವಾದ ಬಯಕೆ. ಅದನ್ನು ಪೂರೈಸುವ ಕುರಿತೇ ಅವನು ಯಾತ್ರೆಯನ್ನು ಕೈಕೊಂಡಿದ್ದು.

ಆತ್ಯಂತಿಕ ಸತ್ಯವಲ್ಲದ ವಸ್ತುಗಳಲ್ಲಿಯೆ ಮನಸು ರಮಮಾಣವಾಗಿ ಜೀವನವು ವ್ಯರ್ಥ ಹೋಗುತಿರುವದಲ್ಲ, ಎಂಬ ಪಶ್ಚಾತ್ತಾಪದಿಂದ ತೊಳಲುತ್ತ ಯಾತ್ರಿಕನು ಅದರೊಳಗಿಂದ ಮನಸ್ಸನ್ನು ಎತ್ತಿ ಕಿತ್ತಿ ಅದನ್ನು ಸತ್ಯದತ್ತ, ತ್ರಿಕಾಲಾಬಾಧಿತವಾಗಿರುವ ಧರ್ಮದತ್ತ ಒಯ್ಯಬೇಕೆನ್ನುವನು. ಅದೇ ರೀತಿ ಅಜ್ಞಾನ, ಅಪರ್ಯಾಪ್ತಜ್ಞಾನ, ಅನ್ಯಥಾಜ್ಞಾನ, ವಿಕೃತಜ್ಞಾನ ಇತ್ಯಾದಿಗಳಿಂದ ಮುಸುಕಿದ ಮನಸನ್ನು ನಿರ್ಮಲಗೊಳಿಸಿ ಅದನ್ನು ಸತತ ಬೆಳಗುವ ಜ್ಞಾನಜ್ಯೋತಿಯತ್ತ ಸಾಗಿಸಲು ಅವನು ಯತ್ನಿಸುವನು. ನಾವೆಲ್ಲರೂ ಮೃತ್ಯುದೇವತೆಗೆ ಒಳಗು, ಇಂದಿದ್ದು ನಾಳಿಲ್ಲದಂತಾಗುವವರು. ಆದರೆ ಈ ಭಂಗುರವಿಶ್ವದಲ್ಲಿ ಕೂಡ ಅದರ ಭದ್ರವಾದ ತಳಹದಿಯಾಗಿರುವ ಅಭಂಗ ವಸ್ತುವೊಂದಿರುವುದು. 'ನಿತ್ಯೋऽನಿತ್ಯಾನಾಂ', ಅನಿತ್ಯಗಳಲ್ಲಿ ನಿತ್ಯವಾದ ಆ ವಸ್ತುವೆ ಅಮರವು; ಅದು ಮಾಸದೆ, ಮಿಡುಕದೆ, ಮುಕ್ಕಾಗದೆ, ಮುಪ್ಪಾಗದೆ, ಸಾವಿನಾಚೆ ನಿಂತು ಮರಣವನ್ನು ಅಣಕಿಸಿ ನೋಡುತ್ತ ಸತತ ಅಖಂಡವಾಗಿರುವದು. ಯಾತ್ರಿಕನು ಅದನ್ನೆ ಸಾಧಿಸಬೇಕೆನ್ನುವನು.

ಹಲವು ಯಾತ್ರಿಕರು ತತ್ವತಃ ಇವೇ ಮಾತುಗಳನ್ನು ಬೇರೆ ಶಬ್ದಗಳಿಂದ ಬೇರೆ ರೀತಿಯಲ್ಲಿ ಬಣ್ಣಿಸುವದುಂಟು. 'ಸತ್ಯಂ ಶಿವಂ ಸುಂದರಂ' ಎಂಬೀ ಮೂರ್ಗುರಿಗಳ ಹುರಿಯೊಂದನ್ನು ಹಿಡಿದು ಮೇಲಕ್ಕೇರಬೇಕೆನ್ನುವರು. ಇದೊಂದು ಸರ್ವಾಂಗಪರಿಪೂರ್ಣ ಗುರಿ ಎಂದೆನಿಸಿಕೊಳ್ಳುವದು. ಸತ್ಯವೆಂಬುದಂತೂ ಸೈ. ಅದರೊಡನೆ ಶಿವಂ ಎಂಬುದು ಸರ್ವರಿಗೂ ಸರ್ವತೋಪರಿ ಶುಭವನ್ನು, ಮಂಗಲವನ್ನು, ಹಿತಕಾರಕವಾದುದನ್ನು ಬಯಸಿ ಅದು ಒದಗಿಬರುವಂತೆ ಹೆಣಗುತಿರುವದು. ಶಿವಂ ಇದು ಪೂರ್ಣಪ್ರಗತಿಯನ್ನು, ವಿಕಾಸವನ್ನು ಸಮೃದ್ಧಿಯನ್ನು ಒಳಗೊಂಡಿರುವದು. ಯಾವುದು ನಮ್ಮನ್ನು ಕೆಳಕ್ಕೆಳೆಯುವದೋ ಅಧೋಗತಿಗೆ ಹಚ್ಚುವದೊ ಅದು ಅಶುಭವು, ಅ-ಶಿವವು. ಯಾವುದು



ಸತ್ಯಂ - ಶಿವಂ - ಸುಂದರಂ

ಉನ್ನತಿಪಥದತ್ತ ನಮ್ಮನ್ನು ಒಯ್ಯುವದೋ ಅದು ಶುಭವು, ಶಿವವು, ಭದ್ರವು, ಕಲ್ಯಾಣಪ್ರದವು. ಶಿವಂ ಎಂಬುದರಲ್ಲಿ ಸಕಲ ಪ್ರಾಣಿಮಾತ್ರರಿಗೂ ಶಾಂತಿ ಪುಷ್ಟಿತುಷ್ಟಿಗಳನ್ನು ದೊರಕಿಸಿಕೊಡುವ ಧ್ಯೇಯವು ಒಳಗೊಂಡಿರುವದು. ಸುಂದರಂ ಎಂಬುದು ಧ್ಯೇಯದ ಮೂರನೆಯ ಅಂಶವು. ಸೌಂದರ್ಯೋಪಾಸನೆ ವಿಶೇಷವಾಗಿ ಕಲಾಕಾರರಿಗೆ ಸೇರಿದ್ದು. ಯಾವದೇ ಸ್ವರೂಪದಲ್ಲಿ ಸೌಂದರ್ಯದರ್ಶನವು ಮನುಷ್ಯನಿಗೆ ಆನಂದವನ್ನು ಕೊಡುವದು, ತೃಪ್ತಿಯನ್ನುಂಟುಮಾಡುವದು. ಆದುದರಿಂದ ಸೌಂದರ್ಯದ ನಿರ್ಮಾಣ, ಅದರ ಗುಣಗ್ರಹಣ, ಇವೆಲ್ಲ ಮಾನವಕುಲಕ್ಕೆ ಅತ್ಯಂತ ಉಪಕಾರಕವಾದವುಗಳು. ಸೌಂದರ್ಯವೆಂಬುದು ನಮ್ಮ ಪಂಚೇಂದ್ರಿಯಗಳಿಗೂ ಗೋಚರವಾಗುವ ವಸ್ತು. ಗಾಯನ, ಚಿತ್ರ, ಶಿಲ್ಪ ಈ ಮುಂತಾದ ಕಲೆಗಳು ಕಿವಿ-ಕಣ್ಣುಗಳ ಮೂಲಕ ಮನಸನ್ನು ಆಕರ್ಷಿಸುವವು. ಯಾವದೇ ಸುಂದರವಸ್ತುವಾದರೂ ಅದರ ಚುಂಬಕತ್ವವು, ಆಕರ್ಷಣಶಕ್ತಿಯು ಅದರಲ್ಲಿರುವ ರಸದ ಮೂಲಕ. ಆದುದರಿಂದಲೆ ಪರಮಾತ್ಮನಿಗೆ 'ರಸೋ ವೈ ಸಃ', ಅವನು ರಸಸ್ವರೂಪನು, ಎಂಬ ಅಭಿಧಾನವು ಪ್ರಾಪ್ತವಾಗಿದೆ. ಅವನು ಕೇವಲ ರಸಸ್ವರೂಪನು, ಅಂದರೆ ಸಾಕ್ಷಾತ್ ಸರ್ವರ ಆತ್ಮನನ್ನು ಆಕರ್ಷಿಸುವ ಶಕ್ತಿಯುಳ್ಳವನು.

ಸತ್ಯ, ಶಿವ, ಸುಂದರ ಇವು ಕಾಣಲು ಮೂರು ಬೇರೆ ಬೇರೆಯಾಗಿದ್ದರೂ ನಾವು ಅವುಗಳ ಬಗ್ಗೆ ಪ್ರತ್ಯೇಕವಾಗಿ ವಿಚಾರಿಸುತಿದ್ದರೂ ಅವು ಮೂರೂ ಅವಿಭಾಜ್ಯವೆಂದೇ ಹೇಳಬೇಕು. ಸತ್ಯವಿದ್ದೆಡೆ ಶಿವ ಹಾಗೂ ಸುಂದರ ಇದ್ದೇ ತೀರುವದು. ಅದೇ ರೀತಿ ಶಿವ ಹಾಗೂ ಸುಂದರ ಇವು ಕೂಡ ಕ್ರಮವಾಗಿ ಸತ್ಯ ಮತ್ತು ಸುಂದರ, ಸತ್ಯ ಮತ್ತು ಶಿವ ಇದ್ದೇ ಇರುವವು. ಹಾಗಿಲ್ಲದ ಪಕ್ಷದಲ್ಲಿ ಅವುಗಳಲ್ಲಿ ಏನಾದರೂ ಊನವಿದೆ, ಅವು ಪೂರ್ಣವಿಲ್ಲ, ಎಂದು ತಿಳಿಯಲು ಅಡ್ಡಿಯಿಲ್ಲ. ಶಿವ-ಸುಂದರವಿರಹಿತ ಸತ್ಯ, ಸತ್ಯ-ಸುಂದರವಿರಹಿತ ಶಿವ, ಮತ್ತು ಸತ್ಯ-ಶಿವವಿರಹಿತ ಸುಂದರ ಇವು ಪೂರ್ಣವಸ್ತುಗಳಲ್ಲ. ಕೇವಲ ಸತ್ಯವೆಂದು ಭಾಸಮಾನವಾಗುವ ವಸ್ತು ಶಿವ ಸುಂದರಗಳಿಂದ ಕೂಡಿದ್ದಿರದೆ ಇದ್ದ ಪಕ್ಷದಲ್ಲಿ ಅದು ಪೂರ್ಣಸತ್ಯವಲ್ಲೇ ಅಲ್ಲ. ಇದೇ ಮಾತು ಉಳಿದ ಎರಡಕ್ಕೂ ಅನ್ವಯಿಸುವದು.

ಇನ್ನು ಹಲವು ಯಾತ್ರಿಕರು ಸತ್-ಚಿತ್-ಆನಂದವನ್ನು ಧ್ಯೇಯ ಎಂದಿಟ್ಟುಕೊಂಡು ಸಾಗುವರು. ಇದು ಕೂಡ ಸಮುಚ್ಚಯಾತ್ಮಕವಾದ

ಧ್ಯೇಯವೇ ಸೈ. ಪರವಸ್ತುವಿನ ವರ್ಣನೆ ಈ ಮೂರು ಶಬ್ದಗಳಿಂದ ಮಾಡುವದುಂಟು. ಸತ್ ಅಂದರೆ ಸತ್ಯ ನಿತ್ಯವಾದುದು, ಚಿತ್ ಅಂದರೆ ಚೈತನ್ಯಸ್ವರೂಪವಿದ್ದುದು (ಜಡವಲ್ಲದ್ದು), ಆನಂದನೆಂದರೆ ಪೂರ್ಣ ಸ್ವಯಂಭು ಆನಂದಭಾವದಿಂದ ಸರ್ವದಾ ಯುಕ್ತವು. ಇದು ಒಳ್ಳೆ ಹೆಚ್ಚಿನ ಧ್ಯೇಯವೆ ಸೈ. ಇವೆಲ್ಲ ಕೇವಲ ವೈಯಕ್ತಿಕ ಧ್ಯೇಯಗಳೆಂದು ಕಂಡರೂ ಇವನ್ನು ಪಡೆದವರಿಂದ ಸಮಾಜಕ್ಕೆ ಅನಂತ ಉಪಕಾರಗಳಾಗುವನೆಂಬುದನ್ನು ಮರೆಯಲಿಕ್ಕಾಗದು. ಇವಲ್ಲದೆ ಈಗ ಹಲವು ಸಾಮಾಜಿಕ ಇಲ್ಲವೆ ಸಾಮೂಹಿಕನೆನಿಸುವ ಧ್ಯೇಯಗಳೂ ಇವೆ; ವಿಶ್ವಕುಟುಂಬತ್ವ, ಸರ್ವಸಮಾನತ್ವ, ಸರ್ವೋದಯ ಇತ್ಯಾದಿ. ಆದರೆ ವ್ಯಕ್ತಿಗಳ ಮನೋರಂಗದಲ್ಲಿ ಮೊಟ್ಟಮೊದಲು ಕ್ರಾಂತಿಯಾಗದೆ ಸಮಾಜದಲ್ಲಿ ಕ್ರಾಂತಿ ಅಶಕ್ಯವು.

ಹಲವು ಶ್ರೇಷ್ಠ ಧ್ಯೇಯಗಳನ್ನಿಟ್ಟುಕೊಂಡು ಜೀವನವೆ ಒಂದು ಯಾತ್ರೆ ಎಂಬ ಭಾವನೆಯಿಂದ ಸಾಗುವ ವಿವಿಧ ಯಾತ್ರಿಕರ ದಿಗ್ದರ್ಶನವನ್ನು ಮೇಲೆ ಮಾಡಿದಂತಾಯಿತು. ಮೇಲೆ ಮೇಲೆ ನೋಡಿದವರಿಗೆ ಧ್ಯೇಯಗಳಲ್ಲಿ ವೈವಿಧ್ಯ ಕಂಡರೂ ತಾತ್ವಿಕ ವಿವಿಧತೆ ಅವುಗಳಲ್ಲಿಲ್ಲ ಎಂಬುದು ಸೂಕ್ಷ್ಮದರ್ಶಿಗಳಿಗೆ ಹೊಳೆಯದೆ ಇರದು. ಈ ಧ್ಯೇಯಗಳನ್ನು ವಿವಿಧ ಯಾತ್ರಿಕರು ವಿವಿಧ ಮಾರ್ಗಗಳಿಂದ ಮುಟ್ಟಲೆತ್ನಿಸುವರು. ಆದರೆ ಆ ಎಲ್ಲ ಮಾರ್ಗಗಳು ಸಿದ್ಧಿಗಾಗಿ ಪಂಚಯೋಗಗಳಲ್ಲಿ ಒಂದನ್ನು ಇಲ್ಲವೆ ಹಲವನ್ನು ಅವಲಂಬಿಸಬೇಕಾಗುವದು. ಹಠ, ರಾಜ, ಭಕ್ತಿ, ಕರ್ಮ, ಜ್ಞಾನ ಇವೇ ಆ ಪಂಚಯೋಗಗಳು. ಇವುಗಳನ್ನು ಸಮನ್ವಯಿಸಲಾಗಿ ಸಮನ್ವಯಯೋಗವು ಅಥವಾ ಪೂರ್ಣಯೋಗವು ಸಿದ್ಧವಾಗುವದು. ಜಗತ್ತಿನಲ್ಲಿ ಯಾವದೇ ದೇಶದ ಯಾವದೇ ವಂಶದ ಯಾವದೇ ಮಾನವನು ಯಾವದೇ ಪಾರಮಾರ್ಥಿಕ ಧ್ಯೇಯವನ್ನಿಟ್ಟುಕೊಂಡು ತನ್ನ ಜೀವನಯಾತ್ರೆಯನ್ನು ಕೈಕೊಂಡಿದ್ದರೂ ಅದು ಮೇಲ್ಕಾಣಿಸಿದ ಧ್ಯೇಯಗಳಲ್ಲಿ ಹಾಗೂ ಸಾಧನಗಳಲ್ಲಿ ಒಳಗೊಂಡಿರುವದು ಎಂದು ಸ್ಥೂಲವಾಗಿ ಹೇಳಬಹುದು.

ಸಂಕ್ಷಿಪ್ತದಲ್ಲಿ, ಮಾನವನು ಸದಾ ಯುವಕನೂ ಸರ್ವಸುಂದರನೂ ಚಿರಂ-ಜೀವಿಯೂ ಸರ್ವಜ್ಞಾನಿಯೂ ಸರ್ವಶಕ್ತಿಯುತನೂ ಸದಾನಂದಿಯೂ ಆಗಬೇಕೆನ್ನುವನು. ಈ ಬಗೆಯಾಗಿ ಬಹುಮುಖದಿಂದ ಪರಮಾನಂದಪದವನ್ನು ಅನುಭವಿಸಬೇಕೆಂದು ಅವನು ಇಚ್ಛಿಸುವನು. ಈ ಪದವನ್ನು ಅವನು ಅನೇ-

ಕಾನೇಕ ಮಾರ್ಗಗಳಿಂದ ದೊರಕಿಸಲು ಯತ್ನಿಸುವನು. ಅವನ ಪೂರ್ಣ ಧ್ಯೇಯವು ಈ ಮಾರ್ಗಗಳಿಂದ ಕೈವಶವಾಗದೆ ಹೋದರೂ ಅವನ ಬಹು ಮುಖವಿಕಾಸ ಹಾಗೂ ಪ್ರಗತಿ ಈ ರೀತಿ ಸಾಗುತಿರುವಾಗಲೆ ಆಯಿತು ಎಂಬುದರಲ್ಲಿ ಸಂದೇಹವಿಲ್ಲ.

ಈಚೆಗೆ ವಿಜ್ಞಾನಶಕ್ತಿ ಹಾಗೂ ನಿಸರ್ಗದ ಮೇಲಿನ ಮನುಷ್ಯನ ಪ್ರಭುತ್ವ ಇವು ಅವನ ಪ್ರಯತ್ನಗಳಿಂದ ಅಪರಂಪಾರವಾಗಿ ಬೆಳೆದಿವೆ. ವಿಶೇಷತಃ ವಿದ್ಯುತ್‌ಶಕ್ತಿಯ ಶೋಧವು ಮನುಷ್ಯನ ಜೀವನಪದ್ಧತಿಯಲ್ಲಿ ಒಂದು ಕ್ರಾಂತಿಯನ್ನೆ ಮಾಡಿಬಿಟ್ಟದೆ. ಅಣುಶಕ್ತಿಯ ಉಪಯೋಗವು ನಾಳೆ ವಿದ್ಯುತ್‌ಶಕ್ತಿಯಷ್ಟೆ ರೂಢವಾಯಿತೆಂದರೆ ಇನ್ನೂ ಹೆಚ್ಚಿನ ಅದಲು ಬದಲು ಆಗುವದೆಂಬಲ್ಲಿ ಸಂಶಯವಿಲ್ಲ. ಅಮೃತತ್ವದ ಪ್ರಯತ್ನವನ್ನು ಮಾಡುತ್ತ ಹೋಗುವಾಗ ಆರೋಗ್ಯಜೀವನ, ವಿಧವಿಧದ ರೋಗಗಳಿಂದ ಮುಕ್ತಿ, ದೀರ್ಘಾಯುಷ್ಯದ ಗುಟ್ಟಿನ ಶೋಧ, ಮುಂತಾದವುಗಳು ಮೆಲ್ಲಮೆಲ್ಲನೆ ಮಾನವನ ಕೈವಶವಾಗತೊಡಗಿವೆ. ಸೌಂದರ್ಯೋಪಾಸನೆಯಲ್ಲಿ ತೊಡಗಿರುವಾಗಲೆ ನಾನಾವಿಧ ಲಲಿತಕಲೆಗಳ ಶೋಧವಾಗಿ ಮನುಷ್ಯನ ಜೀವನವು ಈಗ ಹೆಚ್ಚೆಚ್ಚು ಕಲಾಮಯವಾಗುತ್ತ ನಡೆದಿದೆ. ಜ್ಞಾನವಿಜ್ಞಾನಗಳ ಪಿಪಾಸೆ ಹೆಚ್ಚುತ್ತ ಹೋದಂತೆ ತನ್ನ ಬುದ್ಧಿವೈಭವವನ್ನು ಬೆಳೆಸಿ ಮನುಷ್ಯನು ಈಗ ಹಲವು ಹೊಸ ಹೊಸ ದರ್ಶನಗಳನ್ನೂ ವಿಚಾರಪ್ರಣಾಲಿಗಳನ್ನೂ ರೂಢಗೊಳಿಸಲು ಸಮರ್ಥನಾಗಿರುವನು. ಹೀಗೆಲ್ಲ ವಿವಿಧ ಕ್ಷೇತ್ರಗಳಲ್ಲಿ ಮನುಷ್ಯನು ಮುಂದುವರಿದಿರುವನು. ಆದರೆ ಇವೆಲ್ಲವುಗಳಿಂದ ಅವನ ಮೂಲ ಹಸಿವೆ ಹಿಂಗಿರುವದೋ ಎಂದು ಕೇಳಿದರೆ, ಇಲ್ಲ, ಎಂಬ ನಕಾರಾತ್ಮಕ ಉತ್ತರವನ್ನೆ ಕೊಡಬೇಕಾಗುವದು. ಹೀಗಿದ್ದರೂ ನಾವು ನಿರಾಶರಾಗುವ ಕಾರಣವಿಲ್ಲ. ಪ್ರತ್ಯಕ್ಷ ಧ್ಯೇಯಪ್ರಾಪ್ತಿಯಾಗದಿದ್ದರೂ ಅದನ್ನು ಸಾಧಿಸುವ ಉತ್ಕಟ ಪ್ರಯತ್ನ ಮಾಡುತಿರುವಾಗ ಒಂದು ಅನುಪಮ ಆನಂದದ ಅನುಭವವಾಗುವದು ಎಂಬಲ್ಲಿ ಸಂಶಯವಿಲ್ಲ. ನಿರಂತರ ಯಾತ್ರಿಕನಿಗೆ ಆ ಆನಂದದ ಸವಿಯನ್ನು ಸತತ ಉಣ್ಣಲು ಅವಕಾಶ ದೊರಕುವದು. ಸಿದ್ಧಿ ಎಂದೇ ದೊರಕಲಿ, ಅಥವಾ ಅದು ದೊರಕಲಿ ಬಿಡಲಿ. ನಿತ್ಯನಡೆ ಎಂಬುದೆ ಅವನ ಪ್ರದಕ್ಷಿಣೆ, ನುಡಿಯೆ ಕೀರ್ತನೆ, ನೋಟವೆ ದರ್ಶನ, ಚಿಂತನೆಯೆ ಧ್ಯಾನೋ-ಪಾಸನೆ, ಎಂಬ ಸ್ಥಿತಿ ಅವನಿಗೆ ಪ್ರಾಪ್ತವಾಗುವದು. ಇದಕ್ಕೂ ಹೆಚ್ಚಿನದೇನು

ಬೇಕು, ನಿಜವಾದ ಯಾತ್ರಿಕನಿಗೆ? ಇಷ್ಟ ಕ್ಷೇತ್ರವನ್ನು ಮುಟ್ಟಿ, ಯಾತ್ರೆಯನ್ನು ಮುಗಿಸಿ ಮುಂದೇನು ಎಂಬ ಪ್ರಶ್ನೆಗೆ ಉತ್ತರ ಕೊಡಲಾರದ ಪರಿಸ್ಥಿತಿ ಉಂಟಾಗುವದಕ್ಕಿಂತ ನಿತ್ಯಯಾತ್ರಿಕನಿದ್ದು ಆನಂದದ ಅನುಭವದೊಂದಿಗೆ ನಿರಂತರ ಹಾದಿ ನಡೆಯುತ್ತ ಇರುವದು ಲೇಸಲ್ಲವೆ?

ಈ ಪರಿ ಭೂಲೋಕದ ವಿವಿಧ ಯಾತ್ರಿಕರ ಮೇಳವನ್ನು ನೋಡಿದರೆ, ಅವರ ಮೆರವಣಿಗೆಯ ಕಲ್ಪನೆ ಮಾಡಿದರೆ ಅದು ನಾನಾ ತರಹದ ಗಣಂಗಳಿಂದ ಕೂಡಿದ ಶಿವಪಾರ್ವತಿಯರ ಮೆರವಣಿಗೆಯಂತೆಯೆ ಸೈ. ಒಬ್ಬನು ಯಾತ್ರಿಕ ವೇಷದಲ್ಲಿದ್ದರೆ ಇನ್ನೊಬ್ಬನು ಲೆಕ್ಕಣಿಕೆ ಹಿಡಿದಿರುವನು, ಒಬ್ಬನು ಕೆತ್ತನೆಯ ಕೆಲಸದ ಸಾಧನಗಳನ್ನು ಕೈಕೊಂಡಿದ್ದರೆ ಇನ್ನೊಬ್ಬನು ಕೊಳಲು ಪಿಟೀಲುಗಳನ್ನೆತ್ತಿರುವನು, ಒಬ್ಬನು ಹಾಡುತಿದ್ದರೆ ಇನ್ನೊಬ್ಬನು ಕುಣಿಯುತಿರುವನು, ಒಬ್ಬನು ಗಿರಿ ಗಂವ್ಹರದಲ್ಲಿ ತಾಪಸಿಯಾಗಿದ್ದರೆ ಇನ್ನೊಬ್ಬನು ಸಮಾಜಸೇವೆಗೆ ಹೊರಟಿರುವನು, ಒಬ್ಬನು ದುರ್ಬಿನು ಹಿಡಿದಿದ್ದರೆ ಇನ್ನೊಬ್ಬನು ಶೀಸೆ ಇಟ್ಟುಕೊಂಡಿರುವನು. ಹೀಗೆ ಒಂದಲ್ಲ ಎರಡಲ್ಲ. ಇದಕ್ಕೆ ಯಾತ್ರಿಕರ ಜಾತ್ರೆ ಎಂದರೂ ಸಲ್ಲುವದು, ಇವರಿಗೆ ಜೀವನಯಾತ್ರೆಯ ಪಥಿಕರೆಂದರೂ ಸರಿಹೋಗುವದು. ನೀವು ಯಾರು, ಹೊರಟಿರುವದೆಲ್ಲಿ, ನಿಮ್ಮ ಗುಟ್ಟು ಗುರಿಗಳಾವು, ನೀವು ಮಾಡುತಿರುವುದಾದರೂ ಏನು, ಎಂದು ಒಬ್ಬೊಬ್ಬರನ್ನೆ ಕರೆದು ಕೇಳಿದರೆ ತಲೆಗೊಂದು ಉತ್ತರ ಕೊಡುವರು. ಆದರೆ ಅವರು ಹೋಗುತಿರುವುದು ಒಂದೇ ದಿಕ್ಕಿನಲ್ಲಿ, ಅವರು ಅರಸುತಿರುವದು ಒಂದೇ ಒಂದು ವಸ್ತು—ಅಂತರಾನಂದ. ಅವರು ಮಾಡುತಿರುವ ಕಾರ್ಯಗಳು ವಿವಿಧವಾದರೂ ಸಾಧಿಸತಕ್ಕ ಉದ್ದೇಶ ಒಂದೇ. ಅವರು ತಿಳಿದಿರಲಿ ಬಿಟ್ಟಿರಲಿ ಅವರೆಲ್ಲರೂ ಚಿತ್ಕಣಗಳು, ಚಿತ್‌ಸ್ವರೂಪರು, ಜಡದ ಬೆನ್ನೇರಿದ ಚೇತನಗಳು; ಜಡದ ಮುಖಾಂತರ, ಇಂದ್ರಿಯಮನಾದಿಗಳ ಮುಖಾಂತರ, ಪ್ರೇಯದ ಮುಖಾಂತರ, ವಿವಿಧ ಚೇಷ್ಟೆಚಟುವಟಿಕೆಗಳ ಮುಖಾಂತರ ಅವರು ಹುಡುಕಾಡುತಿರುವುದು ಹುದುಗಿದ ಹೃದಯಮಂದಿರದಲ್ಲಿಯ ಸರ್ವೇಶನನ್ನು. ಚಿರವಿರಹಿಗಳ ವಿಹ್ವಲ ಅವರದು. ಸವಿಸಮಕೂಟದ, ಸಮರಸೈಕ್ಯದ ಅಧಿಕಾರಿಗಳಾದರೂ ಅವರೇ.

ಆಳವಾದ ನೀರಲ್ಲಿ ಮುಳುಗಿದವಗೆ ಮುತ್ತು ದೊರೆಯಿತು. ನಾನು ಭಯದಿಂದ ದಂಡೆಯಲ್ಲಿಯೆ ಬರಿಗೈ ಕುಳಿತು ಬಿಟ್ಟೆ.

—ಒಂದು ಹಿಂದೀ ದೋಹಾದಿಂದ

೯

ಈ ಯಾತ್ರೆಯ ಸುಖ ದುಃಖ

ಬೇಕಾಗಿಯೊ ಬೇಡಾಗಿಯೊ ಜ್ಞಾತವಾಗಿಯೊ ಅಜ್ಞಾತವಾಗಿಯೊ ಈ ಯಾತ್ರೆಯಲ್ಲಿಯಂತೂ ನಾನು ಸೇರಿಕೊಂಡಿದ್ದೇನೆ, ಸಾಲಿಟ್ಟ ಅನಂತ ಯಾತ್ರಿಕರಲ್ಲಿ ನಾನೊಬ್ಬನಾಗಿದ್ದೇನೆ. ಯಾತ್ರೆಯು ಅತ್ಯಂತ ಸುಖಮಯವೂ ದುಃಖರಹಿತವೂ ಕಷ್ಟಕಾಠಿನ್ಯಗಳಿಲ್ಲದ್ದೂ ಆಗಬೇಕೆಂದು ಎಲ್ಲರೂ ಬಯಸುವದು ಸ್ವಾಭಾವಿಕ. ಸುಖವು ಎಲ್ಲರಿಗೂ ಬೇಕು, ದುಃಖವು ಯಾರಿಗೂ ಬೇಡ. ಆದರೆ ಮನುಷ್ಯನ ಬಯಕೆ ಬಾಳ್ವೆಗಳಲ್ಲಿ ಯಾವಾಗಲೂ ಅಂತರವಿದ್ದೇ ತೀರುವದು. ಬಯಕೆ ಮನೋವೇಗದಿಂದ ಮುಂದೆ ಸಾಗುವದು, ಬಾಳ್ವೆ ಜಡದೇಹದ ಮಂದಗತಿಯಿಂದ ದಟ್ಟಡಿ ಇಡುವದು. ಬಾಳ್ವೆ ಬಯಕೆಯ ಬದಿಗೆ ಬಂದಿತೆನ್ನುವಷ್ಟರಲ್ಲಿ ಬಯಕೆ ಮತ್ತೆ ಒಂದು ಗಾವುದ ಮುಂದೆ ಜಿಗಿಯುವದು. ಈ ರೀತಿ ಇವುಗಳ ತಳಕು ಬೀಳುವದು ದುರಾಪಾಸ್ತವು. ತಳಕುಬಿದ್ದ ಕ್ಷಣವೆ ಮುಕ್ತಿಯ ಕ್ಷಣ ಎನ್ನಬಹುದು. ಯಾಕಂದರೆ ಬಯಕೆಯ ಹಸಿವು ಹಿಂಗಿ, ಬಯಕೆಯ ಭಾವ ಮಾಯವಾಗುವದೆ ಮುಕ್ತಿ. ಅಂಥ ಸವಿಸಮಯ ಎಂದಾದರೂ ಯಾರ ಜೀವನದಲ್ಲಿಯಾದರೂ ಬರಬಲ್ಲದೊ ಬರಬಹುದೊ ಬರುವದೊ? ಬರುವದು, ಬಂದೇ ತೀರುವದು. ಆ ಬಗೆಯ ಶ್ರದ್ಧೆ ಬೇಕು, ಸಾಧನೆ ಬೇಕು.

ಆದರೆ ಈ ಪ್ರಶ್ನೆಗೆ ಬೇರೆ ಬೇರೆ ಜನರು ಬೇರೆ ಬೇರೆ ರೀತಿ ಉತ್ತರವನ್ನು ಕೊಡುವರು, ಈ ತಳಕು ಹಾಕಲು ಅನೇಕ ಉಪಾಯಗಳನ್ನು ಹೇಳುವರು. ಏನೇ ಇರಲಿ, ಬಯಕೆ ಬಾಳ್ವೆಗಳು ಈಗಿದ್ದ ತಮ್ಮ ಸ್ವಭಾವಗಳನ್ನು ಬಿಡದೆ

ಇದ್ದ ಪಕ್ಷದಲ್ಲಿ ಆವೆರಡರ ಸಂಗಮವು ಸಾಧಿಸದು. ಈಗಿದ್ದ ಸ್ಥಿತಿಗಿಂತ ಮುಂದಿನ ಹಾಗೂ ಹೆಚ್ಚಿನ ಯಾವುದೊ ಒಂದು ಸ್ಥಿತಿಯನ್ನು ಇಚ್ಛಿಸುವುದೆ ಬಯಕೆಯ ಮೂಲ ಸ್ವಭಾವ. ಅಂದ ಬಳಿಕ ಈಗಿದ್ದ ಸ್ಥಿತಿಗೂ ಯಾವಾಗಲೂ ಮುನ್ನೋಡುವ ಬಯಕೆಗೂ ತೆಕ್ಕೆ ಬೀಳುವ ಬಗೆ ಯಾವುದು? ಬಾಳ್ವೆ ನಮ್ಮ ಜೀವನದ ಸದ್ಯಸ್ಥಿತಿಯನ್ನು ಚಿತ್ರಿಸುವದು. ಒಮ್ಮೆ ಬಯಕೆ ಇದ್ದುದು ಈಗ ಬಾಳ್ವೆಯಾದೊಡನೆ ಆ ಬಯಕೆ ಮತ್ತೆ ಮುಂದಿನ ಕನಸನ್ನು ಮನಸಿನೆದುರು ಒಡ್ಡುವದು. ಅಂದ ಬಳಿಕ ಬಯಕೆ-ಬಾಳ್ವೆಗಳ ಈ ಜಿನ್ನೋಟ ಮೃಗಶಿರಸ್ ನಕ್ಷತ್ರದಲ್ಲಿಯ ವ್ಯಾಧ ಮತ್ತು ಮೃಗ ಇವುಗಳ ಓಟವಿದ್ದಂತೆ. ಸತತ ಓಡುತ್ತಿದ್ದರೂ ಅವುಗಳ ನಡುವಿನ ಅಂತರವು ಸದಾಕಾಲವು ಇದ್ದೇ ತೀರುವದು. ಅನುದಿನವೂ ಈ ಅಂತರ ಹೆಚ್ಚು ಕಡಿಮೆ ಪ್ರಮಾಣದಲ್ಲಿ ಕಟ್ಟಿಟ್ಟಂತೆ. ಈ ಅಂತರಕ್ಕೆಯೆ ತೃಷ್ಣೆ, ಕಾಮನೆ, ವಾಸನೆ, ಆಕಾಂಕ್ಷೆ ಎಂಬ ಹೆಸರುಗಳು. ಅದು ದುಃಖಕ್ಕೆ ಕಾರಣವಿರುವಂತೆ ನಮ್ಮ ಪುರೋಗಮನಕ್ಕೂ ಕಾರಣವು. ಅದೇ ನಮ್ಮನ್ನು ಮುಂದಕ್ಕೆ ಎಳೆದೊಯ್ಯುವುದು, ನಮ್ಮ ಜೀವನಕ್ಕೆ ಗತಿ ಕೊಡುವದು. ಇಷ್ಟವಿದ್ದಷ್ಟು, ಇಷ್ಟವಿದ್ದಂತೆ, ಇಷ್ಟಸಮಯದಲ್ಲಿ ನಮ್ಮ ಕಾಮನೆ ಕೈಗೂಡದಿದ್ದರೆ ನಮಗೆ ಅಸಮಾಧಾನವಾಗುವದು, ದುಃಖವಾಗುವದು. ಆದರೆ ಅದಿಲ್ಲದಿದ್ದರೆ ಜಡತೆ ನೆಲೆಸುವ, ತಮಸ್ಸು ಮನೆ ಮಾಡುವ, ನಿಷ್ಕ್ರಿಯತೆಯ ರಾಜ್ಯವಾಗುವ ಭಯವಿರುವದು.

ಹಲವರು ಈ ತೃಷ್ಣೆಯನ್ನು, ಕಾಮನೆಯನ್ನು ಬಿಟ್ಟೇಬಿಡಬೇಕೆಂದು ಹೇಳುವರು. ಹಾಗೆ ಮಾಡಿದರೆ ದುಃಖದ ಮೂಲವೆ ನಷ್ಟವಾಗಿ ಹೋಗುವದು ಎಂದು ಅವರ ಭಾವನೆ. ಈ ಬಗೆಯಿಂದ ತೃಷ್ಣೆಯನ್ನು ಪೂರ್ಣವಾಗಿ ತ್ಯಜಿಸುವದು ಸಾಧ್ಯವೊ ಎಂಬ ಪ್ರಶ್ನೆ ಇದೆ. ಒಂದೊಪ್ಪತ್ತು ಮನುಷ್ಯನು ತನ್ನ ಮನಸ್ಸಿನಲ್ಲಿದ್ದ ವೈಯ್ಯಕ್ತಿಕವಾದ ತೃಷ್ಣೆಯನ್ನು ಬಿಟ್ಟರೂ ಯಾವ ವಿಶ್ವ ಸಂಕಲ್ಪದ ಮೂಲಕ ಹಾಗೂ ಯಾವ ಕರ್ಮಪ್ರವಾಹದ ಮೂಲಕ ಮನುಷ್ಯನಿಗೆ ಈ ಜನ್ಮವು ಪ್ರಾಪ್ತವಾಯಿತೊ ಮತ್ತು ಯಾವದು ಈ ಸೃಷ್ಟಿಯ ಮೂಲ ಕಾರಣವೊ ಅದನ್ನು ಬಿಡು ಎಂದು ಬ್ರಹ್ಮನಿಗೆ ಹೇಳುವವರು ಯಾರು? ಆ ಕಾರಣವು ಜಾರಿಯಲ್ಲಿ ಇರವವರೆಗೆ, ನಮ್ಮನ್ನು, ನಮ್ಮ ಜೀವನಗಳನ್ನು ಒಳಗೊಂಡ ಈ ವಿಶ್ವರೂಪಕಾರ್ಯವನ್ನು ತಡೆಯುವ ಬಗೆ ಹೇಗೆ? 'ಸೋಽಕಾಮಯತ', ಆದಿಪುರಷನು ಇಚ್ಛಿಸಿದನು, ಆದುದರಿಂದ ವಿಶ್ವೋತ್ಪತ್ತಿ

ಯಾಯಿತು. ಆ ಅನಾದಿಕರ್ಮದ ಕಾರಣವಾದ ಆದಿಪುರುಷನ ಆ ಮೂಲ ಇಚ್ಛೆ ಇರುವವರೆಗೆ ಈ ವಿಶ್ವರೂಪಕಾರ್ಯವನ್ನು ನಿಲ್ಲಿಸುವ ರೀತಿ ಯಾವುದು? ವೈಯಕ್ತಿಕ ಇಚ್ಛೆಯಿಂದ ಪೂರ್ಣ ಸರ್ವತಂತ್ರಸ್ವತಂತ್ರ ಇಚ್ಛಾಶಕ್ತಿ ವ್ಯಕ್ತಿಗೆ ಇದ್ದ ಪಕ್ಷದಲ್ಲಿ ಉಂಟಾದ ಕಾರ್ಯವನ್ನು ಮಾತ್ರ ವೈಯಕ್ತಿಕ ಇಚ್ಛೆಯ ನಾಶದಿಂದ ಮುಕ್ತಾಯಗೊಳಿಸಬಹುದು. ವ್ಯಕ್ತಿಯ ಜನ್ಮ ಧರ್ಮ ಕರ್ಮಾದಿಗಳು ಕೇವಲ ಆಯಾ ವ್ಯಕ್ತಿಯ ಇಚ್ಛಾಬಲದಿಂದ ಹುಟ್ಟಿಲ್ಲ. ಪರಮಾತ್ಮಸಂಕಲ್ಪ, ಅನಾದಿ ಕರ್ಮ ಇವೇ ಅವುಗಳಿಗೆ ಕಾರಣ. ಅದರ ನಾಶ ಇಲ್ಲವೆ ಅದನ್ನು ತಡೆಯುವದು ವ್ಯಕ್ತಿಯ ಅಧೀನವಿಲ್ಲ. ಅಂದಬಳಿಕ ಈ ಉಪಾಯವು ಮೂಲ ವಿರಾಟ್ ಬಯಕೆಯ ನಾಶವನ್ನು ಸಾಧಿಸಿ ದುಃಖಬೀಜವನ್ನು ಹುರಿದುಬಿಡಲಾರದು.

ವ್ಯಕ್ತಿಯ ಇಚ್ಛಾಶಕ್ತಿಯನ್ನು ಮೀರಿದುದನ್ನು ಸಾಧಿಸುವದರಲ್ಲಿ ವ್ಯರ್ಥ ಕಾಲಾಪವ್ಯಯ ಮಾಡದೆ, ಆದಿಪುರುಷನ ಇಚ್ಛೆಯೆ ಸರ್ವಶ್ರೇಷ್ಠವಿರುವದೆಂದ ಬಳಿಕ ಅದನ್ನೆ ಮೊರೆಹೊಕ್ಕು ದುಃಖನಾಶವೆಂಬ ಇಷ್ಟವನ್ನು ಸಾಧಿಸಿಕೊಳ್ಳುವದು ಜಾಣತನದ್ದಾಗಬಲ್ಲದು. ಇದೂ ಒಂದು ಉಪಾಯ. ಇದರ ಪ್ರತಿಕ್ರಿಯೆ ಏನು? ತನ್ನ ಶಕ್ತಿ ಅಲ್ಪವಿರುವದು ಎಂಬ ಪ್ರತೀತಿ ಪಡೆದು ಅನಂತಶಕ್ತಿಯ ಸಂಕಲ್ಪದಲ್ಲಿಯೆ ತನ್ನ ಸಂಕಲ್ಪದ ಲಯವನ್ನು ಸಾಧಿಸಿ ಆ ವಿಶ್ವಸಂಕಲ್ಪದಂತೆ ಆಗುತಿರುವದರಲ್ಲಿಯೆ ಸಮಾಧಾನಪಡೆಯಲು ಅಭ್ಯಸಿಸುವದು ಈ ವಿಷಯದಲ್ಲಿ ಒಂದು ರಾಜಮಾರ್ಗವೆನಿಸುವದು. ಈ ಅಭ್ಯಾಸದಲ್ಲಿ ಪ್ರಗತಿಯಾಗುತ್ತ ಹೋದಂತೆ ತನ್ನ ವೈಯಕ್ತಿಕ ಸಂಕಲ್ಪ ಎಂಬುದು ಕೂಡ ವಿಶ್ವಸಂಕಲ್ಪದ ಅಂಶಮಾತ್ರ ಎಂಬುದು ಹೊಳೆಯುತ್ತ ಹೋಗಿ ವಿಶ್ವಸಂಕಲ್ಪ ತನ್ನ ಸಂಕಲ್ಪ ಇವುಗಳಲ್ಲಿಯ ಭೇದವು ಅಳಿದುಹೋಗುವದು. ವಿಶ್ವಸಂಕಲ್ಪವೆ ತನ್ನ ಸಂಕಲ್ಪ ಎಂಬ ಅರಿವು ಸ್ಥಿರವಾಗಿಬಿಡುವದು. ತನ್ನ ಬಾಳ್ವೆ, ತನ್ನ ಪರಿಸ್ಥಿತಿ, ಇವು ವಿಶ್ವಸಂಕಲ್ಪದ ನಾಟ್ಯರಂಗದಲ್ಲಿ ನಡೆದಿರುವ ಆಟದ ಭಾಗಗಳು ಎಂಬ ಅನುಭವವು ಬಂದುಬಿಡುವದು. ಆ ಸ್ಥಿತಿ ಪ್ರಾಪ್ತವಾದ ಮೇಲೆ ದುಃಖ ಎಂಬುದಕ್ಕೆ ಎಡೆಯಿಲ್ಲದಂತಾಗುವದು. ದುಃಖವಿದ್ದರೂ ಅದು ನಾಟ್ಯರಂಗದಲ್ಲಿಯ ದುಃಖದಂತೆ ಶ್ರಮಹಾರಕ, ಸುಖಕಾರಕ, ಮನೋರಂಜಕ!

ಬಯಕೆ-ಬಾಳ್ವೆಗಳ ನಡುವಿನ ಅಂತರದ ಮೂಲಕ ಆಗುವ ದುಃಖವನ್ನು ನೀಗಲು ಇನ್ನೊಂದುಪಾಯವು ಹೇಳಲಾಗುತಿರುವದು. ಈ ದುಃಖವು ಆ

ಅಂತರದ ಮೂಲಕ ಆಗದೆ ತನ್ನ ಜೀವನದಲ್ಲಿ ಈ ಅಂತರವಿರುವದು, ಎಂಬ ಅಹಂಕಾರದ ಮೂಲಕ ಹಾಗೂ ತನ್ನ ಜೀವನದ ಆಗುಹೋಗುಗಳಲ್ಲಿರುವ ಆಸಕ್ತಿಯ ಮೂಲಕ. ಆ ಅಂತರವನ್ನು ಕಡಿಮೆ ಮಾಡುವದು ಸಾಧ್ಯವಿಲ್ಲದಿದ್ದರೂ ಈ ಅಹಂಕಾರ ಹಾಗೂ ಆಸಕ್ತಿಗಳನ್ನು ಕಡಿಮೆಮಾಡುತ್ತ ಹೋಗುವದು ಸಾಧ್ಯವು. ಯಾವದೇ ವಿಷಯದಲ್ಲಿ, ಇದು ತನ್ನದು, ಎಂಬ ಆಸಕ್ತಿ ಹೆಚ್ಚುತ್ತ ಹೋದಂತೆ ಅದರ ಆಗುಹೋಗುಗಳ ಬಗ್ಗೆ ಚಿಂತೆ, ಅದರಲ್ಲಿ ಹೆಚ್ಚುಕಡಿಮೆ ಆದೊಡನೆ ದುಃಖ ಮುಂತಾದವುಗಳು ಉಂಟಾಗುವವು. ಆಸಕ್ತಿ ಕಡಿಮೆಯಾದಂತೆ ದುಃಖಬೀಜವು ನಷ್ಟವಾಗುತ್ತ ನಡೆಯುವದು. ಆದುದರಿಂದ ಬರಬರುತ್ತ 'ತಾನು ತನ್ನದು' ಎಂಬ ಭಾವನೆಯನ್ನು ಕಡಿಮೆ ಮಾಡುತ್ತ ತಾನೊಬ್ಬ ಸಾಕ್ಷಿ ಎಂಬ ಆತ್ಮಸಾಕ್ಷಿತ್ವವನ್ನು ಬೆಳೆಸುತ್ತಹೋದರೆ ದುಃಖಾಂಶವನ್ನು ಕಡಿಮೆ ಮಾಡುತ್ತ ಹೋಗುವದು ಸಾಧ್ಯವು.

ಇದುವರೆಗೆ ಜೀವನದ ಬಯಕೆ-ಬಾಳ್ವೆಗಳ ನಡುವಿನ ಅಂತರ, ತನ್ಮೂಲಕ ಆಗುವ ದುಃಖ, ಆದರ ಪರಿಹಾರೋಪಾಯ ಇವುಗಳನ್ನಷ್ಟೆ ವಿಚಾರಿಸಿದಂತಾಯಿತು. ಆದರೆ ಈ ಯಾತ್ರೆಯಾದ ಜೀವನದಲ್ಲಿ ಅಥವಾ ಈ ಜೀವನ ಎಂಬ ಯಾತ್ರೆಯಲ್ಲಿ ಬೇಕಾಗಿ ಬೇಡಾಗಿ ಸುಖ-ದುಃಖಗಳು ಎರಡೂ ಇದ್ದೇ ತೀರುವವು. ಅವುಗಳ ಪ್ರಮಾಣ ಹೆಚ್ಚುಕಡಿಮೆಯಾಗಬಹುದು. ಹಾಸು ಹೊಕ್ಕಿಲ್ಲದೆ ಬಟ್ಟೆಯಾಗದಂತೆ ಸುಖ-ದುಃಖಗಳಿಲ್ಲದೆ ಜೀವನವಿರದು. ದುಃಖವನ್ನು ಬಿಟ್ಟೇ ಬಿಟ್ಟು ಸುಖವನ್ನೆ ಪಡೆಯಬೇಕು, ಎಂದು ಹವಣಿಸುವವನು ವ್ಯರ್ಥ ಖಟಪಟಿ ಮಾಡುತಿರುವನು ಎಂದು ಹೇಳಬಹುದು. ದುಃಖವನ್ನು ಸಹಿಸಲು, ಅದನ್ನು ಕಡಿಮೆ ಮಾಡಲು, ಅದನ್ನು ದಾಟಿ ಹೋಗಲು, ಅದರಿಂದ ಸಹ ಸುಖವನ್ನು ಹೀರಿಕೊಳ್ಳಲು (ನಾಟಕಾದಿಗಳಲ್ಲಿಯ ಪಾತ್ರಗಳ ದುಃಖದಿಂದ ಸಹ ನಾವು ದರ್ಶಕರು ಸುಖಪಡುವಂತೆ) ನಾವು ಯತ್ನಿಸಬೇಕೇ ಹೊರತು ಅದನ್ನು ಇಲ್ಲದಂತೆ ಮಾಡಲು ಯತ್ನಿಸುವದೆಂದರೆ ನಿಸರ್ಗವನ್ನೇ ಬದಲು ಮಾಡಲು ಯತ್ನಿಸಿದಂತೆ.

ನಿಜವಾದ ಪುರುಷಾರ್ಥ ಕೂಡ ದುಃಖವನ್ನು ಪೂರ್ಣ ನಷ್ಟಪಡಿಸುವದರಲ್ಲಿಲ್ಲ; ಅದನ್ನು ಗೆದೆಯುವದರಲ್ಲಿ, ಅದರಿಂದಲೆ ಸುಖವನ್ನು ಸೆಳೆಯುವದರಲ್ಲಿ, ಅದರ ಕೈಗೆ ನಾವು ಸಿಲುಕದಂತೆ ನಮ್ಮ ಮನೋಭೂಮಿಕೆಯನ್ನು ತಯಾರಿಸುವದರಲ್ಲಿ, ಆದರಾಚೆಗೆ ಹೋಗುವದರಲ್ಲಿ, ಅದನ್ನು ನುಂಗಿ ನೀರು

ಡಿದು ಅರಗಿಸುವದರಲ್ಲಿಯೆ ಗಂಡಸುತನವಿರುವದು. ನೀಲಕಂಠನ
ಡ್ಡಸ್ತಿಕೆ ವಿಷವನ್ನು ಕುಡಿದು ಅದರಿಂದ ಬಾಧೆಯಾಗದಂತೆ ಅದನ್ನು
ಂಠದಲ್ಲಿ ಧರಿಸುವದರಲ್ಲಿಯೆ ಇದೆ. ಅನಂತಶೇಷನನ್ನೆ ಶಯ್ಯೆಯನ್ನು
ಾಡಿಕೊಂಡು ಅದರ ಮೇಲೆ ಸುಖದಿಂದ ನಿದ್ರೆ ಹೋಗುವದರಲ್ಲಿಯೆ
ಷ್ಣುವಿನ ಶ್ರೇಷ್ಠತ್ವವಿದೆ. ವಿಷಧಾರಿ ಕರಾಲ ಕಾಲಿಯನ ಹೆಡೆಯ ಮೇಲೆ
ಣಿಕುಣಿದಾಡುತ್ತ ಕೊಳಲನೂದುವದರಲ್ಲಿಯೆ ಬಾಲಕೃಷ್ಣನ ಲೀಲೆಯ
ರಮಾವಧಿ ಇದೆ. ಅದೇ ರೀತಿ ದ್ವಂದ್ವಗಳ ತವರೂರಾದ ಈ ಜೀವನ
ಂಗದಲ್ಲಿ ಅನಿಷ್ಟವನ್ನು ನಶಿಸಿ ಇಷ್ಟವನ್ನಷ್ಟೆ ಪಡೆಯಲೆತ್ನಿಸುವ ಉದ್ಯೋಗ
ಂತ ಇಷ್ಟಾನಿಷ್ಟಗಳು ಒದಗಿದಾಗ ಸಮತ್ವದಿಂದಿರಲು ಸಾಧಿಸುವುದು,
ಂದ್ವಗಳಾಚೆ ಹೋಗಲು ಹೆಣಗುವದು, ಅನಿಷ್ಟದಿಂದ ಸಹ ಸುಖವನ್ನು
ಡೆಯುವ ಯುಕ್ತಿಯನ್ನು ಕೈವಶಮಾಡಿಕೊಳ್ಳುವದು, ಇದರಲ್ಲಿಯೆ ಪೌರುಷ
ದೆ, ನಿಜಶಕ್ತಿಯ ಪರೀಕ್ಷೆ ಇದೆ, ಜೀವನಯೋಗದ ಪರಮ ಸಿದ್ಧಿ ಇದೆ.

ಸುಖ-ದುಃಖ ಎಂದು ಹೇಳುವೆವು. ಆದರೆ ಅವುಗಳ ಲಕ್ಷಣವೇನು?
ರಡೂ ವೇದನೆಗಳು, ಸಂವೇದಗಳು, ಚಿತ್ತದ ಸಮತ್ವವನ್ನು ಕೆಡಿಸುವ
ದಲಾವಣೆಗಳು. ವಿಷಯುಗಳ ದ್ವಾರಾ ಇಂದ್ರಿಯಗಳ ಮೂಲಕ ಮನಸಿನ
ೇಲೆ ರೂಪರಸಾದಿ ಮುದ್ರೆಗಳು ಮೂಡುವವು. ಅವುಗಳ ಆಕಲನವೆ
ಂವೇದ ಅಥವಾ ವೇದನೆ (ಅರಿವು, ಜ್ಞಾನದ ಅಚ್ಚು). ಈ ಸಂವೇದ
ಲ್ಲವೆ ಇವುಗಳ ಸಮೂಹ, ಅಥವಾ ಇವುಗಳ ನೆನಪು, ಅಥವಾ ಇವುಗಳ
ನಪಿನಿಂದ ಆಗುವ ಮತ್ತೆ ಬೇರೆ ನೆನಪು, ಅಥವಾ ನೆನಪುಗಳು ಇಷ್ಟ
ದ್ದಾಗ ಆ ಭಾವನೆಗೆ ನಾವು ಸುಖ ಎನ್ನುವೆವು; ಅದು ಅನಿಷ್ಟವಿದ್ದ ಪಕ್ಷ
ಲ್ಲಿ ಅದಕ್ಕೆ ದುಃಖ ಎನ್ನುವೆವು. ಆದುದರಿಂದಲೆ ಅನುಕೂಲವೇದನೆ
ುಖವೆನಿಸುವದು, (ಅನುಕೂಲವೇದನೀಯಂ ಸುಖಂ), ಪ್ರತಿಕೂಲವೇದನೆ
ುಃಖವೆನಿಸುವದು. ಇದನ್ನೆ ಇನ್ನೂ ಹಗುರಾಗಿ ಹೇಳಬೇಕಾದರೆ, ಬೇಕಾ
ುದು ಸುಖ, ಬೇಡಾದುದು ದುಃಖ. ಈ ಮೂಲಭಾವನೆಗಳ ಮೂಲಕವೆ
ಪ್ರಾಣಿಯು ಬೇಕಾದುದನ್ನು ಸಮೀಪಿಸುವದು, ಬೇಡಾದುದನ್ನು ದೂರೀಕರಿಸು
ದು. ಆಕರ್ಷಣ-ವಿಕರ್ಷಣಗಳ ಗುಟ್ಟು ಇದರಲ್ಲಿಯೆ ಇರುವದು.

ಯಾವ ಜಡ ಪದಾರ್ಥಗಳಲ್ಲಿ ಚೈತನ್ಯವಿಲ್ಲ ಎಂದು ನಾವು ಅನ್ನುವೆವೊ
ವುಗಳಲ್ಲಿ ಸಹ ಆಕರ್ಷಣ-ವಿಕರ್ಷಣಗಳು ಸ್ವಾಭಾವಸಿದ್ಧವಾಗಿವೆ. ಇದೇ

ಸ್ವಭಾವವು ಪ್ರಾಣಿಗಳಲ್ಲಿ ಇಚ್ಛಾಶಕ್ತಿಯ ರೂಪದಿಂದ ವ್ಯಕ್ತವಾಗುವದು. ಇದು ಬೇಕು, ಅದು ಬೇಡ, ಅನ್ನುತ್ತ ಹೋಗುವದು, ಹಾಗೂ ಬೇಕಾದುದನ್ನು ದೊರಕಿಸುವದರಲ್ಲಿ ಬೇಡಾದುದನ್ನು ತ್ಯಜಿಸುವದರಲ್ಲಿ ಸಹಾಯಮಾಡುವದು. ಪ್ರಾಣಿಯು ಈ ಬಗೆಯ ಪ್ರಯತ್ನಮಾಡುತಿದ್ದರೂ ದುಃಖ ಮಾತ್ರವನ್ನು ಪೂರ್ಣವಾಗಿ ನೀಗಲು, ದುಃಖಲೇಶರಹಿತ ಸುಖವನ್ನೆ ಪೂರ್ಣವಾಗಿ ಪಡೆಯಲು ಸಾಧ್ಯವೊ ಎಂಬುದನ್ನು ನೋಡುವದು ಅವಶ್ಯವು.

ಸ್ವರ್ಗ, ಮೋಕ್ಷ, ಇವುಗಳನ್ನು ಇಚ್ಛಿಸುವಾಗ ಕಲ್ಪಿಸುವಾಗ ಮನುಷ್ಯನು ದುಃಖರಹಿತ ಪೂರ್ಣಸುಖವನ್ನೆ ಕಲ್ಪಿಸುವನು, ಎಂಬುದರಲ್ಲಿ ಸಂಶಯವಿಲ್ಲ. ಆದರೆ ಹೇಳಿ ಕೇಳಿ ಅದು ಕಲ್ಪನೆ. ಕೆಲಕಾಲ ಮಾತ್ರ ನಾವು ಭೋಗಿಸಬಲ್ಲ ಕೃತ್ರಿಮ ಸೃಷ್ಟಿ ಅದು. ಪ್ರತ್ಯಕ್ಷ ಪಂಚೇಂದ್ರಿಯಗಳ ಭೋಗದೊಡನೆ ಹೋಲಿಸಿ ಆ ದೃಷ್ಟಿಯಿಂದ ನೋಡಿದರೆ ಸ್ವಪ್ನಭೋಗ ಹಾಗೂ ಕಲ್ಪನಾ ಭೋಗ ಈ ಎರಡರಲ್ಲಿ ಸಾದೃಶ್ಯವಿರುವದು. ಆದರೆ ಎರಡೂ ಪ್ರತ್ಯಕ್ಷ ಭೋಗದಿಂದ ಬಹಳ ದೂರವೇ ಸೈ. ಪ್ರತ್ಯಕ್ಷಾನುಭವದಲ್ಲಿಯ ಅನೇಕ ಅಡ್ಡಿ ಅಡಚಣಿಗಳು ಸ್ವಪ್ನ ಹಾಗೂ ಕಲ್ಪನೆ ಇವುಗಳಲ್ಲಿ ಇರುವದಿಲ್ಲ. ಉದಾ : ಸ್ವಪ್ನ ಹಾಗೂ ಕಲ್ಪನಾಸಾಮ್ರಾಜ್ಯಗಳು ದಿಕ್ಕಾಲಾದಿಗಳ ನಿಯಮಗಳನ್ನು ಮನ್ನಿಸುವದಿಲ್ಲ ಎಂದು ಹೇಳಬಹುದು. ಅದೇ ರೀತಿ ವಿಸಂಗತಿ-ದೋಷದ ಭಯವೂ ಅಲ್ಲಿದ್ದಂತೆ ತೋರುವದಿಲ್ಲ.

ಪ್ರತ್ಯಕ್ಷ ಪಂಚೇಂದ್ರಿಯಗಳ ಅನುಭವವೆ ಸ್ವಪ್ನ ಹಾಗೂ ಕಲ್ಪನೆ ಇವುಗಳ ಮೂಲಾಧಾರವಾಗಿದ್ದರೂ ನಮ್ಮ ಆಶೆ-ಆಕಾಂಕ್ಷೆಗಳು ಜಡಸೃಷ್ಟಿಯ ನಿಯಮ ನಿಬಂಧನೆಗಳನ್ನು ಬದಿಗೊತ್ತಿ ಅವು ತಮ್ಮದೆ ಆದ ಒಂದು ನಿರಂಕುಶ ದೃಷ್ಟಿಯನ್ನು ನಿರ್ಮಿಸುವವು. ಅನೇಕಾನೇಕ ಭಾವನಾವಿಶೇಷಗಳ ಚಲ್ಲಾಟವೂ ಅಲ್ಲಿ ನಡೆಯುವದು. ಆ ರಾಜ್ಯಗಳಲ್ಲಿ ದುಃಖವಿರಹಿತ ಸುಖಪೂರಿತ ಸ್ವಲ್ಪ ಕಾಲವನ್ನು ಕಳೆಯುವದು ಮನುಷ್ಯನಿಗೆ ಸಾಧ್ಯವು. ಅಭ್ಯಾಸದಿಂದ ಬಹಳ ಕಾಲವನ್ನೂ ಕಳೆಯಬಹುದು, ಕೇವಲ ಸುಖದಲ್ಲಿಯೂ ಹಲವರು ರಮಮಾಣರಾಗಬಹುದು, ದೇಹವನ್ನು ಸಂಪೂರ್ಣ ಮರೆತುಬಿಟ್ಟು ಸ್ವಪ್ನದಲ್ಲಿಯೊ ಕಲ್ಪನೆಯಲ್ಲಿಯೊ ಲಯವನ್ನು ಸಹ ಸಾಧಿಸಬಹುದು. ಆದರೆ ಮೇಲೆ ಹೇಳಿದಂತೆ ಆ ಎರಡು ಲೋಕಗಳು ಈ ಲೋಕದ ಆಧಾರದಿಂದ ನಿಂತಿದ್ದರೂ ಅವು ಬೇರೆ ಹಾಗೂ ಕೃತ್ರಿಮವಾದವುಗಳು ಎಂಬಲ್ಲಿ ಸಂಶವಿಲ್ಲ. ಆ ಲೋಕಗಳ

ಯು ಅನುಭವವನ್ನು ಅಥವಾ ಅಲ್ಲಿ ಸಾಧಿಸಿದುದನ್ನು ಇಲ್ಲಿ ಸಾಧಿಸುವದು
ಕ್ಯವಿಲ್ಲ. ಅಲ್ಲಿ ಸಾಧಿಸಿದ್ದೇ ಇಲ್ಲಿಯೂ ಸಾಧಿಸಿದಂತೆ ಎಂಬ ಸಮಾಧಾನ
ನ್ನು ಹಚ್ಚಿಕೊಳ್ಳುವದರಲ್ಲಿಯೂ ಅರ್ಥವಿಲ್ಲ. ಸಪ್ನಸೃಷ್ಟಿಯು ಕೊನೆಗೆ ಸ್ವಪ್ನ
ೃಷ್ಟಿಯೆ; ಕಲ್ಪನಾಸೃಷ್ಟಿಯೂ ಕಲ್ಪನಾಸೃಷ್ಟಿಯೇ. ಕಾಗದಾದಿಗಳಿಂದ
ಾಡಿದ ಕೃತ್ರಿಮ ಕಮಲಪುಷ್ಪವು ಕೊನೆಗೆ ಕಾಗದದ್ದೇ. ಅದು ಮಧುರ
ಂಧವನ್ನು ಬೀರಲರಿಯದು. ಆದುದರಿಂದ ಪೂರ್ಣದುಃಖನಾಶ, ಪೂರ್ಣ
ುಖಾನುಭವ ಇವುಗಳನ್ನು ನಾವು ಕಲ್ಪನಾಸಾಮ್ರಾಜ್ಯದಲ್ಲಿ ಅನುಭವಿಸಿದರೂ
ರ್ಗ ಮತ್ತು ಮುಕ್ತಿ ಎಂಬ ಸ್ಥಿತಿವಿಶೇಷಗಳಲ್ಲಿ ಅವು ಸಾಧ್ಯವಿದ್ದರೂ
ತ್ಯಕ್ಷ ಪಾರ್ಥಿವಜೀವನದಲ್ಲಿ ಅವು ಸಾಧ್ಯವಿಲ್ಲ ಎಂದೇ ಹೇಳಬೇಕಾಗುವದು.

ಪ್ರತ್ಯಕ್ಷ ನಮ್ಮ ಜೀವನದ ಮೂಲಸ್ವರೂಪವನ್ನೆ ಪರಿಕ್ಷಿಸಿ ನೋಡಿದರೆ
ದು ಸುಖದುಃಖವೆಂಬ ಗಂಗೆ-ಯಮುನೆಗಳು ಕೂಡಿದ ಒಂದೇ ಒಂದು
ವಾಹದಂತೆಯೆ ಇದೆ. ಜನನ-ಮರಣ, ಶ್ವಾಸ-ನಿಶ್ವಾಸ, ಶೀತ-ಉಷ್ಣ
ುಂತಾದವುಗಳಿಂದಲೆ ಜೀವನವು ಸಿದ್ಧವಾಗಿರುವದು. ಈ ಮುಂತಾದ
ಂದ್ವಗಳನ್ನು ಬಿಟ್ಟರೆ ಜೀವನಕ್ಕೆ ಎಡೆಯಿಲ್ಲ. ಈ ದ್ವಂದ್ವಗಳು ಆಯಾ
ಸಂಗದ ದೇಶಕಾಲಕ್ಕನುಸರಿಸಿ ಇಷ್ಟಾನಿಷ್ಟವಿದ್ದಂತೆ ನಮಗೆ ಸುಖದುಃಖ
ಳ ಅನುಭವವಾಗುವದು. ಅವುಗಳಲ್ಲಿ ಒಂದನ್ನೇ ಪಡೆದು ಇನ್ನೊಂದನ್ನು
ಾಶಮಾಡುತ್ತೇನೆಂದು ಹೇಳುವುದರಲ್ಲಿ ಹುರುಳಿಲ್ಲ. ಜೀವನದ ದೃಷ್ಟಿಯಿಂದ
ುಖದುಃಖಗಳೆರಡೂ ಒಂದು ರೀತಿ ಆವಶ್ಯಕವೆ. ದುಃಖವು ಬೇಡವೇ ಬೇಡ
ಂದು ಹೇಳುವದೂ ಜನನ ಬೇಕು ಮರಣ ಬೇಡ, ಉಷ್ಣ ಬೇಕು .ಶೀತ
ೇಡ, ಶ್ವಾಸ ಬೇಕು ನಿಶ್ವಾಸ ಬೇಡ, ಎಂದು ಹೇಳುವದೂ ಒಂದೇ. ಆದುದ
ಂದ ಹಾಗೆ ಹೇಳುತ್ತ ಕೂಡುವದಕ್ಕಿಂತ, ಅಶಕ್ಯವಾದುದನ್ನು ಇಚ್ಛಿಸುವ
ಕ್ಕಿಂತ, ದುಃಖವನ್ನು ಎದುರಿಸುವ ಮಾರ್ಗವನ್ನು ಹುಡುಕುವದು ಶ್ರೇಯ-
ರವಾದುದು. ಮರಣವೇ ಬೇಡ ಎನ್ನುವದಕ್ಕಿಂತ ಮರಣದ ಭಯವನ್ನು
ಳೆಯುವದು ಲೇಸು. ಆ ದೃಷ್ಟಿಯಿಂದಲೆ ನಾವು ಜೀವನದಲ್ಲಿಯ ಎಲ್ಲ
ುಃಖವನ್ನು ಗೆದೆಯಲು ಯತ್ನಿಸುತ್ತ ಹೋಗುವದು ಯೋಗ್ಯವು. ಅದು
ರಕೂಡದು ಎಂದೆನ್ನುವದು ಕೇವಲ ಒಂದು ಕೈಗೂಡದ ಇಚ್ಛೆ ಮಾತ್ರ ಆಗಿ
ುಳಿಯುವದು. ಆದರೆ ಅದನ್ನು ಉಪಾಯದಿಂದ ಗೆದೆಯಬೇಕು, ಸಾಧನ
ಂದ ಆದರಾಚೆ ಹೋಗಬೇಕು, ಅದರ ಅನಿಷ್ಟತ್ವವನ್ನು ಇಲ್ಲದಂತೆ ಮಾಡ

ಬೇಕು, ಎಂದು ಯತ್ನಿಸಿದರೆ ಸರಿಯಾದ ಮಾರ್ಗವು ದೊರೆಯುವದು. ಆ ದೃಷ್ಟಿಯಿಂದಲೆ ಶ್ರೀಕೃಷ್ಣನು ಅರ್ಜುನನಿಗೆ, 'ಸುಖದುಃಖಗಳಿಗೆ ಕಾರಣೀಭೂತವಾದ ಶೀತೋಷ್ಣಗಳನ್ನು ಸಹಿಸು, ಅರ್ಥಾತ್ ಗೆದೆ' ಎಂದು ಉಪದೇಶ ಮಾಡಿರುವನು. ಸುಖದುಃಖಗಳೆರಡಕ್ಕೂ ಮನಸೋಲಬೇಡ, ಎಂದು ಹೇಳುವದರಲ್ಲಿ ಒಂದು ಮಹತ್ವವಿದೆ. ಯಾಕಂದರೆ ವಿಷಯಗಳ ಮೂಲಕ ಉಂಟಾಗುವ ಸುಖವು ಕೂಡ ದುಃಖಪರಿಣಾಮಿಯಾಗಬಲ್ಲದು. ಆವಶ್ಯಕತೆಗಿಂತ ಹೆಚ್ಚು ಆಹಾರವಿಹಾರಾದಿಗಳು ಹಾನಿಕರವಾಗುವವೆಂಬುದು ಎಲ್ಲರ ಅನುಭವದ ಮಾತಾಗಿದೆ.

ಈ ಮೇಲಿನ ಎಲ್ಲ ಸಂಗತಿಗಳನ್ನು ಲಕ್ಷಿಸಿದರೆ, ಜೀವನಯಾತ್ರೆಯಲ್ಲಿ ಸುಖದುಃಖಗಳು ಸ್ವಾಭಾವಿಕವಾಗಿರುವವು, ಅವುಗಳಾಚೆ ಹೋಗಿ ದ್ವಂದ್ವಾತೀತಾವಸ್ಥೆಯನ್ನು ಸಾಧಿಸಿ ಸಾಕ್ಷಿರೂಪನಾಗಿ ವಿಶ್ವಲೀಲೆಯೆಂಬ ಆಟವನ್ನು ಆನಂದದಿಂದ ಅನುಭವಿಸಬಲ್ಲವನೆ ಯಶಸ್ಸನ್ನು ಪಡೆದ ಯಾತ್ರಿಕನೆಂದು ಹೇಳಬಹುದು. ಅವನೇ ಪ್ರತ್ಯಕ್ಷ ಜೀವನರಂಗದಲ್ಲಿ ನಿತ್ಯನಿರಾಲಂಬ ಸುಖವನ್ನು ಅನುಭವಿಸಬಲ್ಲನು.

ಇನ್ನು ಈ ಯಾತ್ರೆಯ ಸಂದರ್ಭದಲ್ಲಿ ಆಗಬಹುದಾದ ಸುಖದುಃಖಗಳ ಸ್ವರೂಪವನ್ನು ಸ್ವಲ್ಪ ನೋಡುವ. ಯಾತ್ರೆಯಲ್ಲಿ ಕಷ್ಟವಾದಷ್ಟು ಯಾತ್ರಿಕರಿಗೆ ಪುಣ್ಯ ಹೆಚ್ಚು, ಎಂಬ ಕಲ್ಪನೆಯೊಂದು ಬಹುಕಾಲದಿಂದ ರೂಢವಿರುವದು. ರೇಲು ಮುಂತಾದವುಗಳಿಲ್ಲದಾಗ ಯಾತ್ರಿಕರು ಅನೇಕ ಕಷ್ಟಪರಂಪರೆಗಳಿಗೆ ಒಳಗಾಗಬೇಕಾಗುತಿತ್ತು. ಅಲ್ಲದೆ ಕಾಲಾವಧಿ ಬಹಳ ಬೇಕಾಗುತಿತ್ತು. ದಕ್ಷಿಣದಿಂದ ಕಾಶೀಯಾತ್ರೆಗೆ ಹೊರಡುವವರು, ಉತ್ತರದಿಂದ ರಾಮೇಶ್ವರಕ್ಕೆ ಸಾಗುವವರು ಆಪ್ತೇಷ್ಟರಿಗೆ ಭೆಟ್ಟಿಯಾಗಿ ತಿರುಗಿ ಬರಬಹುದೊ ಇಲ್ಲವೊ ಎಂಬ ಸಂಶಯದಿಂದ ಮನೆ ಬಿಡುತ್ತಿದ್ದರು. ಯಾತ್ರೆಯಲ್ಲಿರುವಾಗ ಕಾಶಿ ಇಲ್ಲವೆ ಬದರಿಯಲ್ಲಿ ಮರಣ ಬಂದರೆ ಅದರಂಥ ಅಹೋಭಾಗ್ಯವೇ ಇಲ್ಲ ಎಂಬ ಶ್ರದ್ಧೆ ಈಗ್ಯೂ ಪ್ರಚಲಿತವಿದೆ. ಸಾಧಾರಣವಾಗಿ ಮುಪ್ಪಾದ ಬಳಿಕ ಇಲ್ಲವೆ ವೈಧವ್ಯಕ್ಕೀಡಾದ ಮೇಲೆ ಯಾತ್ರೆಗೆ ಹೊರಡುವವರೇ ಬಹಳ. ಇದನ್ನೆಲ್ಲ ನೋಡಿದರೆ ಯಾತ್ರೆ ಎಂದರೊಂದು ತಪಶ್ಚರ್ಯೆ ಎಂಬ ಭಾವನೆಯೆ ಇನ್ನೂ ರೂಢವಿರುವದೆಂದು ಅನ್ನಬಹುದು. ಒಂದು ರೀತಿ ಇದು ಯೋಗ್ಯವೂ ಇರುವದು. ಪರಮಾತ್ಮದರ್ಶನವೆಂಬುದು ಸುಖದಿಂದ ದೊರಕುವ ವಸ್ತು

ಲ್ಲ, ಆ ಬಗ್ಗೆ ಸಾಕಷ್ಟು ಕಷ್ಟಬಡಬೇಕು ಎಂಬ ವಿಚಾರವೆ ಈ ಭಾವನೆಯ
ಡಿಯಲ್ಲಿರುವದು. ಆದುದರಿಂದ ಪ್ರವಾಸದಲ್ಲಿ ಕೂಡ ಯಾತ್ರಿಕರು ಬಹುಶಃ
ತಸ್ಥರಾಗಿ ಇರುವದು ಹೆಚ್ಚು.

ನಾನು ವರ್ಣಿಸಿದ ಯಾತ್ರೆಯಲ್ಲಿ ಕೂಡ ಇಂದ್ರಿಯಸುಖಗಳನ್ನು
ೂರವೆ ಇಡಬೇಕಾಗಿರುವದು. ಇದರ ಅರ್ಥ ಕೇವಲ ಕಠೋರ ತಪಸ್ವಿ
ಂತೆ ಇಲ್ಲವೆ ಚಾಂದ್ರಾಯಣಾದಿ ವ್ರತಗಳನ್ನು ಕೈಕೊಂಡವರಂತೆ ಇರತಕ್ಕ
ಂದಲ್ಲ. ಇಂದ್ರಿಯಸುಖ ಇದು ಧ್ಯೇಯವಿರಕೂಡದು. ರಮ್ಯ ಇಲ್ಲವೆ
ದ್ಭುತ ನಿಸರ್ಗನೋಟ, ಶ್ರಮದಿಂದ ಬಳಲುತಿರುವಾಗ ತಂಪಾದ ಆಮ್ರವನ
ಥವಾ ಗಿರಿ ನಿರ್ಝರ ಇವುಗಳಿಂದ ಆಗಬಲ್ಲ ಸುಖವನ್ನು ಧಿಃಕರಿಸಬೇಕು
ಂದು ಯಾತ್ರಾಶಾಸ್ತ್ರವು ಹೇಳುವದಿಲ್ಲ. ಧ್ಯೇಯಚ್ಯುತಿಯಾಗುವಂತೆ
ಥವಾ ಧ್ಯೇಯದಿಂದ ದೃಷ್ಟಿ ಜಾರುವಂತೆ ಆಗಬಹುದಾದ ಸಂದರ್ಭಗಳಿಗೆ
ಡೆಗೊಡಕೂಡದು, ಇದೇ ಮುಖ್ಯ ತತ್ವ. ತಿರುಪತಿಗೆ ಹೊರಟವರು
ಂಡಿ ಹಾಟೆಲ್ಲಿನಲ್ಲಿ ಕಾಫಿ ಉಪ್ಪಿಟ್ಟು ತಿನ್ನುತ್ತ ಅದರಲ್ಲಿಯೆ ರಮಿಸಿ ಬಿಟ್ಟರೆ
ಂಕಟರಮಣನ ದರ್ಶನ ಎಂತಾಗಬೇಕು? ಆದುದರಿಂದ ಸ್ವಾಭಾವಿಕವಾಗಿ
ವಾಹಪತಿತವಾದ ಸುಖಗಳ ರಸವನ್ನು ಸವಿಯುತ್ತ, ಅವುಗಳಲ್ಲಿಯೆ
ೂಡಕಿ ಬೀಳದೆ ಅವು ಕೂಡ ಪರಮಾತ್ಮಾನುಗ್ರಹದ ಉದಾಹರಣೆಗಳು
ನ್ನುತ್ತ ಸಾಗುವುದೆ ನಿಜವಾದ ಯಾತ್ರಿಕನ ಬಿರುದು. ಈ ವಿಶ್ವ, ಈ
ೃಷ್ಟಿ, ಈ ದೇಹೇಂದ್ರಿಯಾದಿಗಳು ಈ ವಿಷಯಾದಿಗಳಲ್ಲಿರುವ ರಸ, ಅಭಿ-
ುಚಿ ಇವೆಲ್ಲ ಪ್ರಿಯವಾದವುಗಳು, ಪ್ರೇಯವಸ್ತುಗಳು. ಇವು ಕೂಡ
ರಮಾತ್ಮಾ ಪ್ರತೀಕಗಳು ಎಂದು ಬಗೆದು ಇವುಗಳನ್ನು ಶ್ರೇಯಃಸಾಧನ
ಾಗಿ ಉಪಯೋಗಿಸುವದರಲ್ಲಿ ನಿಜವಾದ ಸಾಧಕನ ಕೌಶಲವಿದೆ.

ನಮ್ಮ ಯಾತ್ರಿಕನಿಗೆ ಎರಡು ಸಂದರ್ಭಗಳಲ್ಲಿ ನಿಜವಾದ ಸುಖವಾಗುವ
ುಂಟು. ಆ ಸುಖವು ಅವನ ಕಾರ್ಯಕ್ಕೆ ಪೋಷಕವಾದುದೇ ಇರುವದು.
ಮಾನಶೀಲ ಯಾತ್ರಿಕರ ಸಂಗತಿ ದೊರೆತಾಗ ಆಗುವ ಆನಂದವು ಅನುಪಮ
ರುವದು. ತಾನೊಬ್ಬನೆ ತನ್ನ ಚಿಂತನದಿಂದ ನಿರ್ಧರಿಸಿದ ಮಾತುಗಳನ್ನು
ನ್ನ ಸ್ವಂತ ಅನುಭವದಿಂದ ಅರಿತ ಸಂಗತಿಗಳನ್ನು ಗೆಳೆಯರಿಗೆ ಹೇಳಿ, ಅವರ
ನುಭವಗಳೊಡನೆ ತಾಳ ಮೇಳ ಹಾಕಿ ನೋಡಿ, ಸರಿ ಎಂದು ಕಂಡುಬಂದಾಗ
ಗುವ ಆನಂದಕ್ಕೆ ಸೀಮೆಯಿಲ್ಲ. ತಾನು ಶೋಧಿಸುತಿರುವ ಭೂಖಂಡವು ದೃಷ್ಟಿ

ಗೋಚರವಾಯಿತೆಂದು ಕೋಲಂಬಸ್‌ನಿಗೆ ತಿಳಿದೊಡನೆ ಅವನಿಗೆ ಆದ ಹರುಷ, ಮತ್ತು ಈ ಯಾತ್ರಿಕನಿಗೆ ಆಗುವ ಹರುಷ ಇವು ಸರಿಮಿಗಿಲೆನಿಸಬಲ್ಲವು. ಸರಿಜೋಡಿಯವರ ಸಂಗ, ಸತ್ಸಂಗ, ಸತ್ಸಹವಾಸ ಇವು ಕೇವಲ ಆನಂದಕರ ಇಷ್ಟೇ ಅಲ್ಲ, ಅವು ಅತೀವ ಉತ್ಸಾಹಕರವೂ ಇರುವವು. ಅದೇ ನೇರೆಗೆ ತಾನು ತನ್ನ ಇಷ್ಟಕ್ಷೇತ್ರವನ್ನು ಸಮೀಪಿಸುತಿರುವನೆಂಬ ವಿಶ್ವಾಸವು ಮನಸಿನಲ್ಲಿ ಉಂಟಾಗುತ್ತಹೋದಂತೆ ಯಾತ್ರಿಕನಿಗೆ ಹೆಚ್ಚೆಚ್ಚು ಆನಂದೋದ್ರೇಕವಾಗುವದು. ಯಾವದೊಂದು ಪವಿತ್ರ ಗಿರಿಶಿಖರವನ್ನೇರುವಾಗ ಮೇಲೆ ಹೋದ ಹೋದಂತೆ ಕೆಳಗಿನ ಭೂಮಿಯೆಲ್ಲ ಒಂದು ವಿಸ್ತಾರಶೀಲ ವಿಶಾಲಪಟದಂತೆ ಕಾಣಿಸಲಾರಂಭಿಸುವದು. ಆಗ ಶಿಖರವು ಹತ್ತಿರ ಹತ್ತಿರ ಬರುತಿರುವದೆಂದು ಎನಿಸುವದು. ಅದರಿಂದ ಯಾತ್ರಿಕನ ಉಲ್ಹಾಸವು ಅಧಿಕತರವಾಗಿ ಅವನಿಗೆ ಆದ ಕಷ್ಟಗಳೆಲ್ಲ ಮರೆತುಹೋಗುವವು. ಅವನು ಹೊಸ ಹುರುಪಿನಿಂದ ಮತ್ತೆ ಮುಂದಡಿಯಿಡುವನು.

ಈ ಬಗೆಯ ಸುಖಗಳು ನಮ್ಮ ಯಶಸ್ವೀ ಯಾತ್ರಿಕನ ಪಾಲಿಗೆ ಬರುವದೇನೊ ನಿಜ. ಆದರೆ ಅವುಗಳೊಡನೆ ಅವನಿಗೆ ಹಲವು ಸಂದರ್ಭಗಳಲ್ಲಿ ಅತ್ಯಂತ ತೀವ್ರ ದುಃಖವೂ ಆಗುವದುಂಟು. ಧ್ಯೇಯವನ್ನು ಆದಷ್ಟು ಬೇಗನೆ ಮುಟ್ಟಬೇಕೆಂಬ ಆತುರ ಅವನಲ್ಲಿರುವುದರಿಂದ ಆ ಮಾತು ಎಷ್ಟು ಮುಂದೆ ಬೀಳುವದೊ ಅಷ್ಟು ಅವನು ದುಃಖಪೀಡಿತನಾಗುವನು. ಈ ಅವನ ದುಃಖವನ್ನು ವಿರಹಿಣಿಯರ ವಿರಹ ದುಃಖಕ್ಕೆಯೆ ಹೋಲಿಸಬೇಕಾಗುವದು. ಅನೇಕ ಸಾರೆ ಅವನು ಕೇವಲ ಏಕಾಕಿಯಾಗಿ ಸಾಗಬೇಕಾಗುವದು. ಆಗ ಕೂಡ ಎಲ್ಲರೂ ಕೈಬಿಟ್ಟ ಅನಾಥನ ಸ್ಥಿತಿಯಂತೆ ಅವನ ಸ್ಥಿತಿಯೂ ಆಗುವದು.

ಯಾತ್ರಿಕನು ತನ್ನ ಪಥದಿಂದ ಸಾಗುವಾಗ ಅನೇಕ ಶಾರೀರಿಕ, ಮಾನಸಿಕ, ಹಾರ್ದಿಕ ಸುಖದುಃಖಗಳಿಗೆ ಈಡಾಗಬೇಕಾಗುವದು. ಅವನು ಸುಖಗಳಿಗೆ ಮನಸೋಲದೆ ದುಃಖಗಳಿಗೆ ಎದೆಗೆಡದೆ ಧೀರೋದಾತ್ತವೃತ್ತಿಯಿಂದ ಮುಂದಡಿಯಿಡಬೇಕು. ಒಮ್ಮೊಮ್ಮೆ ದಣುವಾಗಬಹುದು, ಮತ್ತೊಮ್ಮೆ ದಾರಿ ಕಾಣದಂತಾಗಬಹುದು, ಇನ್ನೊಮ್ಮೆ ತನ್ನಿಂದ ಇನ್ನು ಮುಂದೆ ಸಾಗುವದು ಅಸಾಧ್ಯ ಎಂದು ಎದೆಗುಂದಬಹುದು, ಇವೆಲ್ಲವುಗಳನ್ನು ಅವನು ಎದುರಿಸಬೇಕಾಗುವದು. ಹೃದಯದಲ್ಲಿ ಅಪಾರಶ್ರದ್ಧೆ, ಧ್ಯೇಯದ ಮೇಲೆ ನೆಟ್ಟ ದೃಷ್ಟಿ, ಯಶಸ್ಸನ್ನು ಪಡೆದೇಪಡೆಯುವೆ ಎಂಬ ದೃಢ ಆತ್ಮವಿಶ್ವಾಸ, ಇವುಗಳನ್ನು

ಟ್ಟುಕೊಂಡು ಯಾತ್ರಿಕನು ಊರಿದ ಹೆಜ್ಜೆಯನ್ನು ಹಿಂತೆಗೆಯಲಿಕ್ಕಿಲ್ಲ
ಬ ಪ್ರತಿಜ್ಞೆಮಾಡಿ ಹೊರಟರೆ ಅವನನ್ನು ಹರಿಹರಬ್ರಹ್ಮರು ಸಹ ತಡೆಯು
ರರು. ಸುಖದುಃಖಗಳಲ್ಲಿ ಸಮದೃಷ್ಟಿಯುಳ್ಳವನಾಗಿ, ತಾನು ಆನಂದ
ಮ್ರಾಜ್ಯದ ಅಧಿಕಾರಿಯು ಎಂಬರಿವನ್ನು ಅವನು ದೃಢಪಡಿಸುತ್ತ ಹೋಗ
ಕು. ಈ ಸಾಧನೆಯೆ ಅವನನ್ನು ದ್ವಂದ್ವಗಳಾಚೆ ಒಯ್ದು ಮುಟ್ಟಿಸುವದು.

ನನಗೆ ಭಾರತವೆಂದರೊಂದು ಕೇವಲ ಭೂಗೋಲದಲ್ಲಿಯ ಶಬ್ದಮಾತ್ರ ವಲ್ಲ. ನನ್ನ ಮಟ್ಟಿಗೆ ಭಾರತಾಂಬೆ ಪ್ರತ್ಯಕ್ಷ ಆದಿಮಾತೆ, ಆದಿಶಕ್ತಿ.

—ಶ್ರೀ. ಅರವಿಂದ

(೧೦)

ಭಾರತ ದರ್ಶನ

ಮೂಲಜೀವಕ್ಕೆ ವಿಶಿಷ್ಟದೇಶ ಕಾಲಾದಿಗಳೆಂಬವು, ಗಂಡು ಹೆಣ್ಣೆಂಬುದು, ಹಿರಿಕಿರಿ ಎಂಬುದಿಲ್ಲ. ಇವೆಲ್ಲವೂ ಆಯಾ ಜೀವಗಳಿಗೆ ಜನ್ಮವಶಾತ್ ಬರುವವು. ಸಾಮಾನ್ಯ ಯಾತ್ರಿಕರೆಂಬುವವರು ತಮ್ಮ ದೇಶ, ಕಾಲ, ಧರ್ಮ, ಪರಂಪರೆ ಇವುಗಳಿಗನುಸರಿಸಿ ತಮ್ಮ ತೀರ್ಥಾಟನವನ್ನು ಪ್ರಾರಂಭಿಸುವರು. ಈ ನಮ್ಮ ಯಾತ್ರಿಕನು ಯಾವ ದೇಶಕಾಲಾದಿಗಳಲ್ಲಿ ಹುಟ್ಟಿ ಬೆಳೆದರೂ ಇವನ ಮಟ್ಟಿಗೆ ಜೀವನವೆ ಒಂದು ಯಾತ್ರೆಯಾಗಿ ಪರಿಣಮಿಸುವದು ಮತ್ತು ಆ ಅರಿವು ಉಂಟಾದೊಡನೆ ಆವನು ಸತ್ಯದೇವತೆಯ ದರ್ಶನಾರ್ಥವಾಗಿ ತನ್ನ ಆಯುಷ್ಯ ವನ್ನು ಮುಡಿಪಿಡುವನು. ಹೀಗಿದ್ದರೂ ಅವನು ಹುಟ್ಟಿದ ದೇಶಕಾಲಗಳು, ಪರಂಪರೆ ವಾತಾವರಣಗಳು, ಅವನ ಜಾಗ್ರತಿ ಹಾಗೂ ಪೂರ್ವಸಿದ್ಧತೆಯ ದೃಷ್ಟಿಯಿಂದ ಮಹತ್ವದವುಗಳು ಎಂಬಲ್ಲಿ ಸಂಶಯವಿಲ್ಲ. ಉದಾ: ಜೀವವು ಯಾವ ಕಾಲದಲ್ಲಿ, ಯಾವ ದೇಶಕಾಲಗಳಲ್ಲಿ ಹುಟ್ಟುವದೊ ಅದು ತೀರ ಕಾಡುಸ್ಥಿತಿಯಲ್ಲಿದ್ದುದು ಅಥವಾ ನೈತಿಕ ದೃಷ್ಟಿಯಿಂದ ತೀರ ಹಿಂದುಳಿದುದು ಇದ್ದರೆ ಜೀವಕ್ಕೆ ಮೇಲೆದ್ದು ಮುಂದೆ ಸಾಗಲು ಹೆಚ್ಚುಕಾಲ ಕಷ್ಟಗಳಾಗುವವು. ಸತ್‌ಸಂಸ್ಕಾರ ಎಂಬುದು ಬಹಳ ಮಹತ್ವದ ಮಾತು. ಅದರ ಅಭಾವ ಎಂಬುದು ಸಾಧನೆಗೆ ಹಾಗೂ ಪ್ರಗತಿಗೆ ಒಂದು ದೊಡ್ಡ ಅಡಚಣೆ. ಒಳ್ಳೆ ಹಸನಾದ ಭೂಮಿ, ಕಸುವಿನ ಗೊಬ್ಬರ, ಸಾಕಷ್ಟು ನೀರು ಇವು ಇದ್ದಲ್ಲಿ ಬೀಜ ಬಿದ್ದರೆ ಅದು ರಭಸದಿಂದ ಬೆಳೆದು ಪೂರ್ಣ ಬೆಳೆ ಕೊಡುವಂತೆ ಜೀವವು

ಕೂಡ ಒಳ್ಳೆ ಸುಸಂಸ್ಕೃತ ವಾತಾವರಣದಲ್ಲಿ ಹುಟ್ಟಿ ಬೆಳೆದರೆ ಅದು ಬೇಗನೆ ತನ್ನ ಯಾತ್ರೆಯಲ್ಲಿ ಮುಂದರಿಯುವದು.

ಅನುಕೂಲ ವಾತಾವರಣದಲ್ಲಿಯು ಯಾವದೇ ಜೀವನದ ಜನ್ಮವಾದೀತೆಂದು ಹೇಳಲು ಬರುವಂತಿಲ್ಲ. ಆಯಾ ಜನ್ಮ ಬರಬೇಕಾದರೆ ಆಯಾ ಜೀವಕ್ಕೆ ಮೊದಲು ಯಾರೂ ಕೇಳುವಂತೆಯೂ ತೋರಲಿಲ್ಲ! 'ಬುದ್ಧಿಃ ಕರ್ಮಾನುಸಾರಿಣಿ' ಕರ್ಮಕ್ಕನುಗುಣವಾಗಿ ಬುದ್ಧಿಯಾಗುವದು, ಎಂದು ಹೇಳುವಂತೆ ಜನ್ಮವಾದರೂ ಕರ್ಮಾನುಸಾರಿಯಿರುವದು, ಎಂದು ಪ್ರವಾದವಿರುವದು. ಆದರೆ ಇಲ್ಲಿ ಕರ್ಮ ಎಂದರೆ ಕೇವಲ ವೈಯಕ್ತಿಕ ಕರ್ಮಕ್ಕನುಸರಿಸಿ ಜನ್ಮವು ಬರುವುದಾದರೆ ಜೀವವು ತನ್ನ ಜನ್ಮಕರ್ಮಗಳ ಪ್ರಭು ಎನಿಸಬೇಕಾಗುವದು. ಅನಾದಿ ಕರ್ಮಪ್ರವಾಹ, ವಿಶ್ವಕರ್ಮನ ಸಂಕಲ್ಪ, ಆಯಾ ಜೀವದ ಕರ್ಮ ಇತ್ಯಾದಿಗಳೆಲ್ಲವೂ ಜನ್ಮದ ಮೇಲೆ ಪರಿಣಾಮಗಳನ್ನುಂಟುಮಾಡುತಿರಲಿಕ್ಕೆ ಸಾಕು. ಅರ್ಥಾತ್ ತನ್ನ ಜನ್ಮ ಎಲ್ಲಿ, ಯಾವಾಗ, ಹೇಗೆ ಆಗಬೇಕೆಂಬದರ ಮೇಲೆ ಜೀವನ ವೈಯಕ್ತಿಕ ಅಧಿಕಾರವು ಸಾಕಷ್ಟು ಇರಲರಿಯದು. ಆದರೆ ಎಲ್ಲಿಯೇ ಜನ್ಮ ಬಂದರೂ ತನ್ನ ಗುರಿಯ ಅರಿವು ಉಂಟಾದ ಕ್ಷಣದಿಂದ ಜೀವವು ತನ್ನ ಇಷ್ಟಸಾಧ್ಯಕ್ಕಾಗಿ ಹೆಣಗಲಾರಂಭಿಸಬೇಕಾಗುವದು. ಆದರಲ್ಲಿ ಹೆಚ್ಚುಕಡಿಮೆಯಾಗಕೂಡದು.

ಇದಲ್ಲದೆ ಯಾತ್ರಿಕನ ಜನ್ಮವು ಎಲ್ಲಿಯೇ ಆಗಲಿ, ಅವನು ತನ್ನ ಸುತ್ತಲಿನ ದೇಶ ಕಾಲಗಳ ಅಭ್ಯಾಸವನ್ನಷ್ಟೇ ಮಾಡದೆ ಇಡೀ ವಿಶ್ವದ ಆಳವನ್ನು ಅವನು ನೋಡಬೇಕಾಗುವದು. ಯಾಕಂದರೆ ವಿಶಿಷ್ಟ ದೇಶಕಾಲಗಳೆಂಬವು ಸ್ವತಂತ್ರವೂ ಅಲ್ಲ, ವಿಶ್ವವನ್ನು ಬಿಟ್ಟು ಇದ್ದವುಗಳಲ್ಲ. ಒಂದು ರೀತಿ ವಿಶ್ವವೇ ಪಾರ್ಶ್ವ ಭೂಮಿ ಹಾಗೂ ಆಯಾ ದೇಶಕಾಲಗಳು ಆ ಪಾರ್ಶ್ವಭೂಮಿಯಲ್ಲಿ ರೇಖಿಸಿದ ಚಿತ್ರವಿಶೇಷ. ಆಯಾ ಚಿತ್ರದ ಪೂರ್ಣ ಜ್ಞಾನವಾಗಲಿಕ್ಕೆ ಹಾಗೂ ಸರಿಯಾದ ಆಕಲನಕ್ಕೆ ಪಾರ್ಶ್ವದ ಸಮ್ಯಕ್‌ಜ್ಞಾನವು ಅತ್ಯವಶ್ಯವಾದುದು. ಇಡೀ ಜೀವಕೋಟಿಯೆ ಒಂದು ಮಾರ್ಗದಿಂದ ಮುಂದೆ ಸಾಗಿರಲು, ಮಾನವಕುಲವೆ ಪ್ರಗತಿಸೋಪಾನವನ್ನು ಏರುತಿರಲು ಯಾವುದೆ ಜೀವವು ತನ್ನಷ್ಟಕ್ಕೆ ತಾನೆ ಪ್ರತ್ಯೇಕವಾದ ದೇಶಕಾಲಗಳಲ್ಲಿ ಇದ್ದುಕೊಂಡು ವಿಶ್ವದ ಪರಿವೆ ಇಲ್ಲದೆ ಮುಂದಾಗಬಹುದೆಂದು ನಂಬುವದು ಅವಾಸ್ತವವಾಗುವದು.

ಹೀಗೆ ವಿಶ್ವದ ಜ್ಞಾನವನ್ನು ಮಾಡಿಕೊಳ್ಳುವದು ಪ್ರತಿ ಯಾತ್ರಿಕನ ಕರ್ತವ್ಯವಿದ್ದರೂ ತಾನು ಹುಟ್ಟಿದ ಭೂಮಿ, ಎಂಬ ಆತ್ಮೀಯ ಭಾವನೆ ಹಾಗೂ

ಆಯಾ ಭೂಮಿಯ ಬಗ್ಗೆ ಹೆಚ್ಚು ಜ್ಞಾನ ಇವು ಸ್ವಾಭಾವಿಕವಿರುವವು. ಆದರೆ ಇವು ತಾನೇ ಶ್ರೇಷ್ಠ, ತನ್ನ ದೇಶವೆ ಶ್ರೇಷ್ಠ ಎಂಬ ಅಹಂಕಾರಕ್ಕೆ ಕಾರಣ ವಾಗಕೂಡದು. ಸ್ವಾಭಿಮಾನ, ಸದಭಿಮಾನ, ಸಾಧಾರ ಅಭಿಮಾನ ಇವು ಬೇರೆ, ಇವು ವ್ಯಕ್ತಿಗೆ ಪೋಷಕವಾದವುಗಳು. ಅಹಂಭಾವ, ಅಹಂಕಾರ ಜ್ಞಾನ ರಹಿತ ಅಭಿಮಾನ ಇವು ಬೇರೆ, ಇವು ಆಯಾ ವ್ಯಕ್ತಿಗೆ ಘಾತಕಗವಾದವುಗಳು. ಈ ತಾರತಮ್ಯವನ್ನಿಟ್ಟುಕೊಂಡು ಮುಂದೆ ಸಾಗಿದರೆ ಸಮಭಾವನೆಂಬುದು ನೆಲೆಗೊಂಡು ಪ್ರಗತಿಗೆ ಉಪಯುಕ್ತವಾಗುವದು.

ಪ್ರತಿ ಮಾನವ ಜೀವಕ್ಕೂ ತಾನು, ತನ್ನದೇಹ, ತನ್ನ ಕುಟುಂಬ, ತನ್ನ ಕುಲ, ತನ್ನಗ್ರಾಮ, ತನ್ನಪ್ರಾಂತ, ತನ್ನದೇಶ ಎಂಬ ಅಭಿಮಾನವು ಇದ್ದುದು ಕಂಡುಬರುವದು. ಇದು ಜ್ಞಾನಯುಕ್ತವಿದ್ದರೆ ಮಾತ್ರ ಉಪಕಾರಕ, ಇಲ್ಲದಿ ದ್ದರೆ ವೃಥಾಭಿಮಾನಕ್ಕೆಳಸುವದು. ಇನ್ನು ಇಡೀ ಮಾನವಕುಲದ ಅಭಿಮಾನ ವಾಗಲಿ, ಭೂಮಂಡಲದ ಅಭಿಮಾನವಾಗಲಿ, ವಿಶ್ವದ ಅಭಿಮಾನವಾಗಲಿ ಕಂಡುಬರುವದು ವಿರಳ. ಮಾನವೇತರ ಜೀವಕೋಟಿ, ಇತರ ಲೋಕಗಳು, ಇತರ ವಿಶ್ವಗಳು ಇವುಗಳ ಬಗ್ಗೆ ಹೆಚ್ಚು ಎಚ್ಚರ ಉಂಟಾಗುತ್ತ ಹೋದಂತೆ ಈ ಬಗೆಯ ಅಭಿಮಾನಕ್ಕೆ ಆಸ್ಪದವುಂಟಾಗಬಹುದು. ಈ ಮುಂತಾದ ಅಭಿ ಮಾನಗಳನೆಲ್ಲ ಪರಕಿಸಿ ನೋಡಿದರೆ ಅವು ಕ್ರಮಶಃ ಹೆಚ್ಚು ವಿಶಾಲ ಕ್ಷೇತ್ರ ವನ್ನು ಸಂಬಂಧಿಸಿರುವವು. ಇವೆಲ್ಲ ವರ್ತುಲಗಳಿವೆ ಎಂದು ಭಾವಿಸಿದರೆ ಇವು ಏಕಕೇಂದ್ರೀಯ ವರ್ತುಲಗಳಿರುವವೆಂದೂ 'ನಾನು' ಎಂಬುದೆ ಆ ಏಕೇಂದ್ರಿಯ ವೆಂದೂ ಗೊತ್ತಾಗುವದು. 'ನಾನು' ಎಂಬುದರ ಸಂಬಂಧವು ಪಸರಿಸುತ್ತ ಹೋದಂತೆ, ಆ ಅರಿವು ಅಭಿಮಾನಗಳು ಬೆಳೆಯುತ್ತಹೋದಂತೆ ಈ ಕ್ಷೇತ್ರವು ವಿಶಾಲವಾಗುತ್ತ ನಡೆಯುವದು. ಕೊನೆಗೆ ಇದು ವಿಶ್ವಗಳನ್ನೆಲ್ಲ ವ್ಯಾಪಿಸಿ ವಿಶ್ವಕರ್ತನ ಠಾವನ್ನು ಶೋಧಿಸಲುದ್ಯುಕ್ತವಾಗುವದು. ತಣ್ಣಗಾಗಿ ನಿಂತ ನೀರಲ್ಲಿ ಒಂದು ಹರಳು ಒಗೆದರೆ ಆ ಠಾವಿನಿಂದ ತೆರೆಗಳು ಅಲೆದಲೆದು ಒಂದು ಇನ್ನೊಂದನ್ನು ಭೇದಿಸದೆ, ಭೇದಿಸದೆ ದಂಡೆಗೆ ಹೋಗಿ ಅಮರುವಂತೆ, ಈ 'ಅಹಂ' ಕ್ಷೇತ್ರದ ಕತೆಯಿರುವದು. ಇದು ಆಗುವುದಾದರೂ ಹೀಗೆಯೇ ಆಗ ಬೇಕು. ಒಂದೇ ಬಿಂದುರೂಪವಾಗಿರುವ ಸಂವಿತ್ತು ವಿಶ್ವವನ್ನು ವ್ಯಾಪಿಸುವು ದಲ್ಲದೆ ಹೊರಚೆಲ್ಲಿ, ಮುಂದಿನ ಅಡಿಯನ್ನೆಲ್ಲಿಡಬೇಕು, ಎಂದು ತ್ರಿವಿಕ್ರಮನು ಕೇಳಿದಂತೆ ಕೇಳಿದರೆ ಅದು ಆಶ್ಚರ್ಯದ ಮಾತಲ್ಲ. 'ಅಣೋರಣೀಯಾನ್

ಮಹತೋ ಮಹೀಯಾನ್’ ಎಂಬ ವರ್ಣನೆಯು ಈ ಸ್ವಯಂಭು ಸಂವಿತ್ತಿಗೆ ಚೆನ್ನಾಗಿ ಅನ್ವಯಿಸುವದು.

ಚಿತ್ಕ್ಷೇತ್ರವು ಈ ಪರಿ ಸೀಮೆದಪ್ಪಿ ಬೆಳೆಯುವ ಶಕ್ತಿಯುಳ್ಳದ್ದಾದರೂ ಪ್ರತ್ಯಕ್ಷ ಕಾರ್ಯಕ್ಷೇತ್ರವು ಆಯಾ ಜೀವದ ದೇಹಮನಾದಿಗಳ ಶಕ್ತಿಯ ಮೇರೆಯನ್ನವಲಂಬಿಸಿದೆ. ಶರೀರ, ವಾಸಸ್ಥಾನ ಇತ್ಯಾದಿಗಳಿಗೆ ನಿಕಟವರ್ತಿಯಾದುದೆ ಆಯಾ ಮಾನವನ ಪ್ರತ್ಯಕ್ಷ ಕಾರ್ಯಕ್ಷೇತ್ರವಾಗುವದು ಸ್ವಾಭಾವಿಕವಾಗಿದೆ. ಕಾರ್ಯಕ್ಷೇತ್ರವು ಹೀಗೆ ಸಂಕುಚಿತವಿರುತಿರಲು ವಿಚಾರಕ್ಷೇತ್ರ ಹಾಗೂ ಭಾವನಾಕ್ಷೇತ್ರ ಇವು ವಿಶಾಲ ಹಾಗೂ ಅಮರ್ಯಾದಿತವಿದ್ದು ಫಲವೇನು, ಎಂಬ ಪ್ರಶ್ನೆ ಉದ್ಭವಿಸುವದು. ಇದಕ್ಕೆ ಸಮಾಧಾನ, ಕರ್ಮವು ಸಣ್ಣದಿರಲಿ ದೊಡ್ಡದಿರಲಿ, ಕರ್ಮಕ್ಷೇತ್ರವು ಸಂಕುಚಿತವಿರಲಿ ವಿಶಾಲವಿರಲಿ. ಕಾರ್ಯಮಾಡುವ ಜೀವನವು ಅನಂತ, ಅಪಾರ, ಅಮೋಘ ಪರಮಾತ್ಮನೊಡನೆ ಸಮರಸೈಕ್ಯವನ್ನನುಭವಿಸುವಂತಹದಾಗುವಂತೆ ಹೆಣಗುವದೆ ಹೆಚ್ಚಿನ ಪುರುಷಾರ್ಥವು. ಗರುಡಪಕ್ಷಿಯು ಆಹಾರಕ್ಕಾಗಿ ಗಗನವಿಹಾರಿಯಾಗಿ ಭೂಪಟವನ್ನೆಲ್ಲ ನಿರೀಕ್ಷಿಸುತಿದ್ದರೂ ತನ್ನ ಗೂಡಿನಲ್ಲಿ ಗುಟುಕಿಗಾಗಿ ಕಾದಿರುವ ಮರಿಗಳನ್ನು ಸತತವೂ ಲಕ್ಷಿಸುವಂತೆ ವಿಶ್ವವಿಚಾರ, ವಿಶ್ವಭಾವನೆ ಇವುಗಳಿಂದೊಡಗೂಡಿದ ಜೀವವಿಶೇಷವು ಸಹ ಪ್ರತ್ಯಕ್ಷ ಕಾರ್ಯದ ಮಟ್ಟಿಗೆ ತಾನಿರುವ ಸ್ಥಲದ ಸುತ್ತಲಿನ ಕ್ಷೇತ್ರದ ಕಲ್ಯಾಣವನ್ನು ಸಾಧಿಸುವುದರಲ್ಲಿ ನಿರತವಿರುವದು.

‘ದುರ್ಲಭಂ ಭಾರತೇ ಜನ್ಮ’, ಭಾರತದೇಶದಲ್ಲಿ ಹುಟ್ಟಬರುವದು ದುರ್ಲಭ ಎಂದು ನಾಣ್ಣುಡಿಯುಂಟು. ನಮ್ಮ ಪೂರ್ವಜರು ಭಾರತವನ್ನು ಬಹಳವಾಗಿ ಮೆಚ್ಚಿದ್ದರು ಎಂಬುದು ಇದರ ಮೇಲಿಂದ ಸ್ಪಷ್ಟವಾಗುವದು. ಸಾಮಾನ್ಯವಾಗಿ ಎಲ್ಲ ದೇಶದವರೂ ತಮ್ಮ ತಮ್ಮ ದೇಶಗಳನ್ನು ಪ್ರೀತಿಸುವದುಂಟು. ನಮ್ಮ ದೇಹಗಳನ್ನು ನಾವು ಪ್ರೀತಿಸುವದಿಲ್ಲವೆ? ಅದೇಕೆ ಹಾಗೆ ಮಾಡುವೆವು? ಅದು ನಮ್ಮ ಅಧಿಷ್ಠಾನವೆಂದು, ಸ್ಥಿರವಾಗಿ ಪ್ರತಿಷ್ಠಿತವಿರುವ ತಾವೆಂದು. ಈ ದೇಹವೆಂಬ ಅಧಿಷ್ಠಾನಕ್ಕೆ ದೇಶವೆಂಬ ಅಧಿಷ್ಠಾನದ ಆವಶ್ಯಕತೆ ಇದೆ. ಆದುದರಿಂದ ದೇಹಕ್ಕೆ ಯಾವ ಮಹತ್ವವೊ ಅದೇ ಮಹತ್ವವು ದೇಶಕ್ಕೆ ಉಂಟು. ದೇಶವು ದೇಹಕ್ಕೆ ಆಧಾರ, ದೇಹವು ಜೀವಕ್ಕೆ ಆಲಂಬನ. ನಮ್ಮ ನಮ್ಮ ದೇಶದ ಬಗ್ಗೆ ನಮನಮಗೆ ಇದ್ದ ಪ್ರೀತಿಯೆ ಪ್ರಶಂಸೆ-ಅಭಿಮಾನಾದಿಗಳ ರೂಪದಲ್ಲಿ ವ್ಯಕ್ತವಾಗುವದು. ಅದರಲ್ಲಿಯ ಸಣ್ಣಪುಟ್ಟ ಗುಣಗಳು ಸಹ

ಬಹಳ ದೊಡ್ಡವುಗಳಾಗಿ ನಮಗೆ ತೋರ್ಪಡುವವು. ದೋಷಗಳು ಕಣ್ಣಿಗೆ ಕಾಣದೆ ಹೋಗುವವು. ಇಷ್ಟೊಂದು ಪಕ್ಷಪಾತವು ನಮ್ಮ ನಮ್ಮ ದೇಶಗಳ ಬಗ್ಗೆ ನಮಗೆಲ್ಲ ಇರುವದು. ಕೆಲವೊಂದು ಮರ್ಯಾದೆಯ ವರೆಗೆ, ಈ ಬಗೆಯ ಅಭಿಮಾನಾದಿಗಳು ಹಿತಕರವಾಗಬಹುದು. ಆದರೆ ಆ ಮೂಲಕ ನಾವು ಅನ್ಯದೇಶಗಳನ್ನು ಹಳಿಯುವ ಇಲ್ಲವೆ ದ್ವೇಷಿಸುವ ಅಥವಾ ಆಕ್ರಮಿಸುವ ಉಪಕ್ರಮವನ್ನಾರಂಭಿಸಿದರೆ ಮಾತ್ರ ಅದು ಸರ್ವಥಾ ಘಾತವಾಗಿ ಪರಿಣಮಿಸುವದು. ಯಾಕಂದರೆ ಅದರಿಂದ ನಾವು ಪ್ರತಿದ್ವೇಷಾದಿ ಭಾವನೆಗಳಿಗೆ ಆಮಂತ್ರಣವನ್ನಿತ್ತಂತಾಗುವದು.

ಇನ್ನು ದೇಶವನ್ನು ಪ್ರೀತಿಸುವದು ಎಂಬುದರ ಅರ್ಥವಾದರೂ ಏನು? ದೇಶವೆಂದರೇನು? ಅಲ್ಲಿಯ ಕಲ್ಲು ಮಣ್ಣುಗಳೊ, ನದಿ ಪರ್ವತಗಳೊ, ಗುಡಿಗುಂಡಾರಗಳೊ, ಜೀವ ಜಂತುಗಳೊ, ಮಾನವಪ್ರಾಣಿಗಳೊ ಅಥವಾ ಇವೆಲ್ಲ ಇರುವ ಒಂದು ಭೂಪ್ರದೇಶವೊ? ಅಥವಾ ಆಯಾ ಪ್ರದೇಶದ ವಾತಾವರಣ, ಇತಿಹಾಸ, ಸಂಸ್ಕೃತಿ ಇವೊ? ಇವುಗಳನ್ನು ಪ್ರೀತಿಸುವದೆಂದರೇನು? ಮನುಷ್ಯನು ತನ್ನ ಧನ ಸಂಪತ್ತನ್ನು ಪ್ರೀತಿಸುವಂತೆ, ಅದರ ಮೇಲೆ ತನ್ನ ಮಾಲಕಿ ಹಕ್ಕನ್ನು ಹೇಳುವಂತೆ, ಅದು ತನಗೆ ಉಪಯುಕ್ತ ವಸ್ತು ಎಂಬ ಭಾವನೆಯಿಂದ ಅದು ತನ್ನದಾಗಿರಬೇಕೆನ್ನುವಂತೆ ದೇಶವು ತನ್ನದೆನ್ನುವದು ಅದರ ಪ್ರೀತಿಯ ಲಕ್ಷಣವೆ? ಈ ಎಲ್ಲ ವಿಚಾರಗಳನ್ನು ಲಕ್ಷಿಸಿ ನೋಡಿದರೆ, ಜೀವಕ್ಕೆ ತನ್ನದೆಂಬ ದೇಹವಿರುವಂತೆ ವಿಕಸಿತವಾದ ಹಾಗೂ ಕಾರ್ಯೋನ್ಮುಖವಾದ ಮಾನವನಿಗೆ ತನ್ನದೆಂಬ ಕಾರ್ಯಕ್ಷೇತ್ರವೊಂದು ಬೇಕು. ಮನುಷ್ಯನು ಹುಟ್ಟಾ ಸಾಮಾಜಿಕಪ್ರಾಣಿಯಿರುವದರಿಂದ ಅವನ ಕಾರ್ಯಕ್ಷೇತ್ರವು ಕೇವಲ ಒಂದು ಜಡವಸ್ತುವಾಗಿರಲಾರದು. ಮಾನವಸಮಾಜ, ಅದರ ಹಿತ, ಅದರ ಸೇವೆ, ಅದಕಾಗಿ ತ್ಯಾಗ ಇವೇ ಅವನ ಕಾರ್ಯಕ್ಷೇತ್ರಗಳಾಗಬಲ್ಲವು. ಅಂಥ ಮಾನವಸಮಾಜದ ವಾಸಭೂಮಿಯು ಒಂದು ದೇಶವೆ ಆಗಿರಬಲ್ಲದು. ಅದು ಸಣ್ಣದಿರಲಿ, ದೊಡ್ಡದಿರಲಿ, ಅದರ ಇತಿಹಾಸ, ಅಲ್ಲಿರುವ ಜನರ ಧರ್ಮಕರ್ಮಗಳು ಅವರ ಗುಣದೋಷಗಳು, ರೀತಿನಡತೆಗಳು, ಪರಂಪರೆ ಸಂಸ್ಕೃತಿಗಳು ಇತ್ಯಾದಿಗಳ ಮೂಲಕ ಅದಕ್ಕೊಂದು ವ್ಯಕ್ತಿತ್ವವುಂಟಾಗುವದು. ನಮಗೆ ಪ್ರಿಯವಿದ್ದ ಯಾವದೊಂದು ವ್ಯಕ್ತಿಗೆ ಏನಾದರೂ ಅವಮಾನವಾದರೆ ಇಲ್ಲವೆ ತೊಂದರೆ ಉಂಟಾದರೆ ನಮಗೆ ದುಃಖವಾಗುವಂತೆ ಆಯಾ ದೇಶದ ಹೆಸರಿಗೆ ಕುಂದು

ಉಂಟಾದರೆ, ಅದು ಹಾಸಿಗೀಡಾದರೆ, ದಾಳಿಗೆ ತುತ್ತಾದರೆ ನಮಗೆ ಅತ್ಯಂತ ಉದ್ವೇಗವಾಗುವದು. ಅಂಥ ದೇಶದತ್ತ ನೋಡುವ ನಮ್ಮ ದೃಷ್ಟಿಯು ಒಂದು ವ್ಯಕ್ತಿಯನ್ನು ನೋಡುವ ದೃಷ್ಟಿಯಂತೆಯೆ ಆಗಿಬಿಡುವದು. ಆದುದರಿಂದಲೆ ಆಯಾ ದೇಶದವರು ತಮ್ಮ ದೇಶಕ್ಕೆ ಮಾತೃಭೂಮಿ ಅಥವಾ ಪಿತೃಭೂಮಿ ಎನ್ನುವರು. ಹೀಗೆ ಹೇಳುವಾಗ ಅದು ಕೇವಲ ತಮ್ಮ ಮಾತಾಪಿತೃಗಳು ಹುಟ್ಟಿದ ಭೂಮಿ ಎಂದು ಆದರ ಅರ್ಥವಲ್ಲ. ಅದು ಕೇವಲ ಶಬ್ದಾರ್ಥ. ಅದ ರೊಡನೆ ಭಾವಾರ್ಥ-ಧ್ವನ್ಯಾರ್ಥಗಳು ಬಹಳ ವ್ಯಾಪಕವಾಗಿವೆ. ದೇಶಪ್ರೀತಿ ಎಂಬುದು ಒಂದು ಅತ್ಯಂತ ಬಲವಾದ ಗಾಢಭಾವನೆಯು. ದೇಶಕ್ಕಾಗಿ, ಅದರ ಸಂರಕ್ಷಣೆಗಾಗಿ, ಅದರ ಉದ್ಧಾರಕ್ಕಾಗಿ ಅದರ ಪ್ರಗತಿಗಾಗಿ ಪ್ರಸಂಗವಶಾತ್ ಲಕ್ಷಾಂತರ ಜನರು ತಮ್ಮ ಪ್ರಾಣವನ್ನರ್ಪಿಸಲು ಸಿದ್ಧರಿರುವರು. ದೇಶ ಎಂಬ ವಸ್ತುವಿನೊಡನೆ ಅನೇಕಾನೇಕ ಶ್ರೇಷ್ಠ ಗಂಭೀರ ಭಾವನೆಗಳು ಸಂಬಂಧಿಸಿರು ವದರಿಂದಲೆ ದೇಶಪ್ರೇಮಿಗಳು ಅದಕಾಗಿ ತಮ್ಮ ಸರ್ವಸ್ವವನ್ನು ಧಾರೆಯೆರೆಯಲು ಕಟಿಬದ್ಧರಾಗುವರು. ಮಹಾಯೋಗಿ ಅರವಿಂದರಿಗೆ ದೇಶವೆಂದರೆ ಪ್ರತ್ಯಕ್ಷ ಮಾತೃಸ್ವರೂಪ ದೇವತೆಯಾಗಿ ಪರಿಣಮಿಸಿದ್ದಳು. ಹಡೆದ ತಾಯಿ ಪರದಾಸ್ಯ ದಲ್ಲಿದ್ದರೆ, ಆಕೆಯ ಮಾನಹಾನಿಯಾದರೆ, ಆಕೆ ಬಡವಾದರೆ, ದುಃಖಿತಳಾದರೆ, ಹೀನದೀನಳಾದರೆ ಯಾವ ಭಾವನೆಗಳ ಉದ್ರೇಕವು ಅವರಲ್ಲಿ ಆಗಬಹುದಾ ಗಿತ್ತೋ ಅದರ ಸಹಸ್ರಾರು ಪಾಲು ಹೆಚ್ಚು ಬಲದಿಂದ ಆಗಿನ ಭಾರತದೇಶದ ಪರಿಸ್ಥಿತಿಯ ಬಗ್ಗೆ ಅವರ ಭಾವನೆಗಳು ಉಕ್ಕೇರುತ್ತಿದ್ದವು.

ಸಾಮಾನ್ಯವಾಗಿ ಒಂದು ದೇಶದ ಎಲ್ಲ ಜನರು ತಮ್ಮ ನಾಡನ್ನು ಪ್ರೀತಿ ಸುವರು. ಆದರೆ ಅವರವರ ಪ್ರೀತಿಯ ವಿಶೇಷ ಕಾರಣಗಳು ಇರುವದುಂಟು. ತಮ್ಮ ದೇಶ, ಎಂದು ಅದನ್ನು ಪ್ರೀತಿಸುವ ಮಾತು ಬೇರೆ, ಅದರ ಕೆಲವೊಂದು ವಿಶಿಷ್ಟ ಲಕ್ಷಣಗಳ ಅಥವಾ ಗುಣಗಳ ಮೂಲಕ ಪ್ರೀತಿಸುವ ಮಾತು ಬೇರೆ. ಒಂದು ಸಾಮಾನ್ಯ ಪ್ರೀತಿ, ಇನ್ನೊಂದು ವಿಶೇಷ ಪ್ರೀತಿ. ಆಯಾ ದೇಶದ ನಿಸರ್ಗದತ್ತ ಸೌಂದರ್ಯ, ಅದು ವೀರತೆಯ ತವರುಮನೆ, ಶ್ರೇಷ್ಠ ಸತ್ಪುರುಷರ ಜನ್ಮಭೂಮಿ, ಜ್ಞಾನದ ಆಗರ ಇತ್ಯಾದಿ ಬೇರೆ ಕಾರಣಗಳಿಗಾಗಿ ಅಲ್ಲಿಯ ನಾಗರಿಕರು ಅದನ್ನು ಪ್ರೀತಿಸುತ್ತಿರಬಹುದು. ಈ ಬಗೆಯ ವಿಶೇಷ ಪ್ರೀತಿಯು ಆಯಾ ದೇಶದ ಆಯಾ ಗುಣಗಳ ಪೋಷಣಕ್ಕೆ ಕಾರಣವಾಗುವ ದಲ್ಲದೆ ಅದರ ವಿವಿಧಾಂಗಗಳು ಭದ್ರವಾಗಿ ಉಳಿಯಲು ಎಡೆಯಾಗುವದು.

ನಮ್ಮ ಭಾರತದೇಶದ ಮಾತಾದರೂ ಹೀಗೆಯೇ ಇರುವದು. ಇದೊಂದು ಬಹಳ ದೊಡ್ಡ ಹಾಗೂ ವಿಶಾಲ ದೇಶ. ಮೇಲಾಗಿ ಇಲ್ಲಿಯ ವಿವಿಧತೆ ಆಶ್ಚರ್ಯವನ್ನುಂಟುಮಾಡುವಂತಹದು. ಹಲವು ಪಾಶ್ಚಾತ್ಯ ಪಂಡಿತರು ಇದಕ್ಕೆ ಒಂದು ದೇಶ ಎನ್ನುವುದರ ಬದಲು, ಒಂದು ಖಂಡ ಎನ್ನುವುದುಂಟು. ಇದು ಪ್ರಾಚೀನತಮವಾದ ದೇಶಗಳಲ್ಲಿ ಒಂದು. ಮಾನವೀ ಸಭ್ಯತೆಯ ತೊಟ್ಟಿಲು ಮೊದಲು ಇಲ್ಲಿಯೆ ಕಟ್ಟಿತು ಎಂದು ಹೇಳುವಷ್ಟು ಈ ದೇಶವು ಪುರಾತನವಿರುವದು. ಸಿಂಧಪ್ರಾಂತದ ಮೊಹೆಂಜೊದಾರೊ ಹಾಗೂ ಹರಪ್ಪಾ ಎಂಬಲ್ಲಿ ಸಿಕ್ಕ ಪ್ರಾಚ್ಯವಸ್ತುಗಳಲ್ಲಿ ಮಣ್ಣಿನ ಗೊಂಬೆಗಳು, ಲೋಹಾದಿಗಳು ದೊರೆತಿರುವವಲ್ಲದೆ ಚಿನ್ನದ ಆಭರಣಗಳು ದೊರೆತಿವೆ. ಪೂರ್ವಯೋಜನೆಯಿಂದ ಕಟ್ಟಿದ ಪಟ್ಟಣ, ಸ್ನಾನಗೃಹ, ನೆಲಬುಡಕಿನ ಸೀರಹರಿಗಳು, ಧಾನ್ಯಸಂಗ್ರಹಾಲಯುಗಳು ಮುಂತಾದವು ಕಂಡುಬಂದಿವೆ. ಇವೆಲ್ಲ ಸುಮಾರು ಆರು ಸಾವಿರ ವರುಷದಾಚೆಗಿನವು ಎಂದು ಪಂಡಿತರು ಹೇಳುವರು. ಆ ಕಾಲದ ಜನರು ಒಂದು ಬಗೆಯ ಲಿಪಿಯನ್ನೂ ಉಪಯೋಗಿಸುತಿರುವಂತೆ ಕಾಣುವದು. ಅದನ್ನು ಓದಲು ಇನ್ನೂ ಸಾಧ್ಯವಾಗಿಲ್ಲ. ಹಾಗೆ ಸಾಧ್ಯವಾದಲ್ಲಿ ಅದೊಂದು ಅತ್ಯಂತ ಮಹತ್ವದ ಶೋಧನೆನಿಸುವದು. ಹಾಗೂ ಆರುಸಾವಿರ ವರುಷಗಳಾಚೆಗಿನ ಭಾರತೀಯನ ವಿಚಾರಗಳು ನಮಗೆ ತಿಳಿಯಲು ಹಾದಿಯಾಗುವದು. ಇದಲ್ಲದೆ ಅತ್ಯಂತ ಪ್ರಾಚೀನ ಧರ್ಮಕಾರ್ಯವೆನಿಸುವ ವೇದಗಳು ಇಲ್ಲಿಯೆ ಹುಟ್ಟಿದವು. ಅವುಗಳ ಕಾಲವು ಕೂಡ ಕೆಲವು ಪಂಡಿತರ ಮತದಂತೆ ಐದುಸಾವಿರ ವರುಷಗಳಾಚೆಗಿನದು. ಉಪನಿಷತ್ತುಗಳಲ್ಲಿ ಸಹ ಎಲ್ಲಕ್ಕೂ ಹಳೆಯದರಲ್ಲಿ ಒಂದಾದ ಬೃಹದಾರಣ್ಯಕವು ಮಿಥಿಲೆಯಲ್ಲಿ (ಉತ್ತರ ಬಿಹಾರ) ಹುಟ್ಟಿತು. ಶ್ರೇಷ್ಠ ತಾತ್ವಿಕ ವಿಚಾರಗಳ ಸುಗ್ಗಿಯೆ ಆ ಉಪನಿಷತ್ತಿನಲ್ಲಿ ನಮಗೆ ದೃಗ್ಗೋಚರವಾಗುವದು. ಮೊಹೆಂಜೊದಾರೊ ಮುಂತಾದ ಸ್ಥಾನಗಳಲ್ಲಿ ದೊರೆತ ಆರು ಸಾವಿರ ವರುಷಗಳಾಚೆಗಿನ ವಸ್ತುಗಳು, ಅದೇ ರೀತಿ ತದನಂತರ ಮೂರು ನಾಲ್ಕು ಸಾವಿರ ವರುಷಗಳ ವಸ್ತುಗಳು ಎಂದು ಹೇಳಬಹುದಾದ ವಸ್ತುಗಳೆಲ್ಲ ಕೇವಲ ಪ್ರಾಚ್ಯ ಸಂಶೋಧನ ಮತ್ತು ಮಾನವೀ ಇತಿಹಾಸ ಇವುಗಳ ದೃಷ್ಟಿಯಿಂದ ಮಹತ್ವದವಿರುವವು. ಆದರೆ ವೇದೋಪನಿಷತ್ತುಗಳು ಮಾತ್ರ ಈಗ್ಯೂ ವಿಚಾರಸಾಮ್ರಾಜ್ಯದಲ್ಲಿ ಹಾಗೂ ಭಾವನಾಮಂಡಲದಲ್ಲಿ ನವಸ್ಫೂರ್ತಿಯನ್ನು ಕೊಡುವ ಸಾಮರ್ಥ್ಯವನ್ನು ಇಟ್ಟುಕೊಂಡಿವೆ ಎಂಬದನ್ನು ಮರೆಯುವಂತಿಲ್ಲ. ಅವು

ವರ್ಗೀಕೃತವಾಗಿ ಕೇವಲ ವಸ್ತುಸಂಗ್ರಹಾಲಯಗಳಲ್ಲಿ ಹಣೆಗೆ ಚೀಟಿ ಹಚ್ಚಿಕೊಂಡು ಕೂಡುವ ವಸ್ತುಗಳಲ್ಲ. ಮನಬುದ್ಧಿಗಳಲ್ಲಿ ಹೊಕ್ಕು ನಮ್ಮನ್ನು ಮನೋಮರ್ಯಾದೆಯ ಚರಮಸೀಮೆಗೆ ಒಯ್ದುಬಿಡುವ ವಿಚಾರವೈಭವವು, ನಮ್ಮ ಹೃದಯಾಂತರಾಳದಲ್ಲಿ ಪ್ರವೇಶಿಸಿ ಅಂತಃಕರಣವನ್ನು ದಿವ್ಯ ಭವ್ಯ ಭಾವನೆಗಳಿಂದ ಕಲಕುಮಲಕು ಮಾಡಿಬಿಡುವ ಭಾವವೈಭವವು ಅವುಗಳಲ್ಲಿದೆ ಎಂಬುದು ಅನುಭವದ ಮಾತು.

ಮೊಹೆಂಜೊದಾರೋದ ಕಾಲದಿಂದ ಬುದ್ಧಭಗವಾನನ ಆಚೆಗಿನ ಕಾಲದ ವರೆಗೆ (ಕ್ರಿ. ಪೂ. ೬ನೆಯ ಶತಮಾನ) ವಿಹಂಗಮದೃಷ್ಟಿಯಿಂದ ನಾವು ಈ ಭೂಗೋಲದತ್ತ ನೋಡಿದರೆ ನಮಗೆ ಯುರೋಪ, ಅಮೇರಿಕಾ, ಆಸ್ಟ್ರೇಲಿಯಾ ಮುಂತಾದ ಖಂಡಗಳಲ್ಲಿ ಸಭ್ಯತೆಯ ಹೆಸರು ಸಹ ಕಂಡುಬರುವದಿಲ್ಲ. ಮಿಸರದೇಶ, ಅಸೀರಿಯಾ, ಬ್ಯಾಬಿಲೋನ, ಚೀನ ಈ ದೇಶಗಳಲ್ಲಿ ಮಾತ್ರ ಆಗ ಸಹ ಮಾನವನು ಸಭ್ಯತೆಯ ಹಲವು ಮೆಟ್ಟುಗಳನ್ನೇರಿದುದು ದೃಗ್ಗೋಚರವಾಗುವದು. ಅವುಗಳಲ್ಲಿ ದೊರಕುವ ಅವಶೇಷಗಳನ್ನು ನೋಡಿದರೆ ಅಲ್ಲಿಯ ಜನರು ಮೊಹೆಂಜೊದಾರೊ-ಹರಪ್ಪಾ ಪಟ್ಟಣಗಳ ನಿವಾಸಿಗಳಿಗೆ ಸರಿಮಿಗಿಲಾಗಿದ್ದರು ಎಂದು ಹೇಳಲು ಅಡ್ಡಿ ಇಲ್ಲ. ಆದರೆ ಆ ದೇಶಗಳಲ್ಲಿಯೂ ವೇದೋಪನಿಷತ್ತುಗಳ ಪಾಸಟಿಗೆ ಹತ್ತಬಲ್ಲ ಗ್ರಂಥಾದಿಗಳಾವೂ ಇನ್ನೂ ನೋಡಲು ದೊರೆತಿಲ್ಲ; ಅವುಗಳ ಹೆಸರುದಶಿಯ ಉಲ್ಲೇಖಾದಿಗಳೂ ಎಲ್ಲೆಲ್ಲಿಯೂ ಇಲ್ಲ.

ಮುಂದೆ ಬುದ್ಧಮಹಾವೀರರ ಕಾಲ, ಲಿಚ್ಛವಿವೃಜ್ಜಿ ಮುಂತಾದ ಗಣರಾಜ್ಯಗಳ ಕಾಲ, ಚಂದ್ರಗುಪ್ತ-ಚಾಣಕ್ಯ-ಅಶೋಕರ ಕಾಲ, ಸಮುದ್ರಗುಪ್ತಾದಿ ಸಮ್ರಾಟರ ಕಾಲ, ಉತ್ತರದಲ್ಲಿ ಹರ್ಷವರ್ಧನ ದಕ್ಷಿಣದಲ್ಲಿ ಸತ್ಯಾಶ್ರಯ ಪುಲಕೇಶಿ ಇವರ ಕಾಲ, ಇವೆಲ್ಲ ಕಣ್ಣುಮುಂದೆ ಹಾಯುವವು. ಅದೇ ರೀತಿ ತತ್ವಜ್ಞಾನ, ಅಧ್ಯಾತ್ಮ, ಧರ್ಮಶಾಸ್ತ್ರಾದಿಗಳಲ್ಲಿ, ಸಾಹಿತ್ಯದಲ್ಲಿ, ಬ್ರಹ್ಮಸೂತ್ರಾದಿಗಳು ಭಗವದ್ಗೀತೆ, ಮನುಸ್ಮೃತಿ, ಮಹಾಭಾರತ ರಾಮಾಯಣಾದಿಗಳು ಕಣ್ಣಿಗೆ ಬೀಳುವವು. ಚಿತ್ರಕಲೆ ಶಿಲ್ಪಾದಿಗಳಲ್ಲಿ ಅಜಂತಾ, ವೇರೂಳ, ಬದಾಮಿ, ಐಹೊಳೆ ಇತ್ಯಾದಿಗಳನ್ನೂ ನಾವು ಮರೆಯುವಂತಿಲ್ಲ. ಆಮೇಲೆ ಹಲವು ಶ್ರೇಷ್ಠ ವೀರ ಅರಸುಮನೆತನಗಳು, ಆಚಾರತ್ರಯರ ಉದಯ, ಭಕ್ತಿಮಾರ್ಗದ ಪ್ರಸಾರ ಇತ್ಯಾದಿ ದೃಗ್ಗೋಚರವಾಗುವವು. ಬಳಿಕ ಪ್ರಾಂತೀಯ ಭಾಷೆಗಳ

ಊರ್ಜಿತಾವಸ್ಥೆಗೆ ಪ್ರಾರಂಭವಾಗಿ ವಿವಿಧ ವಾಙ್ಮಯದ ಬಹುಮುಖ ನಿರ್ಮಾಣವು ತಲೆದೋರುವದು. ಮೊದಲಿನಿಂದಲೂ ಲಲಿತಕಲೆಗಳು, ಗಾಯನನರ್ತನಾದಿಗಳು, ಚಿತ್ರಕಲೆ ಇತ್ಯಾದಿ ಸಮುನ್ನತ ಸ್ಥಿತಿಗೆ ಮುಟ್ಟಿದುದು ಕಾಣಬರುವದು. ಇದೆಲ್ಲ ಸ್ವಲ್ಪ ಹಳೆಯದಾಯಿತು. ಈಚೆಗೆ ಅಂದರೆ ಹೋದ ಶತಮಾನದ ಅಪರಾರ್ಧದಲ್ಲಿ ಮೊದಲುಮಾಡಿ ರಾಜಾ ರಾಮಮೋಹನ ರಾಯ, ಶ್ರೀರಾಮಕೃಷ್ಣ ಪಸಮಹಂಸ, ಸ್ವಾಮಿವಿವೇಕಾನಂದ, ಅರವಿಂದಘೋಷ, ಗಾಂಧೀಜಿ, ರವೀಂದ್ರನಾಥ, ಅವನೀಂದ್ರ, ಮುಂತಾದ ದಿವ್ಯಾತ್ಮರು ಈ ಭಾರತದಲ್ಲಿ ತಮ್ಮ ಚರಿತ್ರೆಯಿಂದ ಹೊಸ ಚೈತನ್ಯವನ್ನು ತುಂಬಿದರು. ಭಾರತಾತ್ಮವು ಇನ್ನೂ ಪೂರ್ಣ ಜಾಗ್ರತವಿದ್ದು ಅದು ಜಗಕ್ಕೆಯೆ ಬೆಳಕನ್ನು ಬೀರಬಲ್ಲದು ಎಂಬುದನ್ನು ಸಿದ್ಧಪಡಿಸಿದರು.

ಇದರ ಅರ್ಥ ಬೇರೆ ದೇಶಗಳಲ್ಲಿ ಮಹಾಮಹಿಮರು ಹುಟ್ಟಿ ಬಾಳಿ ಬೆಳಗಿಲ್ಲ ಎಂದಲ್ಲ. ಆಯಾ ದೇಶ ಕಾಲ ಪರಿಸ್ಥಿತಿಗನುಸರಿಸಿ ಆಯಾ ಜನಾಂಗದ ಜನರಲ್ಲಿ ವಿಭೂತಿಗಳು ಹುಟ್ಟುತ್ತಲೆ ಬಂದಿರುವರು, ಮಾರ್ಗದರ್ಶನವನ್ನು ಮಾಡುತ್ತಲೆ ಇರುವರು. ಕ್ರಾಯಿಸ್ಟ, ಮಹಮ್ಮದ ಪೈಗಂಬರ, ಝುರಥುಷ್ಟ್ರ, ಕಾನ್‌ಫ್ಯೂಸಿಯೆಸ್, ಲಾವುಡ್ಜ, ಟಾಲಸ್ಟಾಯ ಮುಂತಾದವರ ಹೆಸರುಗಳು ಸಾಮಾನ್ಯವಲ್ಲ. ನಮಗೆ ಜ್ಞಾತವಿದ್ದ ಹಾಗೂ ಇತಿಹಾಸತಃ ಇಲ್ಲವೆ ಚರಿತ್ರೆಯ ಮೂಲಕ ಪರಿಚಿತವಿದ್ದವರೆಲ್ಲರಿಗೂ ನಾವು ಯೋಗ್ಯ ಮನ್ನಣೆ ಕೊಟ್ಟೇ ತೀರಲಿಕ್ಕೆ ಬೇಕು. ಇವರೆಲ್ಲರೂ ಮಾನವಕುಲದ ಉದ್ಧಾರಕರು. ಇತಿಹಾಸಕಾಲದಲ್ಲಿ, ಇತಿಹಾಸ ಪೂರ್ವಕಾಲದಲ್ಲಿ, ಇಡೀ ಭೂಲೋಕದಲ್ಲಿ ಮಾನವನ ಸರ್ವೋದಯಕ್ಕಾಗಿ, ಸರ್ವಾಂಗೀಣ ಹಾಗೂ ಸರ್ವರ ಉನ್ನತಿಗಾಗಿ ಪರಾರ್ಥಬುದ್ಧಿಯಿಂದ ಹೆಣಗಿದ ಪ್ರತಿವ್ಯಕ್ತಿಗೂ ನಾವು ನಿತ್ಯ ಪ್ರಣಾಮವನ್ನು ಮಾಡಲಿಕ್ಕೆಬೇಕು. ನಾವು ಅಂಧಕಾರವನ್ನು ಹೊಡೆದೋಡಿಸಲುಜ್ಜಿಗಿಸಿದಾಗ ಒಂದು ಮಿಣಿಮಿಣಿ ಉರಿಯುವ ಕೈದೀಪ ಕೂಡ ನಮ್ಮ ಆದರಕ್ಕೆ ಪಾತ್ರವು. ಮಾನವತೆ, ಮಾನವೀಯ ಸಭ್ಯತೆ, ಮಾನವ ಸಂಸ್ಕೃತಿ, ಮಾನವನ ಶಾರೀರಿಕ ಮಾನಸಿಕ ಬೌದ್ಧಿಕ ಭಾವಿಕ ನೈತಿಕ ಆತ್ಮಿಕ ವಿಕಾಸ, ಮಾನವನ ಸರ್ವತೋಪರಿ ಉನ್ನತಿ ಇವುಗಳನ್ನು ಸಾಧಿಸಲು ಮಾಡಲಾದ ಪ್ರಯತ್ನಗಳೆಲ್ಲ ಪೂರ್ಣವಾಗಿ ಪ್ರಶಂಸಾರ್ಹವಾದವುಗಳು. ಆ ಪ್ರಯತ್ನವನ್ನು ಹಿಂದೆ ಮಾಡಿದವರು, ಈಗ ಮಾಡುತಿರುವವರು, ಮುಂದೆ ಮಾಡುವವರೆಲ್ಲರೂ ಅಭಿನಂದನೆಗೆ

ತ್ರರು. ಮಾನವನ ಶರೀರದ್ರವ್ಯಗಳು ಹೆಚ್ಚು ಸೂಕ್ಷ್ಮ ಹಾಗೂ ಶುದ್ಧ
ಗಬೇಕು, ಅವನ ಮನಸು ಬರಬರುತ್ತ ಪವಿತ್ರತರವಾಗಬೇಕು, ಅಂತ
ಹ್ಯ ಜಗತ್ತುಗಳ ಮೇಲೆ ಅವನ ಪ್ರಭುತ್ವ ಬೆಳೆಯುತ್ತಹೋಗಬೇಕು,
ನು ತನ್ನ ಮೂಲ ಚಿದ್ಘನ ಸ್ವರೂಪವನ್ನು ಕಂಡುಕೊಂಡು ಅದರ ಸ್ಫೂರ್ತಿ
ಂದ ವರ್ತಿಸುವ ಸಾಮರ್ಥ್ಯವುಳ್ಳವನಾಗಬೇಕು, ಎಂದು ಸಂಕಲ್ಪಿಸಿ ಯತ್ನ
ರಾಗುವವರೆಲ್ಲರೂ ಮಾನವಕುಲದ ಉದ್ಧಾರಕರೆಂಬಲ್ಲಿ ಸಂಶಯವಿಲ್ಲ.
ಂತ ಜನರು ತಮ್ಮ ತಮ್ಮ ಬುದ್ಧಿಗೆ ತಿಳಿದಂತೆ, ತಮ್ಮ ಆತ್ಮಕ್ಕೆ ಹೊಳೆ
ತೆ ಯಥಾಶಕ್ತಿ, ಯಥಾಮತಿ ಯತ್ನಿಸುತ್ತಹೋಗುವುದರಲ್ಲಿಯೆ ಮಾನವನ
ನವ್ಯವು ಕಂಡುಬರುವದು. ನಿರ್ಬಲನು ಸಬಲನಾಗಬೇಕು, ದೀನನು
ನಾಗಬೇಕು, ತೇಜೋಹೀನನು ತೇಜಃಪುಂಜನಾಗಬೇಕು, ಮಾನವನು
ನನಾಗಬೇಕು ಎಂಬುದೆ ಮಾನವನ ಹೃದಯಗರ್ಭದಲ್ಲಿರುವ ಗುಪ್ತ
ಬಲವು. ಅದನ್ನು ಅಂಶತಃ ಆದರೂ ಪೂರೈಸಲುಜ್ಜುಗಿಸುವವರು ಮಾನವ
ದ ಮಿತ್ರರು, ಮಾನವವಂಶದ ಸಹಾಯಕರು, ಮಾನವ ಭವಿತವ್ಯ
ಕೈಗೂಡಿಸುವವರು. ಯಾವನೊಬ್ಬನು, ಯಾವನೊಬ್ಬನ ಸಂಕಲ್ಪವು,
ವನೊಬ್ಬನ ಗುಣಕರ್ಮಗಳು ಮಾನವನ ಉನ್ನತಿಗೆ ಸಹಾಯಕವಾದವು
ಅಲ್ಲವೊ ಎಂಬುದಕ್ಕೆ ಒಂದೇ ಒರೆಗಲ್ಲು: ಮಾನವನ ಶರೀರ, ಮನ,
ದ್ಧಿ, ಭಾವ, ನೀತಿ, ಆತ್ಮ ಇವು ಅವುಗಳಿಂದ ಹೆಚ್ಚು ಶುದ್ಧ ಮತ್ತು
ಕ್ಷ್ಮವಾಗುತಿರುವವೊ, ಬಲಶಾಲಿಯಾಗುತಿರುವವೊ, ವಿಕಸಿತವಾಗುತಿ
ವವೊ, ಪ್ರೇಯಸ್ಸಿನಿಂದ ಅವನನ್ನು ಶ್ರೇಯಸ್ಸಿಗೆ ಒಯ್ಯುತಿರುವವೊ,
ನವತೆಯಿಂದ ಅವನನ್ನು ದೇವತ್ವದತ್ತ ಸಾಗಿಸುತಿರುವವೊ? ಮಾನವನ
ವು ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ,
ಶಗಳೊಳಗಿಂದ ಹಾಯ್ದು ಆನಂದಮಯ ಕೋಶದತ್ತ ತೆರಳಿ, ಅಲ್ಲಿ
ವಾಗಿ, ಅಲ್ಲಿಂದ ಮರಳಿ ಆಯಾ ಕೋಶಗಳಲ್ಲಿ ವಿಶ್ವಸಂಕಲ್ಪದಂತೆ ಕಾರ್ಯ
ಡಲು ಸಿದ್ಧವಾಗುತಿರುವದೊ? ಮಾನವ ಜೀವವು ಸಂಕುಚಿತವಾದ
ಂಕಾರಜಾಲದೊಳಗಿಂದ ಪಾರಾಗಿ ಬ್ರಹ್ಮಾರ್ಪಣಪೂರ್ವಕವಾಗಿ ಬ್ರಹ್ಮ
ಸಮಾಧಿಯನ್ನು ಸಾಧಿಸಲನುವಾಗುತಿರುವದೊ?

ಈ ರೀತಿ ಮಾನವಕುಲದ ಉಪಕಾರಿಗಳು, ಸಂತಸಜ್ಜನರು ಎಲ್ಲಿದ್ದರೂ
ಮ್ಮ ಪ್ರೀತ್ಯಾದರಗಳಿಗೆ ಸದಾ ಪಾತ್ರರು. ಇಂಥವರು, ನಮ್ಮ ದೇಶದವರು,

ನಮಗೆ ಹೆಚ್ಚು ಪರಿಚಿತರಿದ್ದವರು, ನಮ್ಮ ಮನೋರಚನೆ ಬಲ್ಲವರು, ನಮ್ಮ ಭಾಷೆಯನ್ನಾಡುವವರು, ನಮ್ಮ ರೀತಿ ನೀತಿ ನಡಾವಳಿಗಳನ್ನೆ ಅನುಸರಿಸುವವರು ಇದ್ದರೆ ನಮಗೆ ಅವರು ಹೆಚ್ಚು ಸಮೀಪದವರೆನಿಸುವರು, ನಮ್ಮಲ್ಲಿ ಹೆಚ್ಚಿನ ಆತ್ಮೀಯಭಾವವನ್ನು ನಿರ್ಮಿಸುವರು. ಶ್ರೇಷ್ಠ ಭಾರತೀಯ ವಿಭೂತಿಗಳ ಬಗ್ಗೆ ಅಂಥ ಭಾವವು ನಮ್ಮಲ್ಲಿ ಉಂಟಾಗುವದು ಸ್ವಾಭಾವಿಕವು. ಭಾರತದ ಮಟ್ಟಿಗೆ ಹೇಳುವುದಾದರೆ ಅದರ ಇತಿಹಾಸದಲ್ಲಿ ಅನೇಕಾನೇಕ ಹಿರಿಕಿರಿದಾದ ರಾಜಕೀಯ, ಸಾಮಾಜಿಕ, ಆರ್ಥಿಕ ಪಲ್ಲಟಗಳು, ಕ್ರಾಂತಿಗಳು ಆಗಿಹೋಗಿವೆ. ಭಾರತ, ಭಾರತೀಯ ಜೀವನ, ಭಾರತೀಯ ಸಂಸ್ಕೃತಿ, ಭಾರತೀಯ ವೈಶಿಷ್ಟ್ಯ ಇವು ಉಳಿಯುವವೊ ಅಳಿಯುವವೊ ಎಂಬ ಸಂಶಯವುಂಟಾಗುವಂಥ ಪ್ರಸಂಗಗಳೂ ಬಂದು ದಾಟಿಹೋಗಿವೆ. ದಾರಿದ್ರ್ಯ, ಅಜ್ಞಾನ, ಮೂಢಕಲ್ಪನೆಗಳು, ತಪ್ಪುವಿಚಾರಗಳು ಮುಂತಾದವುಗಳೂ ಸಾಕಷ್ಟು ಇವೆ. ರಾಜಕೀಯ ದಾಳಿಗಳು ಆಗಿರುವಂತೆ ಅನೇಕ ಧಾರ್ಮಿಕ, ಸಾಂಸ್ಕೃತಿಕ, ಭಾಷಾವಿಷಯಕ ದಾಳಿಗಳೂ ದೇಶದ ಮೇಲೆ ಆಗಿವೆ. ಈ ಬಗೆಯ ಹಲವಾರು ಆಘಾತಪ್ರಘಾತಗಳು ಆಗುತ್ತ ಬಂದಿದ್ದರೂ ಭಾರತೀಯ ಜೀವನದ ಅಶ್ವತ್ಥವೃಕ್ಷವು ತೀರ ಹಳೆಯದಾದರೂ ಪ್ರತಿವರುಷ ಹೊಸ ಚಿಗುರಿನಿಂದ ಪುನರುಜ್ಜೀವಿತವಾಗುತ್ತ ಬೆಳೆಯುತ್ತ ನಡೆದಿದೆ. ನಾಲ್ಕೂ ದಿಕ್ಕಿನಿಂದ ಹರಿಯುವ ಗಾಳಿ ನೀರುಗಳನ್ನು ಸೇವಿಸುತ್ತ ಇಷ್ಟವಾದುದನ್ನು ಅರಗಿಸಿ ಅನಿಷ್ಟವಾದುದನ್ನು ಹೊರಚೆಲ್ಲುತ್ತ ತನ್ನ ಮೂಲ ವ್ಯಕ್ತಿಮತ್ವವನ್ನು ಬಿಡದೆ ಗಗನದಲ್ಲಿ ಅದು ತಲೆಯೆತ್ತಿ ನಿಂತಿರುವದು. ಏಕಾತ್ಮತ್ವದ ಗೂಢ ಗಹನ ಗಂಭೀರ ಅನುಭವದಲ್ಲಿ ಅದರ ತಾಯಿಬೇರು ನೆಟ್ಟಿದ್ದು ತನ್ಮೂಲಕವೆ ಅದಕ್ಕೆ ಅಮೃತರಸವು ದೊರಕುವದು. ಅದೃಶ್ಯವಾದ ಉಳಿದ ಬೇರುಗಳು ಸಹ ತತ್ವವಿಚಾರಗಳಿಂದ ಪೋಷಣೆ ಪಡೆದು ವೃಕ್ಷದ ರೋಮರೋಮಗಳಲ್ಲಿ ನವಜೀವನವು ಸುಳಿದಾಡುವಂತೆ ಮಾಡುವವು. ವಿವಿಧ ವೀರವತ್ತ್ರರ ಕಾರ್ಯಕಲಾಪಗಳ ರೂಪದಲ್ಲಿ ಅದರ ಶಾಖೋಪಶಾಖೆಗಳು ಹಾಗೂ ಅಸಂಖ್ಯ ಎಲೆಗಳು ನಮ್ಮೆದುರು ಕಂಗೊಳಿಸುವವು. ಆಡು ಮುಟ್ಟದ ಗಿಡವಿಲ್ಲ, ಎಂಬುವಂತೆ ಭಾರತಾತ್ಮವು ಒಮ್ಮಿಲ್ಲೊಮ್ಮೆ ತನ್ನ ಆರ್ಭಟದಿಂದ ಆವಿರ್ಭವಿಸದೆ ಇದ್ದ ಮಾನವೀ ಚಟುವಟಿಕೆಯ ಯಾವ ಕ್ಷೇತ್ರವೂ ಇಲ್ಲ ಎಂದರೆ ಅತಿಶಯೋಕ್ತಿಯಾಗಲಾರದು.

ಹಿಂದೂ ಧರ್ಮವು ನಿವೃತ್ತಿಪರವು; ಜಗತ್ತು ಮಾಯೆ ಇಲ್ಲವೆ ಮಿಥ್ಯೆ

ಂದು ವೇದಾಂತವು ಸಾರುವದು ; ಸಂಸಾರವೆಂಬ ಭವಸಾಗರದಿಂದ ಆದಷ್ಟು
ೀಗನೆ ಪಾರಾಗಬೇಕೆಂಬ ವೃತ್ತಿ ಇಲ್ಲಿ ನೆಲೆಗೊಂಡಿದೆ; ಭಾರತೀಯರು ದೈವ
ಾದಿಗಳು ; ಪೂರ್ವಜನ್ಮ ಪುನರ್ಜನ್ಮಗಳಲ್ಲಿ ಪೂರ್ಣವಿಶ್ವಾಸವಿರುವುದರಿಂದ
ವರಿಗೆ ಕಾಲಾಪವ್ಯದ ಕ್ಷತಿ ಇಲ್ಲ ; ಎಲ್ಲಕ್ಕೂ ಕರ್ಮವೆ ಕಾರಣ ಎಂಬ ಭಾವ
ಯ ಮೂಲಕ ಅವರು ಕರ್ಮಾಧೀನರು, ಪರಲೋಕದತ್ತ ದೃಷ್ಟಿಯಿಟ್ಟು
ಡೆಯುವವರಾದುದರಿಂದ ಅವರು ತಮ್ಮ ಇಹಲೋಕದ ಅವಶ್ಯಕತೆಗಳತ್ತ
ಸನ್ನಾಗಿ ಲಕ್ಷಗೊಡುವುದಿಲ್ಲ; ಈ ಮುಂತಾದ ಅನೇಕ ಪೂರ್ವಗ್ರಹಗಳು
ಾಗೂ ಕಲುಷಿತಭಾವನೆಗಳು ಹಲವು ಪರದೇಶದವರಲ್ಲಿ ಹಾಗೂ ಅವರಿಗೆ
ಮ್ಮ ತಲೆ ಒತ್ತೀ ಇಟ್ಟ ನಮ್ಮ ದೇಶಬಾಂಧವರಲ್ಲಿ ರೂಢವಿರುವವು. ಅವರು
ಂದರೆಕ್ಷಣ ಸ್ವತಃ ವಿಚಾರಮಾಡದೆ ವಸ್ತುಸ್ಥಿತಿಯನ್ನು ನಿರೀಕ್ಷಿಸದೆ ಈ
ಾವನೆಗಳನ್ನು ಮತ್ತೆಮತ್ತೆ ಪ್ರಕಟಗೊಳಿಸುವರು. ಆದರೆ ಈಗ ಮೂರು
ಾವಿರ ವರುಷಗಳ ಭಾರತೀಯ ಜೀವನದ ಪ್ರತಿ ಚಟುವಟಿಕೆಯ ಇತಿಹಾಸ
ನ್ನು ಪರೀಕ್ಷಿಸಿದರೆ ಈ ಮೇಲಿನ ಎಲ್ಲ ಭಾವನೆಗಳು ವಾಸ್ತವಿಕವಾದವುಗಳಲ್ಲ
್ವಕಪೋಲಕಲ್ಪಿತವಾದವುಗಳು, ಎಂಬ ಪ್ರತೀತಿಯಾಗದೆ ಇರದು. ಅಧ್ಯಾತ್ಮ
ಾದ, ತತ್ವಜ್ಞಾನ, ಮತ್ತು ಯೋಗಶಾಸ್ತ್ರ ಈ ವಿಷಯಗಳಲ್ಲಿಯಂತೂ
ಾರತೀಯರ ಕೈಹಿಡಿದವರೇ ಇಲ್ಲ. ಈ ಶಾಸ್ತ್ರಗಳಲ್ಲಿ ಪಾರಂಗತವಿರುವವರೆ
ಲ್ಲಕ್ಕೂ ಹೆಚ್ಚು ನಿವೃತ್ತಿಪರರಿರಬೇಕು. ಆದರೆ ಮಂತ್ರದ್ರಷ್ಟಾರರಾದ ಋಷಿ
ಳು, ಜನಕ ಯಾಜ್ಞ್ಯವಲ್ಕ್ಯಾದಿ ಮಹನೀಯರು, ಶ್ರೀಕೃಷ್ಣ ಭೀಷ್ಮಾದಿ
್ರಭೃತಿಗಳು, 'ಯದಹರೇವ ವಿರಜೇತ್ ತದಹರೇವ ಪ್ರವ್ರಜೇತ್'
ವೈರಾಗ್ಯ ಉಂಟಾದೊಡನೆ ಸನ್ಯಾಸದೀಕ್ಷೆ ಪಡೆಯಬೇಕು) ಎಂದು ಸಾರಿದ
ಂಕರಾದಿ ಆಚಾರ್ಯರು, ವಿದ್ಯಾರಣ್ಯ ಸಾಯಣಾದಿ ಮಹಾಮುನಿಗಳು,
ುರಂದರ ರಾಮದಾಸಾದಿ ಸಂತರು, ವಿವೇಕಾನಂದಾದಿ ಸ್ವಾಮಿಗಳು ಇವರೆ
ರೂ ಅತಂದ್ರಿತವಾಗಿ ಸ್ವಕರ್ಮದಲ್ಲಿ ಅತ್ಯಂತ ಪ್ರವೃತ್ತರಿದ್ದು ಇತರರಿಗೆ
ಾಲ್ಕೆಂಟು ಜನ್ಮಗಳಲ್ಲಿ ಆಗದಷ್ಟು ಕಾರ್ಯವನ್ನು ಒಂದೇ ಜೀವಮಾನದಲ್ಲಿ
ಾಡಿ ಆದರ್ಶಕಾರಣಪುರುಷರಾಗಿ ಕಂಗೊಳಿಸುವರು. ನಿವೃತ್ತಿಪರತೆ,
ರಲೋಕದತ್ತ ದೃಷ್ಟಿ, ಇವುಗಳಿಂದ ಪ್ರೇರಿತರಾಗಿ ಈ ಮೇಲಿನ ಮಹಾ
ುಷಿಮರು ಇಂಥ ಶ್ರೇಷ್ಠ ಕಾರ್ಯಗಳನ್ನು ಮಾಡಲು ಪ್ರವೃತ್ತರಾಗಿದ್ದಾದರೆ,
ವು ಪರದೇಶದವರಿಗೆ ಬೇಡಾಗಿದ್ದರೆ, ನಮಗೇ ಇರಲಿ ! ಇದೇ ರೀತಿ ರಾಜ್ಯ

ಸಾಮ್ರಾಜ್ಯಗಳನ್ನು ಕಟ್ಟಿ ರಾಜ್ಯಶಾಸ್ತ್ರದ ಪಾಠಗಳನ್ನು ಜಗತ್ತಿಗೇ ಕಲಿಸ ಬಲ್ಲ ಚಂದ್ರಗುಪ್ತ, ಚಾಣಕ್ಯ, ಅಶೋಕ, ವಿದ್ಯಾರಣ್ಯ, ಕೃಷ್ಣದೇವರಾಯ, ಶಿವಾಜಿ ಮುಂತಾದ ರಾಜನೀತಿಕುಶಲರೂ ವೀರಶ್ರೇಷ್ಠರೂ ಇದೇ ಭಾರತದಲ್ಲಿ ಆಗಿರುವರು. ರಾಮಾಯಣ, ಮಹಾಭಾರತ, ಭಾಗವತಗಳನ್ನು ರಚಿಸಿದ ವ್ಯಾಸವಾಲ್ಮೀಕಿಗಳು ಮನುಷ್ಯಸ್ವಭಾವ, ವ್ಯವಹಾರಚಾತುರ್ಯ, ಇತ್ಯಾದಿ ಗಳ ಜ್ಞಾನದೊಡನೆ ಕವಿಪ್ರತಿಭೆ, ಸಾಹಿತ್ಯಸಾಮರ್ಥ್ಯ, ಪಾತ್ರನಿರ್ಮಾಣಶಕ್ತಿ ಇವುಗಳನ್ನೂ ಪೂರ್ಣತಯಾ ವ್ಯಕ್ತಗೊಳಿಸಿರುವರು. ಇವರೆಲ್ಲರೂ ನಿವೃತ್ತಿಪರ ರೆನ್ನಬೇಕೇ ? ಹಾಗಿದ್ದರೆ ಈ ಪರಿಯ ನಿವೃತ್ತಿಪರತೆ ನಮಗೆ ಬೇಕು ! ಯಾಕಂದರೆ ಲಕ್ಷಾಂತರ ಜನರಲ್ಲಿ ಸತ್ಪ್ರವೃತ್ತಿಯ ಸ್ಫೂರ್ತಿಯನ್ನು ಹುಟ್ಟಿಸುವ ಸಾಮರ್ಥ್ಯ ಇದರಲ್ಲಿದೆ. ದೇಶೀಯ ಭಾಷೆಗಳಲ್ಲಿ ಕೂಡ ಈಗ ಸದ್ಯಕ್ಕೆ ಉದ್ದಾಮಗ್ರಂಥಗಳನ್ನು ಬರೆದ ಮಹನೀಯರು ಹಲವರಿರುವರು. ವೀರ-ವತ್ತಾದ ಸಾಹಿತ್ಯನಿರ್ಮಾಣಮಾಡುವ ಶಕ್ತಿ ಕೊಡಬಲ್ಲ ವಾಗ್ದೇವಿಯು ಭಾರತದಿಂದ ಇನ್ನೂ ತೊಲಗಿಲ್ಲ. ಅದೇ ರೀತಿ ಸಂಗೀತಾದಿ ಲಲಿತಕಲೆಗಳಲ್ಲಿ, ಸ್ಥಾಪತ್ಯಶಿಲ್ಪಾದಿಗಳಲ್ಲಿ ನಮ್ಮಲ್ಲಿ ಮಹಾಕೃತಿಗಳು ನಿರ್ಮಿತವಾಗಿ ಅವು ಪೂರ್ಣತಯಾ ಸತ್ಪ್ರವೃತ್ತಿಯ ದ್ಯೋತಕಗಳಾಗಿ ಈಗ್ಯೂ ನಮ್ಮ ಕಣ್ಣು ಕುಕ್ಕಿಸುತಿವೆ. ಆಧುನಿಕ ಕಾಲದಲ್ಲಿ ಕೂಡ ಆಯಾ ವಿಷಯಗಳಲ್ಲಿ ತೇಜಸ್ವಿ ಯಾದ ಕಾರ್ಯಗಳನ್ನು ಮಾಡಿತೋರಿಸುವ ಜೀವಗಳು ಈ ದೇಶದಲ್ಲಿ ಕಡಿಮೆ ಯಿಲ್ಲ. ವಿಜ್ಞಾನದಲ್ಲಿ ಕೂಡ ಭಾರತೀಯರು ಹದಿನೇಳನೆಯ ಶತಮಾನದ ವರೆಗೆ ಇತರ ದೇಶಗಳಿಗಿಂತ ಮುಂದೆಯೇ ಇದ್ದರೆನ್ನಬಹುದು. ನಡುವೆ ಕಲಿಕಾಲವೆನಿಸಬಹುದಾದ ದಾಸ್ಯಕಾಲವು ಬಹಳೇ ಭೀಷಣವಾಗಿತ್ತು, ಅನೇಕ ರೀತಿ ಬಂಜೆಯಾಗಿತ್ತು, ಎಂಬುದು ನಿಜ. ಆದರೆ ಅವಕಾಶ ದೊರೆತೊಡನೆ ರಾಮಾನುಜನ್, ರಾಮನ್, ಬೋಸ, ರಾಯ ಮುಂತಾದವರು, ಬೂದಿ ಮುಚ್ಚಿದ್ದರೂ ಕೆಳಗೆ ಕೆಂಡವಿದೆ, ಎಂಬುದನ್ನು ಸಿದ್ಧಪಡಿಸಿದರು. ನಿರ್ಮಾಣ ಕಾರ್ಯದಲ್ಲಿ ವಿಶ್ವೇಶ್ವರಯ್ಯನಂಥವರು ತಮ್ಮ ಅಗಾಧಶಕ್ತಿಯನ್ನು ವ್ಯಕ್ತಪಡಿ-ಸಿದರು. ಗಾಂಧೀಜಿ ಅರವಿಂದರಂತೂ ಭಾರತೀಯ ಆತ್ಮಶಕ್ತಿಯ ಪೂರ್ಣಾವ-ತಾರಿಗಳೆಂದರೆ ತಪ್ಪಾಗಲಾರದು. ಬ್ರಹ್ಮತೇಜದ ಜಾಜ್ವಲ್ಯವಾದ ಉದಾಹರಣೆ ಗಳನ್ನು ಈ ಎರಡು ಹೆಸರುಗಳನ್ನು ಕೊಂಡೇ ಕೊಡಬೇಕಾಗುವದು.

ಭಾರತ ಎಂಬುದೊಂದು ಗೋಡೆಗೆ ತೂಗಿದ ನಕ್ಷೆಯಲ್ಲ, ಇಂತಿಷ್ಟು

ಎದುರುವೈಲಿರುವ ಭೂಖಂಡವಲ್ಲ. ಅದರ ಮೇಲ್ಭಾಗದಲ್ಲಿ ಇಲ್ಲವೆ ಗರ್ಭ
ಲ್ಲಿರುವ ಜಲ-ಸ್ಥಲ-ವಾಯು ಕಾಷ್ಠ-ಪಾಷಾಣ-ನಿಧಿ-ನಿಕ್ಷೇಪಗಳಲ್ಲ, ಖನಿಜ,
ಉದ್ಭಿಜ, ಅಂಡಜ, ಜಾರುಜಗಳಲ್ಲ. ಇವೆಲ್ಲ ಭಾರತದ ವಸ್ತುವಿಶೇಷಗಳು.
ಭಾರತವೆಂದರೆ ಭಾರತದ ಆತ್ಮ, ಭಾರತವು ಕೊಡುವ ಸ್ಫುರಣ, ಭಾರತದ
ಇತಿಹಾಸಸ್ಮರಣದಿಂದ ಉಂಟಾಗುವ ಜಾಗ್ರತಿವಿಶೇಷ, ಭಾರತದ ಸಂಸ್ಕೃತಿ
ಪರಂಪರೆಗಳಿಂದ ಮಾನವನ ಮನಸಿನ ಮೇಲೆ ಆದ ಹಾಗೂ ಆಗುವ
ತೇಜಸ್ವೀ ಪರಿಣಾಮ. ಭಾರತದ ಸನಾತನತ್ವ, ಅದರ ಗೌರವ, ಅದರ ಮುಗ್ಧ
ವೈಭವ, ಅದರ ಮೂಕಗಾನ, ಅದರ ಉಚ್ಚ ಧ್ಯೇಯಗಳಲ್ಲಿ, ಅದರ ಉನ್ನತ
ಆದರ್ಶಗಳಲ್ಲಿ, ಅವುಗಳನ್ನು ಪಡೆಯಲು ಅದರ ಸತ್ಪುತ್ರ ಸತ್ಪುತ್ರಿಯರು ಪಟ್ಟ
ಅವಿಶ್ರಾಂತ ಶ್ರಮದಲ್ಲಿ ಇವೆ. ಇದನ್ನೆಲ್ಲ ಅರಿತು, ಅರಗಿಸಿ, ಚಿಂತನ, ಮನನ,
ನಿದಿಧ್ಯಾಸಗಳನ್ನು ಕೈಕೊಂಡರೆ ಭಾರತದ ದಿವ್ಯಭವ್ಯ ನಿಜರೂಪದ ದರ್ಶನ
ವಾಗಬಲ್ಲದು, ಭಾರತದ ಅನಾಹತಧ್ವನಿ ಕೇಳಬರುವದು, ಭಾರತಮಾತೆ
ಬೈಬೆರಳು ಹಿಡಿದುಕೊಂಡು ತನ್ನ ಮಗುವನ್ನು ದೇವತ್ವದತ್ತ ಕರೆದೊಯ್ಯು
ವಳು.

" ಅಖಂಡ ಆದಾನಪ್ರದಾನವೆ ಜೀವಂತ ಸಭ್ಯತೆಯ ಲಕ್ಷಣವು."

(೧೧)

ಭಾರತ ಭೂಗೋಲ

ಭಾರತವು ಭೂಗೋಲದ ಒಂದು ಚಿಕ್ಕ ಭಾಗಮಾತ್ರ. ಆದರೆ ಅವುಗಳ ಸಂಬಂಧವು ಅತ್ಯಂತ ನಿಕಟವಿರುವದು ಹಾಗೂ ಅನೇಕತರಹದ್ದಿರುವದು. ಆ ಎಲ್ಲ ಸಂಬಂಧಗಳ ವಿಷಯವನ್ನು ಇಲ್ಲಿ ಎತ್ತುವದು ಅಸಾಧ್ಯ. ಕೇವಲ ಭೂಗೋಲದ ಮಾನವಕುಲ ಹಾಗೂ ಸಂಸ್ಕೃತಿ ಈ ಎರಡು ದೃಷ್ಟಿಯಿಂದ ಇದ್ದ ಸಂಬಂಧವನ್ನು ಕುರಿತು ಇಲ್ಲಿ ನಾಲ್ಕು ಮಾತು ಬರೆಯಬಹುದು.

ಈಗ ವಿಭಕ್ತಭಾರತದ ಲೋಕಸಂಖ್ಯೆ ೩೬ ಕೋಟಿ ಇರುವದು, ಜಗತ್ತಿನದು ಸುಮಾರು ೨೫೦ ಕೋಟಿ. ಭೂಗೋಲದಲ್ಲಿಯ ಏಳು ಜನ ಮಾನವರಲ್ಲಿ ಒಬ್ಬನು ಭಾರತೀಯನಿರುವನು. ಆದರೆ ಯಾವದೇ ಒಂದು ದೇಶದ ಇಲ್ಲವೆ ಜನಾಂಗದ ಮಹತ್ವವು ಕೇವಲ ಆಯಾದೇಶದ ಗಾತ್ರದ ಮೇಲೆ ಇಲ್ಲವೆ ಜನಸಂಖ್ಯೆಯ ಮೇಲೆ ಅವಲಂಬಿಸಿರುವದಿಲ್ಲ. ಇದು ಇತಿಹಾಸದಿಂದ ಸಿದ್ಧವಾಗಬಲ್ಲ ಮಾತು. ಗ್ರೀಸ ಇದೊಂದು ಬಹಳ ಚಿಕ್ಕದಾದ ರಾಷ್ಟ್ರ. ಅಥೆನ್ಸ ಎಂಬುದು ಒಂದು ಸಣ್ಣ ಪಟ್ಟಣ. ಆದರೆ ಅವುಗಳ ವರ್ಚಸ್ಸು ಅಲ್ಲಿಯ ಸಂಸ್ಕೃತಿಯ ಮೂಲಕ ಎಲ್ಲ ಪಾಶ್ಚಾತ್ಯ ರಾಷ್ಟ್ರಗಳ ಮೇಲೆ ಬಹಳ ದೊಡ್ಡ ಪ್ರಮಾಣದಲ್ಲಿ ಆಯಿತು. ಆ ವರ್ಚಸ್ಸು ಇನ್ನೂ ಇದೆ ಎಂದು ಹೇಳಬಹುದು. ಆ ದೃಷ್ಟಿಯಿಂದ ನೋಡಿದರೆ ಭಾರತವು ಗ್ರೀಸ ರೋಮುಗಳಿಗಿಂತ ಎಷ್ಟೋ ದೊಡ್ಡ ದೇಶವು. ಆದರೆ ಅದು ದೊಡ್ಡದೆಂದು ಅದರ ವರ್ಚಸ್ಸು ಬೆಳೆಯಿತೆಂತಲ್ಲ. ಅದರ ಮನಸು ದೊಡ್ಡದು, ಬುದ್ಧಿ ಶ್ರೇಷ್ಠವಾದುದು, ಉಪಕಾರಮಾಡುವ ವೃತ್ತಿ ಹೆಚ್ಚಿನದು, ಸಂಸ್ಕೃತಿ ಉಚ್ಚಕೋಟಿಯದು. ಆದುದರಿಂದ ಅತಿ ಪ್ರಾಚೀನ

ಲದಿಂದ ಭಾರತದ ವರ್ಚಸ್ಸು ಭೂಗೋಲದ ಅನೇಕ ದೇಶಗಳ ಮೇಲೆ ಾಗೂ ಸಂಸ್ಕೃತಿಗಳ ಮೇಲೆ ನಡೆಯುತ್ತ ಬಂದಿದೆ.

ಸದ್ಯಕ್ಕೆ ಜಗತ್ತಿನಲ್ಲಿ ಪ್ರಚಲಿತವಿರುವ ಸುಮಾರು ೨೨೦೦ ಭಾಷೆಗಳಲ್ಲಿ ದು ವರ್ಗಗಳನ್ನು ಮಾಡಬಹುದು. ಇಂಡೋ ಯುರೋಪಿಯನ್, ದ್ರಾವಿಡ; ಮಿಟಿಕ್, ಚೀನೀ, ಮತ್ತು ನೀಗ್ರೋ. ಯುರೋಪ ಅಮೇರಿಕೆಗಳಲ್ಲಿ, ಂದುಸ್ತಾನದ ಗೋದಾವರಿವರೆಗಿನ ಭಾಗಗಳಲ್ಲಿ ಪ್ರಚಲಿತವಿದ್ದ ಭಾಷೆಗಳು ಂಡೋ ಯುರೋಪಿಯನ್ ಕಾಲಕ್ಕೆ ಸೇರಿದವುಗಳು. ದಕ್ಷಿಣದಲ್ಲಿ ದ್ರಾವಿಡ ಾಷೆಗಳಿರುವವು. ಹಿಬ್ರೂ, ಅರೆಬಿಕ್, ಫಾರಸೀ ಮುಂತಾದವು ಸೆಮಿಟಿಕ್ ಾಷಾವರ್ಗಕ್ಕೆ ಸೇರಿದವುಗಳು. ಚೀನದೇಶದಲ್ಲಿ ಹಾಗೂ ಸುತ್ತಲು ಜಪಾನ ೋರಿಯಾ ಮುಂತಾದವುಗಳಲ್ಲಿ ಚೀನಿ ಭಾಷಾವರ್ಗಕ್ಕೆ ಸೇರಿದ ಭಾಷೆಗಳು ಡೆಯುವವು. ಆಫ್ರಿಕಾ ಖಂಡದಲ್ಲಿ ನೀಗ್ರೋ ಭಾಷೆಗಳು ಪ್ರಚಲಿತ ರುವವು. ಇಂಡೋ ಯುರೋಪಿಯನ್ ಭಾಷಾವರ್ಗದಲ್ಲಿ ಸಂಸ್ಕೃತಕ್ಕೆ ಬಹಳ ಹತ್ವದ ಸ್ಥಾನವಿರುವದು. ಅದು ಎಲ್ಲಕ್ಕೂ ಪ್ರಾಚೀನವಿದ್ದು ಅತ್ಯಂತ ಗಲ್ಭವೂ ಬಲಶಾಲಿಯೂ ಎಲ್ಲತರದ ಸಾಹಿತ್ಯದಿಂದ ಕೂಡಿದುದೂ ರುವದು. ಅರ್ವಾಚೀನ ಭಾಷಾಶಾಸ್ತ್ರದ ಉದಯಕ್ಕೆ ಸಂಸ್ಕೃತದಲ್ಲಿಯ ನಿರುಕ್ತ ಾಗೂ ಪಾಣಿನೀಯ ವ್ಯಾಕರಣಗಳೆ ಕಾರಣವಾದವು. ಮಹಾಭಾರತವು ಗತ್ತಿನಲ್ಲಿಯ ಎಲ್ಲ ಮಹಾಕಾವ್ಯಗಳಿಗಿಂತ ಬಹಳ ದೊಡ್ಡದು, ಪೌಢವು, ಕಲ ವಿಷಯಗಳಿಂದೊಡಗೂಡಿದ್ದು ಇರುವದು. ಪಂಚತಂತ್ರ, ಹಿತೋಪ- ೇಶಗಳು ಜಗತ್ತಿನಲ್ಲಿಯ ಇಸೋಪನ ಕಥೆಗಳ ಹಾಗೂ ಆ ಕಥಾವರ್ಗದ ಮೂಲಗಳು. ಕಥಾಸರಿತ್‌ಸಾಗರವು. ಅರೇಬಿಯನ್ ನಾಯಿಟ್ಸ್, ಡೆಕಾ- ಮರಾನ್, ಚಾಸರ್ಸ್ ಟೇಲ್ಸ್ ಮುಂತಾದವುಗಳಿಗೆ ಜನ್ಮಕೊಡಲು ಕಾರಣವು. ೀಗೆ ಅನೇಕ ದೃಷ್ಟಿಯಿಂದ ಸಂಸ್ಕೃತಭಾಷೆಯು. ಹಾಗೂ ಸಾಹಿತ್ಯದ ್ರತ್ಯಕ್ಷಾಪ್ರತ್ಯಕ್ಷ ಪರಿಣಾಮವು ಜಗತ್ತಿನಲ್ಲಿ ಈಗ ಎಲ್ಲಕ್ಕೂ ಪ್ರಗತಿಶೀಲ ನಿಸುವ ವಾಙ್ಮಯಗಳ ಮೇಲೆ ಆಗಿರುವದು.

ಅದೇ ರೀತಿ ಭಾರತೀಯ ಧರ್ಮ, ತತ್ವಜ್ಞಾನ, ಜ್ಯೋತಿಷ, ಗಣಿತ, ಯುರ್ವೇದ, ಶಿಲ್ಪಕಲೆಗಳು, ಚತುರಂಗಾದಿ ಆಟಗಳು ಈ ವಿಷಯಗಳಲ್ಲಿ ಯುರೋಪದ ಮೇಲೆ, ಯುರೋಪದಕಿಂತಲೂ ಹೆಚ್ಚು ಏಶಿಯದ ಮೇಲೆ ಹಳ ಮಹತ್ವದ ಪರಿಣಾಮವಾಗಿರುವದು. ದಕ್ಷಿಣಪೂರ್ವಏಶಿಯದಲ್ಲಿರುವ

ಇಂಡೋನೀಸಿಯಾ, ಸುಮಾತ್ರಾ, ಜಾವಾ, ಸಯಾಮು, ಮುಂತಾದ ದೇಶಗಳಂತೂ ಭಾರತೀಯ ಸಂಸ್ಕೃತಿಯ ವರ್ಚಸ್ಸಿನಿಂದ ಹಾಗೂ ಕುರುಹುಗಳಿಂದ ತುಂಬಿ ತುಳುಕುತಿವೆ.

ಭಗವಾನ್ ಬುದ್ಧನ ಉಪದೇಶವು ತಿಬೇಟ ಮಾರ್ಗವಾಗಿ ಚೀನ, ಕೋರಿಯಾ, ಜಪಾನ, ಮುಂತಾದ ದೇಶಗಳಲ್ಲಿ ಹರಡಿತು; ಇತ್ತ ಪೂರ್ವಕ್ಕೆ ಬ್ರಹ್ಮದೇಶಾದಿಗಳಲ್ಲಿ ಮನೆಮಾಡಿತು; ದಕ್ಷಿಣದಲ್ಲಿ ಲಂಕೆಯನ್ನು ವ್ಯಾಪಿಸಿತು. ಬುದ್ಧಧರ್ಮ ಹಾಗೂ ಬುದ್ಧವಿಚಾರಗಳ ಪ್ರಸಾರ ಭಾರತದ ಹೊರಗೆ ಹೇಗೆ ಮತ್ತು ಎಲ್ಲೆಲ್ಲಿ ಆಯಿತು ಎಂಬುದು ಒಂದು ಸ್ವತಂತ್ರ ಅಭ್ಯಾಸದ ವಿಷಯವಾಗುವಂತಿದೆ. ಇರಲಿ.

ಇಲ್ಲಿ ಕೇವಲ ಭಾರತದ ಸಂಸ್ಕೃತಿ ಅಥವಾ ಅದರ ಅಂಶಗಳು ಹೊರಗೆ ಹೇಗೆ ಹೋದವು ಹಾಗು ಎಲ್ಲೆಲ್ಲಿ ಹರಡಿದವು ಇದು ಮುಖ್ಯ ವಿಷಯವಲ್ಲ. ಸಂಸ್ಕೃತಿ ಎಂಬುದು ನಿಜವಾಗಿ ಒಂದೇ ಒಂದು, ಅದಕ್ಕೆ ಮಾನವೀಸಂಸ್ಕೃತಿ ಎನ್ನಬಹುದು. ನಾವು ವಂಶತಃ, ದೇಶತಃ, ಕಾಲತಃ, ಇಲ್ಲವೆ ಭಾಷೆಯ ಮೂಲಕ ಸಂಸ್ಕೃತಿಗೆ ಬೇರೆ ಬೇರೆ ಹೆಸರುಗಳನ್ನಿಡುವುದುಂಟು. ನಿಗ್ರೋ ಸಂಸ್ಕೃತಿ, ಆರ್ಯಸಂಸ್ಕೃತಿ, ಇವು ವಂಶತಃ ಇಟ್ಟ ಹೆಸರುಗಳು. ಫ್ರೆಂಚ ಸಂಸ್ಕೃತಿ, ಜರ್ಮನ್ ಸಂಸ್ಕೃತಿ, ಭಾರತೀಯ ಸಂಸ್ಕೃತಿ ಇವು ದೇಶತಃ ಇಟ್ಟ ಹೆಸರುಗಳು. ಕನ್ನಡ ಸಂಸ್ಕೃತಿ, ಮರಾಠಿ ಸಂಸ್ಕೃತಿ ಇವು ಭಾಷೆಯ ಮೂಲಕ ಬಂದ ಹೆಸರುಗಳು. ಮಾನವಕುಲವು ಒಂದೇ ಒಂದು ಇದ್ದು, ಅದರ ಮೂಲ ಮತ್ತು ಮುಖ್ಯ ಸ್ವಭಾವ, ಲಕ್ಷಣ, ಜೀವನಶಾಸ್ತ್ರದ ದೃಷ್ಟಿಯಿಂದ ಅದರ ಆಗು-ಹೋಗುಗಳು, ಅದರ ಭವಿತವ್ಯ, ಅದರ ಕ್ರಮವಿಕಾಸದ ರೀತಿ ಇವೆಲ್ಲವೂ ಒಂದೇ ಇರುವವು. ಆದುದರಿಂದ ಮಾನವಸಂಸ್ಕೃತಿ, ಮಾನವ ಪ್ರಗತಿ, ಮಾನವವಿಕಾಸ ಎಂಬವು ಒಂದೇ ಇರಬಲ್ಲವು. ದೇಶಕಾಲ ಪರಿಸ್ಥಿತಿಯ ಮೂಲಕ ಅವು ಹಿಂದೆ ಮುಂದೆ, ಹೆಚ್ಚುಕಡಿಮೆ ಇರುವದು ಸ್ವಾಭಾವಿಕ. ಅವುಗಳಲ್ಲಿ ಸಾಕಷ್ಟು ವಿವಿಧತೆಯೂ ಇರುವದು. ಆದರೆ ತತ್ವತಃ ಮೂಲತಃ ಆಯಾ ಸಂಸ್ಕೃತಿಗಳಲ್ಲಿ ಯಾವ ಮೂಲಗ್ರಾಹಿ ಭಿನ್ನತೆಯೂ ಇರಲರಿಯದು.

ಸಾಂಸ್ಕೃತಿಕ ವಿವಿಧತೆ, ಹಿಂದೆಮುಂದೆ ಹೆಚ್ಚುಕಡಿಮೆ ಈ ಮುಂತಾದ ದೃಷ್ಟಿಯಿಂದ ನೋಡಿದರೆ ನಮ್ಮ ಭಾರತದಲ್ಲಿ ಕೂಡ ಬೇಕಾದಷ್ಟು ಉದಾ-

ಹರಣೆಗಳು ದೊರೆಯುವವು. ತೀರ ಕಾಡುಸ್ಥಿತಿಯಲ್ಲಿದ್ದವರನ್ನು ಮೊದಲು ಮಾಡಿ ಅತ್ಯಂತ ಸುಸಂಸ್ಕೃತ ಗುಂಪುಗಳ ವರೆಗೆ ಎಲ್ಲ ಬಗೆಯ ಮಟ್ಟಗಳು ಅಥವಾ ಸ್ತರಗಳು ನಮ್ಮಲ್ಲಿ ದೊರೆಯುವವು. ಆವರವರ ಕಲ್ಪನೆ, ರೀತಿ ನೀತಿ, ಉಡಿಗೆ ತೊಡಿಗೆ, ಕಲೆ ಮುಂತಾದವುಗಳಲ್ಲಿ ಬೇಕಾದಷ್ಟು ವಿವಿಧತೆ ಇದೆ. ಹಲವು ಗುಂಪುಗಳು ಇನ್ನೂ ಕೇವಲ ಬೇಟೆಯಾಡಿ ಹೊಟ್ಟೆ ತುಂಬಿ ಕೊಂಡು ಕಾಡಿನಲ್ಲಿಯೆ ವಾಸಮಾಡುತಿರುವವು. ಹಲವರು ತಾತ್ಪೂರ್ತಿಕ ವಾಗಿ ಭೂಮಿಯನ್ನು ಊಳಿ ಧಾನ್ಯ ಹುಟ್ಟಿಸಿ ಪ್ರತಿವರುಷ ಸ್ಥಳಾಂತರ ಮಾಡುವರು. ಹೀಗೆ ಸಂಸ್ಕೃತಿಯ ಅನೇಕ ವಿವಿಧ ಸ್ತರಗಳು ನಮ್ಮ ದೇಶ-ದಲ್ಲಿವೆ. ಸಂಬಂಧ ಬಂದಾಗ ಪರಸ್ಪರರ ಮೇಲೆ ಅವು ಹಲವು ಪರಿಣಾಮ ಗಳನ್ನು ಉಂಟುಮಾಡುವವು. ಒಂದು ಗುಂಪಿನ ವಿಕಾಸವು ಹೆಚ್ಚೇಕೆ ಇನ್ನೊಂದು ಅದೇ ಪರಿಸ್ಥಿತಿಯಲ್ಲಿದ್ದರೂ ಕಡಿಮೆಯೇಕೆ ಎಂಬ ಮುಂತಾದ ಪ್ರಶ್ನೆಗಳು ಈ ಸಂದರ್ಭದಲ್ಲಿ ಉಂಟಾಗುವವು. ಅವು ಒಂದು ಸ್ವತಂತ್ರ ಅಭ್ಯಾಸದ ವಿಷಯವೆ ಇರುವವು. ಭಾರತದ ಮಟ್ಟಿಗೆ ಇಷ್ಟು ಮಾತ್ರ ಹೇಳ ಬಹುದು, ಸಾವಿರಾರು ವರುಷಗಳಿಂದ ಇಲ್ಲಿ ವಿವಿಧ ಮಾನವವಂಶಗಳ ಪರಸ್ಪರ ಸಂಬಂಧವು ಬರುತ್ತಾ ಇದ್ದರೂ ಯಾವದೇ ವಂಶಗಳ ಪೂರ್ಣ ನಾಶ ಮಾಡಿಬಿಡುವ ಪ್ರವೃತ್ತಿಯು ಈ ದೇಶದಲ್ಲಿ ಇಲ್ಲ. ಆದಷ್ಟು ಹೊಂದಿಕೊಂಡು 'ನಾವೂ ಬಾಳುವಾ ನೀವೂ ಬಾಳಿರಿ' (ಲಿವ್ಹ ಆ್ಯಂಡ ಲೆಟ್ ಲಿವ್ಹ) ಎಂಬ ಧೋರಣವೆ ಇಲ್ಲಿ ಪ್ರಧಾನವಾಗಿ ಪ್ರಚಲಿತವಿದ್ದುದು ಕಂಡುಬರುವದು. ಹೋದ ಎರಡು ಮೂರು ಶತಮಾನಗಳಲ್ಲಿ ಉತ್ತರ ಹಾಗೂ ದಕ್ಷಿಣ ಅಮೇರಿಕೆ ಗಳಲ್ಲಿ ಯುರೋಪಿಯನ್ನರು ಅಲ್ಲಿಯ ಮೂಲನಿವಾಸಿಗಳಾದ ರೆಡ್ ಇಂಡಿ-ಯನ್ನ ಮುಂತಾದವರನ್ನು ಯಾವ ರೀತಿ ಪೂರ್ಣ ನಿರ್ನಾಮ ಮಾಡಿಬಿಟ್ಟರು ವರೊ ಆ ರೀತಿ ಇಲ್ಲಿ ಮಾಡಿದ ಉದಾಹರಣೆಗಳು ಎಲ್ಲಿಯೂ ದೊರೆಯುವದಿಲ್ಲ. ಸಹಿಷ್ಣುತೆ, ಶಾಂತಿಯಿಂದ ಆತ್ಮಸಾತ್ ಮಾಡಿಕೊಳ್ಳುವ ವೃತ್ತಿ, ಹೊಂದಿ ಕೊಂಡು ಹೋಗುವ ಸ್ವಭಾವ ಇವು ಇಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಎದ್ದು ಕಾಣಿಸುವವು.

ಭಾರತದಲ್ಲಿರುವಂತೆಯೆ ಜಗತ್ತಿನಲ್ಲಿ ಬೇರೆಬೇರೆ ಜನರು, ಜನರ ಗುಂಪು ಗಳು ಸಂಸ್ಕೃತಿಯ ಬೇರೆಬೇರೆ ಮಟ್ಟಗಳಲ್ಲಿ ಇದ್ದುದು ಕಂಡುಬರುವದು. ಈ ಎಲ್ಲ ಸಂಗತಿಗಳ ಅಭ್ಯಾಸ ಮಾಡತಕ್ಕ ಒಂದು ಶಾಸ್ತ್ರವೇ ಈಗ ನಿರ್ಮಾಣ

ವಾಗಿದೆ. ಮಾನವಶಾಸ್ತ್ರ (ಅನ್‌ಥ್ರ್ರಾಪಾಲಜಿ) ಎಂಬುದು ಅದರ ಹೆಸರು. ಆಫ್ರಿಕಾ, ಆಸ್ಟ್ರೇಲಿಯಾ, ಪೊಲಿನೀಸಿಯಾ, ಅಂದಮಾನ, ಮುಂತಾದ ಅನೇಕ ಕಡೆಗೆ ತೀರ ಕಾಡುಸ್ಥಿತಿಯಲ್ಲಿದ್ದ ಜನರು ಈಗ್ಯೂ ಲಕ್ಷಾಂತರ ಇರುವರು. ಸುಧಾರಿಸಿದವರೆನಿಸಿದ ಮಾನವರೊಡನೆ ಅವರ ಸಂಬಂಧ ಬಂದಿತೆಂದರೆ ಹಲವು ಗುಂಪುಗಳು ತಾವೂ ಸುಧಾರಿಸುತ್ತಹೋಗುವವು, ಹಲವು ಕ್ರಮೇಣ ಕಡಿಮೆಯಾಗುತ್ತಹೋಗಿ ಇಲ್ಲದಂತಾಗುವವು. ಇದೊಂದು ನಿತ್ಯ ನಡೆದ ಕ್ರಮವಾಗಿ ಬಿಟ್ಟಿದೆ. ಆದರೆ ಈ ಎಲ್ಲ ವಿವಿಧತೆಯಲ್ಲಿ ಮಾನವ ಸಂಸ್ಕೃತಿಯ ಪ್ರವಾಹದ ಒಂದೇ ಒಂದು ಧಾರೆಯು ಹರಿಯುತಿರುವದು ಕಂಡುಬರುವದು. ಆ ಪ್ರವಾಹದ ದಿಕ್ಕೆತ್ತ ಹಾಗೂ ಅದರ ಮುಖ್ಯಲಕ್ಷಣಗಳಾವು ಎಂಬುದನ್ನು ಈ ಮೊದಲೇ ದಿಗ್ದರ್ಶನರೂಪದಿಂದ ಹೇಳಿರುವೆನು. ಮಾನವಕುಲವನ್ನೆಲ್ಲ ತನ್ನ ಪ್ರವಾಹದಗುಂಟ ತೇಲಿಸಿಕೊಂಡು ದೈವೀಜೀವನದತ್ತ ಒಯ್ಯುವದೆ ಈ ಸಂಸ್ಕೃತಿಯ ಉದ್ದೇಶವಿರುವದು. ಜೀವಕೋಟಿಯಲ್ಲಿ ಅಣುಪ್ರಾಣಿಯಿಂದ ಪ್ರಾರಂಭವಾಗಿ ಜೀವವು ಪಶುಪ್ರಾಣಿ ವರ್ಗದೊಳಗಿಂದ ಹಾಯ್ದು ಮನುಷ್ಯ ಪ್ರಾಣಿಯ ವರೆಗೆ ಈಗ ಮುಟ್ಟಿದ್ದಾಗಿದೆ. ಇನ್ನುಮುಂದೆ ಹೀಗೆಯೆ ಸಾಗುತ್ತ ದೇವಪ್ರಾಣಿ ವರ್ಗದ ಮಟ್ಟವನ್ನು ಮುಟ್ಟಬೇಕಾಗಿದೆ. ಆ ಪ್ರಯತ್ನವೆ ಈಗ ಸಾಗಿದೆ.

ಈ ಸಂಸ್ಕೃತಿಯ ಪ್ರವಾಹಕ್ಕೆ ಭಾರತವು ತಕ್ಕಮಟ್ಟಿಗೆ ತನ್ನ ಮುಡಿಪನ್ನರ್ಪಿಸಿದೆ. ಆದರೆ ಭೂಗೋಲದಲ್ಲಿಯ ಇತರ ಅನೇಕ ದೇಶಗಳು ಕೂಡ ಸಂಸ್ಕೃತಿ-ರಥವನ್ನು ಮುಂದೆ ಸಾಗಿಸಲು ವಿವಿಧರೀತಿಯಿಂದ ಸಹಾಯ ಮಾಡಿರುವವು. ಇಜಿಪ್ತ, ಬ್ಯಾಬಿಲೋನ, ಇರಾಣ, ಅಸೀರಿಯಾ, ಚೀನ, ಗ್ರೀಸ, ರೋಮ ಮುಂತಾದ ರಾಷ್ಟ್ರಗಳು ಪ್ರಾಚೀನಕಾಲದಲ್ಲಿ ಅನೇಕ ರೀತಿಯಿಂದ ಮಾನವಸಂಸ್ಕೃತಿಯನ್ನು ಹೆಚ್ಚಿಸಲು ಮೇಲ್ಮಟ್ಟಕ್ಕೇರಿಸಲು ಯತ್ನಮಾಡಿರುವವು. ಆಧುನಿಕ ಯುರೋಪ ಹಾಗೂ ಪಾಶ್ಚಾತ್ಯರಾಷ್ಟ್ರಗಳು ಬಾಹ್ಯ ಅಥವಾ ಭೌತಿಕ ಶಕ್ತಿಗಳ ಮೇಲೆ ಪ್ರಭುತ್ವವನ್ನು ಸಾಧಿಸುವ ವಿಷಯದಲ್ಲಿ ಬಹಳ ದೊಡ್ಡ ಕೆಲಸವನ್ನು ಮಾಡಿವೆ ಹಾಗೂ ಮಾಡುತಿವೆ. ಪ್ರತಿ ರಾಷ್ಟ್ರವು ತನ್ನ ಮಟ್ಟಿಗೆ ತಾನು ಮಾಡಿದ ಸಂಸ್ಕೃತಿಸೇವೆಯ ಬಗ್ಗೆ ಅಭಿಮಾನ ಪಡೆಯಲು ಏನೂ ಚಿಂತೆಯಿಲ್ಲ. ಆದರೆ ತಾನೇ ಎಲ್ಲವನ್ನೂ ಮಾಡಿರುವದು, ತನ್ನ ಸಂಸ್ಕೃತಿಯೆ ಶ್ರೇಷ್ಠ, ತಾನು ಇತರ ರಾಷ್ಟ್ರಗಳಿಂದ ಏನೂ ಕಲಿಯದೆ ತಾನೇ ಎಲ್ಲ

ರಾಷ್ಟ್ರಗಳಿಗೆ ಕಲಿಸಿರುವದು, ಎಂದು ಜಂಭ ಕೊಚ್ಚುವದು ಮಾತ್ರ ಯಾವ ರಾಷ್ಟ್ರಕ್ಕೂ ಶೋಭಿಸದು. ಹಾಗೆ ಮಾಡುವುದೆಂದರೆ ಕೇವಲ ಅಹಂಕಾರ, ಸಂಕುಚಿತ ಭಾವನೆ, ಇವುಗಳ ಪ್ರದರ್ಶನವು ಎಂದು ಹೇಳಬಹುದು. ಈಗ ಉಪಲಬ್ಧವಿದ್ದ ಇತಿಹಾಸಗಳನ್ನು ಓದಿ ನೋಡಿದರೂ ರಾಷ್ಟ್ರರಾಷ್ಟ್ರಗಳಲ್ಲಿ ನಡೆದುಹೋದ ಹಾಗೂ ಈಗಲೂ ನಡೆಯುತಿರುವ ಸಂಸ್ಕೃತಿಯ ಆದಾನ ಪ್ರದಾನವು ಸ್ಪಷ್ಟವಾಗುವದು. ಸುತ್ತಲಿನ ಪರಿಸ್ಥಿತಿಯಿಂದ, ತನಗೆ ಯಾರ್‍ಯಾರ ಸಂಬಂಧ ಬರುವದೋ ಅವರಿಂದ ಪ್ರತಿಕ್ಷಣವು ಹೊಸ ಹೊಸ ಮಾತುಗಳನ್ನು ಕಲಿಯುತಿರುವದು, ತನಗೆ ಇಷ್ಟವಿದ್ದವುಗಳನ್ನು ಪಡೆಯುತಿರುವದು, ತಾನು ಎರಡನೆಯವರಿಗೆ ಕಲಿಸಲು ಯತ್ನಿಸುವದು, ಇವು ಮನುಷ್ಯಸ್ವಭಾವದೊಳಗೆ ಮೂಲತಃ ಬೇರೂರಿರುವ ಮಾತುಗಳು. ಆ ಸ್ವಭಾವಕ್ಕನುಸರಿಸಿ ಮನುಷ್ಯನು ತನ್ನದು ಪರಕೀಯರದು ಎನ್ನದೆ ತನಗೆ ಇಷ್ಟವಾದ ಹಾಗೂ ತನ್ನ ಜೀವನದಲ್ಲಿ ಉಪಯುಕ್ತವಾದ ಸಂಗತಿಗಳನ್ನು ಕಲಿಯುತ್ತ ಅರಗಿಸುತ್ತ ಬಂದಿರುವನು. ಅದೆಲ್ಲ ಒಟ್ಟುಗೂಡಿಯೆ ಮಾನವಸಂಸ್ಕೃತಿ ಎಂಬುದು ಆಗಿರುವದು. ತನ್ನ ರಕ್ತಮಾಂಸಾದಿಗಳಲ್ಲಿಯ ಕಣಗಳನ್ನೆತ್ತಿ ಇವು ಇಂಥ ಆಹಾರದಿಂದ ಬಂದವುಗಳು ಎಂದು ಹೇಳುವದು ಯಾವ ರೀತಿ ಅಶಕ್ಯವೊ ಅದೇ ರೀತಿ ನಮ್ಮದೆಂದೆನಿಸುವ ಸಂಸ್ಕೃತಿಯಲ್ಲಿಯು ಇಂಥಿಂಥವು ನಮ್ಮವು ಇಂಥಿಂಥ ದೇಶದಿಂದ ಬಂದವುಗಳೆಂದು ಹೇಳುವದು ದುರಾಪಾಸ್ತವು. ಜೇನ್ನೊಣವು ಎಲ್ಲೆಲ್ಲಿಂದಲೋ ಯಾವ ಯಾವ ಹೂಗಳಿಂದಲೊ ಹನಿಹನಿ ಕೂಡಿಸಿ ಜೇನುತುಪ್ಪದ ಸಂಗ್ರಹವನ್ನು ಮಾಡುವದು, ಇದು ತನ್ನ ಜೇನುಹುಟ್ಟಿನ ತುಪ್ಪವು ಎಂದು ಹೇಳುವದು ಆಯಾ ರಾಷ್ಟ್ರಗಳ ಸಂಸ್ಕೃತಿಯ ವಿಷಯವಾದರೂ ಹೀಗೆಯೆ ಇರುವದು. ಸಂಸ್ಕೃತಿ ಎಂಬುದು ಆಯಾ ರಾಷ್ಟ್ರಗಳ ಸವಿಜೇನು. ಒಂದು ದೃಷ್ಟಿಯಿಂದ ಅದು ತನ್ನದು ಎನ್ನಲು ಬರುತಿದ್ದರೂ ತಾತ್ವಿಕ ದೃಷ್ಟಿಯಿಂದ ಅದು ಇಡೀ ಮಾನವಕುಲದ್ದು. ಈ ಭಾವನೆಯಿಟ್ಟುಕೊಂಡು ಹೊರಟರೆ ಮಾನವೀಯ ಸಂಸ್ಕೃತಿ ಎಂಬುದೆಲ್ಲ ಒಂದು, ಮಾನವಕುಲ ಎಂಬುದು ಒಂದು, ಎಂಬ ಭಾವನೆ ದೃಢವಾಗುತ್ತ ಹೋಗಿ ಸಂಕುಚಿತವೃತ್ತಿಗಳಿಗೆ, ವೃಥಾಭಿಮಾನಗಳಿಗೆ ಎಡೆಯಿಲ್ಲದಂತಾಗುವದು.

ಈ ವಿಶಾಲ ಹಾಗೂ ಯಥಾರ್ಥ ದೃಷ್ಟಿಯಿಂದ ನೋಡಿದರೆ ಭಾರತವು ಮಾನವಸಂಸ್ಕೃತಿಗೆ ಹಲವೊಂದು ಮಾತುಗಳನ್ನು ಕೊಟ್ಟಿದ್ದರೂ ಅನೇಕಾ-

ನೇಕ ದೇಶಗಳಿಂದ ಕಾಲಕಾಲಕ್ಕೆ ನಮ್ಮ ದೇಶವು ವಿವಿಧ ಮಾತುಗಳನ್ನು ಕಲಿತುಕೊಂಡಿರುವದೆಂಬುದು ಸಿದ್ಧವಾದ ಮಾತು. ವಾಹನಾದಿಗಳ ಸೌಕರ್ಯವು ಈಗಿದ್ದಷ್ಟು ಪೂರ್ವಕಾಲದಲ್ಲಿರಲಿಲ್ಲ, ಆದುದರಿಂದ ದೇಶದೇಶಗಳ ನಡುವೆ ವಿಶೇಷ ಸಂಬಂಧವು ಬರುತಿರಲಿಲ್ಲ, ಆದುದರಿಂದ ಹಲವು ಜನಾಂಗಗಳು ತಮ್ಮ ತಮ್ಮ ಸಂಸ್ಕೃತಿಯನ್ನು ಸ್ವತಂತ್ರವಾಗಿಯೆ ಬೆಳೆಸಿಕೊಂಡವು ಎಂದು ಹಲವರು ಅನ್ನಬಹುದು. ಆದರೆ ಇಷ್ಟು ಹಾಗೂ ಇಂಥ ಸೌಕರ್ಯಗಳಿಲ್ಲ ದಿದ್ದರೂ ಪರಸ್ಪರ ಸಂಬಂಧವಿದ್ದಿಲ್ಲ ಎಂದು ಮಾತ್ರ ಹೇಳಲಿಕ್ಕಾಗುವುದಿಲ್ಲ. ಹಲಕೆಲವು ಮಾತುಗಳನ್ನು ಹಲವು ರಾಷ್ಟ್ರಗಳು ಸ್ವತಂತ್ರವಿಚಾರದಿಂದಲೂ ಬೆಳೆಸಿಕೊಂಡು ಬಂದಿರಬಹುದು. ಆ ಮಾತು ಮಾನವ ಮನಸು, ಅದರ ಸ್ವಭಾವ, ಅದರ ವಿಕಾಸಕ್ರಮ ಒಂದೇ ಬಗೆಯದಿರುವದು ಎಂಬುದನ್ನು ಸಿದ್ಧಗೊಳಿಸುವದು. ಭಾರತೀಯ ದಾರ್ಶನಿಕರು ಹಾಗೂ ಗ್ರೀಕ ದಾರ್ಶನಿಕರು, ಜಗತ್ತಿನಲ್ಲಿ ಎಲ್ಲವೂ ಚಲಾಯಮಾನವಿರುವದು (ಇನ್-ಎ-ಫ್ಲಕ್ಸ), ಎಂಬ ಸಿದ್ಧಾಂತಕ್ಕೆ ಸ್ವತಂತ್ರವಾಗಿ ಬಂದಿದ್ದರೆ ಮಾನವೀ ವಿಚಾರಶಕ್ತಿ ಒಂದೇ ಬಗೆಯದ್ದು ಎಂಬ ಸಿದ್ಧಾಂತವನ್ನು ಆ ಮಾತು ದೃಢೀಕರಿಸುವದು. ಆದರೆ ಸಂಸ್ಕೃತಿಯ ಬೆಳವಣಿಗೆಗೆ ಸಂಬಂಧ, ತಾಕಲಾಟ, ಸಂಘರ್ಷ ಇವು ಯಾವಾ-ಗಲೂ ಪೋಷಕವಾದವುಗಳು. ನಿಂತ ನೀರು ಮಲೆಯುವಂತೆ ಏಕಾಕಿಯಾಗಿ ರುವ ಸಂಸ್ಕೃತಿಯು ಬಲಹೀನವಾಗಿಬಿಡುವದು. ಒಂದೇ ಸವನೆ ಆದಾನ ಪ್ರದಾನದಲ್ಲಿ ತೊಡಗಿರುವ ಸಂಸ್ಕೃತಿಯು ತೇಜಃಪುಂಜವಾಗಿ ಉಳಿಯುವದು. ವಿಚಾರಕ್ಕೆ ರೆಕ್ಕೆಗಳಿರುವಂತೆ ಸಂಸ್ಕೃತಿಗೂ ರೆಕ್ಕೆಗಳಿವೆ. ಅದು ಒಂದೇ ದೇಶದ್ದು ಕುಲದ್ದು ಎನ್ನಲಿಕ್ಕಾಗುವುದಿಲ್ಲ. ಗಾಳಿಯೊಡನೆ, ಉಸುರಿನೊಡನೆ, ವ್ಯಾಪಾರ ದೊಡನೆ, ವ್ಯವಹಾರದೊಡನೆ, ಪ್ರತಿಯೊಂದು ಬಗೆಯ ಮಾನವೀಯ ಸಂಬಂಧ ದೊಡನೆ ಅದು ಎಲ್ಲೆಲ್ಲಿಯೂ ಸುತ್ತುವದು. ಅದು ಜೀವಂತ ವಸ್ತುವಿರುವದ ರಿಂದ ಅದರ ಆದಾನಪ್ರದಾನವೂ ಒಂದೇಸವನೆ ನಡೆದಿರುವದು. ಕಾರಣಾಂತರ ಗಳಿಂದ ಹಾಗೆ ಆಗದೆ ಹೊದ ಪಕ್ಷದಲ್ಲಿ ಆದರಲ್ಲಿ ಏಕಾಂಗೀನತ್ವ, ಊನತ್ವ ಮುಂತಾದ ದೋಷಗಳು ಉಂಟಾಗುವವು.

ಪ್ರಸ್ತುತ ಬೇರೆಬೇರೆ ಕಡೆಗೆ ಬೆಳೆದು ಬಂದ ಸಂಸ್ಕೃತಿರೂಪಗಳಲ್ಲಿ ಇದ್ದ ದೋಷ-ದುರ್ಬಲತೆಗಳು ಹೋಗಬೇಕಾದರೆ ಅವುಗಳನ್ನು ಹುಡುಕಿ ತೆಗೆದು ನಿರ್ಮೂಲಗೊಳಿಸುವದು ಅವಶ್ಯ. ಅಂತರ್ಬಾಹ್ಯವಸ್ತು ಹಾಗೂ ಶಕ್ತಿ ಇವುಗಳ

ಮೇಲೆ ಸಮುಸಮಾನ ಪ್ರಭುತ್ವವನ್ನು ಪ್ರಸ್ಥಾಪಿಸುತ್ತ, ವ್ಯಕ್ತಿ ಸಮಾಜ ಇವುಗಳಲ್ಲಿ ಯಾವ ತಾರತಮ್ಯವನ್ನು ಮಾಡದೆ ಸರ್ವೋದಯುವನ್ನು ಸರ್ವತೋ ಪರಿ ಸಾಧಿಸುತ್ತ, ಮಾನವೀ ಕುಲ, ಮಾನವೀ ಸಂಸ್ಕೃತಿ, ಮಾನವೀ ಭವಿತವ್ಯ ಇವು ಒಂದೇ ಒಂದಾಗಿ ಅವಿಭಾಜ್ಯವಿರುವವೆಂಬ ದೃಷ್ಟಿಯನ್ನು ಸ್ಥಿರವಾಗಿ ಡುತ್ತ, ಈ ಭೂಮಿಯುಲ್ಲಿಯೆ ಈ ಜೀವನದಲ್ಲಿಯೆ ದೇವತ್ವಸಿದ್ಧಿ ಎಂಬುದೇ ಗುರಿ ಎಂಬ ಶ್ರದ್ಧೆಯನ್ನು ಬೆಳೆಸುತ್ತ, ಅಧ್ಯಾತ್ಮ ಶಕ್ತಿಯು ವಿಕಾಸವೆ ಸಾಧನ ಎಂಬುದನ್ನು ಲಕ್ಷಿಸುತ್ತ, ಉತ್ಸಾಹದಿಂದ ದುರ್ದಮ್ಯವಾದ ಆಶಾವಾದಿತ್ವದಿಂದ ಮುಂದಡಿ ಇಡುತ್ತ ಹೋದರೆ ಮಾನವನು ಅತಿಮಾನವನಾಗಬಲ್ಲನು, ದೇವ ನಾಗಬಲ್ಲನು; 'ನರ ಕರಣೀ ಕರೇ ತೋ ನರ ಕಾ ನಾರಾಯಣ ಬನ್-ಜಾಯ'. ಎಂಬದನ್ನು ಸಿದ್ಧ ಮಾಡಿ ತೋರಿಸಬಲ್ಲನು.

ಪಾಶ್ಚಾತ್ಯರ ಅತಂದ್ರಿತ ಕರ್ಮಪ್ರವೃತ್ತಿಯು ಏಸಿಯದ ಶಾಂತಿಮಾರ್ಗವನ್ನು ಆಶಾದೃಷ್ಟಿಯಿಂದ ನೋಡುತ್ತ ಮೈತ್ರಿಗಾಗಿ ತನ್ನ ಕೈ ಚಾಚುತಿರುವದು. — ರೋಮ್ಯು ರೋಲಾ

ಪೂರ್ವ-ಪಶ್ಚಿಮ, ಭಾರತ-ಯುರೋಪ ಇವುಗಳ ಸಭ್ಯತೆಯ ನಡುವಣ ಅಂತರವು ಈ ಮೂವತ್ತು-ನಾಲ್ವತ್ತು ವರುಷಗಳಲ್ಲಿ (ಸುಮಾರ ೧೯೧೫ ರಲ್ಲಿ ಬರೆದುದು) ಎಷ್ಟೋ ಕಡಿಮೆಯಾಗಿದೆ. — ಶ್ರೀ ಅರವಿಂದ

ದೇಹ-ಮನ-ಆತ್ಮಗಳ ಸರಸ ಸಮ್ಮೇಲವೆ ಸಭ್ಯತೆಯ ಹೃದಯ ಎಂದು ಭಾವಿಸಿದರೆ, ಈ ಬಗೆಯ ಸಂಪೂರ್ಣಸುಂದರ ಸಮ್ಮೇಲ ಈ ವರೆಗೆ ಅದೆಲ್ಲಿ ಗೋಚರವಾಗಿದೆ ? — ಶ್ರೀ ಅರವಿಂದ

ಉತ್ಕ್ರಾಂತಿಶೀಲ ಮಾನವೀಯ ಭವಿತವ್ಯದ ದೃಷ್ಟಿಯಿಂದ ನೋಡಲಾಗಿ ಭಾರತೀಯ, ಯುರೋಪಿಯ ಸಭ್ಯತೆಗಳೆರಡೂ ಅರ್ಧಮರ್ಧ ಫಲಕಾರಿಯಾದವುಗಳೇ ಹೊರತು ಮತ್ತೇನಿಲ್ಲ. ಅರುಣೋದಯದಂತೆ ಮುಂದೆ ಉಜ್ವಲಪ್ರಕಾಶವನ್ನು ಬೀರುವ ಮಧ್ಯಾಹ್ನದ ಸೂರ್ಯನ ಬರವನ್ನು ಅವು ಸೂಚಿಸುವವು ಮಾತ್ರ. — ಶ್ರೀ ಅರವಿಂದ

(ಮೇಲಿನ ಮೂರು 'ಭಾರತೀಯ ಸಂಸ್ಕೃತಿಯ ಮೂಲ ತಳಹದಿ' ಎಂಬುದರಿಂದ.)

(೧೨)

ಪೂರ್ವ-ಪಶ್ಚಿಮ

ಪೂರ್ವ, ಪಶ್ಚಿಮ ಇವೆರಡು ಒಂದಕ್ಕೊಂದು ಎದುರು ಬದರು ದಿಕ್ಕುಗಳು. ಅವು ಪರಸ್ಪರ ವಿರುದ್ಧವಿರಬೇಕೆಂದು ಯಾವ ಸಿದ್ಧಾಂತವೂ ಇಲ್ಲ. ಆದರೂ ಪೂರ್ವಮತ್ತು ಪಶ್ಚಿಮ ಗೋಲಾರ್ಧಗಳಲ್ಲಿ ವಾಸಿಸುವ ಜನರ ಹಲವೊಂದು ಭಿನ್ನತೆಗಳ ಮೂಲಕ ಅವೆರಡೂ ಹೊಂದುವದು, ಕೂಡುವದು, ಸಮವಾಗುವದು ಸಾಧ್ಯ

ವಿಲ್ಲ ಎಂದು ಅನೇಕ ಲೇಖಕರು, ವಿಶೇಷತಃ ಪಾಶ್ಚಾತ್ಯ ಲೇಖಕರು ಹೇಳುತ್ತ ಬಂದಿರುವರು. ಅವರಲ್ಲಿ ರಡ್‌ಯಾರ್ಡ್ ಕಿಪ್ಲಿಂಗ ಎಂಬ ಆಂಗ್ಲೇಯನು ಅಗ್ರಣಿಯು. ಪೃಥ್ವಿಯ ಈ ಎರಡು ಭಾಗಗಳಲ್ಲಿರುವ ಜನರ ಪ್ರಭಾವ, ಲಕ್ಷಣ, ರೀತಿ ನಡತೆ, ಗುಣದೋಷ, ಇವು ತೀರ ಭಿನ್ನಭಿನ್ನವಿದ್ದು ಅವು ತ್ರಿಕಾಲದಲ್ಲಿಯೂ ಹಾಗೆಯೇ ಉಳಿಯುವವು ಎಂದು ಅವನು ಪ್ರತಿಪಾದಿಸಿರುವನು. ಪಾಶ್ಚಿಮಾತ್ಯರು ಶ್ರೇಷ್ಠರು, ಬಲಿಷ್ಠರು, ಹೆಚ್ಚು ಸಭ್ಯರು ಎಂಬ ಒಳನುಡಿಯೂ ಅವನಲ್ಲಿ ದೃಗ್ಗೋಚರವಾಗುವದು. ಕಿಪ್ಲಿಂಗನು ದೊಡ್ಡ ಸಾಮ್ರಾಜ್ಯವಾದಿಯೂ ಇದ್ದನು. ಆದುದರಿಂದ ಪಾಶ್ಚಾತ್ಯರ ಸಾಮ್ರಾಜ್ಯ ಹಾಗೂ ವರ್ಚಸ್ಸು ವಿಶೇಷತಃ ಬ್ರಿಟಿಶರ ವರ್ಚಸ್ಸು ಪೌರ್ವಾತ್ಯರ ಮೇಲೆ ಯಾವಾಗಲೂ ಉಳಿಯುವದು ಎಂದು ಅವನ ದೃಢಭಾವನೆ ಇತ್ತು. ಅವನು ಜೀವದಿಂದಿರುವಾಗಲೆ ಭಾರತ, ಬ್ರಹ್ಮದೇಶ, ಲಂಕೆ ಇವುಗಳಿಗೆ ಸ್ವರಾಜ್ಯ ದೊರೆತದ್ದು ನೋಡಿದ್ದರೆ ಅವನು ಪ್ರಾಣವನ್ನೆ ಬಿಡಬಹುದಾಗಿತ್ತು! ಈಚೆಗೆ ಏಸಿಯದಲ್ಲಿ ಆದ ಹೊಸ ಜಾಗ್ರತಿಯ ಮೂಲಕ ಅನೇಕ ಪಾಶ್ಚಾತ್ಯ ಲೇಖಕರು ಇತ್ತ ಹೆಚ್ಚು ಆದರದಿಂದ ನೋಡತೊಡಗಿದ್ದಾರೆ. ಇತಿಹಾಸತತ್ವವನ್ನು ಕುರಿತು ಬರೆಯುವ ಪ್ರಸಿದ್ಧ ಲೇಖಕನಾದ ಟಾಯನ್‌ಬೀ ಅಂತೂ ಇನ್ನು ಏಸಿಯದ ಉದಯಕಾಲವು ಬಂದುಬಿಟ್ಟದೆ ಎಂದು ಸಾರಿದ್ದಾನೆ.

ಜನರು ವಾಸಿಸುತಿರುವ ದಿಕ್ಕು, ವಿಶಿಷ್ಟ ಭೌಗೋಲಿಕ ರಚನೆ, ಹವಾಮಾನ, ವರ್ಣ ಇತ್ಯಾದಿಗಳ ಮೇಲೆ ಅವರವರ ಏಳ್ಗೆ, ವಿಕಾಸ, ಸಂಸ್ಕೃತಿ, ಸಭ್ಯತೆ ಇವು ಅವಲಂಬಿಸಿವೆ ಎಂದು ಪ್ರತಿಪಾದಿಸುವವರದೊಂದು ವರ್ಗವಿದೆ. ಉಷ್ಣದೇಶಗಳಲ್ಲಿ, ಗುಡ್ಡುಗಾಡಿನಲ್ಲಿ, ವಿಶಾಲವಾದ ಬೈಲುಗಳಲ್ಲಿ, ಇರುವ ಆಯಾ ಜನರ ಗುಣದೋಷಗಳು ಹಾಗೂ ಲಕ್ಷಣಗಳು ಇಂತಿಂತಹವೆ ಇರುವವು ಎಂದು ಅವರು ಸಿದ್ಧಾಂತ ಮಾಡಿರುವರು. ಉದಾ: ಭಾರತೀಯರು ಉಷ್ಣಕಟಿಬಂಧದಲ್ಲಿರುವವರು, ಫಲವತ್ತಾದ ಭೂಮಿಯುಳ್ಳವರು, ಗಂಗಾಯಮುನಾ ನದಿಗಳ ದಂಡೆಯಲ್ಲಿರುವ ವಿಶಾಲ ಬೈಲುಗಳಲ್ಲಿ ವಾಸಿಸುವವರು; ಆದುದರಿಂದ ನಿಸರ್ಗದೊಡನೆ ವಿಶೇಷ ಹೋರಾಡದೆ ಅವರಿಗೆ ಜೀವನಾಂಶಗಳು ದೊರೆತುಹೋಗುವವು, ಅವರು ಆಲಸಿಗಳು, ದೈವವಾದಿಗಳು, ಸ್ವಾತಂತ್ರ್ಯವನ್ನು ಕಳಕೊಳ್ಳುವವರು ಇತ್ಯಾದಿ ಇತ್ಯಾದಿ. ಈ ವರ್ಗದ ಲೇಖಕರು ಬಹುಶಃ ಒಂದು ಚಿಕ್ಕ ಕಾಲಖಂಡವನ್ನಷ್ಟೇ ನೋಡಿ ಅಥವಾ ಇತಿಹಾಸದ

ಯಾವದೊಂದು ಸಣ್ಣ ಭಾಗವನ್ನು ಮಾತ್ರ ಪರೀಕ್ಷಿಸಿ ತಮ್ಮ ಅನುಮಾನಗಳನ್ನು ತೆಗೆದಂತೆ ತೋರುವದು. ಅವರ ವಿಚಾರದ ಪ್ರಕಾರ ಯುರೋಪೀಯರಲ್ಲಿ ಹೆಚ್ಚು ಬಲಿಷ್ಠರು, ಶೂರರು, ವೀರರು, ಮಹತ್ವಾಕಾಂಕ್ಷಿಗಳು, ಪ್ರಗತಿಪರರು ಇತ್ಯಾದಿ ಇತ್ಯಾದಿ. ಆದರೆ ಅವರ ದೃಷ್ಟಿ ಬಹಳ ಸಂಕುಚಿತ, ಇತಿಹಾಸಕ್ಕೆ ವಿಸಂಗತ, ಹಾಗೂ ವಿಜ್ಞಾನಕ್ಕೆ ಸಲ್ಲದಿರುವಂತಹದು ಎಂದು ಹೇಳಬೇಕಾಗುವದು. ಅವರ ಅನುಮಾನಗಳು ನಿರಾಧಾರವಾದವುಗಳು ಎಂದು ಸಿದ್ಧಮಾಡಲು ಬಹಳ ದೂರ ಹೋಗುವ ಅವಶ್ಯಕತೆ ಇಲ್ಲ. ಪಶ್ಚಿಮಗೋಲಾರ್ಧವೇ ಆಗಲಿ, ಪೂರ್ವಗೋಲಾರ್ಧವೇ ಆಗಲಿ, ಈಗ ಸಾವಿರೆರಡು ಸಾವಿರ ವರುಷಗಳಲ್ಲಿ ಭೌಗೋಲಿಕ ರಚನೆ, ಹವಾಮಾನ ಇತ್ಯಾದಿಗಳಲ್ಲಿ ಅಂಥ ಕ್ರಾಂತಿಕಾರಕ ಬದಲಾವಣೆಗಳಾವೂ ಆಗಿಲ್ಲ ಎಂಬುದು ಸಿದ್ಧವು. ಹೀಗಿದ್ದರೂ ಈಗೊಂದು ಸಾವಿರ ಅಥವಾ ಹದಿನೈದುನೂರು ವರುಷಗಳಾಚೆ ಗ್ರೀಸ ಮತ್ತು ರೋಮ ಈ ಎರಡು ದೇಶಗಳನ್ನುಳಿದು ಇತರ ಯುರೋಪೀಯ ದೇಶಗಳು ಕಾಡುಸ್ಥಿತಿಯಲ್ಲಿ ಏಕೆ ಇದ್ದವು? ಅದೇ ರೀತಿ ಅರಬರು ಸುಮಾರು ಮುನ್ನೂರು ವರುಷ ದಕ್ಷಿಣ ಯುರೋಪವನ್ನು ಆಕ್ರಮಿಸಿ ಅಲ್ಲಿ ತಮ್ಮ ಸಾಮ್ರಾಜ್ಯವನ್ನು ಹೇಗೆ ಮತ್ತು ಏಕೆ ನಡೆಸಿದರು? ಇದೇ ಭಾರತೀಯರು ಸುಮಾರು ಎರಡುಸಾವಿರ ವರುಷಗಳಾಚೆ ಸಂಸ್ಕೃತಿಯ ಶಿಖರವನ್ನು ಮುಟ್ಟಿ ಬುದ್ಧಧರ್ಮದ ಮುಖಾಂತರ ಮಧ್ಯ ಮತ್ತು ಪೂರ್ವ ಏಸಿಯದಲ್ಲೆಲ್ಲ ತಮ್ಮ ಸಂಸ್ಕೃತಿಯನ್ನು ಹೇಗೆ ಹರಡಿದರು? ರಜಪೂತರು, ಜಾಟರು, ಮರಾಠಿಗರು, ಕನ್ನಡಿಗರು ಇವರು ಜಗತ್ತಿನ ಇತರ ಶೂರ ವೀರ ಸೈನಿಕರಷ್ಟೆ ರಣಧೀರರೆಂಬುದನ್ನು ಹೋದ ಎರಡು ಮಹಾಯುದ್ಧಗಳಲ್ಲಿ ಸಿದ್ಧಪಡಿಸಿಲ್ಲವೆ? ಹೀಗೆ ಒಂದಲ್ಲ ಎರಡಲ್ಲ, ಅನೇಕಾನೇಕ ಐತಿಹಾಸಿಕ ಉದಾಹರಣೆಗಳನ್ನು ಕೊಟ್ಟು ಆ ವರ್ಗದ ಲೇಖಕರು ಮಾಡಿದ ಅನುಮಾನಗಳನ್ನು ಖಂಡಿಸಬಹುದು.

ಭೂಗೋಲರಚನೆ, ಹವಾಮಾನ ಇತ್ಯಾದಿಗಳ ಪರಿಣಾಮವು ಆಯಾ ಭಾಗದಲ್ಲಿರುವ ಜನರ ಮೇಲೆ ಆಗುವದಿಲ್ಲ ಎಂಬುದು ಇದರ ಅರ್ಥವಲ್ಲ. ಆದರೆ ಆಯಾ ಜನರ ಪೂರ್ವಾಪರವೆಲ್ಲ, ಗುಣದೋಷಗಳೆಲ್ಲ, ಭವಿತವ್ಯವೆಲ್ಲ, ಅವುಗಳ ಮೇಲೆಯೆ ಅವಲಂಬಿಸಿರುವದು ಎಂದು ಪ್ರತಿಪಾದಿಸುವದು ಸರ್ವಥಾ ಯೋಗ್ಯವಾಗಲಾರದು. ದೇಶಕಾಲ ಪರಿಸ್ಥಿತಿಗಳಿಗೆ ತಕ್ಕ ಸ್ಥಾನಮಾನ

ಗಳಿದ್ದರೂ ಮನುಷ್ಯನ ವಿಕಾಸವು ಕೇವಲ ಅವುಗಳನ್ನೇ ಅವಲಂಬಿಸಿಲ್ಲ. ಅವುಗಳನ್ನು ತಿದ್ದುವ, ಅವುಗಳಲ್ಲಿ ಹೆಚ್ಚುಕಡಿಮೆ ಮಾಡುವ, ಅವುಗಳ ಪರಿಣಾಮುಗಳನ್ನು ಕೂಡ ಕೆಲಮಟ್ಟಿಗೆ ಅಲ್ಲಗಳೆಯುವ ಶಕ್ತಿ ಮಾನವಜೀವದಲ್ಲಿದೆ. ಅದುದರಿಂದಲೇ ಒಂದೇ ಬಗೆಯ ದೇಶಕಾಲಪರಿಸ್ಥಿತಿಯಲ್ಲಿ ಇದ್ದವರಲ್ಲಿ, ಬೆಳೆದವರಲ್ಲಿ ಬಗೆಬಗೆಯ ಹೆಚ್ಚುಕಡಿಮೆಗಳು, ತರತಮಗಳು ಕಂಡುಬರುವವು. ಜಡವಸ್ತುಗಳಾಗಲಿ, ಯಂತ್ರಗಳಾಗಲಿ ವಿಶಿಷ್ಟಪರಿಸ್ಥಿತಿಯಲ್ಲಿ ವಿಶಿಷ್ಟ ರೀತಿಯಿಂದಲೆ ನಡಕೊಳ್ಳುವವೆಂಬುದನ್ನು ಲೆಕ್ಕಹಾಕಿ ಗಣಿತದಿಂದ ಹೇಳಲು ಬರುವದು. ಹಾಗೆ ಒಬ್ಬ ವ್ಯಕ್ತಿಯ ಬಗ್ಗೆ, ಮಾನವ ಗುಂಪುಗಳ ಬಗ್ಗೆ, ಒಂದು ರಾಷ್ಟ್ರದ ಬಗ್ಗೆ ಹೇಳುವದು ದುಸ್ತರವಾದುದು. ಇರಲಿ.

ಪೂರ್ವ ಪಶ್ಚಿಮ ಗೋಲಾರ್ಧದ ಜನರ ಸ್ವಭಾವ, ಲಕ್ಷಣ, ರೀತಿ ನಡತೆ, ಪ್ರವೃತ್ತಿವ್ಯವಹಾರಾದಿಗಳಲ್ಲಿ ಭಿನ್ನತೆ ಇಲ್ಲ ಎಂದು ಯಾರೂ ಹೇಳಲಾರರು. ಚೆನ್ನಾಗಿ ಪರೀಕ್ಷಣ ನಿರೀಕ್ಷಣ ಸಮೀಕ್ಷಣ ಮಾಡಿದವರೊತ್ತಟ್ಟಿಗಿರಲಿ, ಸಹಜವಾಗಿ ಏಸಿಯಾ ಯುರೋಪಗಳನ್ನು ಸುತ್ತಿ ಬಂದವರು ಕೂಡ ಆ ಭಿನ್ನತೆಯನ್ನು ಹೇಳಬಲ್ಲರು. ಯುರೋಪದಿಂದ ಇತ್ತ ಬರುವವರು ನಡುವೆ ಕಾಯರೋ ಪಟ್ಟಣವನ್ನು ಸುತ್ತಿ ನೋಡಿದರೆ ತಾವು ಪೂರ್ವ ಗೋಲಾರ್ಧದಲ್ಲಿರುವವರೆಂದು ಅವರು ಹೇಳಬಲ್ಲರು. ಇಡೀ ರಶಿಯಾ ದೇಶದಲ್ಲಿ ಒಂದೇ ಬಗೆಯ ರಾಜ್ಯ, ಒಂದೇ ಬಗೆಯ ಆರ್ಥಿಕ ವ್ಯವಸ್ಥೆ ಮುಂತಾದವುಗಳಿದ್ದರೂ ಯುರೋಪಿಯನ್ ರಶಿಯಾ ನೋಡಿಕೊಂಡು ಬಂದು ಕಝಾಕಸ್ತಾನ, ಅಝುರಬೈಜನ್ ಮುಂತಾದವುಗಳನ್ನು ನೋಡಿದರೆ ಅವುಗಳಲ್ಲಿಯ ಭೇದವು ಒಮ್ಮೆಲೆ ಹೊಳೆಯುವದು. ಈ ಭಿನ್ನತೆ ಏಕೆ ಇದೆ, ಈ ಭಿನ್ನತೆಯ ಲಕ್ಷಣಗಳಾವು, ಇವುಗಳಲ್ಲಿ ಶ್ರೇಷ್ಠ ಕನಿಷ್ಠ ಯಾವುದು ಇತ್ಯಾದಿಗಳನ್ನು ಮುಂದೆ ನೋಡಬಹುದು. ಆದರೆ ಈ ಭಿನ್ನತೆ ಇದೆ ಎಂಬುದರಲ್ಲಿ ಸಂಶಯವಿಲ್ಲ. ಇಷ್ಟೇ ಅಲ್ಲ. ತಮ್ಮ ತಮ್ಮ ಮಟ್ಟಿಗೆ ತಾವು ಶ್ರೇಷ್ಠರು ಎಂಬ ಭಾವನೆ ಕೂಡ ಅಲ್ಲಿ ಸಾಕಷ್ಟು ಕಂಡುಬರುವದು. ಹೆಚ್ಚು ವಿಚಾರಶೀಲರಿದ್ದವರು ತಮ್ಮ ಗುಣದೋಷಗಳನ್ನರಿತುಕೊಂಡು ದೋಷಗಳನ್ನು ಹೋಗಲಾಡಿಸಿ ಗುಣಗಳನ್ನು ಪೋಷಿಸಬೇಕು, ತಮ್ಮಲ್ಲಿಲ್ಲದ ಗುಣಗಳನ್ನು ಅನ್ಯರಿಂದ ಪಡೆಯಬೇಕು ಎಂದು ಯತ್ನಿಸುತ್ತಿರುವದೂ ದೃಗ್ಗೋಚರವಾಗುವದು.

ಈ ಬಗೆಯ ಭಿನ್ನತೆಯ ವಿಮರ್ಶೆ ಮಾಡುವದಕ್ಕೂ ಮೊದಲು ಹಲವೊಂದು

ಮಾತುಗಳಲ್ಲಿ ಕೇವಲ ಭಿನ್ನತೆ, ಆದರೆ ಹಲವುಗಳಲ್ಲಿ ಏಕಸೂತ್ರತೆಯೂ ಇದೆ ಎಂಬುದನ್ನು ಸ್ಪಷ್ಟಗೊಳಿಸುವದು ಆವಶ್ಯ. ಈ ಏಕಸೂತ್ರತೆಯ ಮೂಲವು ಎರಡೂ ಗೋಲಾರ್ಧದಲ್ಲಿರುವ ಜನರ ಮಾನವ್ಯದಲ್ಲಿ ಅಥವಾ ಸಾಮಾನ್ಯ ಮಾನವತೆಯಲ್ಲಿದೆ. ಮಾನವಮಾತ್ರರು ಎಲ್ಲೆಲ್ಲಿಯೂ ಒಂದೇ ಇರುವರು. ಹಲವೊಂದು ಮುಖ್ಯ ಮಾತುಗಳಲ್ಲಿ ಅವರಲ್ಲಿದ್ದ ಏಕಸೂತ್ರತೆ, ಸಮಾನತೆ ಇವು ಅವರನ್ನು ಒಂದೇ ಮಾಲೆಯಲ್ಲಿ ಪೋಣಿಸುವವು. ಆದುದರಿಂದ ಜೀವನ ರಂಗದಲ್ಲಿ ಮೂಲತಃ ಹಾಗೂ ತಾತ್ವಿಕ ದೃಷ್ಟಿಯಿಂದ ಒಂದೇ ಇರುವ ಭಿನ್ನ ಬಗೆಯ ಜನರು ತಮ್ಮ ತಮ್ಮ ಭಿನ್ನ ಲಕ್ಷಣಗಳನ್ನು ಪ್ರಕಟಿಸುತ್ತ ಮಾನವ ತೆಯ ವೈವಿಧ್ಯವನ್ನು ತೋರ್ಪಡಿಸುತಿರುವರು. ಈಚೆಗೆ ಸಾರಿಗೆ, ಪ್ರವಾಸ, ತಾರುತಂತಿ ಟಪಾಲುಗಳ ಸೌಕರ್ಯ ಇವು ಬಹಳ ಬೆಳೆದಿರುವದರಿಂದ, ಪರಸ್ಪರ ಸಂಬಂಧ ಸಂಪರ್ಕಗಳು ಹೆಚ್ಚಾದುದರಿಂದ, ಆರ್ಥಿಕ ರಾಜಕೀಯ ಮುಂತಾದ ಪ್ರಶ್ನೆಗಳು ಇಡೀ ಮಾನವಕುಲಕ್ಕೆ ಸಾಮಾನ್ಯವಾಗಿರುವುದರಿಂದ, ವ್ಯವ-ಹಾರಾದಿಗಳು ಹೆಚ್ಚು ಬೆಳೆದುನಿಂತಿದುದರಿಂದ ಪರಸ್ಪರ ವಿಚಾರವಿನಿಮಯ ಮತ್ತು ಪರಸ್ಪರರ ಮೇಲೆ ಪರಿಣಾಮ ಇವು ಹೆಚ್ಚಾಗುವುದು ಕಂಡುಬರುತಿರುವದು. ಈ ಮೂಲಕ, ಭಿನ್ನತೆ ಎಷ್ಟೇ ಇದ್ದರೂ ಸಾಮಾನ್ಯತೆ, ಏಕ-ಸೂತ್ರತೆ, ಇವು ಹೆಚ್ಚೆಚ್ಚು ಒಡೆದು ಕಾಣಿಸುತಿರುವವು. ಪರಸ್ಪರರ ಗುಣ ಗ್ರಹಣವಾಗಲಿಕ್ಕೂ ಇದರಿಂದ ಹೆಚ್ಚು ಅನುಕೂಲವಾಗಿರುವದು.

ಈ ಭೂಮಂಡಲದ ಪಂಚಖಂಡಗಳಲ್ಲಿರುವ ವಿವಿಧ ಜನಾಂಗಗಳಲ್ಲಿ ಬೆಳೆದುಬಂದಿರುವ ಸಂಸ್ಕೃತಿಯಲ್ಲಿ ಹೆಚ್ಚುಕಡಿಮೆ, ಭಿನ್ನತೆ, ತಾರತಮ್ಯ ಇವು ಬೇಕಾದಷ್ಟು ಇರುವವು. ಆದರೆ ಇಲ್ಲಿ ಪೂರ್ವ ಪಶ್ಚಿಮ ಗೋಲಾರ್ಧಗಳಲ್ಲಿ ಪ್ರಾಧಾನ್ಯವಾಗಿ ಪ್ರಚಲಿತವಿರುವ ಸಂಸ್ಕೃತಿಗಳಷ್ಟೆ ಪ್ರಸ್ತುತವಿರುವವು. ಇದರ ಅರ್ಥ ಪಶ್ಚಿಮ ಗೋಲಾರ್ಧದಲ್ಲಿ ಇಲ್ಲವೆ ಪೂರ್ವ ಗೋಲಾರ್ಧದಲ್ಲಿ ತುಂಬ ಒಂದೇತರದ ಸಂಸ್ಕೃತಿ ಇದೆ ಎಂದಲ್ಲ. ಅಲ್ಲಿಯೂ ಬೇಕಾದಷ್ಟು ಭಿನ್ನತೆ, ತಾರತಮ್ಯ ಇದೆ. ಆದರೆ ಸ್ಥೂಲಮಾನದಿಂದ ಹಲವೊಂದು ವಿಶಿಷ್ಟ ಲಕ್ಷಣ ಗಳಿದ್ದುದು ಪೌರ್ವಾತ್ಯ ಸಂಸ್ಕೃತಿ, ಅದೇ ರೀತಿ ಬೇರೆ ಹಲವೊಂದು ಲಕ್ಷಣ ಗಳಿದ್ದುದು ಪಾಶ್ಚಾತ್ಯ ಸಂಸ್ಕೃತಿ ಎಂದು ಹೇಳಲಾಗುವದು. ಉದಾ: ಇಂಗ್ಲಂಡದ ಸಂಸ್ಕೃತಿ ಹಾಗೂ ಇಟಾಲಿಯ ಸಂಸ್ಕೃತಿ ಇವುಗಳಲ್ಲಿ ಎಷ್ಟೋ ವಿಷಯುಗಳಲ್ಲಿ ಭಿನ್ನತೆ, ತಾರತಮ್ಯ ಇದೆ. ಅದೇ ರೀತಿ ಭಾರತೀಯ ಸಂಸ್ಕೃತಿ

ಾಗೂ ಚೀನೀ ಸಂಸ್ಕೃತಿ ಇವುಗಳಲ್ಲಿಯೂ ಬೇಕಾದಷ್ಟು ಭಿನ್ನತೆ ಇದೆ. ಆದರೆ ಟ್ಟಿಗೆ ಇಂಗ್ಲಂಡ, ಫ್ರಾನ್ಸ, ಜರ್ಮನಿ, ಇಟಾಲಿ ಮುಂತಾದ ದೇಶಗಳ ಸಂಸ್ಕೃತಿ ಳಲ್ಲಿ ಹೆಚ್ಚು ಸಾದೃಶ್ಯವಿರುವದು. ಅದೇ ರೀತಿ ಭಾರತೀಯ ಮತ್ತು ಚೀನೀ ಂಸ್ಕೃತಿಗಳಲ್ಲಿ ಸಾದೃಶ್ಯವಿದೆ. ಆದುದರಿಂದ ಪೌರ್ವಾತ್ಯ ಸಂಸ್ಕೃತಿ ಹಾಗೂ ಾಶ್ಚಾತ್ಯ ಸಂಸ್ಕೃತಿ ಎಂಬ ಎರಡು ವರ್ಗಗಳು ಸ್ಥೂಲಮಾನದಿಂದ ಮಾಡ ಾಗಿವೆ. ಈ ಎರಡು ವರ್ಗಗಳಲ್ಲಿ ಪ್ರತ್ಯೇಕವಾಗಿ ಒಂದೊಂದರಲ್ಲಿ ಹಲವು ಾಮಾನ್ಯ ಲಕ್ಷಣಗಳು ಹಾಗೂ ಗುಣದೋಷಗಳು ಕಂಡುಬರುವವು. ಅವು ಳನ್ನು ಸ್ವಲ್ಪ ನೋಡುವ.

ಪಾಶ್ಚಾತ್ಯ ಸಂಸ್ಕೃತಿಯ ಸ್ವರೂಪವು ಮೊದಲಿನಿಂದಲೂ ಈಗಿದ್ದಂತೆಯೇ ತ್ತೆನ್ನಲಿಕ್ಕಾಗದು. ಗ್ರೀಸ ರೋಮ ದೇಶಗಳ ಸಂಸ್ಕೃತಿ ಸುಮಾರು ೨೭೦೦ ರುಷಗಳ ಪೂರ್ವದಲ್ಲಿ ಪ್ರಾರಂಭವಾಯಿತು ಎನ್ನಬಹುದು. ಅದಕ್ಕೂ ಪೂರ್ವದ ಲ್ಲಿಯ ಇತಿಹಾಸವು ಸಾಕಷ್ಟು ಉಪಲಬ್ಧವಿಲ್ಲ. ಆಗ ಹಾಗೂ ಅದಕ್ಕೂ ೂರ್ವದಲ್ಲಿ ಯುರೋಪದಲ್ಲಿಯ ಇತರ ದೇಶಗಳಲ್ಲಿ ಯಾವದೇ ಬಗೆಯ ಹೇಳಿಸಿ ಾಳ್ಳುವಂಥ ಸಂಸ್ಕೃತಿ ಸಭ್ಯತೆಗಳು ಇರಲಿಲ್ಲ. ಮಿಸರ, ಅಸೀರಿಯಾ, ಬ್ಯಾಬಿ ೋನ, ಮೊಹೆಂಜೊದಾರೊ (ಭಾರತ) ಇವುಗಳ ಸಂಸ್ಕೃತಿಗಳು ೫-೬ ಾವಿರ ವರುಷದವು. ಅವುಗಳ ಸಂಸ್ಕೃತಿಯ ಇತಿಹಾಸದೊಡನೆ ಯುರೋಪದ ಂಸ್ಕೃತಿಯನ್ನು ಹೋಲಿಸಿ ನೋಡಿದರೆ ಇದು ತೀರ ಈಚೆಗಿನದೆ ಸರಿ. ುರೋಪಖಂಡದ ನಿಜವಾದ ಸಂಸ್ಕೃತಿವಿಕಾಸವು ಗ್ರೀಸ ರೋಮಗಳ ಇತಿ ಾಸದಿಂದಲೆ ಪ್ರಾರಂಭವಾಗುವದು. ಗ್ರೀಕ ಹಾಗೂ ರೋಮನ್ನರೆ ಆಧುನಿಕ ುರೋಪದ ಸಂಸ್ಕೃತಿಯ ಅಡಿಗಲ್ಲನ್ನಿಟ್ಟರು. ಆಧುನಿಕ ಯುರೋಪಖಂಡವು ನೇಕ ವಿಷಯಗಳಲ್ಲಿ ಈಗ್ಯೂ ಗ್ರೀಸ ರೋಮಗಳಿಂದ ಸ್ಫೂರ್ತಿಯನ್ನು ಪಡೆ ುತಿದ್ದರೂ ಈಗಿನ ಸಂಸ್ಕೃತಿ ಹಾಗೂ ಗ್ರೀಕ ರೋಮಗಳ ಸಂಸ್ಕೃತಿ ಇವು ಳಲ್ಲಿ ಮಹದಂತರವಾಗಿದೆ. ಕ್ರಾಯಿಸ್ಟನ ತರುವಾಯ ವಿಶೇಷತಃ ಸಮ್ರಾಟ್ ಾನ್‌ಸ್ಟಂಟಾಯಿನನ ತರುವಾಯ (ಅವನ ಆಳಿಕೆ ಕ್ರಿ. ಶ. ೩೦೬-೩೩೭) ಶ್ಚನ್ ಧರ್ಮವು ಯುರೋಪಖಂಡವನ್ನೆಲ್ಲ ವ್ಯಾಪಿಸಿಬಿಟ್ಟಿತು. ಮುಂದೆ ಹದಿ ಾಟನೆಯ ಶತಮಾನದಿಂದ ಯುರೋಪಖಂಡದಲ್ಲಿ ಯಂತ್ರಯುಗಕ್ಕೆ ್ರಾರಂಭವಾಯಿತು. ಈಗಿನ ಯುರೋಪಿಯನ್ ಸಂಸ್ಕೃತಿಯು ಕೆಲವು ಶ್ಚನ್ ನೈತಿಕ ತತ್ವಗಳಿಗೆ ತಲೆಬಾಗುವದು, ಶಿಲ್ಪಾದಿಕಲೆಗಳಲ್ಲಿ ಹಾಗೂ

ತತ್ವಜ್ಞಾನದ ಮಟ್ಟಿಗೆ ಗ್ರೀಕರಿಂದ ಸ್ಫೂರ್ತಿ ಪಡೆದಿರುವದು, ಸಾಮ್ರಾಜ್ಯವಾದ, ರಾಜಕಾರಣ, ರಾಜ್ಯಕಾರಭಾರ ಇವುಗಳಲ್ಲಿ ರೋಮದಿಂದ ಪಾಠಗಳನ್ನು ಕಲಿತಿರುವದು. ಆದರೆ ಮುಖ್ಯವಾಗಿ ವಿಜ್ಞಾನಕ್ಕೆ ಶರಣುಹೋಗಿ ಭೌತಿಕಶಾಸ್ತ್ರಗಳಿಗೆ ಮನಸೋತಿರುವದು. ಆದುದರಿಂದ ಭೌತಿಕಸುಖಸೋಯಿಗಳೆ ಧ್ಯೇಯ, ವಿಜ್ಞಾನ ಮತ್ತು ಯಂತ್ರ ಇವೇ ಸಾಧನ, ಸಂಘಟಿತ ಸಾಂಘಿಕ ಜೀವನ ಇದೇ ಸಮಾಜರಚನೆ, ಈ ಬಗೆಯ ದೃಶ್ಯವು ನಮಗೆ ಯುರೋಪದಲ್ಲಿ ಪ್ರತೀತವಾಗುವದು. ಆನುಷಂಗಿಕವಾಗಿ ಯಂತ್ರತಂತ್ರಗಳ ಸಹಾಯದಿಂದ ಇಡೀ ಜಗತ್ತನ್ನೆ ಪಾದಾಕ್ರಾಂತಮಾಡಿಬಿಡಬೇಕು ಎಂಬ ಮಹತ್ವಾಕಾಂಕ್ಷೆ ಒಡೆದು ತೋರುತಿರುವದು. ಬಾಹ್ಯನಿಸರ್ಗದ ಮೇಲೆ ಹಾಗೂ ಅದರ ಶಕ್ತಿಗಳ ಮೇಲೆ ಪೂರ್ಣ ಪ್ರಭುತ್ವವನ್ನು ಸ್ಥಾಪಿಸಬೇಕೆಂಬ ಹವಣು ಹೆಚ್ಚಾದ್ದರಿಂದ ನಿತ್ಯವೂ ಹೊಸ ಶೋಧ, ಹೊಸಯಂತ್ರ, ಇವು ಹೊರಬೀಳುತಿರುವವು. ಎಲ್ಲೆಲ್ಲಿಯೂ ಆತ್ಯಂತಿಕ ಚಟುವಟಿಕೆ, ನಿರಲಸ ಉದ್ಯೋಗ ಇವು ಕಂಡುಬರುವವು. ಬಾಹ್ಯಜೀವನವನ್ನು ಸುಖಸೋಯಿಗಳಿಂದ ತುಂಬಿಬಿಡುವದಕ್ಕಾಗಿ ಅಹೋರಾತ್ರ ಪ್ರಯತ್ನವು ನಡೆದಿರುವದು. ರೋಗಾದಿಗಳನ್ನು ನಿರ್ಮೂಲಗೊಳಿಸಿ ಜೀವನಾವಧಿಯನ್ನು ಬೆಳೆಸಬೇಕೆಂಬ ಲವಲವಿಕೆಯ ಮೂಲಕ ಅನೇಕಾನೇಕ ಔಷಧಾದಿಗಳ ಶೋಧವು ನಡೆದುಹೋಗಿದೆ. ಬಾಹ್ಯಸ್ವಚ್ಛತೆ, ಅಚ್ಚುಕಟ್ಟುತನ, ಅಲ್ಲಲ್ಲಿ ವಿಹಾರ ಹಾಗೂ ವಿಲಾಸದ ಸಾಧನಗಳು ಇವು ದೃಗ್ಗೋಚರವಾಗುತಿರುವವು. ಈ ಸಾಧನ ಸಂಪತ್ತು ಎಲ್ಲರಿಗೂ ಇರಬೇಕು ಎಂಬ ಭಾವನೆ ಪ್ರಬಲವಾಗಿ ಅವುಗಳನ್ನು ದೊರಕಿಸಲು ಹಣದ ಅವಶ್ಯಕತೆ ಇರುವುದರಿಂದ ಪಾಶ್ಚಾತ್ಯಸಮಾಜವೆಲ್ಲ ಧನ ಪ್ರಧಾನವಾಗಿಬಿಟ್ಟಿದೆ. ಎಲ್ಲ ವಸ್ತುಗಳಿಗೂ ಬೆಲೆಕಟ್ಟುವದು, ರೂಪಾಯಿ ಆಣೆಪೈಗಳಲ್ಲಿ ಯಾವುದರ ಬೆಲೆ ಎಷ್ಟು ಎಂಬುದನ್ನು ಅಳೆದು ನೋಡುವದು, ಇದಕ್ಕೆ ಎಲ್ಲೆಲ್ಲಿಯೂ ಪ್ರಾಧಾನ್ಯವು ಇದ್ದುದು ಕಣ್ಣಿಗೆ ಬೀಳುವದು. ಒಟ್ಟಿಗೆ ಹೇಳುವುದಾದರೆ ಪಾಶ್ಚಾತ್ಯ ಸಂಸ್ಕೃತಿಯು ಬಾಹ್ಯಪ್ರವೃತ್ತಿಪ್ರಧಾನವೂ ಭೌತಿಕಸುಖಸೋಯಿಲೋಲುಪವೂ ಆರ್ಥಿಕಮೂಲ್ಯಾಂಕನವಿಶಿಷ್ಟವೂ ರಜೋಗುಣಿಯೂ ಉದ್ಯೋಗಪ್ರೇಮಿಯೂ ಯಂತ್ರತಂತ್ರೋಪಕರಣಮಂಡಿತವೂ ವಿಜ್ಞಾನಪೂಜಕವೂ ಆಗಿರುವದು. ಆ ಸಮಾಜದಲ್ಲಿ ಸಾತ್ವಿಕಶಿರೋಮಣಿಗಳೂ ಅಂತರ್ಜೀವನದ ಪ್ರೇಮಿಗಳೂ ಇಲ್ಲೇ ಇಲ್ಲ ಎಂದು ಇದರ ಅರ್ಥವಲ್ಲ. ಪ್ರಾಧಾನ್ಯವು ಆ ಸಮಾಜದಲ್ಲಿ ಯಾವ ಮಾತುಗಳಿಗೆ ಇದೆ ಎಂಬುದನ್ನು

ಹೇಳುವುದೆ ಇಲ್ಲಿ ಉದ್ದೇಶವಾಗಿದೆ. ಈ ಮುಂತಾದ ಪ್ರವೃತ್ತಿಗಳ ಪರಿಣಾಮವನ್ನು ನಾನು ಹೇಳುವದಕ್ಕಿಂತ ಪ್ರಸಿದ್ಧ ಲೇಖಕರೂ ನೋಬೆಲ್ ಪಾರಿತೋಷಕವನ್ನು ಮೊನ್ನೆತಾನೇ ಪಡೆದವರೂ ಆದ ಡಾಕ್ಟರ ಆಲ್‌ಬರ್ಟ ಸ್ವೆಟ್‌ಝರ್ ಇವರು ಏನನ್ನುವರು ಇದನ್ನು ನೋಡುವದು ವಿಹಿತವಾಗುವದು:

(‘ಸಭ್ಯತೆಯ ಕ್ಷಯ ಹಾಗೂ ಪುನರುಜ್ಜೀವನ’ ಎಂಬ ಪುಸ್ತಕದಿಂದ)

‘ಮಾನವೀ ವ್ಯಕ್ತಿಗಳ ಹಾಗೂ ಸಮಾಜಗಳ ಭೌತಿಕ ಮತ್ತು ಆಧ್ಯಾತ್ಮಿಕ ವಿಕಾಸ ಇದೇ ಸಂಸ್ಕೃತಿ ಮತ್ತು ಸಭ್ಯತೆ ಎನಿಸುವವು.’ ಪುಟ ೩೫.

‘ಆಧುನಿಕ ಸಭ್ಯತೆ (ಪಾಶ್ಚಾತ್ಯ ಸಭ್ಯತೆ) ತನ್ನ ಆತ್ಮಹತ್ಯೆ ಮಾಡಿಕೊಳ್ಳುತಿರುವ ದೃಶ್ಯವು ಈಗ ಎಲ್ಲರ ಕಣ್ಣು ಮುಂದೂ ಸ್ಪಷ್ಟವಾಗಿ ಕಟ್ಟಿದೆ.’ ಪುಟ ೩.

‘ಸಭ್ಯತೆಯ ಕ್ಷೇತ್ರದಲ್ಲಿ ವಿಕಾಸಹೊಂದುವ ಕುರಿತು ಆಧುನಿಕ ಮನುಷ್ಯನಲ್ಲಿ ಇದ್ದ ಶಕ್ತಿವಿಶೇಷವು ಈಗಿನ ಪರಿಸ್ಥಿತಿಯ ಮೂಲಕ ಕುಗ್ಗಿ ಹೋಗುವದು. ಯಾಕಂದರೆ ಈ ಪರಿಸ್ಥಿತಿಯು (ಅರ್ಥಪ್ರಧಾನವಾದ ಯಂತ್ರಯುಗವು) ಅವನ ಮನೋರಚನೆಗೆ ಪೆಟ್ಟು ಕೊಟ್ಟು ಅವನ ವ್ಯಕ್ತಿಮತ್ವದ ಬೆಳೆವಣಿಗೆಗೆ ಬಾಧೆ ತರುವದು.’ ಪುಟ ೧೫.

‘ಉತ್ಪಾದಕ (ಭೌತಿಕ ವಸ್ತುಗಳನ್ನು ನಿರ್ಮಿಸುವ) ಚಟುವಟಿಕೆಯೆ ಎಲ್ಲಕ್ಕೂ ಹೆಚ್ಚಿನದೆಂಬ ಭಾವನೆಯ ಮೂಲಕ ನಾವು ಅನ್ಯರಲ್ಲಿ ಮತ್ತು ನಮ್ಮಲ್ಲಿ ಕೂಡ ಅದನ್ನೆ ತಲೆಯಮೇಲಿಟ್ಟುಕೊಂಡು ಕುಣಿಯುವೆವು ಮತ್ತು ಉಚ್ಚ ನೈತಿಕ ಆಧ್ಯಾತ್ಮಿಕ ಧ್ಯೇಯಗಳನ್ನು ಮರೆತುಬಿಡುವೆವು.’ ಪುಟ ೨೦.

‘ಈ ರೀತಿ ನಾವು ನಮ್ಮ ಈ ಆಧುನಿಕ ಕಾಲದಲ್ಲಿ ಮನನ ಚಿಂತನಗಳಿಗೆ ಶರಣುಹೊಡೆದುದರಿಂದ ಸಫಲವಾದ ವೈಜ್ಞಾನಿಕ, ತಾಂತ್ರಿಕ, ಕಲಾತ್ಮಕ ಚಟುವಟಿಕೆಗಳೆಂದರೆಯೆ ಸಭ್ಯತೆ ಎಂದು ಭಾವಿಸಿದ್ದೇವೆ ಹಾಗೂ ಈ ಸಭ್ಯತೆ ನೈತಿಕ ಅಥವಾ ಆಧ್ಯಾತ್ಮಿಕ ಶಕ್ತಿಯ ಬೆಂಬಲವಿಲ್ಲದೆಯೆ ಇಲ್ಲವೆ ಕಿಂಚಿತ್ ಬೆಂಬಲಮಾತ್ರದಿಂದಲೆ ಪೂರ್ಣತೆಯನ್ನು ಪಡೆಯಬಲ್ಲದೆಂದು ಅಭಿಪ್ರಾಯ ಇಟ್ಟಿದ್ದೇವೆ.’ ಪುಟ ೪೦.

‘ಮಾನವರು ಪರಸ್ಪರರೊಡನೆ ಮಾನವರಂತೆ ನಡಕೊಳ್ಳುವದು ಕೂಡ ಸದ್ಯದ ಪರಿಸ್ಥಿತಿಯಲ್ಲಿ ಅಶಕ್ಯಪ್ರಾಯವಾಗಿದೆ........ ಈ ಮೂಲಕ ನಮ್ಮ ನಮ್ಮೊಳಗಿನ ಮಾನವೀಸಂಬಂಧವನ್ನೇ ನಾವು ಮರೆತುಬಿಡಲಾರಂಭಿಸಿದ್ದೇವೆ.

ಹಾಗು ನಾವು ದ್ರುತಗತಿಯಿಂದ ಅ-ಮಾನವತೆಯತ್ತ ಸಾಗಿದ್ದೇವೆ......ನಮ್ಮ ಸಮಾಜವು ಕೂಡ ಮಾನವಮಾತ್ರರೆಲ್ಲರಿಗೂ ಸಲ್ಲತಕ್ಕ ಮನ್ನಣೆ ಮತ್ತು ಪ್ರತಿಷ್ಠೆಯನ್ನು ಎಲ್ಲ ಮಾನವರಿಗೆ ಕೊಡುವದನ್ನು ನಿಲ್ಲಿಸಿಬಿಟ್ಟದೆ. ಮಾನವ ಕುಲದ ಬಹುಭಾಗವು ಮಾನವರೂಪದಲ್ಲಿ ಕೇವಲ ಕಚ್ಚಾ ನೂಲು ಇಲ್ಲವೆ ಸೊತ್ತುಸಂಪತ್ತು ಇರುವುದೆಂದು ಈ ಸಂಸ್ಕೃತಿ ತಿಳಿದುಕೊಂಡಿದೆ.' ಪುಟ ೨೪-೨೫.

ಪಾಶ್ಚಾತ್ಯಸಂಸ್ಕೃತಿಯ ಹಲವೊಂದು ಘಾತಕಲಕ್ಷಣಗಳನ್ನು ಈ ಮೇಲಿನಂತೆ ಟೀಕಿಸಿ ಈ ಭಯಾನಕ ಪರಿಸ್ಥಿತಿಯ ಪರಿಹಾರಾರ್ಥವಾಗಿ ಲೇಖಕನು ಸಂಸ್ಕೃತಿ ಇಲ್ಲವೆ ಸಭ್ಯತೆ ಅರ್ಥಪೂರ್ಣವೂ ಫಲದಾಯಕವೂ ಆಗಬೇಕಾದರೆ ಅದಕ್ಕೆ ನೈತಿಕ ಹಾಗೂ ಆಧ್ಯಾತ್ಮಿಕ ತಳಹದಿ ಬೇಕು, ಸತ್ಯದಲ್ಲಿ ಶ್ರದ್ಧೆ ಬೇಕು, ಮಾನವನ ಆಧ್ಯಾತ್ಮಭೂಮಿಕೆಯಲ್ಲಿ ನಂಬಿಗೆ ಬೇಕು, ಎಂದು ಸೋಪಪತ್ತಿಕವಾಗಿ ಪ್ರತಿಪಾದಿಸಿರುವನು. ಆದರೆ ಈ ನೈತಿಕ ತಳಹದಿ ಮತ್ತು ಆಧ್ಯಾತ್ಮಿಕತೆ ಕೇವಲ ನಿವೃತ್ತಿಪರವಿರಕೂಡದು, ವ್ಯಕ್ತಿ ಹಾಗೂ ಸಮಾಜ ಇವೆರಡನ್ನೂ ಉದ್ಧರಿಸುವಂತಹದು, ಅಂತರ್‌ಬಾಹ್ಯ ಶಕ್ತಿಗಳೆರಡನ್ನೂ ಅಧೀನಪಡಿಸಿಕೊಳ್ಳುವ ಆಕಾಂಕ್ಷೆಯುಳ್ಳದ್ದು ಇರಬೇಕು ಎಂದು ಹೇಳಿರುವನು.

ಪೌರ್ವಾತ್ಯಸಂಸ್ಕೃತಿಯನ್ನು ಕುರಿತು ಅವನು ಅದೇ ಪುಸ್ತಕದಲ್ಲಿ ಹೇಳಿದ ಹಲವೊಂದು ಮಾತುಗಳು ಗಮನಾರ್ಹವಿರುವವು. ಅವು ಈ ಕೆಳಗಿನಂತೆ ಇರುವವು:

'ಜಡವಸ್ತುಗಳನ್ನುಪಯೋಗಿಸುವ ಹಾಗು ಬಾಹ್ಯ ಸೃಷ್ಟಿಯ ಮೇಲೆ ಪ್ರಭುತ್ವವನ್ನು ಸ್ಥಾಪಿಸುವ ಶಕ್ತಿ ಹಾಗೂ ಪ್ರಯತ್ನಗಳಿಗೆ ಚೀಣರು, ಭಾರತೀಯರು, ಮತ್ತು ಯಹುದೀಯರು ತಮ್ಮ ಸಂಸ್ಕೃತಿಯಲ್ಲಿ ಮೊದಲಿನಿಂದಲೂ ಗೌಣಸ್ಥಾನವನ್ನು ಕೊಡುತ್ತ ಬಂದಿರುವರು. ಈ ಜನಾಂಗದವರು ತಮ್ಮ ನೈತಿಕ ಹಾಗೂ ಆಧ್ಯಾತ್ಮಿಕ ತೇಜಸ್ಸನ್ನು ಬೆಳೆಸುವುದೇ ಶ್ರೇಷ್ಠತರವೆಂದು ಆ ಕಾರ್ಯಕ್ಕೆ ಹೆಚ್ಚಿನ ಮನ್ನಣೆ ಕೊಟ್ಟರುವರು.' ಪುಟ ೪೦.

'ಅತಿಪ್ರಾಚ್ಯ ದೇಶಗಳ ಆಳವಾದ ವಿಚಾರಪ್ರಣಾಲಿಯೊಡನೆ ಪಾಶ್ಚಾತ್ಯ ಕರ್ಮಪ್ರವೃತ್ತಿಯನ್ನು ಹೋಲಿಸಿ ನೋಡುವಾಗ ಮನನ ಚಿಂತನಗಳಿಗೆ ಇದರಲ್ಲಿ ಎಷ್ಟು ಗೌಣಸ್ಥಾನವಿರುವದೆಂಬ ಮಾತು ಪಾಶ್ಚಾತ್ಯರಿಗೆ ಚನ್ನಾಗಿ ಹೊಳೆಯುವದು. ಅತಿ ಪ್ರಾಚ್ಯ ಜನರ ವಿಚಾರಶಕ್ತಿಯು ಸತತವೂ

ಜೀವನರಹಸ್ಯವನ್ನು ಶೋಧಿಸುವದರಲ್ಲಿ ತೊಡಗಿದುದು ಕಂಡುಬರುವದು; ಈ ಸಂಗತಿಯು, ಯಾವ ಅಸಮಾಧಾನವೃತ್ತಿಯನ್ನು ಕುರಿತು ವಿಚಾರ ಮಾಡುವದನ್ನು ನಾವು ಪಾಶ್ಚಾತ್ಯರು ಒಂದೇ ಸವನೆ ತಪ್ಪಿಸುವೆವೊ ಆದರ ಬಗ್ಗೆಯೆ ಚಿಂತನ ಮಾಡಲು ನಮ್ಮನ್ನು ಒತ್ತಾಯಪಡಿಸುವದು. ಈ ಸಂದರ್ಭದಲ್ಲಿ ನಮ್ಮೆದುರಿಗೆ ಬರುವ ಭಾರತೀಯ ವಿಚಾರಪ್ರಣಾಲಿಸಿಯನ್ನು ನೋಡಿ ನಾವು ದಿಙ್ಮೂಢರಾಗುತ್ತೇವೆ.' ಪುಟ ೯೮.

ಈ ಲೇಖಕನು ಕೇವಲ ನಿವೃತ್ತಿಪ್ರಧಾನ ವಿಚಾರಧಾರೆಯನ್ನು ಪ್ರೀತಿಸುವವನಲ್ಲ. ವೇದಾಂತಿಕ ಪರಿಭಾಷೆಯಲ್ಲಿ ಹೇಳುವುದಾದರೆ ಅವನು ನಿವೃತ್ತ ಕರ್ಮವನ್ನು ಅಥವಾ ಮುಕ್ತಕರ್ಮವನ್ನು ಪ್ರತಿಪಾದಿಸುವವನು. ಜ್ಞಾನಕ್ಕೆ ಪ್ರಾಧಾನ್ಯ ಕೊಡುತ್ತಿದ್ದರೂ ವಿಜ್ಞಾನಯುಕ್ತ ಜ್ಞಾನವನ್ನು, ಜ್ಞಾನಯುಕ್ತ ವಿಜ್ಞಾನವನ್ನು ಅವನು ಎತ್ತಿ ಹಿಡಿಯುವನು. ಆತ್ಮವಿಕಾಸ ಹಾಗೂ ಆತ್ಮ ದರ್ಶನ ಇವೆಷ್ಟು ಮಹತ್ವದವೊ ಅಷ್ಟೇ ಭೌತಿಕ ಜೀವನವಿಕಾಸವೂ ಮಹತ್ವದ್ದೆಂದು ಅವನು ತಿಳಿದಿರುವನು. ಹೀಗಿದ್ದರೂ ಅವನು ಹೇಳುವುದೇನಂದರೆ, '........ ಪೌರ್ವಾತ್ಯ ಸಿದ್ಧಾಂತಗಳು ನಮಗೆ ಎಷ್ಟೇ ವಿಲಕ್ಷಣವೆನಿಸಿದರೂ ತುಲನಾತ್ಮಕ ದೃಷ್ಟಿಯಿಂದ ನೋಡಿದರೆ ನಮ್ಮ (ಪಾಶ್ಚಾತ್ಯ) ವಿಚಾರಸರಣಿಯು ಅಷ್ಟೊಂದು ಸಮರ್ಥನೀಯವೆಂದು ನಮಗೆನಿಸುವದಿಲ್ಲ. ಪೌರ್ವಾತ್ಯ ಸಿದ್ಧಾಂತಗಳಲ್ಲಿ ಒಂದು ಅತಿ ಉದಾತ್ತಭಾವವು ಹುದುಗಿಕೊಂಡಿರುವದು. ಅದು ನಮ್ಮನ್ನು ಆಕರ್ಷಿಸುವದು, ನಮ್ಮನ್ನು ಮನಸೋಲಿಸಿ ಬಿಡುವದು.' ಪುಟ ೯೯.

ಈ ಅವತರಣಿಕೆಗಳು ಎಷ್ಟೇ ಸಂಕ್ಷಿಪ್ತವಿದ್ದರೂ ಇವುಗಳಲ್ಲಿ ಲೇಖಕನ ಮುಖ್ಯವಿಚಾರಗಳು ಚನ್ನಾಗಿ ಪ್ರತಿಬಿಂಬಿತವಾಗಿವೆ. ಪಾಶ್ಚಾತ್ಯ ಪೌರ್ವಾತ್ಯ ವಿಚಾರಧಾರೆಗಳಲ್ಲಿಯ ಹಲವೊಂದು ವೈಶಿಷ್ಟ್ಯಗಳನ್ನು ಅವನು ಸ್ಪಷ್ಟವಾಗಿ ಚಿತ್ರಿಸಿರುವನು; ಪ್ರತ್ಯೇಕವಾಗಿ ಅವು ಅಪೂರ್ಣವಿದ್ದರೂ ಅವು ಪರಸ್ಪರ ಪೋಷಕ ಹಾಗೂ ಪೂರಕವಾಗಬಲ್ಲವು ಎಂಬ ಸಮನ್ವಯಮಾರ್ಗದ ದಿಗ್ದರ್ಶನ ವಿರುವದೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಪಾಶ್ಚಾತ್ಯ ಪ್ರವೃತ್ತಿಗಳಲ್ಲಿ ಗುಣಗಳಾವೂ ಇಲ್ಲ ಎಂದು ಹಲವರು ಹೇಳುವರು. ಅದು ತಪ್ಪಾಗುವದು. ಜಗತ್ತಿನ ಧಾರಣೆ ಪೋಷಣೆಗೆ ಹಾಗೂ ಮಾನವೀ ಸಮಾಜದ ವಿಕಾಸಕ್ಕೆ ಅತ್ಯಂತ ಸಹಾಯಕವಾದ ಹಲವೊಂದು

ಗುಣವಿಶೇಷಗಳು ಅವುಗಳಲ್ಲಿ ಆವಿರ್ಭವಿಸಿರುವವು. ಇಷ್ಟೇ ಅಲ್ಲ. ಮಾನವ ಕುಲದ ಭವಿತವ್ಯದ ದೃಷ್ಟಿಯಿಂದ ಪಾಶ್ಚಾತ್ಯ ಸಂಸ್ಕೃತಿಯು ಒಂದು ವಿಶಿಷ್ಟ ಪಾತ್ರ ವಹಿಸಿ ತನ್ನ ಕರ್ತವ್ಯವನ್ನು ಏಕನಿಷ್ಠೆಯಿಂದ ಮಾಡುತಿರುವದೆಂದೇ ಹೇಳಬೇಕಾಗುವದು. ಅದನ್ನೆಲ್ಲ ವಿಮರ್ಶಿಸುವ ಮೊದಲು ಪೌರ್ವಾತ್ಯ ಸಂಸ್ಕೃತಿಯ ಲಕ್ಷಣಗಳಾವವು ಎಂಬುದನ್ನು ಸ್ವಲ್ಪ ನೋಡುವ.

ಪೌರ್ವಾತ್ಯ ಸಂಸ್ಕೃತಿಯ ಹಲವು ಲಕ್ಷಣಗಳು ಸ್ವಾಭಾವಿಕವಾಗಿಯೇ ಪಾಶ್ಚಾತ್ಯ ಸಂಸ್ಕೃತಿಯಿಂದ ಭಿನ್ನವಿರುವವು. ಹಾಗಿದ್ದಮಾತ್ರಕ್ಕೆ ಅವು ವಿರೋಧಿಯಾಗಿರುವವು ಎಂದು ತಿಳಿಯಲು ಆಸ್ಪದವಿಲ್ಲ. ಪೂರ್ವದ ಒಲವು ಅಂತಃಪ್ರವೃತ್ತಿಯ ಕಡೆಗೆ ಹೆಚ್ಚು ಇರುವದು. ಅಂತರ್ಜಗತ್ತಿನಲ್ಲಿ ತನ್ನ ಸ್ವಾಮಿತ್ವವನ್ನು ಪ್ರಸ್ಥಾಪಿಸಬೇಕೆಂದು ಅದರ ಹವಣು, ಅಂತಃಶಕ್ತಿಗಳ ಮೇಲೆ ಜಯವನ್ನು ಸಂಪಾದಿಸಬೇಕೆಂದು ಅದು ಪ್ರಯತ್ನ ಮಾಡುತ್ತ ಬಂದಿರುವದು. ಅಂತಃಶುದ್ಧಿ, ಅತ್ಯುನ್ನತ ನೈತಿಕಧ್ಯೇಯ, ಅತೀವ ತ್ಯಾಗ, ಅತೀವ ಪರೋಪಕಾರ, ಆತ್ಮನಿಷ್ಠೆ, ವಿಷಯಸುಖಗಳಿಂದ ನಿವೃತ್ತಿ, ಇಂದ್ರಿಯ ಜಾಲದಿಂದ ಆತ್ಮನ ಮುಕ್ತಿ ಇತ್ಯಾದಿಗಳತ್ತ ಪೌರ್ವಾತ್ಯ ಸಂಸ್ಕೃತಿಯು ಹೆಚ್ಚು ಲಕ್ಷಗೊಡುತ್ತ ಬಂದಿರುವದು. ಆದುದರಿಂದಲೆ ಜಗತ್ತಿನಲ್ಲಿಯ ಎಲ್ಲ ಧರ್ಮಗಳ ಜನ್ಮವು, ಹಿಬ್ರೂ ಕ್ರಿಶ್ಚಿಯನ್ ಧರ್ಮಗಳು ಸಹ ಪೂರ್ವದೇಶಗಳಲ್ಲಿಯೆ ಹುಟ್ಟಿ ಬಾಳಿ, ಬೆಳೆದು, ಬೆಳಗಿದವು. ಮೋಝೆಸ್, ಕ್ರಾಯಿಸ್ಟ, ಶ್ರೀಕೃಷ್ಣ, ಮಹಾವೀರ, ಬುದ್ಧಭಗವಾನ್, ಝುರಥುಷ್ಟ್ರ, ಪೈಗಂಬರ ಇತ್ಯಾದಿ ಧರ್ಮಪುರುಷರೆಲ್ಲ ಪೂರ್ವಗೋಲಾರ್ಧದವರೇ. ಒಂದೇ ರೀತಿ ಅನುಭವಪೂರ್ಣ ಹಾಗೂ ಅನುಭವ ಯುಕ್ತ (ಕೇವಲ ಬೌದ್ಧಿಕವಲ್ಲದ) ತತ್ವಜ್ಞಾನದ ತವರೂರಾದರೂ ಪೌರ್ವಾತ್ಯ ದೇಶಗಳೇ. ಜೀವನದಲ್ಲಿಯ ಮುಖ್ಯಧ್ಯೇಯವು ಆಂತರಿಕ ಶುದ್ಧಿಸಿದ್ಧಿಗಳು. ಈ ಮೂಲಕ ವಿಷಯಾದಿಗಳಿಂದ ಪ್ರಾಪ್ತವಾಗುವ ಸುಖಗಳಿಗೆ ಗೌಣಸ್ಥಾನವು ಕೊಡಲಾಗಿದೆ. ವಸ್ತುಗಳ ಮೂಲ್ಯಾಂಕನವು ಕೂಡ ಈ ದೃಷ್ಟಿಯಿಂದಲೆ ಮಾಡಲಾದುದರಿಂದ ಅವುಗಳ ಬೆಲೆಕಟ್ಟುವಾಗ, ಅವು ಎಷ್ಟು ಭೌತಿಕಸುಖವನ್ನು ಕೊಡಬಲ್ಲವು ಎಂಬುದರಕಿಂತ ಅವು ನಮ್ಮ ಆಂತರಿಕ ಜೀವನವನ್ನು ಎಷ್ಟರ ಮಟ್ಟಿಗೆ ಉತ್ತಮಪಡಿಸಬಲ್ಲವು, ಎಂಬುದನ್ನೇ ಹೆಚ್ಚು ನೋಡಲಾಗುತಿರುವದು. ಇತ್ತ ಭೌತಿಕ ಸುಖಸೋಯಿಗಳಿಗಾಗಲಿ ಮಹತ್ವವೇ ಇಲ್ಲ ಎಂದು ಇದರ ಅರ್ಥವಲ್ಲ. ಹೊಸ ಶೋಧ, ಅನೇಕ ಶಾಸ್ತ್ರಗಳ ಅಭ್ಯಾಸ, ವಿಜ್ಞಾನ

ಇವುಗಳನ್ನು ಪೌರ್ವಾತ್ಯರು ಕಾಲಕಾಲಕ್ಕೆ ಅತೀವ ಏಕಾಗ್ರತೆಯಿಂದ ಹಿಂಬಾಲಿಸುತ್ತ ಬಂದಿರುವರು. ಒಂದು ಕಾಲಕ್ಕೆ ಶತಕಾನುಶತಕಗಳ ವರೆಗೆ ಅವರು ಪಾಶ್ಚಿಮಾತ್ಯರಿಗಿಂತ ಎಷ್ಟೋ ಮುಂದೆ ಇದ್ದರು. ಆದರೂ ಅವೆಲ್ಲ ಆಧ್ಯಾತ್ಮಕ್ಕೆ ಗೌಣವೆಂದೇ ಅವರ ದೃಢಭಾವನೆ. ಆದರೆ ಅವುಗಳಿಗೆ ಆತ್ಯಂತಿಕ ಶ್ರೇಷ್ಠ ಸ್ಥಾನವು ಎಂದೂ ಕೊಡಲಾಗಿಲ್ಲ. ಮಾನವನ ನಿಜವಾದ ಆಂತರಿಕ ಸುಖ, ಶಾಂತಿ, ಸಮಾಧಾನ ಇವುಗಳಿಗೆ ಮಹತ್ವವೇ ಹೊರತು ಕೇವಲ ಹೊರೆಗಟ್ಟಲೆ ಭೌತಿಕ ಸಾಧನಗಳಿಗೆ ಇಲ್ಲವೆ ಅಹೋರಾತ್ರ ಯಂತ್ರವತ್ ನಡೆಯುವ ಚಟುವಟಿಕೆಗೆ ವಿಶೇಷ ಮಹತ್ವ ಕೊಡಲ್ಪಟ್ಟಿಲ್ಲ. ದುಡ್ಡಿಗೆ ಇಲ್ಲವೆ ದುಡ್ಡಿನಿಂದ ಸಿಕ್ಕಬಲ್ಲ ವಸ್ತುಗಳಿಗೆ ಪ್ರಾಧಾನ್ಯವಿರದೆ, ಶಾಂತಿನಿಕೇತನದ ಶಿಲೆಯ ಮೇಲೆ ಮಹರ್ಷಿ ದೇವೇಂದ್ರರು ಕೊರೆದಿಟ್ಟಿರುವ ಅವತರಣಿಕೆಯನ್ವಯ, 'ಪ್ರಾಣೇರ ಆರಾಮ, ಮನೇರ ಶಾಂತಿ, ಆತ್ಮಾರ ಆನಂದ' ಇವೇ ಸ್ಪೃಹಣೀಯ ಹಾಗೂ ಸಂಗ್ರಹಣೀಯ ವಸ್ತುಗಳು. ವಿಶ್ವವನ್ನು ಜಯಿಸಿ ಆತ್ಮನನ್ನು ಕಳಕೊಂಡರೆ ಅದರಿಂದಾಗುವ ಲಾಭವೇನು, ಎಂದು ಪೌರ್ವಾತ್ಯಸಂಸ್ಕೃತಿಯು ಪ್ರಶ್ನಿಮಾಡುವದು. ಆದುದರಿಂದಲೆ 'ಆತ್ಮಾ ವಾ ಅರೇ ದೃಷ್ಟವ್ಯಃ ಶ್ರೋತವ್ಯಃ ಮಂತವ್ಯಃ ನಿದಿಧ್ಯಾಸಿತವ್ಯಃ' ಎಂದು ಉಪನಿಷತ್ತು ಕೈಯೆತ್ತಿ ಘಂಟಾಘೋಷವಾಗಿ ಹೇಳುವದು. ಬಾಹ್ಯ ಅಚ್ಚುಕಟ್ಟು, ನಿರಂತರ ಯಾಂತ್ರಿಕ ಉದ್ಯೋಗಶೀಲತೆ, ಸಂಖ್ಯೆ ಹಾಗೂ ಗಾತ್ರಕ್ಕೆ ಮಹತ್ವ ಇತ್ಯಾದಿಗಳಿಗೆ ಪೌರ್ವಾತ್ಯಸಂಸ್ಕೃತಿಯಲ್ಲಿ ಬೆಲೆ ಕಡಿಮೆ. ಒಟ್ಟಿಗೆ ನೋಡಲಾಗಿ ಪೌರ್ವಾತ್ಯಸಂಸ್ಕೃತಿಯು ನಿವೃತ್ತಿಪ್ರಧಾನ, ಆಂತರಿಕ ಸುಖಶೋಧಕ, ನೈತಿಕ ಹಾಗು ಆಧ್ಯಾತ್ಮಿಕ ಮೂಲ್ಯಗಳಿಗೆ ಹೆಚ್ಚು ಮಹತ್ವಕೊಡುವಂತಹದು, ಸಾತ್ವಿಕ, ಅಂತರ್ಜೀವನದತ್ತ ದೃಷ್ಟಿಯುಳ್ಳದ್ದು, ತಾಕಲಾಟ ಪೀಕಲಾಟಗಳಿಗಿಂತ ಶಾಂತಿ ಸಮಾಧಾನಗಳನ್ನು ಹಿಂಬಾಲಿಸುವಂತಹದು ಇರುವದು. ಪೂರ್ವದಲ್ಲಿಯೂ ಬೇಕಾದಷ್ಟು ವಿಜ್ಞಾನಿಗಳು, ಸಮ್ರಾಟರು, ಶೋಧಕರು ಮುಂತಾದವರು ಆಗಿಹೋಗಿರುವರು. ಆದರೆ ಆ ಎಲ್ಲ ಚಟುವಟಿಕೆಗಳು ನೈತಿಕ ಹಾಗೂ ಆಧ್ಯಾತ್ಮಿಕ ಸಿದ್ಧಿಗಿಂತ ಗೌಣ ಅಥವಾ ಆ ಸಿದ್ಧಿಗೆ ಸಹಾಯಕ ಎಂಬ ಭಾವನೆಯಿಂದ ಮಾಡಲಾಗಿರುವವು. ಈ ಸಂಸ್ಕೃತಿಯಲ್ಲಿಯೂ ಹಲವು ದೋಷಗಳು ಹಾಗೂ ಭಯಸ್ಥಾನಗಳು ಇರುವವು. ಉದಾ: ಸಾತ್ವಿಕ ಗುಣವು ನಿಷ್ಕ್ರಿಯವಾದ ಪಕ್ಷದಲ್ಲಿ ಅದು ಜಡವಾಗುವ ಇಲ್ಲವೆ ತಮೋರೂಪವನ್ನು ತಾಳುವ ಭಯವಿರುವದು.

ಆದರೆ ಮಾನವೀ ಭವಿತವ್ಯದ ದೃಷ್ಟಿಯಿಂದ ಪೌರ್ವಾತ್ಯಸಂಸ್ಕೃತಿಯು ಕೂಡ ಬಹಳ ದೊಡ್ಡ ಕಾರ್ಯವನ್ನು ಮಾಡಿದೆ ಹಾಗೂ ಮಾಡುತ್ತ ಇದೆ ಎಂದು ಹೇಳಬೇಕಾಗುವದು.

ಎರಡೂ ಸಂಸ್ಕೃತಿಗಳಲ್ಲಿ ಗುಣದೋಷಗಳಿರುವವು, ಹಾಗಿದ್ದರೂ ಅವು ತಮ್ಮ ಮಟ್ಟಿಗೆ ಮಾನವಕುಲದ ಉಪಕಾರವನ್ನೇ ಸಾಧಿಸುತ್ತ ಬಂದಿರುವವೆಂದು ನಾನು ಹೇಳಿದ್ದೇನೆ. ಇದಕ್ಕೆ ಕಾರಣವಿರುವದು. ಯಾವದೇ ಮಾತಿನ ಪರೀಕ್ಷೆ ಮಾಡುವಾಗ, ಬೆಲೆ ಕಟ್ಟುವಾಗ ಒಂದು ಒರೆಗಲ್ಲು ಬೇಕು, ಒಂದು ಮಾನದಂಡ ಇಲ್ಲವೆ ಅಳತೆಗೋಲು ಅವಶ್ಯ. ಇಲ್ಲಿ ಮಾನವಕುಲದ ಆತ್ಯಂತಿಕ ಧ್ಯೇಯ, ಅದರ ಸರ್ವಾಂಗೀನ ಉನ್ನತಿ, ಅದರ ಉಜ್ವಲ ಭವಿತವ್ಯ ಮತ್ತು ಅವುಗಳನ್ನು ಶೀಘ್ರಾತಿಶೀಘ್ರವಾಗಿ ಮುಟ್ಟಲು ಆಗುವ ಪ್ರಯತ್ನ ಹಾಗೂ ಪ್ರಗತಿ ಇವೇ ನಮ್ಮ ಅಳತೆಗೋಲುಗಳಾಗಬಲ್ಲವು. ಆ ದೃಷ್ಟಿಯಿಂದ ನೋಡಿದರೆ ಈ ಎರಡೂ ಸಂಸ್ಕೃತಿಗಳು ಮಾನವಕುಲವನ್ನು ತನ್ನ ಧ್ಯೇಯದತ್ತ ಒಯ್ದು ಮುಟ್ಟಿಸುವ ಕೆಲಸದಲ್ಲಿ ದತ್ತಚಿತ್ತವಾಗಿ ದುಡಿಯುತಿರುವವು ಎಂಬುದರಲ್ಲಿ ಸಂಶಯವಿಲ್ಲ. ಅಂತರ್ಬಾಹ್ಯ ಜಗತ್ತು ಹಾಗೂ ಶಕ್ತಿಗಳ ಮೇಲೆ ಪೂರ್ಣ ಪ್ರಭುತ್ವವನ್ನು ಸ್ಥಾಪಿಸಿ, ನಿಖಿಲ ಮಾನವಕುಲವನ್ನೆ ದೈವೀಮಟ್ಟಕ್ಕೆ ಒಯ್ದು, ಸರ್ವಸಮನ್ವಯಾತ್ಮಕ ಸರಸಸಮ್ಮೇಲನವನ್ನು ಸಾಧಿಸಿ, ಆದಿಶಕ್ತಿರೂಪ ಪುರುಷೋತ್ತಮನೊಡನೆ ಸಮರಸೈಕ್ಯದಿಂದ ಕ್ರೀಡಾವಿಹಾರಮಾಡುವದೆ ಮಾನವನ ಧ್ಯೇಯ, ಎಂಬುದನ್ನನುಲಕ್ಷಿಸಿದರೆ ಈ ಎರಡೂ ಸಂಸ್ಕೃತಿಗಳು ಈಗ ಸದ್ಯಕ್ಕೆ ಯಾವ ಕಾರ್ಯವನ್ನು ಮಾಡುತಿರುವವು ಹಾಗೂ ಅವು ಧ್ಯೇಯಸಾಧನೆಗೆ ಹೇಗೆ ಮತ್ತು ಎಷ್ಟು ಪೋಷಕವಿರುವವು ಎಂಬ ಮಾತುಗಳು ಸ್ಪಷ್ಟವಾಗುವವು. ಇವೆರಡರಲ್ಲಿಯೂ ಹೆಚ್ಚು ಆದಾನಪ್ರದಾನ, ವಿಶೇಷವಿನಿಮಯ ಇವು ನಡೆದು ಸಮನ್ವಯಕಾಲವೂ ಸಮೀಪಿಸಿರುವದು ಎಂಬುದೂ ವ್ಯಕ್ತವಾಗುವದು.

ಒಂದು ರೀತಿ ನೋಡಿದರೆ ಈ ಎರಡು ಸಂಸ್ಕೃತಿಗಳು ಒಂದು ವ್ಯಕ್ತಿಯ ಅಂತರಂಗದಲ್ಲಿಯ ಎರಡು ಒಲವುಗಳು, ಎರಡು ಪ್ರವೃತ್ತಿಗಳ ಪ್ರತಿನಿಧಿಸ್ವರೂಪವಿರುವವು. ಪ್ರತಿಯೊಂದು ವ್ಯಕ್ತಿಯಲ್ಲಿಯೂ ಈ ಎರಡೂ ಹೆಚ್ಚು ಕಡಿಮೆ ಪ್ರಮಾಣದಲ್ಲಿ ಕಂಡುಬರುವವು. ಇಹ ಪರ, ಪ್ರವೃತ್ತಿ ನಿವೃತ್ತಿ, ಅಂತರಂಗ ಬಹಿರಂಗ, ಶ್ರೇಯ ಪ್ರೇಯ, ಲೌಕಿಕ ವೇದಾಂತಿಕ ಈ ಮುಂತಾದ

ದ್ವಂದ್ವಗಳು ಮತ್ತು ಆ ಬಗ್ಗೆ ಹೆಚ್ಚುಕಡಿಮೆ ಒಲವುಗಳು ಪ್ರತಿಯೊಬ್ಬನ ಅಂತಃಕರಣದಲ್ಲಿಯೂ ಇದ್ದೇ ಇರುವವು. ಆತ್ಮನಿರೀಕ್ಷಣೆ ಮಾಡಿದರೆ ಇವುಗಳಲ್ಲಿ ತಿಕ್ಕಾಟ ತಾಕಲಾಟಗಳು ನಡೆದುದೂ ನಮ್ಮ ಅನುಭವಕ್ಕೆ ಬರುವದು. ಇವುಗಳಲ್ಲಿ ಯಾವುದರ ಬಲವು ಹೆಚ್ಚಾಗುವುದೊ ಅದು ಪ್ರಧಾನನೆನಿಸುವದು ಹಾಗೂ ಆಯಾ ವ್ಯಕ್ತಿಯ ಜೀವನದಲ್ಲಿ ಅದು ಒಡೆದುಕಾಣಿಸುವದು. ಆಗ ನಾವು ಆಯಾ ವ್ಯಕ್ತಿಗೆ, ಇಂಥ ಒಲವುಳ್ಳವ, ಎಂದು ಹೇಳುವೆವು. ಒಬ್ಬನು ಯೋಗಿ ಎನಿಸಿದರೆ ಇನ್ನೊಬ್ಬನು ಭೋಗಿ ಎನಿಸುವನು. ಒಬ್ಬನು ವೇದಾಂತಿಯಾದರೆ ಮತ್ತೊಬ್ಬ ವ್ಯವಹಾರಿಯಾಗುವನು. ಒಬ್ಬನು ಬಹಿರ್‌ದೃಷ್ಟಿಯುಳ್ಳವನಾದರೆ ಇನ್ನೊಬ್ಬನು ಅಂತರ್‌ದೃಷ್ಟಿಯ ಪ್ರೇರಣೆಯಿಂದ ನಡೆಯುವನು. ಒಬ್ಬನು ವಿಷಯಾಸಕ್ತನಾದರೆ ಮತ್ತೊಬ್ಬನು ಆತ್ಮಾಸಕ್ತನಾಗುವನು. ಆದರೆ ಈ ದ್ವಂದ್ವಗಳು ಸನಾತನ ದ್ವಂದ್ವಗಳೊ, ಇವು ಅನಾದಿಯಿದ್ದು ಅನಂತಕಾಲದ ವರೆಗೆ ಇರುವಂಥವುಗಳೊ, ಅಥವಾ ಇವುಗಳಲ್ಲಿ ಸಮನ್ವಯವಾಗಬಲ್ಲದೇ? ಈ ಪ್ರಶ್ನೆ ಮಹತ್ವದ್ದಿರುವದು. ಈ ಪ್ರಶ್ನೆಯನ್ನು ಇನ್ನೊಂದು ರೀತಿ ಮಂಡಿಸಬಹುದು: ಪ್ರೇಯ ಶ್ರೇಯಗಳ ಸಮನ್ವಯವಾಗಬಲ್ಲದೊ? ಅಹುದು, ಆಗಬಲ್ಲದು, ಎಂಬುದೆ ಇದಕ್ಕೆ ಉತ್ತರ. ಮನೋಭೂಮಿಕೆಯಲ್ಲಿ, ಭಾವಭೂಮಿಕೆಯಲ್ಲಿ ಇವುಗಳ ವಿರೋಧವು ಎಷ್ಟೇ ಕಡುತರವಾದುದು ಕಂಡರೂ ಆತ್ಮಭೂಮಿಕೆಯಲ್ಲಿ ಇವು ಒಂದೇ ಒಲವಿನ ಎರಡು ಟಿಸಲುಗಳು. 'ಏಕೋ ಅಹಂ ಬಹು ಸ್ಯಾಮ,' ನಾನೊಬ್ಬನೇ ಇರುವೆ, ನಾನು ಬಹು ಆಗಬೇಕು, ಎಂದು ಆದಿ-ಆತ್ಮನು ಇಚ್ಛಿಸಿದನೆಂದು ಉಪನಿಷತ್ತು ಹೇಳುವದು. ವಿವಿಧತೆ ಎಂಬುದು ಈ ಇಚ್ಛೆಯ ಮೂಲಕ ಆದ ಆವಿರ್ಭಾವದ ಪರಿಣಾಮವು. ವಿವಿಧತೆ, ಭಿನ್ನತೆ, ಇದರ ಅರ್ಥ ವಿರೋಧ, ಪರಸ್ಪರ ವಿನಾಶಕತ್ವ ಎಂದು ಮಾಡಕೂಡದು. ಮನಸೆಂಬುದಕ್ಕೆ, ಜೀವಕ್ಕೆ ಅಂತರ್ಬಾಹ್ಯ, ಮೇಲೆ ಕೆಳಗೆ, ಪೂರ್ವ ಪಶ್ಚಿಮ ಇತ್ಯಾದಿಗಳು ಇದ್ದರೂ ಆತ್ಮಕ್ಕೆ ಆ ದ್ವಂದ್ವ ಬಾಧಿಸದು.

ಪ್ರಿಯವಾದ ವಸ್ತು ಪ್ರೇಯವೆನಿಸುವದು. ಜೀವಕ್ಕೆ ಪ್ರಿಯವಾದುದೆಲ್ಲ ವಿಷಯಾದಿಗಳಿಂದಾಗುವ ಸುಖಗಳೆಲ್ಲ ಪ್ರೇಯವು. ಆತ್ಮಕ್ಕೆ ಆಗುವ ಸುಖವೆಲ್ಲ ಸ್ವರೂಪಜ್ಞಾನದಿಂದ ಆಗುವ ನಿರಾಲಂಬ ಸುಖವೆಲ್ಲ ಶ್ರೇಯವು. ಸಕೃತ್‌ದರ್ಶನಕ್ಕೆ ಇವೆರಡೂ ಪರಸ್ಪರ ವಿರೋಧಿಯಾಗಿ ಕಾಣುವವು. ಆದರೆ ಪ್ರೇಯ

ಶ್ರೇಯಗಳ ಸಮನ್ವಯ ಮಾಡುವ ಶಕ್ತಿ ಹಾಗೂ ಪ್ರೇಯವನ್ನು ಕೂಡ ಶ್ರೇಯೋರೂಪದಲ್ಲಿ ಪರಿವರ್ತಿಸುವ ಯುಕ್ತಿ ಆತ್ಮನಲ್ಲಿದೆ ಎಂಬುದನ್ನು ನಾವು ಮರೆಯಕೂಡದು. ಜೀವನು ಒಂದು ಪ್ರತ್ಯೇಕ ಸಂವಿತ್ತು ಎಂಬ ಅಹಂಭಾವ ಅಳಿದು, ಧ್ಯಾನಾದಿ ಸಾಧನಗಳಿಂದ ತಾನು ಆತ್ಮರೂಪನು ಎಂಬರಿವು ಅಳವಟ್ಟಿತೆಂದರೆ ಪ್ರೇಯವು ಕೂಡ ಪರಮಾತ್ಮಪ್ರತೀಕವೆನಿಸಿ ಅದು ಶ್ರೇಯಃ ಸಾಧನದ ಸಾಮಗ್ರಿಯಾಗುವದು. ದೇಹದಲ್ಲಿರುವ ಪರಮಪುರುಷನೆ ಉಪದ್ರಷ್ಟಾ, ಅನುಮಂತಾ, ಭರ್ತಾ, ಭೋಕ್ತಾ ಇದ್ದು ಅವನೇ ಮಹೇಶ್ವರನು ಎಂಬ ಪ್ರತೀತಿಯಾಗಲು ಮುಂದೆ ಮಾರ್ಗವಾಗುವದು. ಆಮೇಲೆ ಎಲ್ಲವೂ ಬ್ರಹ್ಮಮಯವಾಗಿ ಗೀತೆಯಲ್ಲಿ ಹೇಳಲಾದ 'ಬ್ರಹ್ಮಾರ್ಪಣಂ ಬ್ರಹ್ಮಹವಿಃ' ಎಂಬ ಶ್ಲೋಕದ ಅರ್ಥವು ಪೂರ್ಣ ಹೊಳೆಯುವದು. ಆಗ ಪ್ರೇಯವೆಂಬುದು ಕೇವಲ ಇಂದ್ರಿಯಗಳಿಗೆ ಇಷ್ಟವಾದ ಒಂದು ಸುಖ ಕೊಡುವ ವಸ್ತು ಮಾತ್ರ ಎಂದೆನಿಸದೆ ಅದು ಪರಮಾತ್ಮದರ್ಶನದ ಒಂದು ಸಾಧನವಾಗಿ ಪರಿಣಮಿಸುವದು.

ವ್ಯಕ್ತಿಯಲ್ಲಿರುವ ಒಲವುಗಳೆ ಬಾಹ್ಯದಲ್ಲಿ ಬಂದು ಇಡೀ ಜನಾಂಗದಲ್ಲಿ ಅಥವಾ ಗೋಲಾರ್ಧದಲ್ಲಿ ಭವ್ಯರೂಪವನ್ನು ತಾಳಿ ಎರಡು ಸಂಸ್ಕೃತಿಗಳ ರೂಪದಿಂದ ನಮ್ಮೆದುರು ಪೌರ್ವಾತ್ಯ ಪಾಶ್ಚಾತ್ಯವೆಂದು ಕಂಗೊಳಿಸುವವು. ಸೂಕ್ಷ್ಮವಾಗಿ ಪರೀಕ್ಷಿಸಿದರೆ ಇವೆರಡೂ ಜೋಲಿ ತಪ್ಪಿ ನಡೆದಿವೆ ಎಂಬುದು ಸ್ಪಷ್ಟವಾಗುವದು. ಹಾಗೆ ಆದುದರಿಂದಲೆ ಅವುಗಳಲ್ಲಿ ದೋಷಗಳು ಉಂಟಾಗಿರುವವು. ದೇಹ ಆತ್ಮಗಳಲ್ಲಿ, ಬಾಹ್ಯಾಂತರಗಳಲ್ಲಿ, ಇಹಪರಗಳಲ್ಲಿ, ವೇದಾಂತ ವ್ಯವಹಾರಗಳಲ್ಲಿ ಯಾವುದನ್ನೂ ದುರ್ಲಕ್ಷಿಸಲಿಕ್ಕಾಗುವದಿಲ್ಲ. ಎರಡನ್ನೂ ಸಮತೋಲವಾಗಿ ಸಮನ್ವಯಬುದ್ಧಿಯಿಂದ ಸಾಗಿಸುವುದೆ ಪೂರ್ಣತ್ವದ ಲಕ್ಷಣವು. ಎರಡರಲ್ಲಿ ಯಾವುದನ್ನು ಬಿಟ್ಟರೂ ಅದು ಪೂರ್ಣತ್ವಕ್ಕೆ ಧಕ್ಕೆ ತರುವದು. ಯಾಕಂದರೆ ಸತ್ಯವು, ಪೂರ್ಣವು ಇವೆರಡನ್ನು ಒಳಗೊಂಡಿರುವದು. ಅವುಗಳಲ್ಲಿ ಯಾವುದನ್ನು ಕಡಿದು ಚಲ್ಲುವಂತಿಲ್ಲ. ಶಿವಶಕ್ತಿ, ಮೂಲವಸ್ತು ಅದರ ಆವಿರ್ಭಾವ, ಇವುಗಳಲ್ಲಿ ಒಂದು ಬಗೆಯ ಬಿಡಿಸಲಾರದ ಏಕರೂಪತೆ ಇದೆ. ಆದುದರಿಂದಲೆ ಈಶಾವಾಸ್ಯವು ವಿದ್ಯೆ-ಅವಿದ್ಯೆಗಳ ಸಮನ್ವಯಜ್ಞಾನ ಬೇಕು ಎಂದು ಒತ್ತಿ ಹೇಳಿರುವದು. ಆ ಜ್ಞಾನವಿದ್ದರೆ ಮಾತ್ರ ಅವಿದ್ಯೆಯಿಂದ ಮೃತ್ಯುವನ್ನು ದಾಟಿ, ವಿದ್ಯೆಯಿಂದ ಅಮೃತತ್ವವನ್ನು ಪಡೆಯುವಿರಿ ಎಂಬ

ಭರವಸೆಯನ್ನು ಉಪನಿಷತ್ತು ಕೊಟ್ಟಿರುವದು. ಯೋಗಸಾಧನೆಗೆ ಅಥವಾ ಪ್ರಾಣಾಯಾಮಕ್ಕೆ ಯಾವ ರೀತಿ ಶ್ವಾಸ-ನಿಶ್ವಾಸಗಳೆರಡೂ ಅವಶ್ಯವೊ ಅವೆರಡರ ಆಯಮನದಿಂದಲೆ ಪ್ರಾಣಾಯಾಮವು ಯಾವ ರೀತಿ ಸಿದ್ಧವಾಗ ಬಲ್ಲದೊ ಅದೇ ರೀತಿ ಬಾಹ್ಯಾಂತರ ಶಕ್ತಿಗಳ ನಿಯಮನವು ಸಿದ್ಧಿಗೆ ಅವಶ್ಯವು. ಅಂತಃಶಕ್ತಿಗಳನ್ನಷ್ಟೆ ನಿಯಮಿಸಿ ಸಮಾಧಿಮಗ್ನರಾಗಿರುವುದರಲ್ಲಿಯೆ ಪೂರ್ಣ ಸಿದ್ಧಿಯಿದೆ ಎಂದು ತಿಳಿಯುವುದು ಎಷ್ಟು ಏಕಾಂಗೀನವೊ ಅಷ್ಟೇ ಬಾಹ್ಯ ಶಕ್ತಿಗಳ ಮೇಲೆ ಪ್ರಭುತ್ವವನ್ನು ಸ್ಥಾಪಿಸಿ ಕೃತಾರ್ಥರೆನಿಸಿಕೊಳ್ಳುವದು ಅಪೂರ್ಣ ತ್ವದ ಲಕ್ಷಣವು. ನಮಗೆ ಗೋಚರವಾಗುವ ಅಂತರ್ಬಾಹ್ಯ ಶಕ್ತಿಗಳೆಲ್ಲವೂ ಒಂದೇ ಆದಿಶಕ್ತಿಯ ಸ್ವರೂಪಗಳು. ಅವೆರಡರ ಆಟವೆ ವಿಶ್ವ ಎಂಬ ನೋಟಕ್ಕೆ ಕಾರಣವು. ನಮಗೆ ತಿಳಿದ ಮಟ್ಟಿಗೆ ಸದ್ಯಕ್ಕೆ ಈ ಲೋಕದಲ್ಲಿ ಮನುಷ್ಯ ಪ್ರಾಣಿಯೊಂದೆ ಈ ನಾಟಕವನ್ನು ನೋಡಿ, ತಿಳಿದುಕೊಂಡು ಸುಖಪಡ ಬಲ್ಲದು. ಈ ನಾಟಕದಲ್ಲಿ ಮನುಷ್ಯನು ಸ್ವತಃ ಪಾತ್ರ ವಹಿಸುವವನೂ ಅಹುದು ನೋಟವನ್ನು ನೋಡುವವನೂ ಅಹುದು. ದೃಶ್ಯದರ್ಶಕನಾಗಿ ಎರಡೂ ಭೂಮಿಕೆಗಳಲ್ಲಿ ವರ್ತಿಸುವ ಅದ್ವಿತೀಯ ಹೊಣೆಯು ಅವನ ಪಾಲಿಗೆ ಬಂದುಬಿಟ್ಟದೆ. ಅವನಲ್ಲಿರುವ 'ತನ್ನತಾನರಿವ' ಶಕ್ತಿವಿಶೇಷವೆ ಇದಕ್ಕೆ ಕಾರಣ. ಅವನನ್ನುಳಿದೆ ಈ ಶಕ್ತಿ ಇನ್ನಾರಿಗೂ ಒಲಿದಿಲ್ಲ. ಈ ಮೂಲಕವೆ ನಿಷ್ಕಾಮ ಜ್ಞಾನಿಯು ಮಾಡಿಯೂ ಮಾಡದವನಂತಿದ್ದು, ಆಡಿಯೂ ಆಡದವ ನಂತಿದ್ದು ಎಲ್ಲವನ್ನೆ ಸಾಕ್ಷಿಯಾಗಿ ನೋಡುತ್ತ ಸುಖಪಡಬಲ್ಲ.

ಈ ಮಾತನ್ನೆ ಇನ್ನು ಈ ಎರಡು ಸಂಸ್ಕೃತಿಗಳಿಗೆ ಸ್ವಲ್ಪ ಹೆಚ್ಚುಕಡಿಮೆ ಮಾಡಿ ಅನ್ವಯಿಸಿದರೆ ಇವೆರಡೂ ಮಾನವಪ್ರಗತಿಗೆ ಯಾವ ರೀತಿ ಪೋಷಕ ವಿರುವವೆಂಬುದು ಗೊತ್ತಾಗುವದು. ಅಂತರ್ಬಾಹ್ಯಶಕ್ತಿಗಳೆರಡನ್ನೂ ಕೈವಶ ಮಾಡಿಕೊಂಡು ಸ್ವರಾಟ್-ಸಾಮ್ರಾಟ್ ಎಂಬ ದಿವ್ಯಪೀಠದ ಮೇಲೆ ಮನು-ಷ್ಯನು ವಿರಾಜಮಾನನಾಗಬೇಕಾಗಿದೆ. ಈಗ ಈ ಕೆಲಸವನ್ನು ಈ ಎರಡು ಸಂಸ್ಕೃತಿಗಳು ಹಂಚಿಕೊಂಡಂತಾಗಿದೆ! ಆದುದರಿಂದ ಎರಡರಲ್ಲಿಯೂ ದೋಷ ಗಳುಂಟಾಗಿವೆ. 'ಯಂತ್ರಾರೂಢಾನಿ ಮಾಯಯಾ' ಎಂದು ಗೀತೆ ಹೇಳು ವಂತೆ ತಾವು ಎಲ್ಲಿಂದ ಹೊರಟದ್ದು, ಎತ್ತ ಹೊರಟದ್ದು, ಇತ್ಯಾದಿಗಳ ಮೂಲ ಸ್ವರೂಪದ ಯಥಾರ್ಥಕಲ್ಪನೆ ಇಲ್ಲದೆ, ತಾವು ಯಾವ ಮೋಹಜಾಲಗಳಲ್ಲಿ ಸಿಕ್ಕು ಅತ್ಯಂತ ಅಸಮಾಧಾನದಿಂದ ಸತತವೂ ಯಂತ್ರದಂತೆ ಸುತ್ತಾಡುತಿರು

ವರೂ ಆ ಜಾಲದಿಂದ ಮುಕ್ತರಾಗುವ ಯತ್ನವನ್ನು ಮಾಡದೆ ಪಾಶ್ಚಾತ್ಯ ಸಂಸ್ಕೃತಿಯ ಪುರಸ್ಕರ್ತರು ಹಾಗೆಯೆ ಮುಂದೆ ಮುಂದೆ ಹೊರಟಿರುವರು. ಲಗಾಮಿಲ್ಲದ ಕುದುರೆ ಚದರಿ ಬೆದರಿ ತಗ್ಗುದಿನ್ನೆಯನ್ನದೆ ಸ್ವೈರವಾಗಿ ಓಡಾಡು ವಂತೆ ಆ ಸಂಸ್ಕೃತಿಯ ಗತಿಯಾಗಿರುವದು. ಬಾಹ್ಯಶಕ್ತಿಗಳನ್ನು ಬೇಕಾದ ಹಾಗೆ ಉಪಯೋಗಿಸುವ ಜ್ಞಾನವು ಪಾಶ್ಚಾತ್ಯರಿಗೆ ಪ್ರಾಪ್ತವಾಗಿದ್ದರೂ ಅದನ್ನು ಯಥಾಯೋಗ್ಯರೀತಿಯಿಂದ ಮಾನವಹಿತಕ್ಕಾಗಿಯೆ ಉಪಯೋಗಿಸ ಬೇಕೆಂಬ ಆಂತರಿಕ ಸಂಯಮ ಹಾಗೂ ಜಾಣತನ ಇನ್ನೂ ಉದಯಹೊಂದಿಲ್ಲ. ಆದುದರಿಂದ ರಾಜಸಿಕಪ್ರವೃತ್ತಿಗಳಾದ ದ್ವೇಷಾಸೂಯೆ, ಆಕ್ರಮಣದ ಆಕಾಂಕ್ಷೆ ಇವುಗಳ ಕೈಯಲ್ಲಿ ಆ ಜ್ಞಾನ ಸಿಕ್ಕು ಒದ್ದಾಡುತಿದೆ ಹಾಗೂ ಅದರ ಉಪಯೋಗ ಮಾನವಕುಲದ ಧ್ವಂಸಕ್ಕಾಗಿ ಆಗಬಹುದೆಂಬ ಭಯವುಂಟಾ ಗಿದೆ. ಈ ಮುಂತಾದ ದೋಷವು ಪಾಶ್ಚಾತ್ಯಸಂಸ್ಕೃತಿಯಲ್ಲಿ ಕಂಡುಬಂದರೆ ಪೌರ್ವಾತ್ಯಸಂಸ್ಕೃತಿಯಲ್ಲಿ ಬಾಹ್ಯಶಕ್ತಿಗಳತ್ತ ದುರ್ಲಕ್ಷ್ಯ, ಆವಶ್ಯಕ ಜೀವ ನಾಂಶಗಳನ್ನು ಸಹ ಉತ್ಪನ್ನ ಮಾಡದಿರುವಿಕೆ; ಸಾತ್ವಿಕತೆಯ ಹೆಸರಿನಲ್ಲಿ ತಮಸ್ಸಿಗೆ ಪ್ರೋತ್ಸಾಹನ, ಅಂತರಂಗದಲ್ಲಿಯೆ ತಲ್ಲೀನವಾಗಿರುವ ವೃತ್ತಿ ಇತ್ಯಾದಿ ದೋಷಗಳು ತಲೆದೋರಿವೆ.

ಈ ಎರಡೂ ಸಂಸ್ಕೃತಿಗಳಲ್ಲಿಯ ಗುಣಗಳ ಸಮನ್ವಯದಲ್ಲಿಯೆ ಮಾನವ ಕುಲದ ವಿಕಾಸದ ರಹಸ್ಯವಿದೆ ಎಂಬಲ್ಲಿ ಸಂಶಯವಿಲ್ಲ. ವಿಜ್ಞಾನಾದಿಗಳ ಮುಖಾಂತರ ಬಾಹ್ಯಜೀವನದಲ್ಲಿ ಹಾಗೂ ನಿಸರ್ಗವನ್ನು ವಶಪಡಿಸುವ ಕಾರ್ಯದಲ್ಲಿ ಮುಂದುವರಿಯುತಿರುವಾಗಲೆ ಅದನ್ನು ಕೇವಲ ಸ್ವಾರ್ಥಕ್ಕಾಗಿ ಇಲ್ಲವೆ ಆಕ್ರಮಣಕ್ಕಾಗಿ ಉಪಯೋಗಿಸದೆ ಅಂತರ್ವಿಕಾಸಕ್ಕಾಗಿ ಹಾಗೂ ಲೋಕಹಿತಕ್ಕಾಗಿಯೆ ಅದನ್ನು ಉಪಯೋಗಿಸಬೇಕು ಎಂಬ ಸಂಯಮವನ್ನು ಬೆಳೆಸುವದು ಅವಶ್ಯವು. ಅಂದರೆ ರಜೋಗುಣವು ಸಾತ್ವಿಕಗುಣಕ್ಕೆ ಅಧೀನ ವಾಗುವದು. ದೇಹ-ಮನಾದಿಗಳ ಸುಖವನ್ನು ಸಾಧಿಸುತಿರುವಾಗಲೆ ಈ ಸುಖಗಳನ್ನು ಅಂತರಾತ್ಮನ ಶಾಂತಿಸಮಾಧಾನಗಳ ಸಾಧನವೆಂದು ಉಪಯೋ ಗಿಸುವ ಶಕ್ತಿ ಬರುವದು. ಆದೇ ರೀತಿ, ಕೇವಲ ಆತ್ಮಸುಖವನ್ನು ಸಾಧಿಸ ಲೆತ್ನಿಸುತಿರುವಾಗ ದೇಹ-ಮನಾದಿಗಳು ಕೂಡ ಆತ್ಮನೆ ಸ್ವೇಚ್ಛೆಯಿಂದ ಹೊದ್ದುಕೊಂಡ ಹೊದಿಕೆ, ಎಂಬರಿವು ಉಂಟಾಗಿ ಅವುಗಳ ಪಾಲನ ಪೋಷಣ ಸೌಷ್ಠವಾದಿಗಳನ್ನು ಯಥಾಯೋಗ್ಯವಾಗಿ ನೋಡಿಕೊಳ್ಳುವದು ಅವಶ್ಯವೆಂಬ

ಕರ್ತೃವ್ಯಬುದ್ಧಿ ನೆಲೆಗೊಳ್ಳಲು ಆಸ್ಪದವಾಗುವದು. ದೇಹವು ಆತ್ಮನ ಅಧಿಷ್ಠಾನವು, ಅದನ್ನು ಭದ್ರವಾಗಿಟ್ಟುಕೊಂಡೇ ಮುಂದರಿಯುವದು ಸಾಧ್ಯವು ಎಂಬ ಪ್ರತೀತಿಯು ಅಧ್ಯಾತ್ಮವಾದಿಗಳಿಗೆ ಆದರೆ ಅವರಲ್ಲಿಯ ಏಕಾಂಗೀನತ್ವವು ಕಡಿಮೆಯಾಗುವದು.

ಈ ರೀತಿ, ದೇಹವು ಆತ್ಮದರ್ಶನದ ಸಾಧನವೆಂದು ಆತ್ಮದರ್ಶನವು ದೇಹದ ಧ್ಯೇಯವೆಂದು, ಬಾಹ್ಯವು ಅಂತರದ ಆವಿರ್ಭಾವವೆಂದು ಅಂತರವು ಬಾಹ್ಯದ ಬೀಜವೆಂದು, ವಿಜ್ಞಾನವು ಜ್ಞಾನದ ಸಾಧನವೆಂದು ಜ್ಞಾನವು ವಿಜ್ಞಾನದ ಪರಮಾಶ್ರಯವೆಂದು, ಕರ್ಮವು ಶಕ್ತಿಯ ವ್ಯಕ್ತರೂಪವೆಂದು ಶಕ್ತಿಯು ಕರ್ಮದ ಅವ್ಯಕ್ತರೂಪವೆಂದು, ವಿಷಯಸುಖವು ಆತ್ಮಸುಖದ ಪ್ರತಿಬಿಂಬವೆಂದು ಆತ್ಮಸುಖವು ವಿಷಯಸುಖದ ಏಕಮೇವ ಪರಾಯಣವೆಂದು, ಮಾನವನು ದೇವತ್ವದ ಯಾತ್ರಿಕನೆಂದು ದೇವತ್ವವು ಮಾನವನು ಮುಟ್ಟತಕ್ಕ ಕೊನೆಯ ಮುಟ್ಟವೆಂದು ನಂಬಿ ನಾವು ಸಾಗಿದರೆ ಈ ಸಂಸ್ಕೃತಿಗಳಲ್ಲಿರುವ ವಿರೋಧಾಭಾಸವು ಲಯಹೊಂದಿ ಸುಂದರ ಸಮನ್ವಯಕ್ಕೆ ದಾರಿಯಾಗುವದು. ಪೂರ್ವ ಪಶ್ಚಿಮ ಸಂಸ್ಕೃತಿಗಳ ಪಕ್ಷಪಾತಿಗಳು ಈ ಮಾತಿನ ಪ್ರತೀತಿ ಪಡೆಯುವ ಮಟ್ಟಕ್ಕೆ ಈಗ ಬಂದಿರುವರು ಎಂದು ಹೇಳಲು ಅಡ್ಡಿ ಇಲ್ಲ.

యద్యద్విభూతిమత్సత్త్వం శ్రీమదూర్జితమేవ వా ।
తత్తదేవావగచ్ఛ త్వం మమ తేజోంశసంభవం ॥

— గీతే

'...మానవన దృష్టియింద అత్యంత బెలె బాళువ భౌతిక, నైతిక, ఆధ్యాత్మిక వస్తుగళనెల్ల వ్యక్తిగళే శోధిసిరువరు.'

— ఆయిన్ స్టాయిన్

'...నమ్మ సంఘ సంస్థెగళెల్ల మురిదు హోగువవు. యాకెందరె నావెల్ల కాడువృత్తిగళిగీడాగిరువెవు.'

— డాక్టర ఆల్‌బర్ట్ స్వేట్‌ఝుర

౧౩

విభూతి విచార

దేవరు ఇరువనో ఇల్లవో ఇద్దరె అవన మోరె ముఖ హేగె ఇరువదు ఇత్యాది ప్రశ్నెగళు బహళ పురాతనవిరువవు. ఆస్తిక నాస్తిక వాదవు హళెయదష్టే అల్ల, అదు ఈగ్యూ నడెయుతిరువదు. సామాన్యతః విచార మాడువ ప్రతియొబ్బన మనసినల్లియూ అదు నడెయువదు ఎందు హేళబహుదు. అదక్కె సర్వమాన్యవాద కొనెయ ఉత్తర ఎంబుదు ఇన్నూ దొరకిల్ల. ఈ విషయవు బహళమట్టిగె శ్రద్ధెయన్నె అవలంబిసిదె. ఏనో ఒందు అసామాన్య శక్తి విశ్వదల్లి కెలస మాడుతిదె ఎంబుదర వరెగె సోపపత్తికవాద తర్క నమ్మన్ను ఒయ్యువదు. అదర ముందె నావు స్ఫూర్తి, విశ్వాస, ఆత్మప్రతీతి, దివ్యదర్శన ఇవుగళన్నె మొరెహోగబేకాగువదు.

ಸೃಷ್ಟಿಕರ್ತನ, ಸೃಷ್ಟಿಸಂಚಾಲಕನ ವಿಷಯದಲ್ಲಿ ಈ ಬಗೆಯ ಇತಿಮಿತಿ ಇದ್ದರೂ ಸೃಷ್ಟಿಯು ನಿಯಮಬದ್ಧವು, ಸೃಷ್ಟಿಕ್ರಮ, ಸೃಷ್ಟಿವ್ಯಾಪಾರ ಇವು ಒಂದು ವಿಧಿವಿಧಾನಕ್ಕೆ ಅಧೀನವಾಗಿ ನಡೆಯುತಿರುವವು, ಪ್ರತಿ ವಸ್ತು ತನ್ನ ಸ್ವಭಾವದಂತೆ, ಸ್ವಧರ್ಮದಂತೆ ಕಾರ್ಯಮಾಡುವದು, ವಿಶಿಷ್ಟ ದೇಶಕಾಲ ಪರಿಸ್ಥಿತಿಯಲ್ಲಿ ವಿಶಿಷ್ಟ ವಸ್ತುಗಳು ವಿಶಿಷ್ಟ ರೀತಿಯಿಂದಲೆ ವರ್ತಿಸುವವು, ಎಂಬ ಮಾತು ಸಿದ್ಧವು. ಮೂಲಶಕ್ತಿ ಅಥವಾ ಆದಿಶಕ್ತಿ ಯಾವದೇ ರೂಪದ್ದಿರಲಿ, ಅದರ ದೃಶ್ಯ ಹಾಗೂ ಮಾನವೀ ಮನಕ್ಕೆ ಗೋಚರವಾಗುವ ಎಲ್ಲ ಕಾರ್ಯಗಳು ವಿಧಿಬದ್ಧವಿರುವವೆಂಬುದು ಎಲ್ಲರ ಅನುಭವದ ಸಂಗತಿಯು. ಮಾನವನ ಶಕ್ತಿ ತೀರ ಅಲ್ಪವಿರುವದರಿಂದ ಅವನಿಗೆ ಆ ವಿಶ್ವವಿಧಿಯ ಬಹಳೇ ಸ್ವಲ್ಪಾಂಶವು ತಿಳಿದಿರುವದು ಎಂಬ ಮಾತು ನಿಜ. ಆದರೆ ಲೋಕಾದಿಲೋಕಗಳೆಲ್ಲ ವಿಧಿ-ಯುಕ್ತವಾಗಿಯೆ ನಡೆಯುವವು ಎಂಬ ಮಾತಿನ ಮನವರಿಕೆಯಾಗುವಷ್ಟು ಜ್ಞಾನವು ಮಾನವನಿಗೆ ಆಗಿರುವದು. ಅನೇಕ ಸಾರೆ ಎಷ್ಟೋ ಮಾತುಗಳು ಅಕಸ್ಮಾತ್ತಾಗಿ ಆಗುವವು. ಆದರೂ ನಾವು ಕಾರಣವಿಲ್ಲದೆ ಕಾರ್ಯವಾಗುವದಿಲ್ಲ ಎಂಬ ಮಾತನ್ನು ಅಲ್ಲಗಳೆಯುವದಿಲ್ಲ. ಕಾರಣಗಳು ನಮಗೆ ತಿಳಿಯದೆ ಹೋದರೂ ಕಾರಣಗಳಿಲ್ಲದೆ ಕೇವಲ ಆದಿಶಕ್ತಿಯ ಸ್ವಚ್ಛಂದವೃತ್ತಿಯ ಮೂಲಕ ಯಾವದೊಂದು ಮಾತು ಆಯಿತು ಎಂದು ನಾವು ಅನ್ನುವದು ಕಠಿಣ. ಕಾರ್ಯಕಾರಣಭಾವದಲ್ಲಿ, ವಿಧಿನಿಯಮಗಳಲ್ಲಿ ಅಷ್ಟೊಂದು ನಮ್ಮ ದೃಢವಿಶ್ವಾಸ ನೆಲೆಗೊಂಡಿದೆ. ಒಂದು ರೀತಿ ನೋಡಿದರೆ ಈ ವ್ಯಾಪಕವಿಧಿಯೆ ವಿಶ್ವಶಕ್ತಿಯ ಪ್ರತಿಬಿಂಬ ಎನ್ನಬಹುದು. ಆ ಶಕ್ತಿಯ ಕೈ ಕಾಣದಿದ್ದರೂ ಅದರ ಕೈವಾಡ ಸಾಕಷ್ಟು ನಮ್ಮ ಕಣ್ಣಿಗೆ ಬೀಳುವದು, ನಮ್ಮ ಅನುಭವಕ್ಕೆ ಬರುವದು.

ನಾನು ಪರಮಾತ್ಮನನ್ನು ಕಂಡಿದ್ದೇನೆ ಎಂದು ಹೇಳುವವರಾಗಲಿ, ಆ ಮಾತನ್ನು ನಂಬುವವರಾಗಲಿ ಈ ಜಗತ್ತಿನಲ್ಲಿ ಬಹಳೇ ವಿರಳ. ಆದರೆ ಒಂದಿಲ್ಲೊಂದು ಸ್ವರೂಪದಲ್ಲಿ ಪರಮಾತ್ಮನ ಶಕ್ತಿಯ ಆವಿರ್ಭಾವವು ಮಾನವ ಭೂಮಿಕೆಯಲ್ಲಿ ಆಗಬಲ್ಲದು, ಆಗುವದು ಎಂಬ ನಂಬಿಕೆ ಎಲ್ಲ ಧರ್ಮಗಳಲ್ಲಿ, ಎಲ್ಲ ದೇಶಗಳಲ್ಲಿ ಕಂಡುಬರುವದು. ಪರಮಾತ್ಮನು ಸ್ವತಃ ಅವತರಿಸುವನು, ಯಾವದೊಂದು ಪಾರ್ಥಿವರೂಪವನ್ನು ಅಥವಾ ಪ್ರತ್ಯಕ್ಷ ಮನುಷ್ಯರೂಪವನ್ನು ತಾಳಿ ಇಹಲೋಕದಲ್ಲಿ ತನ್ನ ಅವತಾರಕಾರ್ಯಗಳನ್ನು ಜರುಗಿಸುವನು ಎಂಬ

ಕಲ್ಪನೆ ಮಾತ್ರ ಭಾರತವನ್ನುಳಿದು ಇನ್ನೊಂದು ದೇಶದಲ್ಲಿದ್ದಂತೆ ತೋರಲಿಲ್ಲ. ಶ್ರೀಕೃಷ್ಣನಂತೂ ಪೂರ್ಣಾವತಾರ ಎಂದು ಹೇಳಿಸಿಕೊಳ್ಳುತಿರುವನು. ಅವನ ಮುಖದಿಂದಲೆ ಭಗವದ್ಗೀತೆಯ ಉಪದೇಶವಾಯಿತು. 'ತದಾತ್ಮಾನಂ ಸೃಜಾಮ್ಯಹಮ್' ಎಂಬ ವಾಣಿಯು ಅವನದೇ. ಹೀಗಾಗಿ ಈ ಅವತಾರ ಕಲ್ಪನೆಗೆ ಪರಮಾತ್ಮನ ಮುದ್ರೆಯೇ ಬಿದ್ದುಬಿಟ್ಟದೆ! ಇತರ ದೇಶಗಳಲ್ಲಿ, ದೇವರು ತನ್ನ ದೂತರನ್ನು ಮನುಷ್ಯರೂಪದಲ್ಲಿ ಕಳಿಸುವನು ಎಂಬ ಕಲ್ಪನೆ ರೂಢವಿದೆ. ಈ ರೀತಿ ಕಳಿಸಲ್ಪಟ್ಟವರು ತಾವು ಸ್ವತಃ ಪ್ರೇಷಿತರು, ದೇವ ದೂತರು, ಸಂದೇಶವಾಹಕರು ಎಂದು ಹೇಳಿಕೊಳ್ಳುವರು, ಇಲ್ಲವೆ ಇತರರು ಅವರನ್ನು ಆ ದೃಷ್ಟಿಯಿಂದ ನೋಡುವರು. ಅಂತೂ ದೇವರ ಕೇವಲ ಕೈವಾಡ ಗಳನ್ನಾಗಲಿ, ಕೃತಿಗಳನ್ನಾಗಲಿ, ಅವನ ಶಕ್ತಿಯ ಪ್ರತಿಬಿಂಬರೂಪವಾದ ವಿಶ್ವವಿಧಿಯನ್ನಾಗಲಿ ನೋಡಿ, ಕೇಳಿ, ಅನುಭವಿಸಿ, ಚಿಂತಿಸಿ ಮನುಷ್ಯನಿಗೆ ಸಮಾಧಾನವಾಗುವದಿಲ್ಲ; ಅವನ ಪ್ರತ್ಯಕ್ಷ ಪಾರ್ಥಿವಸಂಬಂಧವು ಒಂದಿಲ್ಲೊಂದು ರೀತಿಯಿಂದ ತನಗೆ ಈ ಲೋಕಕ್ಕೆ ಬರಬೇಕೆಂದು ಅವನು ಹವಣಿಸುವನು. ಆ ಹವಣಿಕೆಯ ಪರಿಣಾಮಸ್ವರೂಪವೆ ಅವತಾರ, ದೂತ, ಇತ್ಯಾದಿ ಕಲ್ಪನೆಗಳು. ಅವು ನಮ್ಮ ಅನುಭವಕ್ಕೆ ಬರುವವು.

ಅವತಾರ, ದೇವದೂತ ಈ ಎರಡೂ ಕಲ್ಪನೆಗಳಿಗಿಂತ ವಿಭೂತಿಯ ಕಲ್ಪನೆ ಬೇರೆ ಇರುವದು. ಗೀತೆಯಲ್ಲಿ ಈ ಕಲ್ಪನೆಯ ಸ್ವರೂಪ, ವಿಭೂತಿಯ ಲಕ್ಷಣ ಇತ್ಯಾದಿ ಸೋದಾಹರಣವಾಗಿ ವಿಸ್ತಾರದಿಂದ ವಿವರಿಸಲ್ಪಟ್ಟದೆ. ಈ ವಿಚಾರದ ಇಷ್ಟೊಂದು ವಿಶದವಾದ ವಿವರಣೆ ಇನ್ನಾವ ಭಾರತೀಯ ಗ್ರಂಥ ದಲ್ಲಿಯೂ ಬಂದಂತಿಲ್ಲ. ಇತರ ಧರ್ಮಗ್ರಂಥಗಳಲ್ಲಿಯೂ ಈ ವಿಷಯದ ಸೋಪಪತ್ತಿಕ ವಿವೇಚನೆ ಅಷ್ಟೊಂದು ಕಂಡುಬರುವದಿಲ್ಲ. ಗೀತೆಯಲ್ಲಿರುವ ವಿಭೂತಿವಿಚಾರದ ಆಧ್ಯಾತ್ಮಿಕ ಹಾಗೂ ಧಾರ್ಮಿಕ ಪಾರ್ಶ್ವಭೂಮಿಯನ್ನು ಪ್ರತಿಪಾದಿಸದೆ ಅದರ ತತ್ತ್ವಾರ್ಥವನ್ನಷ್ಟೆ ನಾವು ವಿಮರ್ಶಿಸಿದರೆ ಮಾನವ ಮಾತ್ರರಿಗೆ ಆ ವಿಚಾರವು ಒಗ್ಗುವಂತಿದೆ ಎಂಬುದು ಸ್ಪಷ್ಟವಾಗುವದು. ಆ ವಿಚಾರ ಏನಿರುವದು ಇದನ್ನು ನೋಡುವ.

ವಿಭೂತಿಯ ವರ್ಣನೆ ಮಾಡುವಾಗ ಗೀತೆ ಹೇಳುವುದೇನಂದರೆ, ಯಾವ ಯಾವ ವಸ್ತುಗಳಲ್ಲಿ ಶಕ್ತಿ ಮತ್ತು ಶ್ರೇಷ್ಠತೆ ಕಂಡುಬರುವದೊ ಯಾವುದರಲ್ಲಿ ಸಮೃದ್ಧಿ ಸಂಪತ್ತು ಸೌಂದರ್ಯಾದಿಗಳು ವ್ಯಕ್ತವಾಗಿರುವವೊ ಯಾವುವು ಉಚ್ಚ

ೋಟಿಯುವಿರುವವೊ ಅವೆಲ್ಲವೂ ವಿಭೂತಿಗಳು, ಅವುಗಳಲ್ಲಿ ಆದಿಶಕ್ತಿಯ
ಶೇಷಾಂಶವು ಆವಿರ್ಭವಿಸಿರುವದು. ಆದಿಶಕ್ತಿಯು ಎಲ್ಲೆಲ್ಲಿಯೂ ಇದೆ,
ಂದು ಕ್ಷುದ್ರ ರಜಃಕಣದಲ್ಲಿಯೂ ಇದೆ ಪ್ರಚಂಡ ಹಿಮಾಚಲದಲ್ಲಿಯೂ
ದೆ; ಒಬ್ಬ ಸಾಮಾನ್ಯ ಪಾಮರನಲ್ಲಿಯೂ ಇದೆ ಓರ್ವ ತೇಜಸ್ವೀ ಮಹಾ
ರುಷನಲ್ಲಿಯೂ ಇದೆ. ಆದರೆ ಆ ಹಿಮಾಚಲಕ್ಕೆ, ಆ ಮಹಾಪುರುಷನಿಗೆ
ಾವು ವಿಭೂತಿ ಎನ್ನುವೆವು. ಆ ಅಭಿಧಾನವನ್ನು ನಾವು ರಜಃಕಣಕ್ಕೆ ಇಲ್ಲವೆ
ಾಮರ ಮನುಷ್ಯನಿಗೆ ಹಚ್ಚುವದಿಲ್ಲ. ಉದಾಹರಣೆಗಳನ್ನು ಕೊಡುವಾಗ
ೀತೆಯು ಈ ಮಾತನ್ನು ಒಳ್ಳೆ ಸ್ಪಷ್ಟಗೊಳಿಸಿದೆ. ಅಕ್ಷರಗಳಲ್ಲಿ ಅಕಾರ,
ಜೇಂದ್ರಗಳಲ್ಲಿ ಐರಾವತ, ಪಾಂಡವರಲ್ಲಿ ಧನಂಜಯ, ಜ್ಯೋತಿಗಳಲ್ಲಿ ಸೂರ್ಯ,
ಕ್ಷತ್ರಗಳಲ್ಲಿ ಚಂದ್ರ, ವೃಷ್ಣಿಗಳಲ್ಲಿ ವಾಸುದೇವ, ಸಿದ್ಧರಲ್ಲಿ ಕಪಿಲ, ಇತ್ಯಾದಿ
ನೇಕ ಉದಾಹರಣೆಗಳನ್ನು ನೋಡಿದರೆ ವಿಭೂತಿ ಎಂದರೇನು ಎಂಬುದರ
ಲ್ಪನೆ ಚನ್ನಾಗಿ ಬರುವಂತಿದೆ. ಸಗುಣ ನಿರ್ಗುಣ ದೇವರು ಇರಲಿ ಬಿಡಲಿ,
ವತಾರಕಲ್ಪನೆಯಲ್ಲಿ ಸತ್ಯಾಂಶವಿರಲಿ ಇರದಿರಲಿ, ದೇವದೂತರು ಬರಲಿ
ೋಗಲಿ, ವಿಭೂತಿಯ ವಿಚಾರ ಮತ್ತು ಅಸ್ತಿತ್ವ ಇವುಗಳಿಗೆ ಆ ಯಾವ
ಾತಿನಿಂದಲೂ ಬಾಧೆ ಇಲ್ಲ. ವಿಭೂತಿ ಎಂಬುದು ಪ್ರತಿಯೊಬ್ಬನಿಗೂ ಪ್ರತೀತ
ಾಗುವ ವಸ್ತು, ಎಲ್ಲರ ಅನುಭವಕ್ಕೆ ಬರುವಂತಹ ಮಾತು. ಸ್ಥಲಚರ
ಳಲ್ಲಿ ಆನೆ ವಿಭೂತಿ, ಜಲಚರಗಳಲ್ಲಿ ತಿಮಿಂಗಲು ವಿಭೂತಿ, ಎಂದು ಹೇಳಿ
ರೆ ಯಾವ ರೀತಿ ಅದು ವಿವಾದಾಸ್ಪದವಾಗಲಾರದೊ ಅದೇ ರೀತಿ ಎಲ್ಲೆಲ್ಲಿ
ೇಜ, ಶಕ್ತಿ, ಸಂಪತ್ತು, ಸೌಂದರ್ಯ ಇವು ವಿಶೇಷರೂಪದಿಂದ ವ್ಯಕ್ತವಾಗುವವೊ
ದು ವಿಭೂತಿ, ಅದು ಆದಿಶಕ್ತಿಯ ವಿಶೇಷ ಆವಿರ್ಭಾವ, ಎಂದರೆ ಆ ಮಾತು
ವಾದಾಸ್ಪದವಾಗಲರಿಯದು.

ಮೇಲಿನ ವಿವೇಚನೆಯ ದೃಷ್ಟಿಯಿಂದ ನೋಡಿದರೆ ಮಾನವರಲ್ಲಿ ವಿಭೂತಿ
ಂದು ಯಾರಿಗೆ ಅನ್ನಬೇಕು, ಆ ಬಿರುದು ಯಾರಿಗೆ ಸಲ್ಲುವದು ಎಂಬುದು
ಷ್ಟವಿದೆ. ಅಸಾಧಾರಣವಾದ ಶಾರೀರಿಕ, ಮಾನಸಿಕ, ನೈತಿಕ, ಆಧ್ಯಾತ್ಮಿಕ
ಕ್ತಿಸಾಮರ್ಥ್ಯಗಳು, ತೇಜಸ್ಸು, ನೇತೃತ್ವಶಕ್ತಿ, ಮೌಲಿಕತೆ, ಮಾರ್ಗದರ್ಶನ
ಾಡುವ ಯೋಗ್ಯತೆ ಇತ್ಯಾದಿಗಳು ವಿಶೇಷಪ್ರಮಾಣದಲ್ಲಿ ದೃಗ್ಗೋಚರ
ಾಗುವ ವ್ಯಕ್ತಿಗಳು ವಿಭೂತಿ ಎನಿಸಿಕೊಳ್ಳಲು ಅರ್ಹತೆ ಪಡೆಯಬಲ್ಲವು.
ಂಥ ವಿಭೂತಿಗಳು ಸ್ತ್ರೀಯರಿರಬಹುದು ಪುರುಷರಿರಬಹುದು. ಯಾವದೇ

ಜನಾಂಗದಲ್ಲಿ ಹುಟ್ಟಬಹುದು, ಯಾವದೇ ಧರ್ಮದವರಿರಬಹುದು. ಮಾನವನ ಉತ್ಕ್ರಾಂತಿ, ಮಾನವೀಸಂಸ್ಕೃತಿಯ ಪ್ರಗತಿ ಇವುಗಳ ವಿಷಯದಲ್ಲಿ ಯಾವ ವ್ಯಕ್ತಿವಿಶೇಷವು ಶಕ್ತಿಸಾಮರ್ಥ್ಯಗಳನ್ನು, ಪರಾಕ್ರಮವನ್ನು, ದೂರದರ್ಶಿತ್ವವನ್ನು ಹೆಚ್ಚಿನ ಪ್ರಮಾಣದಲ್ಲಿ ತೋರಿಸಬಲ್ಲದೊ ಅದು ವಿಭೂತಿ ಎಂಬ ಅಭಿಧಾನಕ್ಕೆ ಪಾತ್ರವು. ಅಂಥವರು ಯುಗಪುರುಷರೆನಿಸಬಹುದು, ಯಾಕಂದರೆ ಅವರೊಂದು ಹೊಸ ಯುಗವನ್ನೇ ಪ್ರಾರಂಭಿಸುವರು. ಅವರಿಗೆ ಕಾರಣ-ಪುರುಷರು ಎಂದೂ ಅನ್ನಬಹುದು. ಯಾಕಂದರೆ ಅವರು ಮಾನವನ ಹೆಚ್ಚಿನ ಪ್ರಗತಿಗೆ ಕಾರಣರಾಗುವರು. ಅವರು ಸಾಮಾನ್ಯ ಜನಕ್ಕಿಂತ ಬಹಳ ಉಚ್ಚ ತರಗತಿಯವರಿರುವದರಿಂದ ಸಾಮಾನ್ಯಜನತೆಯೆಲ್ಲ ಅವರತ್ತ ಅತ್ಯಂತ ಆದರದಿಂದ ಭಯಭೀತಿಗಳಿಂದ ನೋಡುವದು. ವಿಭೂತಿಯು ಕೇವಲ ತನ್ನ ಮಟ್ಟಿಗೆ ತಾನು ಇದ್ದುಕೊಂಡು ಹೋಗುವ ವ್ಯಕ್ತಿಯಲ್ಲ. ಜನತೆಯ ಮಾರ್ಗದರ್ಶನವೆಂಬುದೊಂದು ವಿಭೂತಿಯ ಸ್ವಭಾವಸಿದ್ಧ ಹೊಣೆಯೆ ಆಗಿರುವದು. ಯಾವದೇ ಸಮಾಜದಲ್ಲಿ ಇಲ್ಲವೆ ಜನಾಂಗದಲ್ಲಿ ವಿಭೂತಿಯ ಪ್ರಾದುರ್ಭಾವ-ವಾದೊಡನೆ ಅದರ ನೇತೃತ್ವವನ್ನು ಒಪ್ಪಲು ಜನರು ಸಿದ್ಧರಾಗುವರು. ಧರ್ಮ-ಪುರುಷರು, ಮಹಾವಿಜ್ಞಾನಿಗಳು, ಶ್ರೇಷ್ಠ ಜ್ಞಾನಿಗಳು ಬಹುಶಃ ಈ ವಿಭೂತಿ ವರ್ಗಕ್ಕೆ ಸೇರಿದವರಿರುವರು. ಆಯಾ ಕಾಲದ ಆವಶ್ಯಕತೆಗನುಸರಿಸಿ, ಆಯಾ ಸಮಾಜದ ಪ್ರಗತಿಗೆ ಪೋಷಕವಾಗುವಂತೆ ವಿಭೂತಿಗಳು ಪ್ರಕಟವಾಗುವದುಂಟು. ಆದುದರಿಂದ ಒಮ್ಮೆ ವಿದ್ಯಾರಣ್ಯರಂಥ ತಪಸ್ವಿಗಳೂ ಜ್ಞಾನಿಗಳೂ ಮತ್ತೊಮ್ಮೆ ಗಾಂಧಿಯುವರಂಥ ಮಹಾತ್ಮರೂ ವಿಭೂತಿಗಳಾಗಿ ಆಯಾಕಾಲದ ಪ್ರಶ್ನೆಗಳನ್ನು ಬಿಡಿಸಿ ಲೋಕೋಪಕಾರ ಮಾಡುವರು. ಆಯಾ ದೇಶಕಾಲ ಪರಿಸ್ಥಿತಿ, ಮಾನವಸಮಾಜಕ್ಕೆ ಎದುರಾದ ಆಯಾ ಕಾಲದ ಸಮಸ್ಯೆಗಳು ಇವುಗಳನ್ವಯ ವಿಭೂತಿಗಳ ಜನ್ಮವಾಗುವದು.

ವಿಭೂತಿಗಳು ಇತರ ಸಾಮಾನ್ಯ ವ್ಯಕ್ತಿಗಳಂತೆ ವ್ಯಕ್ತಿಗಳೆಂಬುದೇನೊ ನಿಜ. ಆದರೆ ಅವರಲ್ಲಿ ಆಯಾ ಕಾಲಕ್ಕೆ ತಕ್ಕಂತೆ ಹಲವೊಂದು ಶಕ್ತಿಗಳು ವಿಶೇಷರೂಪದಿಂದ ಆವಿರ್ಭವಿಸುವವು. ಆಯಾ ವಿಭೂತಿಗಳ ಜೀವನದ ಸೂಕ್ಷ್ಮ ನಿರೀಕ್ಷಣೆ ಮಾಡಿ ವಿಮರ್ಶೆ ಮಾಡಿದರೆ ಆ ಶಕ್ತಿಗಳ ವಿಕಾಸವು ಅವರಲ್ಲಿ ಹೇಗೆ, ಏಕೆ, ಎಷ್ಟರಮಟ್ಟಿಗೆ ಆಯಿತು ಎಂಬುದು ಗೊತ್ತಾಗಬಹುದು. ಆದರೆ ಒಟ್ಟಿಗೆ ನೋಡಲಾಗಿ ಯಾವ ಅದೃಶ್ಯ ಆದಿಶಕ್ತಿ ಎಲ್ಲೆಲ್ಲಿಯೂ ಯಾವಾಗಲೂ

ಾರ್ಯಮಾಡುತಿರುವದೊ ಅದರೊಡನೆ ವಿಭೂತಿಗಳ ನಿಕಟಸಂಬಂಧವಿರುವದು ಾಗೂ ವಿಭೂತಿಗಳು ಸ್ಫೂರ್ತಿಯಿಂದಲೊ ಧ್ಯಾನಾದಿ ಸಾಧನದಿಂದಲೊ ್ವಾಭಾವಿಕ ತನ್ಮಯಭಾವದಿಂದಲೊ ಆ ಶಕ್ತಿಯಿಂದ ಬಲ, ಸೂಕ್ಷ್ಮದೃಷ್ಟಿ ಂತಾದವುಗಳನ್ನು ಪಡೆಯುವರು ಎಂಬುದು ಸ್ಪಷ್ಟವು. ಜನತೆಯ ೃದಯವನ್ನು ತಟ್ಟನೆ ತಿಳಿದುಕೊಳ್ಳುವುದರಲ್ಲಿ, ಅವರೊಡನೆ ಕ್ಷಣದಲ್ಲಿ ಸಮ ಸವಾಗುವುದರಲ್ಲಿ ವಿಭೂತಿಗಳು ಎಲ್ಲಕ್ಕೂ ಶ್ರೇಷ್ಠರಿರುವರೆಂಬಲ್ಲಿ ಸಂಶಯ ಲ್ಲ. ವಿರಾಟವಿಶ್ವಾತ್ಮನೊಡನೆ ಅವರ ನಿಕಟಸಂಬಂಧವಿದ್ದು ಅವರು ಅನಂತ ಅಮೋಘ ನಿಧಿಯಿಂದಲೆ ತಮ್ಮ ಸಾಮರ್ಥ್ಯವನ್ನು ಪಡೆಯುವ ಂಬುದು ನಿರ್ವಿವಾದವು. ಈ ಅರ್ಥದಲ್ಲಿಯೆ 'ಮಮ ತೇಜೋಂಶಸಂಭವಂ' ಂಬ ಗೀತೋಕ್ತಿಯು ಸತ್ಯವಿರುವದು.

ಯಾವದೇ ಸಮಾಜದ ಇಲ್ಲವೆ ಮಾನವಕುಲದ ಪ್ರಗತಿಯ ಇತಿಹಾಸ ನ್ನು ನಾವು ನೋಡಿದರೆ ಮಹಾವಿಭೂತಿಗಳೆ ಕಾಲಕಾಲಕ್ಕೆ ಈ ಪ್ರಗತಿ ಥವನ್ನು ಮುಂದಕ್ಕೆಳೆದೊಯ್ದಿರುವರು ಎಂಬುದು ಕಂಡುಬರುವದು. ಅವರಿಗೆ ಯಾ ಕಾಲದ ಸಮಾಜಾದಿಗಳು ಸಹಾಯಮಾಡಿರಲಿಕ್ಕೆ ಸಾಕು. ಆದರೆ ್ರಸಂಗತಃ ದೇಶಕಾಲಪರಿಸ್ಥಿತಿಗಳು, ಸಮಾಜವು, ಇಡೀ ಜಗತ್ತೇ ವಿರುದ್ಧ ದ್ದಾಗ ಕೂಡ ಒಬ್ಬಂಟಿಗರಿದ್ದ ವಿಭೂತಿಗಳು ಅವಿಚಲರಾಗಿ ಸರಿಯಾದ ಾರ್ಗದರ್ಶನ ಮಾಡಿದ ಉದಾಹರಣೆಗಳು ಇತಿಹಾಸದಲ್ಲಿರುವವು. ಜೀಸಸ್ ್ರಾಯಿಸ್ತನನ್ನು ಶಿಲುಬೆಯ ಮೇಲೇರಿಸಲು ಅವನ ಸಮಾಜದ ಪಂಡಿತರೇ ಾರಣರಾದರು. ಸಾಕ್ರೆಟೀಸನು ತನ್ನ ದೇಶದ ಕಾನೂನಿನಂತೆಯೆ ವಿಷ ್ರಾಶನ ಮಾಡಿ ಪ್ರಾಣಬಿಟ್ಟನು. ಹೀಗೆ ಅನೇಕ ಉದಾಹರಣೆಗಳನ್ನು ೂಡುವದು ಸಾಧ್ಯವು. ತಾತ್ಪರ್ಯವೇನಂದರೆ ವಿಭೂತಿಯ ಶಕ್ತಿ, ಶೀಲ, ರ್ತೃತ್ವ ಇವುಗಳಲ್ಲಿ ಒಂದು ಅದ್ವಿತೀಯ ಸಾಮರ್ಥ್ಯವಿರುವದು. ಆ ಾಮರ್ಥ್ಯವೆ ಅವರನ್ನು ಆ ಹೆಚ್ಚಿನ ಮಟ್ಟಗೆ ಮುಟ್ಟಿಸುವದು. ಆಯಾ ಭೂತಿಗಳಲ್ಲಿ ಆ ಶೀಲಾದಿಗಳೆ ಮುಖ್ಯ. ಅವು ಇಲ್ಲದೆ ಇದ್ದ ಪಕ್ಷದಲ್ಲಿ ಇತರ ೂವ ಅನುಕೂಲತೆಗಳಿದ್ದರೂ ಅವು ಸಿದ್ಧಿಯನ್ನು ದೊರಕಿಸಿ ಕೊಡಲಾರವು. ಮಾಜವು ಹಾಗೂ ಮಾನವಕುಲವು ಇಂಥ ಮಹಾವಿಭೂತಿಗಳಿಗೆ ಸದಾ ಣಿಯಾಗಿರುವದೆಂಬಲ್ಲಿ ಸಂಶಯವಿಲ್ಲ. ಯಾವದೇ ಸಮಾಜವಾಗಲಿ, ಂಘಟನೆಯಾಗಲಿ, ಸಂಘಸಂಸ್ಥೆಗಳಾಗಲಿ ಅದರಲ್ಲಿಯ ವ್ಯಕ್ತಿಗಳ ಶೀಲ,

ಚಾರಿತ್ರ್ಯ, ಸತ್ಯನಿಷ್ಠೆ, ಉದ್ಯೋಗಶೀಲತೆ ಇತ್ಯಾದಿ ಸದ್ಗುಣಗಳ ಮೇಲೆಯೇ ಅವಲಂಬಿಸಿದೆ. ಈ ಎಲ್ಲ ಗುಣಗಳೊಡನೆ ತೇಜಸ್ಸು, ಹೆಚ್ಚಿನ ಸಾಮರ್ಥ್ಯ, ಆದಿಶಕ್ತಿಯಿಂದ ಬಲ ಪಡೆಯುವ ಸಾಧನೆ, ಜನತೆಯೊಡನೆ ತನ್ಮಯವಾಗುವ ಸ್ವಭಾವ ಇತ್ಯಾದಿ ಒಡಗೂಡುವದರಿಂದಲೆ ವಿಭೂತಿಮತ್ತ್ವವು ಸಿದ್ಧವಾಗುವದು. ಅಂಥ ವಿಭೂತಿಗಳೆ ಮಾನವಕುಲದ ಈ ಅಖಂಡ ಮೆರವಣಿಗೆಯನ್ನು ಮುಂದರಿಸುತ್ತ ನಡೆದಿರುವರು.

ಸ್ವಾಧ್ಯಾಯಪ್ರವಚನಾಭ್ಯಾಂ ನ ಪ್ರಮದಿತವ್ಯಂ ।

— ತೈ. ಉಪನಿಷತ್ತು

ಸತ್ಯದಲ್ಲಿ ಧೀರಶ್ರದ್ಧೆ (ಸತ್ಯಧೃತಿ) ಹಾಗೂ ಯಾವ ಭಯವೂ ಇಲ್ಲದೆ ಅದರ ಮುಕ್ತ ಪ್ರಕಟನೆ ಇವೇ ನಿಜವಾದ ಆಧ್ಯಾತ್ಮಿಕ ಜೀವನದ ಪ್ರಾರಂಭವೆನಿಸಬಲ್ಲವು.

—ಡಾ. ಅಲ್‌ಬರ್ಟ್ ಸ್ಟೇಟ್‌ಝರ್

ಆತ್ಯಂತಿಕ ಸತ್ಯಜ್ಞಾನವನ್ನು ಪಡೆಯಲು ಯಾವ ಮಧ್ಯಸ್ಥನ ಅವಶ್ಯಕತೆಯೂ ಇಲ್ಲ.

—ಜೇ. ಕೃಷ್ಣಮೂರ್ತಿ

೧೪

ಚಿಂತನ-ಮಂಥನ

ಸತ್ಯದ ಜ್ಞಾನವಾಗಲಿ, ನಿಜ ಸುಖದ ಪ್ರಾಪ್ತಿಯಾಗಲಿ ಕೇವಲ ಯಾರೊಬ್ಬರ ದಾನ ರೂಪವಾಗಿ ಇಲ್ಲವೆ ದೇವರ ವರವೆಂದು ಸಿಕ್ಕ ತಕ್ಕ ವಸ್ತುವಲ್ಲ. ಸಿಕ್ಕ ಸಿಕ್ಕವರಿಗೆ, ಹೋದವರಿಗೆ ಬಂದವರಿಗೆ ದೊರಕಲು ಸ್ವರ್ಗವನ್ನೇನು ರಂಡೆಯಾಳುವಳೆ, ಎಂದು ಸರ್ವಜ್ಞನು ಒಳ್ಳೆ ಕಠೋರವಾಗಿ ಕೇಳಿರುವನು. ಯಾವದೊಂದು ಜಾತಿಯಲ್ಲಿ ಜನ್ಮತಾಳುವುದರಿಂದ, ಒಂದು ಮಠಕ್ಕೆ ಸೇರಿರುವುದರಿಂದ, ಸಿದ್ಧ ಪುರುಷನ ಹತ್ತರ ವಾಸಿಸುವುದರಿಂದ ಈ ವಿಷಯವು ಕೈಸೇರದು. ಇದು ಸ್ವಂತ ಸಾಧನದಿಂದ ಮತ್ತು ಅನುಭವದಿಂದಲೆ ಕೈವಶವಾಗುವ ವಸ್ತು. ಆದುದರಿಂದ, ಇದಕ್ಕೆ ತಪಸ್ಯೆಯ ಆವಶ್ಯಕತೆ ಇರುವದು. ಯಾವದೋ ಒಂದು ಟೊಕಿಯಿಂದ ಇಲ್ಲವೆ ತಂತ್ರದಿಂದ ಇದನ್ನು ದೊರಕಿಸಬೇಕೆನ್ನುವವರು ನಿಸರ್ಗನಿಯಮಗಳನ್ನು ಠಕ್ಕಿಸಲೆತ್ನಿಸಿದಂತೆಯೆ ಸೈ. ಸುತ್ತಿಗೆ ಪೆಟ್ಟು ತಿನ್ನದೆ

ಕಲ್ಲು ಮೂರ್ತಿಯಾಗಲರಿಯದು, ಗಂಧದ ಕೊರಡಿನಂತೆ ಸವೆಯದೆ ಮಾನವ ಸಾಧುವೆನಿಸಲಾರ. ಅಂತರ್ಬಾಹ್ಯ ನಿರ್ಮಲತೆ, ಹೃದಯವಿಪ್ಲವತೆ, ಅಹರ್ನಿಶ ಎಚ್ಚರ, ಚಿಂತನ-ಮಂಥನ ಇವೆಲ್ಲವೂ ಸಿದ್ಧಿಗೆ ಬೇಕಾಗಿರುವ ಸಾಧನಸಂಪತ್ತು.

ಸ್ವಾನುಭವ ಸುಖವೆಂಬುದು ಪ್ರತಿಯೊಬ್ಬನ ಮಟ್ಟಿಗೆ ಬೇರೆ, ಸ್ವತಂತ್ರ, ಹಾಗೂ ಹೊಸದು ಇರುವುದರಿಂದ ಅದನ್ನು ಎಲ್ಲರೂ ಪ್ರತ್ಯೇಕವಾಗಿಯೆ ಶೋಧಿಸಬೇಕಾಗುವದು. ನನ್ನ ಹೊಟ್ಟೆ ತುಂಬಬೇಕಾದರೆ ನಾನೇ ಉಣ್ಣ ಬೇಕು, ಇತರರು ಉಂಡಾಕ್ಷಣಕ್ಕೆ ನನ್ನ ಹೊಟ್ಟೆ ಎಂದೂ ತುಂಬದು, ನನ್ನ ಹಸಿವೆ ಎಂದೂ ಹಿಂಗದು. ಯಾರಾದರೂ ನನ್ನಪಾಲಿನ ಊಟಮಾಡಿದರೆ ಅವರ ಹೊಟ್ಟೆ ತುಂಬುವದೆ ಹೊರತು ನನ್ನದಲ್ಲ. ಇಂತಹ ಒಂದೇ ಒಂದು ಮಾರ್ಗದಿಂದ ಮುಕ್ತಿ ಸಿಕ್ಕುವುದೆಂದು ಹೇಳುವವರಾಗಲಿ ಆಧ್ಯಾತ್ಮಕ್ಷೇತ್ರದಲ್ಲಿ ಅಧಿಕಾರವನ್ನು ನಡೆಸಲೆತ್ನಿಸುವವರಾಗಲಿ ಜನರ ಮುಮುಕ್ಷುತ್ವದ ದುರ್ಲಾಭ ವನ್ನು ಪಡೆಯಲುದ್ಯುಕ್ತರಾಗಿರುವರು ಎಂದು ಹೇಳಬೇಕಾಗುವದು. ಯಾವದೇ ಒಂದು ಯಾಂತ್ರಿಕ, ತಾಂತ್ರಿಕ, ಸಂಘಟಿಕ ಮಾರ್ಗದಿಂದ ಮಾತ್ರ, ಆತ್ಮಾನುಭೂತಿಯಾಗುವದು ಸಾಧ್ಯವೆಂದು ಹಟಹಿಡಿಯುವವರು ಅಜ್ಞಾನ ವಶಾತ್ ಹಾಗೆ ಮಾಡುವರು ಹೊರತು ಮತ್ತೇನಿಲ್ಲ. 'ಸಾಧನಾನಾಂ ಅನೇಕ ತಾ' ಎಂಬುದು ಅಧ್ಯಾತ್ಮಮಾರ್ಗದಲ್ಲಿ ಮೊದಲಿನಿಂದಲೂ ಇದ್ದಮಾತು. ವೇದಕಾಲದಿಂದ ಈ ವರೆಗೆ ನೋಡಿದರೆ ಬೇರೆಬೇರೆ ಕಾಲಕ್ಕೆ ಬೇರೆಬೇರೆ ಸಾಧನ ಗಳು ಪ್ರಚಾರದಲ್ಲಿ ಬರುತ್ತ ಇವೆ. ಮುಖ್ಯ ಮೂಲತತ್ವವು ಮತ್ತು ದಿಕ್ಕು ಒಂದೇ ಇದ್ದರೂ ಹಠರಾಜಯೋಗಾದಿ ವಿವಿಧ ಮಾರ್ಗಗಳು ಬೇರೆ ಬೇರೆ ಕಾಲಕ್ಕೆ ಅಸ್ತಿತ್ವದಲ್ಲಿ ಬಂದು ರೂಢವಾಗಿರುವವು. ಈ ಮಾರ್ಗದಲ್ಲಿ ಒಂದು ಅಖಂಡ ಪರಂಪರೆ ನಡೆಯುತ್ತಬಂದಿದ್ದರೂ ಆ ಪರಂಪರೆ ತತ್ವದಲ್ಲಿ, ಸಾಧಕರು ಸಾಗುತಿರುವ ದಿಕ್ಕಿನಲ್ಲಿ ಇರುವದು ಹೊರತು ಸಾಧನಗಳ ರೂಪದಲ್ಲಿ ಅಲ್ಲ. ಸಾಧನರೂಪಗಳು ವೈವಿಧ್ಯವನ್ನು ಪಡೆಯುತ್ತಲೆ ಇವೆ.

ಯಾವದೇ ಸಾಧನಮಾರ್ಗವಾದರೂ ಸತ್ಸಂಗ, ಸದಾಚಾರ, ಧ್ಯಾನ, ಅಭ್ಯಾಸ, ಚಿಂತನ-ಮಂಥನ ಇವುಗಳ ಅವಶ್ಯಕತೆ ಇದ್ದೇ ಇರುವದು. ಹೊಸ ಪರಿಸ್ಥಿತಿಯನ್ನು ಎದುರಿಸುವ ಪ್ರಸಂಗ ಬಂದಾಗ ಹೊಸ ವಿಚಾರಗಳು, ಹೊಸ ಭಾವಗಳು, ಹೊಸ ಸಾಧನಗಳು ಬೇಕಾಗುವವು. ವೇದಕಾಲದಲ್ಲಿ ವೇದಮಂತ್ರಗಳು ಅವಶ್ಯವೆಂದು ಹೇಳಲಾಗುತಿತ್ತು. ಈಗ ಭಗವನ್ನಾಮ



ಒಂದೇ ಚಿದ್ಬಿಂದುವಿನಿಂದ ಏಕೇಂದ್ರಿಯ ವರ್ತುಲಾಕಾರ ವಿಕಾಸ

ಮಹಿಮೆಯು ಅಷ್ಟೇ ಪರಿಣಾಮಕಾರಿಯು ಎಂದು ಸಾರಲಾಗುತ್ತಿದೆ. ವೇದ ಮಂತ್ರಗಳ ಮಂತ್ರತ್ವವು ಅಥವಾ ಮಂತ್ರಶಕ್ತಿಯು ಈಗ ಲೋಪಹೊಂದಿದೆ ಎಂದು ಇದರ ಅರ್ಥವಲ್ಲ. ಅದರ ಶಕ್ತಿ ಇದ್ದಕ್ಕಿದ್ದಹಾಗೆಯೆ ಇದೆ. ಅದರ ಸಾಧನಮಾಡುವವರಿಗೆ ತಕ್ಕ ಫಲ ಸಿಕ್ಕೇಸಿಗುವದು. ಆದರೆ ಈಗಿನ ಸ್ಥಿತಿಗತಿ ವಾತಾವರಣಾದಿಗಳನ್ನು ಪರಿಶೀಲಿಸಿ ನೋಡಿ ಮಹಾಪುರುಷರು, ಸಾಧು ಸಜ್ಜನರು, ಈ ಕಾಲದ ದ್ರಷ್ಟಾರರು ಭಗವನ್ನಾಮದ ಸಾಧನವನ್ನು ಹೊಗಳಿ ಜನರಿಗೆ ಅದರ ಉಪದೇಶ ಮಾಡಿದ್ದಾರೆ. ಶ್ರೇಷ್ಠ ಸಚ್ಚರಿತ್ರರಿಗೆ ಮಾತ್ರ ಇಂಥ ಹೊಸ ಮಾರ್ಗಗಳು ಹೊಳೆಯುವವು ಹಾಗು ಅಂಥವರೇ ಅವುಗಳನ್ನು ರೂಢಮಾಡುವರು. ಜನಸಾಮಾನ್ಯರು ಕೂಡ ಅಂಥ ವಿಭೂತಿಗಳನ್ನು ಗುರುತಿಸಿ ಅವರನ್ನು ಏಕೋಭಾವದಿಂದ ಹಿಂಬಾಲಿಸುವರು. ಈ ರೀತಿ ಹೊಸಮಾರ್ಗಗಳು, ನವೀನ ಸಾಧನಗಳು ಅಸ್ತಿತ್ವದಲ್ಲಿ ಬಂದು ಪ್ರಚಾರ ಗೊಳ್ಳುವವು. ಸ್ಫೂರ್ತಿ, ಹೊಸ ಭಾವಾವತಾರ, ಹೊಸ ಮಾರ್ಗಗಳನ್ನು ಕುರಿತು ಚಿಂತನ, ಹೃದಯಮಂಥನ ಈ ಮೂಲಕವೆ ಶ್ರೇಷ್ಠರಿಗೆ ಹೊಸ ಹಾಗು ಯೋಗ್ಯವಾದ ಮಾರ್ಗಗಳು ದೊರೆಯುವವು. ಆವರವರ ತಪಶ್ಚರ್ಯೆಯ ಬಲ, ಆ ಕಾಲದ ಅವಶ್ಯಕತೆ ಇವುಗಳಿಗನುಸಾರವಾಗಿ ಆಯಾ ಮಾರ್ಗಗಳು ಹೆಚ್ಚುಕಡಿಮೆ ಪ್ರಮಾಣದಲ್ಲಿ ರೂಢವಾಗುವವು.

ಇನ್ನು ಚಿಂತನಮಂಥನಗಳಿಗೂ ಪೂರ್ವಭಾವಿಯಾಗಿ ನಿರ್ಮಲ ಬುದ್ಧಿ, ಅನಾಸಕ್ತ ವೃತ್ತಿ ಇವುಗಳು ಅವಶ್ಯ. ವಿಕಾರಯುಕ್ತ ಅಥವಾ ಸ್ವಾರ್ಥಲೋ-ಲುಪ ಹೃದಯದ ಮಂಥನವು ಸರಿಯಾಗಿ ಆಗಲಾರದು. ಅದೇ ರೀತಿ ಪೂರ್ವ ಗ್ರಹದೂಷಿತ ಬುದ್ಧಿಯು ನಮಗೆ ಸರಿಯಾದ ಚಿಂತನವನ್ನು ನಡೆಸಲು ಸಹಾಯಕವಾಗಲಾರದು. ಎಷ್ಟೋ ಸಾರೆ ಇಂಥ ಪೂರ್ವಗ್ರಹಾದಿಗಳು ಪರಂಪರೆಯಿಂದ ಸಾಗುತ್ತ ಬಂದವುಗಳಿದ್ದುದರಿಂದ ಅವುಗಳನ್ನು ಹೋಗಲಾ-ಡಿಸುವದು ಮಹತ್ಪ್ರಯಾಸದ ಕೆಲಸವಾಗಿಬಿಡುವದು. ಹಲವು ವಿಚಾರಗಳು ತಾತ್ಕಾಲಿಕ ಫಲ ಕೊಡುವಂತಹವು ಇರುವುದರಿಂದ ಆವು ಜನಮನವನ್ನು ಆಕರ್ಷಿಸಿ ಸದ್ವಿಚಾರಗಳಿಗೆ ಎಡೆಯಿಲ್ಲದಂತೆ ಮಾಡಿಬಿಡುವವು. ಹೀಗೆ ಒಂದಲ್ಲ ಎರಡಲ್ಲ, ಹೊಸ ಸದ್ವಿಚಾರಗಳು ರೂಢವಾಗಲು ಆನೇಕಾನೇಕ ಅಡಚಣಿಗಳು ಒಡ್ಡುವವು. ಇಲ್ಲಿ ಹಲವೊಂದು ಪೂರ್ವಗ್ರಹಗಳನ್ನು, ತಪ್ಪು ಗ್ರಹಿಕೆಗಳನ್ನು ಕೊಟ್ಟು ಅವು ನಮ್ಮ ವಿಚಾರಪ್ರಗತಿಗೆ ಯಾವ

ರೀತಿ ಅಡ್ಡಬರುವವು ಎಂಬುದರ ದಿಗ್ದರ್ಶನ ಮಾಡಬೇಕೆನ್ನುವೆನು.

ಪಾಶ್ಚಾತ್ಯಸಂಸ್ಕೃತಿಯ ಪ್ರವಾಹವು ಈಗ ಅತ್ಯಂತ ಬಲವಾಗಿ ಹರಿಯುತಿದೆ. ಅದು ಉಳಿದವುಗಳನೆಲ್ಲ ಹಿಮ್ಮೆಟ್ಟಿಸಿ ಜಗತ್ತನ್ನೆ ವ್ಯಾಪಿಸಿದೆ. ಅದಕ್ಕೆ ಸ್ವಲ್ಪಮಟ್ಟಿಗೆ ಪ್ರತಿಸ್ಪರ್ಧಿಯಾಗಿ ನಿಂತ ಸಂಸ್ಕೃತಿಯೆಂದರೆ ನಮ್ಮದೇ. ಅದು ಪ್ರತಿಸ್ಪರ್ಧಿಯಾಗಿದೆ ಎಂದು ಅನ್ನುವದಕ್ಕಿಂತ ತನ್ನ ಭದ್ರತೆಯನ್ನು ಇನ್ನೂ ಸ್ವಲ್ಪ ಕಾದುಕೊಂಡು ಗಟ್ಟಿಯಾಗಿ ನಿಂತಿದೆ, ಎಂದು ಹೇಳುವದು ಹೆಚ್ಚು ಸರಿಯಾಗುವದು. ಏನೇ ಇರಲಿ. ಪಾಶ್ಚಾತ್ಯರ ವರ್ಚಸ್ಸಿನ ಮೂಲಕ ಹಲವೊಂದು ವಿಚಾರಗಳು ನಮ್ಮ ಮನಸಿನಲ್ಲಿ ಮನೆಮಾಡಿವೆ ಅಥವಾ ಮನೆ ಮಾಡುತಲಿವೆ. ಅವುಗಳಲ್ಲಿ ಯಾವವು ಆಂತರಿಕ ಇಲ್ಲವೆ ಆಧ್ಯಾತ್ಮಿಕ ಪ್ರಗತಿಗೆ ಹೆಚ್ಚುಕಡಿಮೆ ಪ್ರಮಾಣದಲ್ಲಿ ಅಡ್ಡಿ ಮಾಡುವವೊ ಅವುಗಳ ಸ್ವರೂಪವನ್ನು ಇಲ್ಲಿ ಸ್ವಲ್ಪಮಟ್ಟಿಗೆ ನೋಡಲು ಅಡ್ಡಿಯಿಲ್ಲ. ಇಲ್ಲಿ ಎತ್ತಿ ತೋರಿಸಲಾದ ವಿಚಾರಗಳು ಕೇವಲ ಉದಾಹರಣಾರ್ಥವಾಗಿ ಇರುವವು ಎಂಬುದನ್ನು ಲಕ್ಷದಲ್ಲಿಡುವದು ಅವಶ್ಯ.

ಪಾಶ್ಚಾತ್ಯಸಂಸ್ಕೃತಿ ಹಾಗೂ ಅದರಲ್ಲಿದ್ದುದೆಲ್ಲವೂ ಶ್ರೇಷ್ಠ ನಮ್ಮ ಸಂಸ್ಕೃತಿ ಕೇವಲ ಕನಿಷ್ಠ ಅಥವಾ ತ್ಯಾಜ್ಯ, ಎಂದು ತಿಳಿದವರು ನಮ್ಮ ಸುಶಿಕ್ಷಿತರಲ್ಲಿ ಅನೇಕರಿರುವರು. ಇಷ್ಟೇ ಅಲ್ಲ. ಸಂಸ್ಕೃತಿ ಅಥವಾ ಸಭ್ಯತೆ ಎಂಬುದು ನಮ್ಮಲ್ಲಿರಲೇ ಇಲ್ಲ, ಅದು ಬ್ರಿಟಿಶರು ಇಲ್ಲಿ ಬಂದು ಸ್ಥಾನಾಪನ್ನರಾದಾಗಲೆ ಬಂದಿತು ಎಂದು ಪ್ರತಿಪಾದಿಸುವ ಮಹನೀಯರೂ ಹಲವರಿರುವರು. ಈ ಬಗೆಯ ವೃತ್ತಿಯು ಅಥವಾ ಹೀನಗಂಡವು ಯಾವದೇ ಪ್ರಗತಿಗೆ ಘಾತಕವಾದುದು ಎಂದು ಬೇರೆ ಹೇಳಬೇಕಾಗಿಲ್ಲ. ಇದೇ ರೀತಿ ನಮ್ಮ ಸಂಸ್ಕೃತಿ ಸರ್ವಾಂಗ ಪರಿಪೂರ್ಣವಿದ್ದು ಪಾಶ್ಚಾತ್ಯಸಂಸ್ಕೃಯಿಂದ ಕಲಿಯುತಕ್ಕದ್ದೇನೂ ಇಲ್ಲ ಎಂದು ತಿಳಿಯುವದು ಕೂಡ ನಮ್ಮ ನಿಜವಾದ ಪ್ರಗತಿಗೆ ಅಡ್ಡ ಬರುವಂತಹದು. ಯಾಕಂದರೆ ನಮ್ಮ ಸಂಸ್ಕೃತಿಯ ಮೂಲ ತಳಹದಿ ಆಧ್ಯಾತ್ಮಿಕವಿದ್ದರೂ ಅದರ ಮೇಲೆ ಈಗ ಕಿಟ್ಟ ಕೂತಿರುವದು ಹಾಗೂ ಹಲವು ಸಂದರ್ಭಗಳಲ್ಲಿ ನಿಷ್ಕ್ರಿಯ ಸಾತ್ವಿಕತೆಗೆ ತಮೋರೂಪವು ಬಂದುಬಿಟ್ಟಿರುವದು. ಆದುದರಿಂದ ರಾಜಸಿಕ ಪಾಶ್ಚಾತ್ಯ ಸಂಸ್ಕೃತಿಯ ಸಂಪರ್ಕಸಂಘರ್ಷಗಳು ತಮವನ್ನು ನಾಶಗೊಳಿಸುವ ಮಟ್ಟಿಗೆ ನಮಗೆ ಸದ್ಯಕ್ಕೆ ಉಪಕಾರಕವೆಂದು ಹೇಳಲು ಅಡ್ಡಿ ಇಲ್ಲ.

ಇಂದ್ರಿಯಪ್ರವೃತ್ತಿಗಳು ಹಾಗೂ ವಿಷಯವಾಸನೆಗಳು ಇವು ಸ್ವಾಭಾವಿಕ

ವಿರುವದರಿಂದ ಇವುಗಳನ್ನು ಸಂಯಮಿಸುವದಾದರೆ ಅದೇ ಬಗೆಯ ಹೆಚ್ಚಿನ ಸುಖವನ್ನು ಪಡೆಯುವ ಉದ್ದೇಶದಿಂದ ಮಾತ್ರ ಸಂಯಮಿಸಬೇಕೇ ಹೊರತು ಮತ್ತೇನೂ ಇಲ್ಲ. ಈ ಆಧುನಿಕ ವಿಚಾರವು ಆತ್ಮಾನುಭವದ ಮಾರ್ಗದಲ್ಲಿ ದೊಡ್ಡ ಅಡಚಣಿಯನ್ನುಂಟುಮಾಡಬಲ್ಲದು. ಯಥಾರ್ಥವಾಗಿ ನೋಡಿದರೆ ಸಂಯಮವನ್ನು ಸಂಯಮಕ್ಕಾಗಿಯೆ ಮಾಡಬೇಕು, ಸಂಯಮದಲ್ಲಿಯೆ ಒಂದು ಬಗೆಯ ಆನಂದವಿದೆ. ಆತ್ಮಾನುಸಂಯಮದ ಮೂಲಕ ಜಡದ ಮೇಲೆ ಹಾಗೂ ವೃತ್ತಿಗಳ ಮೇಲೆ ಜಯವನ್ನು ಪಡೆದು ಪ್ರಭುತ್ವವನ್ನು ಸ್ಥಾಪಿಸ ಬಲ್ಲನು. ಆ ಪ್ರಭುತ್ವದಲ್ಲಿ ಒಂದು ಆನಂದವಿದೆ. ವಿಷಯಗಳನ್ನು ಭೋಗಿ ಸುತಿರುವಾಗ ಕೂಡ ಅನಾಸಕ್ತರಿರುವದೆ ಆತ್ಮಸಾಧನದ ಮಾರ್ಗವು ಎಂದು ನಮ್ಮ ಸಂಸ್ಕೃತಿಯು ಘಂಟಾಘೋಷವಾಗಿ ಹೇಳುವದು. ಇದು ಅನುಭವಕ್ಕೂ ಸಲ್ಲುವದು.

ಜೀವನದ ಮಟ್ಟವನ್ನು ಬೆಳೆಸಬೇಕೆಂಬ ಕಲ್ಪನೆಯೊಂದು ಈಗ ಎಲ್ಲರ ಮನಸನ್ನು ಹಿಡಿಯತೊಡಗಿದೆ. ಇದು ಯೋಗ್ಯವೆ ಇದೆ. ಯಾಕಂದರೆ ಜಗತ್ತಿ ನಲ್ಲಿಯ ಅತ್ಯಂತ ದರಿದ್ರದೇಶಗಳಲ್ಲಿ ನಮ್ಮದೊಂದಾಗಿದೆ. ಈ ದೇಶದ ನಿವಾಸಿ ಗಳಿಗೆ ಸಾಕಷ್ಟು ಜೀವನಾಂಶಗಳು ಸಿಕ್ಕುವದು ಅವಶ್ಯ. ದೇಹವು ಆತ್ಮನ ಅಧಿಷ್ಠಾನವಿರುವದರಿಂದ ಆತ್ಮಸಾಧನವಾಗಬೇಕಾದರೆ ಈ ದೇಹರೂಪಿ ಅಧಿ ಷ್ಠಾನವು ಸಾಕಷ್ಟು ಯೋಗ್ಯ ಸ್ಥಿತಿಯಲ್ಲಿರುವದು ಅವಶ್ಯ. ಆದರೆ ಈ ಮಟ್ಟನ್ನು ಬೆಳೆಸುವ ಭರದಲ್ಲಿ ನಾವು ಕೇವಲ ಪಾಶ್ಚಾತ್ಯರ ಮಾರ್ಗವನ್ನೆ ಅಂಧರಂತೆ ತುಳಿಯುತ್ತ ಹೋದರೆ ನಾವು ಅವರ ಪಾಡನ್ನೆ ಪಡುವೆವು. ದೇಹದ ಮಟ್ಟನೊಡನೆ ಮನ ಆತ್ಮಗಳ ಮಟ್ಟನ್ನೂ ಏರಿಸುವದು ಅತ್ಯಗತ್ಯವು. ಇಲ್ಲದಿದ್ದರೆ ದೇಹಕ್ಕೆ ಸವಿಯೂಟ ಹಾಗೂ ಕುತಣಿ ಗಾದಿ, ಮನ ಬುದ್ಧಿಗಳು ಮಾತ್ರ ಇದ್ದಕ್ಕಿದ್ದಹಾಗೆ! ಈ ಪರಿಸ್ಥಿತಿಯಾಗಲಿ, ಜಡವಾದದ ಪ್ರಾಬಲ್ಯ ವಾಗಲಿ ಆತ್ಮಸಾಧನದ ಮಾರ್ಗಕ್ಕೆ ಪೋಷಕವಾಗಲಾರವು. ಜೀವನದ ಮಟ್ಟ ಏರಿಸುವದು ಇದು ಜೀವನದ ಧ್ಯೇಯವಾಗಲರಿಯದು. ಜೀವನದಲ್ಲಿ ಸತ್ಪ್ರ ವೃತ್ತಿ ಸದಾಚಾರಗಳನ್ನು ಬೆಳೆಸುವದು, ಜೀವನದ ವಿಕಾಸವು ಆಗುವಂತೆ ಮಾಡುವದು, ಜೀವನದ ರಹಸ್ಯವನ್ನು ಅರಿತು ಅದನ್ನು ಆನಂದಮಯಮಾಡಿ ಬಿಡುವದು ಇದೇ ಜೀವನದ ಮುಖ್ಯ ಧ್ಯೇಯವಿರುವದು ಅವಶ್ಯ.

ಈಚೆಗೆ ಮನೋವಿಜ್ಞಾನ ಹಾಗೂ ಮಾರ್ಕ್ಸವಾದ ಇವುಗಳಿಗೆ ಬಹಳ

ಮಹತ್ವವು ಉಂಟಾಗಿದೆ. ಅವುಗಳಲ್ಲಿಯ ಹಲವೊಂದು ವಿಚಾರಗಳು ಬಹಳ ಮನೋವೇಧಕವೆನಿಸುವವು. ಆದುದರಿಂದ ಅವು ವಿಶೇಷತಃ ತರುಣರಿಗೆ ಆಕರ್ಷಕವಾಗಿರುವವು. ಲೈಂಗಿಕ ವಿಚಾರಗಳನ್ನು ಮುಕ್ತಮನಸಿನಿಂದ ಹಾಗೂ ಬಹಿರಂಗವಾಗಿ ಹೇಳಲು, ಚರ್ಚಿಸಲು ಫ್ರಾಯಿಡ್ ಇವರು ಪ್ರತಿಪಾದಿಸಿದ ಮನೋವಿಜ್ಞಾನವು ಒಂದು ಒಳ್ಳೆ ಅವಸರ ಕೊಟ್ಟುಬಿಟ್ಟದೆ. ಆದರೆ ಅದರಲ್ಲಿ ಎರಡು ಮೂರು ಬಹಳ ದೊಡ್ಡ ದೋಷಗಳಿರುವವೆಂಬದನ್ನು ಜನರು ಮರೆಯುವರು. ಲಿಂಗಾಚಾರವು ಸ್ವಾಭಾವಿಕವಾದುದು, ಎಲ್ಲರಿಗೂ ಬಂದೇಬರುವದು, ಅದನ್ನು ಕೇವಲ ಮುಚ್ಚಿಡುವುದಾಗಲಿ, ಹತ್ತಿಕ್ಕಿಬಿಡುವುದಾಗಲಿ ಯೋಗ್ಯ ವಲ್ಲ ಎಂಬ ಮಾತು ನಿಜ. ಆದರೆ 'ಧ್ಯಾಯತೇ ವಿಷಯಾನ್ ಪುಂಸಃ ಸಂಗಸ್ತೇಷೂಪಜಾಯತೇ' ಎಂಬ ಅನುಭವಕ್ಕೆ ಬಂದ ಸತ್ಯವನ್ನು ಮರೆತು ನಡೆಯುವಂತಿಲ್ಲ. ಇದಲ್ಲದೆ ಫ್ರಾಯಿಡ್ ಹಾಗೂ ಅವನ ಅನುಯಾಯಿಗಳು ಪ್ರಚಾರಕ್ಕೆ ತಂದ ಮನೋವಿಜ್ಞಾನವು ಕೇವಲ ವಿಕೃತ ಇಲ್ಲವೆ ರೋಗಗ್ರಸ್ತ ಮನಸಿನ ವಿಜ್ಞಾನವು ಹೊರತು ಅದರಲ್ಲಿ ಮನೋಬಲವನ್ನು ಬೆಳೆಸುವಂತಹದು ಏನೂ ಇಲ್ಲ. ಹಲವೊಂದು ಮನೋವಿಕೃತಿಗಳನ್ನು ಹೋಗಲಾಡಿಸಲು (ಕ್ಯುರೇಟಿವ್ಹ) ಆ ಶಾಸ್ತ್ರವು ಯತ್ನಿಸುವದು. ಮನೋಬಲ, ಮನೋ ಪಾರ್ಶ್ವ್ಯ, ತೇಜಸ್ಸು, ಧೀರತೆ, ಏಕಾಗ್ರಶಕ್ತಿ, ಸಂಕಲ್ಪಶಕ್ತಿ ಇವುಗಳನ್ನು ಬೆಳೆಸಬೇಕಾದರೆ ಯೋಗಶಾಸ್ತ್ರದತ್ತವೆ ನಾವು ಹೋಗಬೇಕಾಗುವದು. ಇದಲ್ಲದೆ ಫ್ರಾಯಿಡ್‌ನು ಎಲ್ಲ ಮನೋವಿಕೃತಿಗಳಿಗೆ ಲೈಂಗಿಕ ಕಾರಣಗಳನ್ನೆ ಕೊಡಲು ಪ್ರಯತ್ನಪಟ್ಟಿದ್ದಾನೆ. ವಸ್ತುತಃ ಹಾಗಿಲ್ಲ. ಮನುಷ್ಯನ ಜೀವನದಲ್ಲಿ ಹಾಗೂ ಮನದಲ್ಲಿ ಲಿಂಗಕ್ಕೆ ಮಹತ್ವದ ಸ್ಥಾನವಿದ್ದರೂ ಅದು ಸರ್ವವ್ಯಾಪಿಯಿಲ್ಲ. ಅದು ಸರ್ವವ್ಯಾಪಿಯಿದೆ ಎಂದು ಭಾವಿಸಿ ಅದರ ಮೇಲೆಯೆ ಮನೋವಿಜ್ಞಾನವನ್ನು ರಚಿಸಿದುದು ವಾಸ್ತವಿಕವಾದುದಲ್ಲ. ಸುದೈವದಿಂದ ಅವನ ಶಿಷ್ಯರಲ್ಲಿಯೆ ಹಲವರು ಈ ದೋಷವನ್ನು ಬೈಲಿಗೆಳೆದು ವ್ಯಕ್ತಿಮತ್ವ, ಇಚ್ಛೆಗಳ ನಿಗ್ರಹ, ಈಶ್ವರಭಾವ (ಅಧಿಕಾರ ನಡೆಸುವ ವೃತ್ತಿ), ಇತ್ಯಾದಿಗಳು ಕೂಡ ಮನೋ ವಿಕೃತಿಗೆ ಕಾರಣವಾಗುವವು ಎಂದು ಪ್ರತಿಪಾದಿಸಿದ್ದಾರೆ.

ಸ್ವರ್ಗವನ್ನು ಭೂಲೋಕಕ್ಕೆ ಇಳಿಸುವ ಸುಲಭ ಸಾಧನವೆಂದು ಮಾರ್ಕ್ಸ ವಾದದ ಉಪಯೋಗವನ್ನು ಹಲವರು ಹೆಜ್ಜೆಜ್ಜೆಗೆ ಮಾಡುವರು. ಆ ವಾದ ವನ್ನು ಪ್ರತ್ಯಕ್ಷ ಅಮಲಿನಲ್ಲಿ ತರಬೇಕೆನ್ನುವವರು ಯಾವ ರೀತಿ ಆ ಕಾರ್ಯವನ್ನು

ಮಾಡಿದ್ದಾರೆ ಇತ್ಯಾದಿ ವಿಷಯವನ್ನು ಇಲ್ಲಿ ಎತ್ತುವ ಕಾರಣವಿಲ್ಲ. ಆದರೆ ಮನೋವಿಜ್ಞಾನದಲ್ಲಿಯ ಮುಖ್ಯವಾದ ಒಂದೆರಡು ದೋಷಗಳನ್ನು ಹೇಳಿದಂತೆ ಈ ವಾದದಲ್ಲಿಯ ದೋಷವನ್ನು ಹೇಳಿಕೊಡಬೇಕಾದರೆ, ಇದು ಶುದ್ಧ ಜಡ ವಾದದ ಮೇಲೆ ರಚಿತವಾದುದು; ಇತಿಹಾಸ ಮಾನವೀಸ್ವಭಾವ ಇತ್ಯಾದಿಗಳ ನ್ನೆಲ್ಲ 'ಅಪಸ್ಪರ ಸಂಭೂತಂ ಕಿಮನ್ಯತ್ಕಾಮ ಹೈತುಕಂ' ಎಂಬ ದೃಷ್ಟಿ ಯಿಂದಲೆ ನೋಡುವದು; ಮಾನವೀ ಚಟುವಟಿಕೆಗಳೆಲ್ಲವೂ ಧರ್ಮವು ಸಹ ಅರ್ಥಮೂಲವು (ಎಕಾನಾಮಿಕ್) ಎಂದು ಪ್ರತಿಪಾದಿಸುವದು; ಪ್ರೇಮ ನೀತಿ ಮುಂತಾದವುಗಳೆಲ್ಲ ಅರ್ಥಮೂಲಕವಾದವು ಎಂದು ನಂಬುವದು. ಇವು ಗಳಲ್ಲಿ ವಾಸ್ತವಿಕ ಮಾತು ಎಷ್ಟು ಎಂಬುದನ್ನು ಇಲ್ಲಿ ಹೇಳುವದವಶ್ಯವಿಲ್ಲ. ಈ ವಾದವು ಕೂಡ ಏಕಾಂಗೀನವಾವ ದೃಷ್ಟಿದೋಷದಿಂದ ತುಂಬಿರುವದು. ಅಧ್ಯಾತ್ಮವಾದಕ್ಕೆ ಇದು ತೀರವಿರೋಧಿಯು ಎಂಬುದು ಸ್ಪಷ್ಟವಿದೆ.

ಇನ್ನು ಪಾಶ್ಚಿಮಾತ್ಯ ಸಂಸ್ಕೃತಿಯೊಡನೆ ವಿಶೇಷ ಸಂಬಂಧವಿಲ್ಲದ ಹಲವು ಪೂರ್ವಗ್ರಹಾದಿಗಳನ್ನು ನೋಡುವ. ಇವುಗಳ ಮೂಲಕ ಮಾನವನ ಆಕಾಂಕ್ಷೆ ಉತ್ಸಾಹ, ಪುರುಷಾರ್ಥ ಮುಂತಾದವುಗಳಿಗೆ ಆತಂಕ ಉಂಟಾಗಿ ಅವನು ಪ್ರಗತಿಪಥವನ್ನು ಎಷ್ಟು ವೇಗದಿಂದ ಆಕ್ರಮಿಸಬೇಕೋ ಅಷ್ಟು ಆಕ್ರಮಿಸದೆ ಹೋಗುವನು. ಒಳ್ಳೆಯದು, ಶ್ರೇಷ್ಠವಾದುದು, ಘನತೆ, ಸಮೃದ್ಧಿ, ಸಾಧುತ್ವ ಮುಂತಾದವುಗಳೆಲ್ಲವೂ ಭೂತಕಾಲದಲ್ಲಿ ಆಗಿಹೋದವು, ಮುಂದೆ ಆಗುವದು ಸಾಧ್ಯವಿಲ್ಲ, ಈಗಿದ್ದುದೆಲ್ಲವೂ ಹೀನವು ದೀನವು ದುರ್ಬಲವು, ಸತ್ಯಯುಗ, ಸುಖದ ಯುಗ, ಋಷಿಮುನಿಗಳ ಯುಗ, ಆಚಾರ್ಯರ ಯುಗ ಇವು ಇನ್ನು ಕಾಣಲಾರವು. ಇತ್ಯಾದಿ ವಿಚಾರಗಳು ಬಹಳ ರೂಢವಿರುವವು. ಇವು ಯಥಾರ್ಥವಿಲ್ಲ ಇಷ್ಟೇ ಅಲ್ಲ ಇವು ಮಾನವರಲ್ಲಿ ಹೀನಗಂಡವನ್ನು ನಿರ್ಮಾಣ ಮಾಡಿ ಅವನ ಪ್ರಯತ್ನಗಳಿಗೆ ಆಂತರಿಕ ಅಡಚಣಿಗಳನ್ನು ಹುಟ್ಟಿಸುವವು. ಯುಗಗಳ ಹಳೆಯ ಕಲ್ಪನೆ ಕೂಡ ಹೀಗಿಲ್ಲ. ಸತ್ಯಯುಗವು ಈಗಿಲ್ಲದಿದ್ದರೂ ಕಲಿಯುಗವಾದೊಡನೆ ಸತ್ಯಯುಗವೇ ಬರತಕ್ಕದ್ದಿದೆ. ಇದು ನಿಜವಾಗಿ ನಮ್ಮನ್ನು ಆಶಾಭರಿತರನ್ನಾಗಿ ಮಾಡಬೇಕು, ಆ ಸತ್ಯಯುಗವನ್ನು ಬೇಗನೆ ತರುವುದರಲ್ಲಿ ನಾವೂ ಸಹಭಾಗಿಗಳಾಗಬೇಕೆಂಬ ಹವಣು ನಮ್ಮಲ್ಲಿ ಹುಟ್ಟ ಬೇಕು. ಅದೇ ರೀತಿ ಜ್ಞಾನಿಗಳೂ ಸಾಧುಸಂತರೂ ಆಗಿ ಹೋದರು, ಈಗ ಯಾರೂ ಇಲ್ಲ, ಮುಂದೆ ಆಗುವದು ಶಕ್ಯವಿಲ್ಲ; ಆದುದರಿಂದ ಯಾವ

ಪ್ರಶ್ನೆಯನ್ನು ಕೇಳದೆ, ಹೊಸವಿಚಾರದ ಗೋಜಿಗೆ ಹೋಗದೆ, ವಿಚಾರ ಮಂಥನದ ತೊಂದರೆ ಪಡಕೊಳ್ಳದೆ ಹಿಂದಿನವರು ಹೇಳಿದ್ದನ್ನೇ ಸಾಂಪ್ರದಾಯಿಕವಾಗಿ ಮುಂದೆ ಸಾಗಿಸಬೇಕು ಎಂದು ಹಲವರು ತಿಳಿದುಕೊಂಡಿರುವರು. ಈ ಕಲ್ಪನೆ ಮಾನವ ಮನವನ್ನು, ಬುದ್ಧಿಶಕ್ತಿಯನ್ನು, ವಿಚಾರಕ್ಷೇತ್ರದಲ್ಲಿಯ ಸಾಹಸವೃತ್ತಿಯನ್ನು ಉಚ್ಛೇದಿಸಿಬಿಡುವದು. ಮೇಲಾಗಿ ಇದರಲ್ಲಿ ಸತ್ಯಾಂಶವು ಕಡಿಮೆ ಇದೆ. ಆಗಿಹೋದವರು ಸರ್ವಥಾ ಪೂಜ್ಯರು, ಶ್ರೇಷ್ಠರು. ಆದರೆ ಮಾನವ ಇತಿಹಾಸ, ಪ್ರಗತಿ ಇವು ನಿಂತ ನೀರಲ್ಲ. ಕವಿಪ್ರತಿಭೆಯಂತೆ ಅದರಲ್ಲಿ ನಿತ್ಯನವೀನತೆ ಇದೆ. ಹಳೆಯದನ್ನು ಕೊಂಡು ಹೊಸದನ್ನು ಕೂಡಿಸಿ ಭವಿಷ್ಯವನ್ನು ನಿರ್ಮಾಣಮಾಡುವ ಶಕ್ತಿ ಆತ್ಮನಲ್ಲಿದೆ. ಆ ಶಕ್ತಿ ಆತ್ಮನಲ್ಲಿಲ್ಲದಿದ್ದರೆ ಅದಕ್ಕೂ ನಾವು ಒಂದು ಜಡಯಂತ್ರ ಎನ್ನಬೇಕಾದೀತು. ಆದಿಶಕ್ತಿಯ ಪ್ರತಿಭೆ ಕೂಡ ಬಂಜೆಯಾಗಿಲ್ಲ. ನಿತ್ಯನವೀನವನ್ನು ನಿರ್ಮಿಸುವ ಆ ನೈಸರ್ಗಿಕ ಶಕ್ತಿ ನಿರಲಸವಾಗಿ ತನ್ನ ಕಾರ್ಯವನ್ನು ಮಾಡುತಲಿದೆ. ಅದಕ್ಕೆ ಅಂತಪಾರಗಳಿಲ್ಲ. ಅದು ಅನಾದಿ ಇದ್ದಂತೆ ಅನಂತವು. ಕಪಿಲ ಕಣಾದಾದಿ ಮುನಿಗಳು ಶ್ರೇಷ್ಠರು, ಆದರೆ ಆಯಿನ್‌ಸ್ಟಾಯಿನನು ಅವರಿಗೆ ಸರಿಮಿಗಿಲು ಎನ್ನದೆ ಗತ್ಯಂತರವಿಲ್ಲ. ಈ ಹೊತ್ತು ಇಂಗ್ಲಂಡದಲ್ಲಿ ಯಾರಾದರೂ ನ್ಯೂಟನ್ನನಿಗಿಂತ ಶ್ರೇಷ್ಠರು ಆಗುವದು ಶಕ್ಯವಿಲ್ಲ, ಎಂದರೆ ಜನರು ನಕ್ಕಾರು. ಮಹಾವೀರ, ಬುದ್ಧ, ಕ್ರಾಯಿಸ್ಟ ಇವರೇ ಎಲ್ಲಕ್ಕೂ ಹೆಚ್ಚಿನ ಅಹಿಂಸಾಚಾರ್ಯರು, ಇವರಂಥವರು ಹಿಂದೆ ಆಗಿಲ್ಲ ಮುಂದೆ ಆಗಲಾರರು, ಎಂದು ಯಾರಾದರೂ ಪ್ರತಿಪಾದಿಸಿದರೆ ಮಹಾತ್ಮಾ ಗಾಂಧಿಯವರ ಉದಾಹರಣೆ ಕೊಟ್ಟು, ಇವರು ಅಹಿಂಸಾಶಾಸ್ತ್ರಕ್ಕೆ ಅದ್ವಿತೀಯವಾದ ಹೊಸ ಒಪ್ಪನ್ನು ಕೊಟ್ಟಿರುವರೆಂದೂ ಅದನ್ನು ಮಾನವೋದ್ಧಾರದ ಏಕಮೇವ ಸಾಧನವನ್ನು ಪ್ರತ್ಯಕ್ಷವಾಗಿ ಹೇಗೆ ಮಾಡಬೇಕೆಂಬುದನ್ನು ಪ್ರಯೋಗತಃ ದಿಗ್ದರ್ಶಿಸಿ ಎಲ್ಲಕ್ಕೂ ಮುಂದೆ ಹೋಗಿರುವರೆಂದೂ ಹೇಳಬೇಕಾಗುವದು. ತಾತ್ಪರ್ಯವೇನಂದರೆ, ಮೇಲಿನಂಥ ವಿಚಾರಗಳಿಂದ ನಾವೇ ನಮ್ಮ ಪ್ರಗತಿಮಾರ್ಗವನ್ನು ಕುಂಠಿಸಿಬಿಡುವದು ಸಹಸಾ ಯೋಗ್ಯವಲ್ಲ. ಆದಿಶಕ್ತಿಯ ಅನಂತತ್ವ, ನಿತ್ಯನಿರ್ಮಾಣಕ್ಷಮತೆ, ಮಾನವನ ಅದ್ವಿತೀಯ ಭವಿತವ್ಯ ಇವುಗಳಲ್ಲಿ ನಂಬುಗೆ ಇಟ್ಟು, ಹಿಂದೆ ನಾವು ಸಾವಿರ ಗಾವುದ ನಡೆದು ಬಂದಿದ್ದರೆ ಮುಂದೆ ಹತ್ತುಸಾವಿರ ಗಾವುದ ನಡೆದು ಹೋಗಬಲ್ಲೆವು ಎಂಬ ಉತ್ಸಾಹದಿಂದ ಸಾಗುವದು ಅವಶ್ಯವು. ಸಣ್ಣಪುಟ್ಟ

ದಿನ್ನೆಗಳನ್ನು ನಮ್ಮ ಕಣ್ಣಿಗೆ ಅಡ್ಡಬಾರದಂತೆ ಮಾಡಿ, ಕ್ಷಿತಿಜದ ವರೆಗೆ ನಮ್ಮ ದೃಷ್ಟಿ ನಿರ್ಬಾಧವಾಗಿ ಹರಿಯುವಂತೆ ಮಾಡಬೇಕು. ಇದೇ ನಮ್ಮ ನಿಜವಾದ ವಿಕಾಸದ ಮಾರ್ಗವಾಗಬಲ್ಲದು.

ನಮ್ಮ ದೈವ ಎಂದು ಹಣೆಯ ಮೇಲೆ ಕೈಯಿಟ್ಟು ಕೂಡುವವರದೊಂದು ವರ್ಗವು ನಮ್ಮಲ್ಲಿರುವದು. ಇದು ಕೇವಲ ದೈವವಾದವು. ದೈವವಾದವನ್ನು ಹೋಲುವ ದೇವವಾದವೂ ಒಂದುಂಟು. ದೇವರಲ್ಲಿಯ ನಿಜವಾದ ಭಯಭಕ್ತಿ ಮೂಲಕ ಅವನ ಮೇಲೆ ಭರವಸೆ ಇಟ್ಟವರ ಮಾತು ಬೇರೆ. ತನ್ನ ಕರ್ತವ್ಯವನ್ನು ಅಖಂಡವಾಗಿ ಮಾಡುತ್ತ ದೇವರಲ್ಲಿ ನಂಬಿಗೆ ಇಟ್ಟು ನಡಕೊಳ್ಳುವವರು ದೈವವಾದಿಗಳೆನಿಸಲಾರರು. ಆದರೆ ದೇವರು ಮಾಡಿಸಿದ್ದಾಗುವದೆಂದು ಕೈ-ಮುಚ್ಚಿ ಕೂತುಕೊಳ್ಳುವವರಿಗೂ ಪ್ರತ್ಯಕ್ಷ ದೈವವಾದಿಗಳಿಗೂ ಏನೂ ಭೇದ ವಿಲ್ಲ. 'ದೈವ' ಅನ್ನುವುದರ ಬದಲು ಅವರು 'ದೇವ' ಅನ್ನುವರು ಇಷ್ಟೇ. ಈ ದೈವವಾದವು ಪುರುಷಾರ್ಥದ ಬೊಡ್ಡಿಗೆ ಕೊಡಲೀ ಪೆಟ್ಟನ್ನು ಹಾಕುವದು. ಅದರಲ್ಲಿ ಒಂದು ಬಗೆಯ ಅಪಜಯವಾದವೂ ಹುದುಗಿಕೊಂಡಿರುವದು. ಮನುಷ್ಯಪ್ರಯತ್ನಕ್ಕೆ ಸಾಕಷ್ಟು ಬೆಲೆ ಕೊಡಬೇಕು, ಇಷ್ಟೇ ಅಲ್ಲದೆ, ಯತ್ನವು ಸಫಲವಾಗದಿದ್ದಲ್ಲಿ ಅಪಜಯವನ್ನು ಧೈರ್ಯ, ಶಾಂತಿ, ಮತ್ತು ಆನಂದದಿಂದ ಎದುರಿಸುತ್ತ ಹೋಗಬೇಕು. ಸತ್ಯಾಗ್ರಹಿಗೆ ಅಪಜಯವೆಂಬುದಿಲ್ಲ, ಎಂದು ಗಾಂಧೀಜಿಯವರು ಮೇಲಿಂದ ಮೇಲೆ ಹೇಳುತ್ತಿದ್ದರು. ಅದರ ರಹಸ್ಯವೇ ಇದು. ಪ್ರತ್ಯಕ್ಷ ವಿಜಯಕ್ಕಿಂತ ಒಮ್ಮೊಮ್ಮೆ ತಾನು ತನ್ನ ಕರ್ತವ್ಯಮಾಡಿರುವನೆಂಬುದೆ ಮನುಷ್ಯನಿಗೆ ಹೆಚ್ಚಿನ ಸಮಾಧಾನವನ್ನು ಕೊಡಬಲ್ಲದು. ತನ್ನ ದೇಶದ ಕಟ್ಟಳೆಗನುಗುಣವಾಗಿ ವಿಷಪ್ರಾಶನ ಮಾಡಿ ಜೀವ ಕೊಡುವಾಗ ಸಾಕ್ರೆಟೀಸನು ಇದೇ ಬಗೆಯ ಸಮಾಧಾನಸಿಂಧುವಿನಲ್ಲಿ ಮುಳುಗಿದ್ದನೆಂಬುದು ಜನಜನಿತ ವಿರುವದು.

ಪುರುಷಾರ್ಥಕ್ಕೆ ಧಕ್ಕೆಕೊಟ್ಟು ಪ್ರಗತಿಯನ್ನು ಹಿಮ್ಮೆಟ್ಟಿಸುವ ವಿಷಯಗಳಲ್ಲಿ ಜ್ಯೋತಿಷ, ಸಾಮುದ್ರಿಕ, ರಮಲ ಇವುಗಳಲ್ಲಿಟ್ಟ ಅವಾಸ್ತವ ವಿಶ್ವಾಸವೊಂದು ಪ್ರಬಲವಾದುದು ಎಂದು ಹೇಳಬಹುದು. ಅವು ಎಷ್ಟರ ಮಟ್ಟಿಗೆ ಶಾಸ್ತ್ರಗಳಿರುವವು ಎಂಬುದನ್ನು ಈಗ ವಿವರಿಸುವದು ಬೇಡ. ಆದರೆ ಅವುಗಳನ್ನು ಎಷ್ಟರಮಟ್ಟಿಗೆ ನಂಬಬೇಕು, ಅವುಗಳನ್ನವಲಂಬಿಸಬೇಕೊ ಹೇಗೆ, ಎಂಬ ಪ್ರಶ್ನೆ ಹೆಚ್ಚು ಮಹತ್ವದ್ದಿರುವದು. ತಮ್ಮ ಭವಿಷ್ಯವೇನು ಎಂಬುದನ್ನು

ತಿಳಿದುಕೊಳ್ಳುವ ಕುತೂಹಲ ಎಲ್ಲರಿಗೂ ಇರುವದು. ಮನುಷ್ಯನ ಹಲವು ಮನೋದೌರ್ಬಲ್ಯಗಳಲ್ಲಿ ಇದೊಂದು ಪ್ರಬಲವಾದುದು ಎಂಬಲ್ಲಿ ಸಂಶಯವಿಲ್ಲ. ಕೊರವಂಜಿಯನ್ನು ಮೊದಲುಮಾಡಿ ಅತ್ಯಾಧುನಿಕ ಜ್ಯೋತಿಷಿಯ ವರೆಗೆ ಎಲ್ಲರೂ ಈ ಮನೋದೌರ್ಬಲ್ಯದ ಲಾಭವನ್ನು ಪಡೆದೇ ತಮ್ಮ ಕಸಬನ್ನು ನಡೆಸುವರು. ಈ ಕುತೂಹಲದ ತೃಪ್ತಿಗಾಗಿ, ಚೇಷ್ಟೆಗಾಗಿ, ಹೊತ್ತು ಹೋಗಲಾಡಿಸುವುದಕ್ಕಾಗಿ, ಮನರಂಜನೆಯೆಂದು ಈ ಜ್ಯೋತಿಷಾದಿಗಳಲ್ಲಿ ವೇಳೆ ಕಳೆಯುವುದು ಬೇರೆ, ಅದನ್ನವಲಂಬಿಸಿ ತಮ್ಮ ತಮ್ಮ ಕಾರ್ಯಕಲಾಪಗಳನ್ನು ಮಾಡುವದು ಬೇರೆ. ತನ್ನ ಜೀವನದ ಮೇಲೆ, ತಾನು ಮಾಡಬೇಕಾದ ಬಿಡಬೇಕಾದ ಕಾರ್ಯಗಳ ಮೇಲೆ ಇವುಗಳ ಪರಿಣಾಮವನ್ನಾಗಗೊಡುವದು ಸರ್ವಥಾ ಅನುಚಿತವು ಹಾಗೂ ಪುರುಷಾರ್ಥಕ್ಕೆ ಹಾನಿಕರವು. ಕನಸು, ಇಲ್ಲವೆ ಯಾವದೊಂದು ಅಪಾಯದ ಮುಂಗಡ ಸೂಚನೆ ಇತ್ಯಾದಿಗಳಿಗೆ ಸಮಂಜಸ ಮನುಷ್ಯನು ಎಷ್ಟು ಮಹತ್ವ ಕೊಡುವನೊ ಅಷ್ಟೇ ಇವುಗಳಿಗೂ ಕೊಡಬಹುದಲ್ಲದೆ ಅದಕ್ಕೂ ಹೆಚ್ಚು ಕೊಟ್ಟರೆ ಅದರಿಂದ ಹಾನಿಯಾಗದೆ ಇರದು. ಮುಖ್ಯತಃ ಪುರುಷಾರ್ಥವನ್ನು ಕುಗ್ಗಿಸುವ ರೂಪದಲ್ಲಿ ಆ ಹಾನಿ ನಮಗೆ ದೃಗ್ಗೋಚರವಾಗುವದು.

ಸಂಸಾರ, ಪ್ರಪಂಚ, ಇಹಲೋಕದ ಜೀವನ ಇದೊಂದು ದೊಡ್ಡ ಗಂಡಾಂತರ, ಏನೋ ತಪ್ಪಿ ಜನ್ಮತಾಳಿದ್ದಾಗಿದೆ, ಯಾವದೋ ಒಂದು ಪಾಪದ ಮೂಲಕ ಭವಸಾಗರದಲ್ಲಿ ಬರೋಣವಾಗಿದೆ, ಇದನ್ನು ಆದಷ್ಟು ತಪ್ಪಿಸಬೇಕು, ಇಲ್ಲಿಂದ ಆದಷ್ಟು ಬೇಗನೆ ಪಯಣ ಬೆಳಿಸಬೇಕು, ಇನ್ನೊಮ್ಮೆ ಇಲ್ಲಿ ಬರಬಾರದು, ತಾಯಿಯ ಹೊಟ್ಟೆಯಲ್ಲಿ ಕಷ್ಟಪಟ್ಟು ಉಸಿರು ಸಿಕ್ಕಿಕೊಂಡು ಇದ್ದು ಮುಂದೆ ಬಚ್ಚಲಬಾಯಿಂದ ಹೊರಬಿದ್ದು ಬಂದ ಸಂಕಷ್ಟ ಒಮ್ಮೆ ಭೋಗಿಸಿದ್ದು ಸಾಕು, ಇನ್ನು ಆ ಮಾತು ಬೇಡ ಇತ್ಯಾದಿ, ವಿಚಾರಗಳು ಹಲವೊಂದು ಜನರಲ್ಲಿ ಸಾಕಷ್ಟು ದೃಢವಾಗಿ ಮನೆಮಾಡಿಕೊಂಡಿರುವವು. ಇಂಥ ವಿಪರೀತ ವಿಚಾರಗಳು ಜೀವನದತ್ತ ನೋಡುವ ನಮ್ಮ ದೃಷ್ಟಿಯನ್ನೇ ವಿಕೃತಗೊಳಿಸಿಬಿಡುವವು. ಇವು ಆಧ್ಯಾತ್ಮಿಕ ಜೀವನಕ್ಕೆ ಸಹಾಯಕವೆಂದು ಹಲವರು ತಿಳಿದಿದ್ದರೂ ಆ ಮಾತು ಬಹಳ ಸಂಶಯಾಸ್ಪದವಿರುವದು. ಇವು ಯಥಾರ್ಥ ವಿಚಾರಗಳೂ ಅಲ್ಲ. ಜೀವನವೆಂಬುದು ದುಃಖಸಾಗರವಲ್ಲ. ಜೀವನದಲ್ಲಿ ದುಃಖವಿದೆ. ಸುಖವಿದ್ದಂತೆ ದುಃಖವೂ ಇದೆ.

ಂದ ಬಳಿಕ ಇದಕ್ಕೆ ಸುಖಸಾಗರ ಎಂದು ಏಕೆ ಅನ್ನಬಾರದು? ಭೂತ
ಮಾತ್ರರು ಅಂದರೆ ಸೃಷ್ಟವಾದ ಸಕಲವಸ್ತುಗಳು (ಜೀವಕೋಟಿ ಸಹ)
ಆನಂದದಿಂದಲೆ ಹುಟ್ಟಿ, ಆನಂದವನ್ನನುಭವಿಸುತ್ತ ಇದ್ದು, ಆನಂದದತ್ತ
ಸಾಗಿ, ಆನಂದದಲ್ಲಿಯೆ ಲಯಹೊಂದುವವು, ಎಂದು ಉಪನಿಷತ್ತು ಸ್ಪಷ್ಟ
ವಾಗಿ ಘೋಷಿಸುವದು. ಪರಮಾತ್ಮನು ಕಾಮಿಸಿದುದರಿಂದ, ಇಚ್ಛಿಸಿದ್ದರಿಂದ,
ಸಂಕಲ್ಪ ಮಾಡಿದ್ದರಿಂದ ಈ ವಿಶ್ವ ಹುಟ್ಟಿತು; ತಾನು ಏಕಾಕಿ (ಒಬ್ಬಂಟಿಗ)
ಇದ್ದುದರಿಂದ ಆತ್ಮನಿಗೆ ಸುಖವೆನಿಸಲಿಲ್ಲ, ಆದುದರಿಂದ ಅವನು ವಿಶ್ವದ
ಉತ್ಪತ್ತಿಯನ್ನು ಮಾಡಿದನು, ಎಂದು ಉಪನಿಷತ್ತು ಹೇಳುವದು. 'ಶಿವ
ರಚಿಸಿದ ವಿಶ್ವವ ತನ್ನ ವಿನೋದಕ್ಕಾಗಿ', ಇದು ಕೇವಲ ಲೀಲೆ ಇರುವದು,
ಈ ಮುಂತಾದ ವರ್ಣನೆಗಳು ಕೂಡ ಅದೇ ಮಾತನ್ನು ಸಾರುವವು. ಇವೆಲ್ಲವು
ಗಳ ಮಥಿತಾರ್ಥವೇನಂದರೆ, ಈ ವಿಶ್ವವು ಯಾರಿಗೂ ಬೇಡಾಗಿ, ಇಲ್ಲವೆ ಹೇಯ
ವಸ್ತುವೆಂದು, ತ್ಯಾಜ್ಯವೆಂದು, ದುಃಖರೂಪವೆಂದು ನಿರ್ಮಿತವಾಗಿಲ್ಲ. ಇದು
ಇಚ್ಛೆಯಿಂದ ಆದಿಶಕ್ತಿಯಿಂದ ಹುಟ್ಟಿಸಲಾದುದು. ಅದಕ್ಕೆ ಮಾನವನು
ದುಃಖಸಾಗರ ಇತ್ಯಾದಿ ವಿಶೇಷಣಗಳನ್ನು ಹಚ್ಚುವುದೆಂದರೆ ಪರಮಾತ್ಮನ
ಕೃಪಾಡವನ್ನೆ ಹೀಯಾಳಿಸಿದಂತೆ, ಹೀನಾಯಿಸಿದಂತೆ. ಪರಮಾತ್ಮನಿಗೆ ಲೀಲೆ
ಇದ್ದುದು, ವಿನೋದರೂಪವಿದ್ದುದು ನಮಗೆ ಮಾನವರಿಗೆ ಮಾತ್ರ ದುಃಖ
ರೂಪವೊ ಅಥವಾ ನಮ್ಮನ್ನು ದುಃಖಕ್ಕೀಡುಮಾಡುವದೆ ಅವನ ವಿನೋದವೊ?
ಸರ್ವಥಾ ಅಲ್ಲ. ದುಃಖಂ ದುಃಖಂ, ಎಂದು ಇದನ್ನು ಸಂಬೋಧಿಸುವುದಾಗಲಿ,
ಮಾನವನು ಪಾಪವಿದ್ಧನಾಗಿಯೆ ಹುಟ್ಟಿರುವನೆಂಬುದಾಗಲಿ ಪರಮಾತ್ಮ ಕೃತಿ
ಯನ್ನು ಹಳಿದಂತೆಯೆ ಸೈ. ವಿಶ್ವವೆಂದರೊಂದು ಧರ್ಮಶಾಲೆಯಲ್ಲ. ಮೇಲಾಗಿ
ಇದನ್ನು ಅಷ್ಟೊಂದು ತಾರಾತುರಿಯಿಂದ ಬಿಟ್ಟು ನಾವು ಹೋಗುವುದಾದರೂ
ಎಲ್ಲಿ? ಈ ದೇಹವು ಅಷ್ಟೊಂದು ಪಾಪದ ಕುಡಿಕೆ, ದುಃಖದ ತವರೂರು
ಇದ್ದರೆ ಈ ಕ್ಷಣವೆ ಇದರ ನಾಶಮಾಡಿಬಿಡುವದು ನಮ್ಮ ಕರ್ತವ್ಯವಾಗುವದು.
ತಾನಾಗಿ ಮರಣ ಬರುವವರೆಗೆ ನಾವು ತಡೆಯುವದಾದರೂ ಏಕೆ?
ಅಷ್ಟೊಂದು ಬೇಡಾದ ಈ ನರಕದ ಚೀಲವನ್ನು ಹಗಲಿರುಳು ಹೊತ್ತುಕೊಂಡು
ಓಡ್ಡಾಡುವುದಾದರೂ ಏಕೆ? ವಸ್ತುತಃ ಈ ಎಲ್ಲ ವಿಚಾರಗಳು ತೀರ ವಿಕೃತ
ವಾದವುಗಳು. ಈ ವಿಶ್ವವು ಪರಮಾತ್ಮನು ತಾನಾಗಿ ಹೊದ್ದುಕೊಂಡ
ಆವರಣವು. 'ಈಶಾವಾಸ್ಯಮಿದಂ ಸರ್ವಂ' ಎಂದು ಋಷಿಯು ನುಡಿದಿರುವದು

ಅಕ್ಷರಶಃ ಸತ್ಯವು. ಮಾನವದೇಹವೆಂಬುದೊಂದು ಅತ್ಯಂತ ಆಶ್ಚರ್ಯಜನಕವಾದ ಯಂತ್ರವಿಶೇಷವು. ಆದರಲ್ಲಿ ಚಿಜ್ಜ್ಯೋತಿಯು ಸ್ಥಾಪನೆಯಾಗಿರುವದು. ದೇಹವೆ ದೇಗುಲವು, ಅಂತರ್ಯಾಮಿಯಾದ ಆತ್ಮನೆ ದೇವರು. ಇದನ್ನರಿತು ಕೊಂಡು ಶರೀರವು ಧರ್ಮಸಾಧನವೆಂದು ಆದರ ಉಪಯೋಗ ಮಾಡಿದರೆ 'ಇಹೈವ ತೈರ್ಜಿತಃ ಸರ್ಗಃ' ಎಂಬ ಗೀತೋಕ್ತಿಯು ಸತ್ಯವಾಗುವದು. ದೇಹದ ಬಗ್ಗೆಯಾಗಲಿ, ವಿಶ್ವದ ಬಗ್ಗೆಯಾಗಲಿ ಪರಮಾತ್ಮನಿರ್ಮಿತ ಕಸಕಡ್ಡಿಯ ಬಗ್ಗೆಯಾಗಲಿ ಯಾವ ಬಗೆಯ ಜುಗುಪ್ಸೆಯನ್ನೂ ಹೇಯಭಾವನೆಯನ್ನೂ ತಾಳದೆ, ಆದನ್ನು ತಪ್ಪಿಸಿಕೊಂಡು ಪಲಾಯನ ಬೆಳೆಸುವ ಮೂರ್ಖ ಪ್ರಯತ್ನ ವನ್ನು ಮಾಡದೆ, ಅತ್ಯಾದರಭಾವದಿಂದ ಆದರತ್ತ ನೋಡಿ, ವಿಶ್ವವೆಲ್ಲವೂ ವಿಶ್ವೇಶ್ವರನ ಕೈವಾಡ, ಅವನ ಪ್ರಸಾದ ಎಂದು ತಿಳಿದು ಆಸಕ್ತಿರೂಪ ಬಂಧನ ವನ್ನು ನೀಗಿ ಅನಾಸಕ್ತರೂಪ ಪ್ರೇಮ ಎಂಬ ಹೊಸ ಬಂಧನವನ್ನು ನಿರ್ಮಿಸಿ ನಾವು ಸದೈವ ಅಂತರ್ಮುಕ್ತರಾಗಿ ಸಮರಸೈಕ್ಯಭಾವದಿಂದ ಈ ವಿಶ್ವವನ್ನು ಲೀಲಾರೂಪವಾಗಿ ಭೋಗಿಸುತ್ತ ಸುಖಿಯಾಗಿರಬೇಕು.

ಮೇಲೆ ಉದಾಹರಣರೂಪವಾಗಿ ನಮ್ಮ ಆಧ್ಯಾತ್ಮಸಾಧನೆಗೆ ಉಪಕಾರ ವಲ್ಲದ ಹಲವು ಪ್ರಚಲಿತ ವಿಚಾರಗಳನ್ನು ಹೇಳಿದ್ದಾಗಿದೆ. ಇದೇ ದೃಷ್ಟಿ ಯಿಂದ ವಿಚಾರಮಾಡುತ್ತ ಹೋದರೆ ನಮಗೆ ಪೋಷಕವಾವು ಘಾತಕವಾವು ಎಂಬುದು ಗೊತ್ತಾಗುವದು. ಆದರೆ ಸತತ ಚಿಂತನಮಂಥನಾದಿಗಳ ಅವಶ್ಯ ಕತೆ ಇರುವದು. ಸಿದ್ಧಿಗೆ ಸ್ವಾಧ್ಯಾಯವು ಎಷ್ಟು ಮಹತ್ವದ್ದೊ ಅಷ್ಟೇ ಇವಾದರೂ ಮಹತ್ವದವುಗಳು. ಇವು ನಮ್ಮ ಜನ್ಮಸಿದ್ಧ ಹಕ್ಕುಗಳು. ಇವುಗಳನ್ನು ನಾವು ಎರಡನೆಯವರಿಗೆ ಒಪ್ಪಿಸಲಿಕ್ಕಾಗುವುದಿಲ್ಲ. ನಮ್ಮ ಪಾಲಿನ ಚಿಂತನಮಂಥನಗಳನ್ನು ನೀವೇ ಮಾಡಿರಿ ಎಂದು ನಾವು ಎರಡನೆ ಯವರಿಗೆ ಹೇಳಲಿಕ್ಕೆ ಬರುವಂತಿಲ್ಲ. ಹೂವಿನ ಹೃದಯಗರ್ಭದಲ್ಲಿ ಹುದುಗಿ ಕೊಂಡಿರುವ ತನಿರಸವನ್ನು ತರಬೇಕಾದರೆ ಜೇನು ತಾನೇ ಹುಡುಕುತ್ತ ಹೋಗಬೇಕಾಗುವದು. ಹೃದಯಾಂತರಾಳದಲ್ಲಿರುವ ಅಮೃತಕಲಶವನ್ನು ಕೈವಶಮಾಡಿಕೊಳ್ಳಬೇಕಾದರೆ ಸಮುದ್ರಮಂಥನ ನಡೆದಂತೆ ಹೃದಯಮಂಥ ನವು ಧಾರಾಳವಾಗಿ ನಡೆಯಬೇಕು. ಅಂದರೆ 'ತನ್ನತಾನರಿದಡೆ ತನ್ನರಿವೇ ಗುರು' ಎಂಬುದರ ಸತ್ಯಾರ್ಥವು ಅನುಭವಕ್ಕೆ ಬರುವದು.

ಜೀವನ ಮತ್ತು ಮರಣ ಇವು ಭೂತಭವಿಷ್ಯರಹಿತವಾದ ಒಂದೇ ಕಾಲಾತೀತ ಅಜ್ಞೇಯ ಸದ್ವಸ್ತುವಿನ ಎರಡು ಮಗ್ಗಲುಗಳು.

—ಜೇ. ಕೃಷ್ಣಮೂರ್ತಿ

ಜನಮನದಲ್ಲಿ ಸಕಲಬಂಧನಗಳನ್ನು ಹರಿದೊಗೆವ ಬಲವಾದ ಆಕಾಂಕ್ಷೆಯನ್ನು ಹುಟ್ಟಿಸಿ ನಿಜಸುಖವನ್ನು ಕೈವಶಮಾಡಿಕೊಳ್ಳುವ ಪ್ರಬಲವಾದ ಇಚ್ಛೆಯನ್ನು ಜಾಗ್ರತಗೊಳಿಸುವುದೆ ನನ್ನ ಧ್ಯೇಯವು.

—ಜೇ. ಕೃಷ್ಣಮೂರ್ತಿ

೧೫

ಜನನ-ಜೀವನ-ಮರಣ

ನಮ್ಮ ಜೀವನದಲ್ಲಿ ಸ್ಥೂಲ ಮಾನದಿಂದ ಎರಡು ವಿಭಾಗಗಳನ್ನು ಮಾಡಬೇಕಾಗುವದು. ಒಂದು ಜಾಗ್ರತ ಭಾಗ, ಇನ್ನೊಂದು ನಾವು ಜಾಗ್ರತವಿರದಿರುವ ಭಾಗ. ಅಥವಾ ಅವುಗಳಿಗೆ ಜ್ಞಾತಭಾಗ, ಅಜ್ಞಾತಭಾಗ ಎಂಬ ಹೆಸರುಗಳನ್ನು ಕೊಟ್ಟರೂ ಕೊಡಬಹುದು. ನಾವು ಜಾಗ್ರತವಿದ್ದ ಭಾಗವಂತೂ ನಮ್ಮ ಜೀವನದ್ದೇ ಭಾಗವೆಂಬಲ್ಲಿ ಸಂಶಯವಿಲ್ಲ. ಆದರೆ ನಮ್ಮ ಜೀವನದಲ್ಲಿಯ ಎಷ್ಟೋ ಸಂಗತಿಗಳ ಬಗ್ಗೆ ನಮಗೆ ಪ್ರತ್ಯಕ್ಷ ಯಾವ ಜ್ಞಾನವೂ ಇರುವದಿಲ್ಲ ಅಥವಾ ತೀರ ಅಸ್ಪಷ್ಟ ಜ್ಞಾನವಿರುವದು, ಆದರೂ ಅದೆಲ್ಲ ನಮ್ಮ ಜೀವನದ ಅವಿಭಾಜ್ಯ ಭಾಗವೇ ಆಗಿರುವದು. ಉದಾ: ಸಾಮಾನ್ಯವಾಗಿ ನಮ್ಮ ಕರುಳುಗಳಲ್ಲಿ ಏನು ನಡೆದಿರುವದೆಂಬುದರ ಎಚ್ಚರ ನಮಗಿರುವದಿಲ್ಲ; ಅಥವಾ ನಮ್ಮ ಸ್ವಪ್ನಸೃಷ್ಟಿಯನ್ನು ಕುರಿತು ನಮಗೆ ತೀರ ಅಸ್ಪಷ್ಟ ಜ್ಞಾನವಿರುವದು; ಅದೇ ರೀತಿ ನಮ್ಮ ನಿದ್ರಾವಸ್ಥೆಯಲ್ಲಿ ಏನು ನಡೆದಿದೆ ಎಂಬುದರ ಜ್ಞಾನ ನಮಗೆ ಇರುವದಿಲ್ಲ. ಹೀಗಿದ್ದರೂ ಈ ಎಲ್ಲ ಸಂಗತಿಗಳು ನಮ್ಮ ಜೀವನ

ದಲ್ಲಿಯೆ ನಡೆದವುಗಳಿದ್ದು ನಮ್ಮ ವ್ಯಕ್ತಿತ್ವದ ಭಾಗವೇ ಆಗಿರುವವು. ನಮ್ಮ ದೇಹದ ಕಣಕಣಗಳಲ್ಲಿಯೂ ನಡೆದ ಸೂಕ್ಷ್ಮಾತಿಸೂಕ್ಷ್ಮ ವ್ಯಾಪಾರಗಳು, ನಮ್ಮ ಸ್ವಪ್ನದಲ್ಲಿ ನಡೆಯುವ ಸಂಗತಿಗಳು, ನಾವು ನಿದ್ರೆಹೋದಾಗ ನಮ್ಮ ಮನೋರಂಗದಲ್ಲಿ ನಡೆದ ಚಟುವಟಿಕೆಗಳು ಹಾಗೂ ನಾವು ಜಾಗ್ರತರಿದ್ದಾಗ ನಮಗೆ ತಿಳಿಯುವಂತೆ ನಮ್ಮ ದೇಹಮನಗಳಲ್ಲಿ ನಡೆಯುವ ಚಲನವಲನಗಳು ಇವೆಲ್ಲ ಕೂಡಿ ನಮ್ಮ ವ್ಯಕ್ತಿತ್ವವೆಂಬುದು ಸಿದ್ಧವಾಗುವದು. ಇಷ್ಟೇ ಅಲ್ಲ. ಲಕ್ಷಾಂತರ ವರುಷಗಳಿಂದ ನಮ್ಮ ಬೀಜಾಣುವಿನಗುಂಟ (ಜೀನಿಸ್) ಪರಂಪರೆಯಿಂದ ಸಾಗುತ್ತಬಂದ ಸಂಸ್ಕಾರಪುಂಜವು ಕೂಡ ನಮ್ಮ ವ್ಯಕ್ತಿತ್ವದ ಒಂದು ಭಾಗವಾಗಿದೆ. ಇದನ್ನೆಲ್ಲ ಪರಿಶೀಲಿಸಿದರೆ ನಮ್ಮ ವ್ಯಕ್ತಿತ್ವದ ಅಲ್ಪಾಂಶದ ಬಗ್ಗೆ ಮಾತ್ರ ನಮಗೆ ಕಿಂಚಿತ್‌ಜ್ಞಾನವೆಂಬುದಿರುವದು, ಬವ್ಹಂಶವು ನಮಗೆ ಅಜ್ಞಾತವೆ ಇರುವದು ಎಂಬ ಮಾತನ್ನು ನಾವು ಒಪ್ಪಬೇಕಾಗುವದು! ಆ ಅಜ್ಞಾತ ಭಾಗದಲ್ಲಿಯೆ ಜೀವನದ ಮೂಲಶಕ್ತಿ ಹಾಗೂ ಪ್ರಬಲಪ್ರವೃತ್ತಿಗಳು ಹುದುಗಿಕೊಂಡಿರುವವು. ಅವು ವಿಶ್ವಶಕ್ತಿಯ ಭಾಗವಿದ್ದು ಅವೇ ನಮ್ಮನ್ನು ನಮ್ಮ ಭವಿತವ್ಯದತ್ತ ನೂಕಿಕೊಂಡು ಒಯ್ಯುತಿರುವವು. ಪಾಶ್ಚಾತ್ಯ ಮನೋವೈಜ್ಞಾನಿಕರು ಆ ಅಜ್ಞಾತದ ಮುಖ್ಯಭಾಗಕ್ಕೆ ' ದಿ ಅನ್‌ಕಾನ್‌ಶಸ್ ' ಎಂಬ ಹೆಸರನ್ನಿಟ್ಟಿರುವರು. ಅದರಲ್ಲಿ ಮತ್ತೆ ' ಇಂಡಿವ್ಹಿಡ್ಯುಅಲ್ ಅನ್‌ಕಾನ್‌ಶಸ್ ' ಹಾಗೂ ' ರೇಸ್ ಅನ್‌ಕಾನ್‌ಶಸ್ ' ಎಂಬ ವಿಭಾಗಗಳು ಕಲ್ಪಿಸಲಾಗಿವೆ.

ಮಾಂಡೂಕ್ಯೋಪನಿಷತ್ತು ವ್ಯಕ್ತಿಯ ಸಂವಿತ್ತಿನ ವಿಷಯದಲ್ಲಿ ಜಾಗ್ರತ, ಸ್ವಪ್ನ, ಸುಷುಪ್ತಿ (ನಿಃಸ್ವಪ್ನ ನಿದ್ರೆ), ಮತ್ತು ತುರೀಯ ಎಂಬ ವಿಭಾಗಗಳನ್ನು ಹೇಳಿರುವದು. ತುರೀಯ ಎಂಬುದೆ ಅತೀತ ಅವಸ್ಥೆಯು, ಸಮಾಧಿಸ್ಥಿತಿಯಲ್ಲಿ ಅನುಭವಕ್ಕೆ ಬರುವ ಪ್ರಪಂಚದ ಉಪಶಮನವಾದಂಥ ಸ್ಥಿತಿಯು. ಅದು ವಿಶೇಷ ಸಾಧನಾದಿಗಳಿಂದಲೆ ಸಿದ್ಧವಾಗಬಲ್ಲ ಅವಸ್ಥೆಯು. ಉಳಿದವುಗಳು ಎಲ್ಲರ ಅನುಭವಕ್ಕೆ ನಿತ್ಯವೂ ಬರುವಂಥವುಗಳು.

ಈ ಎಲ್ಲ ಸಂಗತಿಗಳ ವಿಚಾರಮಾಡಿ ನೋಡಲಾಗಿ ಮನುಷ್ಯನು ಬುದ್ಧಿಪುರಃಸರವಾಗಿ ಮಾಡಬಹುದಾದ ಕಾರ್ಯಗಳ ಕ್ಷೇತ್ರವು ಎಷ್ಟು ಚಿಕ್ಕದು ಎಂಬದು ಸ್ಪಷ್ಟವಾಗುವದು. ಹುಟ್ಟಿದೊಡನೆ ಅಥವಾ ಹುಟ್ಟುವ ಪೂರ್ವದಲ್ಲಿಯೆ ಹೊಟ್ಟೆಯಲ್ಲಿ ಹಲವು ತಿಂಗಳು ಕೂಸಿಗೆ ' ನಾನು ' ಎಂಬ ವ್ಯಕ್ತಿತ್ವದ

ಕಲ್ಪನೆ ಬರುತಿರಲಿಕ್ಕೆ ಹಾಗೂ ಕೂಸು ಒಂದು ವ್ಯಕ್ತಿಯೋಪಾದಿಯಲ್ಲಿ ವರ್ತಿಸಲು ಪ್ರಾರಂಭಮಾಡುತಿರಲಿಕ್ಕೆ ಸಾಕು. ಆದರೆ ನಾನು ಎಂಬುದರ ಸ್ಪಷ್ಟ ಭಾಸವು ಹಾಗೂ ಸ್ಮರಣವು- ಮುಂದೆ ನಾಲ್ಕಾರು ವರುಷಗಳ ವರಗೆ ಆ ಕೂಸಿಗೆ ಆಗುವುದಿಲ್ಲ. ಮುಂದೆ ಸ್ಮರಣಶಕ್ತಿ ದೃಢವಾಗಿ, ನಾನೆಂಬ ಭಾವನೆ ಸ್ಪಷ್ಟವಾಗುತ್ತ ಹೋಗಿ, ತನ್ನ ಹೊಣೆಗಾರಿಕೆಯ ಜ್ಞಾನವು ಹೆಚ್ಚುತ್ತ ಹೋಗುವದು; ಅಹಂಭಾವ, ಅಭಿಮಾನಾದಿಗಳು ಬೆಳೆಯುತ್ತ ಹೋಗುವವು. ಈ ರೀತಿ ವ್ಯಕ್ತಿತ್ವವು ಬೆಳೆದು ತನ್ನ ವ್ಯಕ್ತಿಮತ್ವದ ಅರಿವು ಆಯಾ ವ್ಯಕ್ತಿಗೆ ಹೆಚ್ಚೆಚ್ಚು ಪ್ರಮಾಣದಲ್ಲಿ ಆಗುತ್ತ ನಡೆಯುವದು. ಮುಂದೆ ಸಾಯುವ ವರೆಗೂ ಈ ಅರಿವು ಮುಂತಾದವುಗಳು ಹೆಚ್ಚುತ್ತಲೆ ಹೋಗುವವು. ಈ ಎಲ್ಲ ಮಾತುಗಳನ್ನು ಕಣ್ಣುಮುಂದಿಟ್ಟುಕೊಂಡು ಲೆಕ್ಕಹಾಕಿ ನೋಡಿದರೆ, ಮನುಷ್ಯನು ಮೈತುಂಬ ಎಚ್ಚರವಿದ್ದು ಬುದ್ಧಿಪುರಃಸರವಾಗಿ ವರ್ತಿಸುತಿರುವ ಕಾಲವೆಷ್ಟು ಎಂಬುದು ಗೊತ್ತಾಗುವದು. ಒಬ್ಬ ಮನುಷ್ಯನು ಸುಮಾರು ಎಂಬತ್ತು ವರುಷ ಬದುಕುವನು ಎಂದು ಕಲ್ಪಿಸಿದರೆ ಮೊದಲಿನ ಐದಾರು ವರುಷಗಳು ತೀರ ಬಾಲ್ಯದಲ್ಲಿ ಹೋಗಿಬಿಡುವವು. ಉಳಿದ ಎಪ್ಪತ್ತುನಾಲ್ಕು ವರುಷಗಳಲ್ಲಿ ನಿದ್ರೆ, ಸ್ವಪ್ನಸ್ಥಿತಿ, ಆಲಸ್ಯ ಮುಂತಾದವುಗಳಲ್ಲಿ ಅರ್ಧದಷ್ಟು ಕಾಲ ಹೋಗುವದು. ಜಡ್ಡು-ಜಾಪತ್ರಿ, ಆಸರ-ಬೇಸರ ಇವುಗಳಲ್ಲಿ ಆರೇಳು ವರುಷಗಳು ಹೋಗಿಬಿಡುವವು. ಹೀಗೆ ಸುಮಾರು ಮೂವತ್ತುವರುಷಗಳ ಕಾಲಮಾತ್ರ ಅವನಿಗೆ ಎಚ್ಚರದಿಂದಿದ್ದು ಮನೋವಾಂಛಿತ ಕಾರ್ಯವನ್ನು ಕೈಕೊಂಡು ಅದನ್ನು ಮಾಡುವ ಉದ್ದೇಶದಿಂದ ಪ್ರಯತ್ನಿಸಲು ಸಿಕ್ಕುವವು! ಈ ಕಾಲದಲ್ಲಿಯೂ ಕೂಡ ಮನೋದೌರ್ಬಲ್ಯ, ದುಷ್ಟಪ್ರವೃತ್ತಿಗಳು, ಅಜ್ಞಾನ, ಪೂರ್ವಗ್ರಹ ಮುಂತಾದವುಗಳೊಡನೆ ಹೋರಾಡಿ ಮನುಷ್ಯನು ಸತ್ಪಥವನ್ನು ಹುಡುಕಿ ಸತ್ಯವನ್ನು ದೊರಕಿಸಬೇಕಾಗುವದು. ದೇಹಸಂರಕ್ಷಣ, ಕುಟುಂಬ ಪೋಷಣ, ದೇಶ ಧರ್ಮಗಳ ಸಂರಕ್ಷಣ ಈ ಕರ್ತವ್ಯಗಳಂತೂ ಇದ್ದೇ ಇವೆ. ಈ ಬಗೆಯಾಗಿ ವಿಚಾರಿಸಿದರೆ ಈ ಮಾರ್ಗದಲ್ಲಿ ವಿಜಯಪ್ರಾಪ್ತಿಯ ಬಗ್ಗೆ ನಿರಾಶೆಯುಾಗುವ ಸಂಭವವಿದೆ. ಆದರೆ ಅಷ್ಟೊಂದು ಭಯಪಡುವ ಕಾರಣವಿಲ್ಲ. ಯಾಕಂದರೆ ಸಾಧಕನು ಸಾಕಷ್ಟು ಎಚ್ಚರದಿಂದ ಸಾಗಿದರೆ ಈ ಎಲ್ಲ ಸಂಗತಿಗಳನ್ನೂ ತನ್ನ ಸಾಧನಗಳನ್ನಾಗಿ ಪರಿವರ್ತಿಸಬಲ್ಲನು. ಮೇಲಾಗಿ ವಿಶ್ವದ ಉತ್ಕ್ರಾಂತಿಶಕ್ತಿಗಳು ಅವನಿಗೆ ಸಹಾಯವಾಗಿ ನಿಂತಿರುವವು.

ಮನುಷ್ಯಜನ್ಮಕ್ಕೆ ಬಂದು ಇಷ್ಟೆಲ್ಲ ತೊಡಕುತೊಂದರೆಗಳಿಗೆ ಈಡಾಗುವದಕ್ಕಿಂತ ಖಗಮೃಗಗಳಾಗಿಯೆ ಉಳಿಯುವದು ಒಳಿತು ಎಂದು ಒಮ್ಮೊಮ್ಮೆ ನಮಗೆ ಎನಿಸಬಹುದು. ಆದರೆ ಮನುಷ್ಯನು ಆ ಜೀವನವನ್ನು ಬಯಸುವದು ಎಂದರೆ ಒಂದು ಬಗೆಯ ತಮೋಜೀವನವನ್ನೆ ಬಯಸಿದಂತಿದೆ. ಯಾಕಂದರೆ ಆ ಜೀವನದಲ್ಲಿ ಜ್ಞಾನವಾಗುವ ಶಕ್ಯತೆಯೆ ಇಲ್ಲ. ಇದಲ್ಲದೆ ಮುಂದೆ ಹರಿಯುತ್ತ ನಡೆದ ವಿಕಾಸಗಂಗೆಯು ಹೊಡಮಳ್ಳಿ ತನ್ನ ಉಗಮದತ್ತ ಸಾಗಲಾರಳು. ಅದು ಆಗದ ಮಾತು. ನಾವು ಹಾಗೆ ಆಗಬೇಕು, ಹೀಗೆ ಆಗಬೇಕು ಎಂದು ಕೇವಲ ಇಚ್ಛಿಸುವುದು, ಕಲ್ಪಿಸುವುದು, ವಿಚಾರವ್ಯೋಮದಲ್ಲಿ ಸ್ವೈರವಾಗಿ ಸಂಚರಿಸುವದು, ವಿಹರಿಸುವದು ಬೇರೆ, ಯಥಾರ್ಥ ಸ್ಥಿತಿ ಬೇರೆ. ಕಾಲದೆಶೆಯಲ್ಲಿರುವ, ಮನೆಮುಟ್ಟ ನಡೆಯುತ್ತ ಬಂದ ದಿವ್ಯ ಸುಸಂಧಿಯನ್ನು ದುರ್ಲಕ್ಷಿಸಿ ಇಲ್ಲದಸಲ್ಲದ, ಆಗದ ಹೋಗದ ಮಾತುಗಳಲ್ಲಿ ಮನವನ್ನು ಮುಳುಗಿಸುವುದರಿಂದ ಯಾವ ಲಾಭವೂ ಆಗದು. ಜನ್ಮಜನ್ಮಾಂತರಗಳು ಇರಲಿಬಿಡಲಿ, ತನಗೆ ಬಂದ ಒಂದೇ ಒಂದು ಜನ್ಮದಲ್ಲಿ ಸಹ ಸಿದ್ಧಿಯನ್ನು ಪಡೆದೇ ತೀರತಕ್ಕದ್ದು ಎಂಬ ದೃಢಸಂಕಲ್ಪದಿಂದ ಪ್ರಯತ್ನಶೀಲನಾಗುವುದೆ ನಿಜವಾದ ಪುರುಷಾರ್ಥವು.

ಈ ದೇಹವು ಇಂತಹ ಕ್ಷಣಕ್ಕೆ ಇಂಥಲ್ಲಿ ಹುಟ್ಟಿತೆಂದು ನಾವು ಹೇಳುವೆವು. ಆದರೆ ದೇಹದಲ್ಲಿ ಒಟ್ಟುಗೂಡಿದ ವಿವಿಧ ಧಾತುಗಳ ಜನ್ಮ ವಿಶ್ವದ ಉತ್ಪತ್ತಿಯಂತೆ ಅನಾದಿಯೆಂದೇ ಹೇಳಬೇಕಾಗುವದು. ವಿಶಿಷ್ಟ ರೀತಿಯಿಂದ ಇಂತಿಷ್ಟು ಪ್ರಮಾಣದಲ್ಲಿ ಆಯಾ ಅಣುಕಣಗಳ ಮಿಶ್ರಣ ಹೊಸದು ಹೊರತು ಮೂಲ ಅಣುಕಣಗಳು ಒಂದು ರೀತಿ ಸನಾತನವಾದವುಗಳೆ ಸೈ. ಏನೇ ಇರಲಿ. ದೇಹರೂಪದಿಂದ ಹುಟ್ಟಿದ ಬಳಿಕ ಆ ಮಿಶ್ರಣಕ್ಕೊಂದು ವ್ಯಕ್ತಿತ್ವವುಂಟಾಗುವದು. ವಿಶ್ವದ ಅನೇಕಾನೇಕ ವಸ್ತುಗಳಲ್ಲಿ ಅದೂ ಒಂದು ಘಟಕ, ಒಂದು ಸಂಘಟಿತ ವಸ್ತು ಆಗಿ ಅದರ ಜೀವನಕ್ಕೆ ಪ್ರಾರಂಭವಾಗುವದು. ಆ ಸಂಘಟನೆಯಲ್ಲಿ 'ಅಸ್ಮಿತೆ' ನಾನು ಎಂಬ ಭಾವ, ಉಂಟಾಗುವದು. ತನ್ನ ಅನುಭವಗಳನ್ನೆಲ್ಲ ಸ್ಮರಣಸೂತ್ರದಿಂದ ಪೋಣಿಸುವ ಶಕ್ತಿ ಬೆಳೆಯುತ್ತ ಹೊದಂತೆ ಈ ಅಸ್ಮಿತೆಯು ಪ್ರಬಲವಾಗುತ್ತ ನಡೆಯುವದು. ಮುಂದೆ ಅದೇ ಸ್ವಸಂವಿತ್ತಿನ ಮೂಲಕ ಒಂದು ವ್ಯಕ್ತಿಮತ್ವವನ್ನು ತಾಳಿ ತನ್ನ ತಾನರಿಯುವ, ತನ್ನ ಹೊಣೆಯನ್ನು ತಿಳಿಯುವ ಶಕ್ತಿರೂಪದಲ್ಲಿ ಪರಿಣಮಿಸುವದು. ಈ ಶಕ್ತಿ ಬರುವ

ವರೆಗೆ ಹಾಗೂ ಮುಂದೆ ಸಹ ಉತ್ಕ್ರಾಂತಿಶಕ್ತಿಗಳು ತಮ್ಮ ಅವ್ಯಾಹತ ಕ್ರಮವನ್ನು ನಡೆಸಿಯೇ ಇರುವವು. ಆದರೆ ಮನುಷ್ಯನು ತನ್ನ ಹೊಣೆಯನ್ನು ತಿಳಿದುಕೊಳ್ಳುವಷ್ಟು ಪ್ರೌಢನಾದನೆಂದರೆ, ತನ್ನ ಪಾಲಿನ ಕಾರ್ಯವನ್ನು ಬುದ್ಧಿ ಪುರಃಸರವಾಗಿ ಎತ್ತಲು ಸಮರ್ಥನಾಗುವನು. ಇದೇ ಮಾನವನಿಗೂ ಇತರ ಪ್ರಾಣಿಗಳಿಗೂ ಇದ್ದ ಮುಖ್ಯವ್ಯತ್ಯಾಸವು. ಮಾನವನ ಮಾನವ್ಯವು ಇದ-ರಲ್ಲಿಯೆ ಇದೆ.

ಈ ಸಂದರ್ಭದಲ್ಲಿ ಕರ್ಮವಾದ ಹಾಗೂ ಪುರುಷಾರ್ಥವಾದ ಇವುಗಳಲ್ಲಿ ಆತ್ಯಂತಿಕ ವಿರೋಧವಿದ್ದಂತೆ ಭಾಸವಾಗುವದು, ಆದರೆ ಜೀವನವು ವಿಶೇಷತಃ ಮಾನವೀ ಜೀವನವು ಆವೆರಡರ ಸಮನ್ವಯುವಿರುವದು. ಅನಾದಿ ಕರ್ಮ ಪ್ರವಾಹವು ಎಲ್ಲವನ್ನು ತೇಲಿಸುತ್ತ ಒಂದೇಸವನಾಗಿ ಹೊರಟೇಬಿಟ್ಟಿರುವದು. ಅದನ್ನು ಯಾರೂ ತಡೆಯಲಾರರು. ಹೀಗೆ ಅಂದಾಕ್ಷಣಕ್ಕೆ ನಾವೆಲ್ಲರೂ ನದಿಯಲ್ಲಿ ತೇಲುತ್ತ ಪ್ರವಾಹದಗುಂಟ ಹೋಗುವ ಮರದ ತುಂಡುಗಳೊ, ಎಂದು ಕೇಳಬೇಕಾಗುವದು. ಸರ್ವಥಾ ಅಲ್ಲ. ಏಕಂದರೆ ನವನಿರ್ಮಾಣಕ್ಕೆ ಪುರುಷಾರ್ಥಕ್ಕೆ ಸಾಕಷ್ಟು ಎಡೆ ಇದೆ. ಈ ಶಕ್ತಿ ಸರ್ವಕರ್ತೃಭರ್ತೃವಾದ ಪರಮಾತ್ಮನಿಂದಲೆ ಮಾನವನಿಗೆ ದೊರೆತದ್ದು. ಯಾವದೊಂದು ಮೌಲಿಕ ವಿಚಾರವನ್ನು ಮನುಷ್ಯನು ವ್ಯಕ್ತಪಡಿಸಿದರೆ ಅಥವಾ ಯಾವದೊಂದು ಶ್ರೇಷ್ಠ ಕೃತಿಯುನ್ನು ಅವನು ಮಾಡಿದರೆ ಅವನಿಗೆ ಒಂದು ವಿಶೇಷ ಆನಂದವಾಗುವದು. ಅದು ನವನಿರ್ಮಾಣದ ಆನಂದವು. ಆ ನಿರ್ಮಾಣದ ಮಟ್ಟಿಗೆ ಮನುಷ್ಯನು ವಿಶ್ವ ಕರ್ಮನ ಆನಂದದ ಪಾಲುಗಾರನು. ಬೇಕಾದಷ್ಟು ಕಷ್ಟನಷ್ಟಾದಿ ಬರಲಿ, ಸಾಯುವ ಪ್ರಸಂಗ ಬಂದರೂ ಬರಲಿ, ಮನುಷ್ಯನು ನವನಿರ್ಮಾಣಕಾರ್ಯದಲ್ಲಿ ನಿಜವಾದ ಆನಂದವನ್ನು ಅನುಭವಿಸುವನು. ಅವನ ಕಾರ್ಯಕ್ಷೇತ್ರವು ಯಾವದೇ ಇದ್ದರೂ ಅವನು ಈ ಆನಂದದ ಸ್ವಾಮಿಯು. ಪುರುಷಾರ್ಥವು ಕೂಡ ಇದೇ ಬಗೆಯ ಆನಂದವನ್ನು ಕೊಡುವದು. ಯಾಕಂದರೆ ಎದುರಾದ ಶಕ್ತಿಗಳೊಡನೆ ತಿಕ್ಕಾಟ ಹೂಡಿ ಅದರಲ್ಲಿ ಜಯಶಾಲಿಯಾಗುವ ಸಂದರ್ಭ ಉಂಟಾಗುವದು. ಪ್ರತ್ಯಕ್ಷ ಜಯ ಸಿಕ್ಕಲಿ ಬಿಡಲಿ ಆ ಪ್ರಯತ್ನವೆ ಆನಂದಫಲದಾಯಿ ಯಿರುವದು.

ಗರ್ಭದಾರಭ್ಯ ಸಾಯುವ ವರೆಗೆ, ಅದೇಕೆ, ಸತ್ತಬಳಿಕ ಸುಟ್ಟುಹಾಕುವ ವರೆಗೆ, ಶಾಸ್ತ್ರದಲ್ಲಿ ಮನುಷ್ಯನಿಗೆ ಷೋಡಶ ಸಂಸ್ಕಾರಗಳು ವಿಧಿಸಲಾಗಿರುವವು.

ಅವೆಲ್ಲವುಗಳ ಉದ್ದೇಶವು ಒಂದೇ ಇರುವದು, ಅದೇನಂದರೆ ವ್ಯಕ್ತಿಯು ಸುಸೂತ್ರವಾಗಿ ಹುಟ್ಟಿ, ಬೆಳೆದು, ವಿಕಾಸಹೊಂದಿ, ಬಾಳಿ, ತನ್ನ ಜೀವಮಾನ ದಲ್ಲಿ ಸದ್ವಿಚಾರ ಸದಾಚಾರಗಳ ಸಹಾಯದಿಂದ ಮೋಕ್ಷಭಾಗಿಯಾಗಬೇಕು. ಆಧ್ಯಾತ್ಮಿಕ ದೃಷ್ಟಿಯಿಂದ ಎಲ್ಲಕ್ಕೂ ಮಹತ್ವದ ಸಂಸ್ಕಾರವೆಂದರೆ ಉಪನಯನ ಮತ್ತು ಮಂತ್ರದೀಕ್ಷೆ. ಆ ಸಂಸ್ಕಾರದಿಂದಲೆ ಪಶುವಾಗಿ ಹುಟ್ಟಿದವನು ಮನುಷ್ಯನಾಗಬಲ್ಲನು. ಗಾಯತ್ರೀ ಮಂತ್ರದ ದೀಕ್ಷೆಯೆಂದರೆ ಜ್ಞಾನಸೂರ್ಯನ ಉಪಾಸನೆಯ ದೀಕ್ಷೆ. ಅದೇ ಸಾಧನಮಾರ್ಗದ ಪ್ರಾರಂಭ ಎನಿಸುವದು. ಬೇರೆ ಬೇರೆ ಧರ್ಮಗಳಲ್ಲಿ, ಸಾಂಪ್ರದಾಯಗಳಲ್ಲಿ ಈ ಸಂಸ್ಕಾರವು ಬೇರೆ ಸ್ವರೂಪ ದ್ದಿರುವದು. ಆದರೆ ತತ್ವವು ಒಂದೇ. ಅದೇನಂದರೆ, ವ್ಯಕ್ತಿಯು ಉದಯೋ ನ್ಮುಖನಾಗಿ ಉನ್ನತವಾದ ಸಾಧನಪಥವನ್ನು ಸ್ವೀಕರಿಸಿ ಆತ್ಮನ ಅತ್ಯುಚ್ಚ ಪದವಿಯತ್ತ ಹೆಜ್ಜೆಯಿಕ್ಕಲು ಪ್ರಾರಂಭಿಸಬೇಕು. ತನ್ನ ಧ್ಯೇಯದ ಬಗ್ಗೆ ಪೂರ್ಣ ಜಾಗ್ರತಿ ಹಾಗೂ ಅರಿವು, ತನ್ನ ಶಕ್ತಿಯಲ್ಲಿ ವಿಶ್ವಾಸ, ಧ್ಯೇಯವನ್ನು ಮುಟ್ಟಿಯೇ ತೀರುವೆನೆಂಬ ದೃಢಸಂಕಲ್ಪ, ಇವೆಲ್ಲವೂ ಸಾಧಕನಿಗೆ ಇದ್ದ ಪಕ್ಷ ದಲ್ಲಿ ಅವನು ದ್ರುತಗತಿಯಿಂದ ಮುಂದೆ ಸಾಗಿ ಹೋಗಬಲ್ಲನು. ಹಾಗೆ ನೋಡಿ ದರೆ ಹುಟ್ಟಿದಂದಿನಿಂದ ಪ್ರತಿವ್ಯಕ್ತಿಯ ಮನಸಿನ ಮೇಲೂ ನಾನಾತರದ ಸಂಸ್ಕಾರಗಳು ಆಗೇ ಆಗುತ್ತ ಇರುವವು. ಆಹಾರದಲ್ಲಿ ನಾವು ಇಷ್ಟವಾದು ದನ್ನು ಆರೋಗ್ಯಕರವಾದುದನ್ನು ಮಾತ್ರ ಸೇವಿಸಿದರೆ ನಮಗೆ ಹಿತವಾಗು ವಂತೆ ಸಂಸ್ಕಾರಗಳಲ್ಲಿಯೂ ಸತ್‌ಸಂಸ್ಕಾರಗಳನ್ನಷ್ಟೆ ಆಗಗೊಟ್ಟರೆ ನಮ್ಮ ಮನಸು, ಬುದ್ಧಿ, ಹೃದಯ ಇವು ಚನ್ನಾಗಿ ಬೆಳೆಯುವವು. ಮುನಸಿಪಾಲ್ಟಿಯ ಕಸದ ಡಬ್ಬಿಯಂತೆ. ನಮ್ಮ ಮನಸು ಸಿಕ್ಕಸಿಕ್ಕ ಸಂಸ್ಕಾರಗಳನ್ನು ಸಿಕ್ಕಸಿಕ್ಕ ಹಾಗೆ ಹೇರುವ ಒಂದು ಪಾತ್ರೆಯಾಗಿ ಕೂಡಬಾರದು. ಒಳ್ಳೆ ಸಂಸ್ಕಾರಗಳ ನ್ನಾರಿಸಿ ಅವೇ ಮನಸಿನ ಮೇಲೆ ಪರಿಣಾಮ ಮಾಡುತಿರುವಂತೆ ನಾವು ಎಚ್ಚರ ಪಡುವದು ಅತ್ಯವಶ್ಯವು.

ನಮ್ಮ ದೇಹ, ದೇಹದ ವ್ಯಾಪಾರಗಳು, ಅನೇಕಾನೇಕ ಚಟುವಟಿಕೆಗಳು, ಇವೆಲ್ಲ ಕೂಡಿ ಜೀವನ ಎನಿಸುವದು. ಆದರೆ ಯಥಾರ್ಥವಾಗಿ ನೋಡಿದರೆ ನಮ್ಮ ನಮ್ಮ ಸಂವಿತ್ತು, ನಮ್ಮ ಮನೋವ್ಯಾಪಾರಗಳು, ನಮ್ಮ ಎಚ್ಚರ, ನಮ್ಮ ಭಾವನೆಗಳು ಇವೇ ನಮ್ಮ ಜೀವನದ ಮುಖ್ಯಾಂಶಗಳು ಹಾಗೂ ಜೀವಜೀವಾಳವು. ಉಳಿದ ಎಲ್ಲ ಸಂಗತಿಗಳು ಅನುಷಂಗಿಕವಾದವುಗಳು

ಅಥವಾ ಪೋಷಕವಾದವುಗಳು ಇಲ್ಲವೆ ನಿಮಿತ್ತಮಾತ್ರಗಳು. ನಮ್ಮ ನಿಜವಾದ ಜೀವನವನ್ನು ನಾವು ಉತ್ತಮಗೊಳಿಸಬೇಕಾದರೆ ನಮ್ಮ ವಿಚಾರ, ನಮ್ಮ ಭಾವನೆ, ನಮ್ಮ ಪ್ರವೃತ್ತಿ, ಇವುಗಳತ್ತ ಹೆಚ್ಚು ಲಕ್ಷಗೊಟ್ಟು ಅವುಗಳನ್ನು ಉತ್ತಮೀಕರಿಸಲು ನಾವು ಹೆಣಗಲಿಕ್ಕೆಬೇಕು. ಈ ದೃಷ್ಟಿಯಿಂದ ನಮ್ಮ ಅಂತರ್ಜೀವನವೆ ನಿಜವಾದ ಜೀವನ; ಆಚಾರಕ್ರಿಯಾದಿಗಳಲ್ಲಿ ವ್ಯಕ್ತವಾಗುವ ನಮ್ಮ ಜೀವನವು ಅಥವಾ ಬಹಿರ್ಜೀವನವು ಅಂತರ್ಜೀವನದ ಪ್ರತಿಬಿಂಬವು ಮಾತ್ರ. ಬಿಂಬವು ಸರಿ ಇದ್ದರೆ ಪ್ರತಿಬಿಂಬವು ತನ್ನಿಂದ ತಾನೆ ಸರಿ ಆಗುವದು. ಕೇವಲ ಪ್ರತಿಬಿಂಬವನ್ನೆ ತಿದ್ದಲೆತ್ನಿಸಿದರೆ ಅದು ಸರಿ ಆಗದು. ಕ್ಷಣಹೊತ್ತು ಸರಿ ಆದಂತೆ ತೋರಿದರೂ ಅದು ಸ್ಥಿರವಾದುದೂ ಅಲ್ಲ ನಿಜವಾದುದೂ ಅಲ್ಲ. ಮುಖದ ಮೇಲಿನ ನೈಸರ್ಗಿಕವಾದ ಆರೋಗ್ಯದ ಕಳೆ ಮತ್ತು ಬಣ್ಣ ಬಡಿದು ತಂದ ಕಳೆ ಇವು ತೀರ ಭಿನ್ನವಾದವುಗಳು. ಒಂದು ಸ್ಥಿರ, ಚಿರ, ಮನೋಹರ; ಇನ್ನೊಂದು ಭಂಗುರ, ಭಾಸುರ. ಬಾಹ್ಯ ಜೀವನದತ್ತ ನಾವು ಲಕ್ಷಗೊಡಬಾರದು ಎಂದು ಇದರ ಅರ್ಥವಲ್ಲ. ಆದರೆ ನಾವು ಮುಖ್ಯವಾಗಿ ಲಕ್ಷಗೊಡತಕ್ಕ ಮಾತು ಯಾವುದು ಇದನ್ನು ತಾರತಮ್ಯದಿಂದ ನಿಶ್ಚಯಿಸಲಿಕ್ಕೆಬೇಕು. ಆಯಾ ಪ್ರಮಾಣದಲ್ಲಿ ಆಯಾ ಮಾತುಗಳ ಕಡೆಗೆ ನಾವು ಲಕ್ಷಗೊಡಲಿಕ್ಕೆಬೇಕು. ಗುಡಿ ಎಂದ ಬಳಿಕ ಅದು ಅಂತರ್ಬಾಹ್ಯ ಶುದ್ಧವಾಗಿರಬೇಕು, ಸ್ವಚ್ಛವಾಗಿರಬೇಕು, ಚಿತ್ತವನ್ನು ಪ್ರಸನ್ನಗೊಳಿಸುವಂತಹದಿರಬೇಕು, ಮನಸನ್ನು ಏಕಾಗ್ರಗೊಳಿಸುವಂತಿರಬೇಕು. ಆದರೆ ಅದರಲ್ಲಿ ಮತ್ತೆ ಗರ್ಭಗೃಹವು ಅತ್ಯಂತ ಶುಚಿಯಿರಬೇಕು.

ನಮ್ಮ ಜೀವನವು ಆಧ್ಯಾತ್ಮಿಕ ದೃಷ್ಟಿಯಿಂದ ಪೂರ್ಣ ಸಫಲವಾಗಬೇಕಾದರೆ ವಿಚಾರಾಚಾರಾದಿಗಳಲ್ಲಿ ನಮ್ಮ ದೃಷ್ಟಿ ಯಾವ ಬಗೆಯುದ್ದಿರಬೇಕು ಎಂಬ ಮುಂತಾದ ವಿಷಯಗಳು ಈ ಮೊದಲೇ ಬಂದು ಹೋಗಿವೆ. ವ್ಯಕ್ತಿಗೆ ಜೀವನದಲ್ಲಿ ನಾನಾಪದಾರ್ಥಗಳ ಸಂಬಂಧವು ಬರುವದು, ನಾನಾಪ್ರವೃತ್ತಿಗಳು ಅವನನ್ನು ಅತ್ತಿತ್ತ ಅಲೆದಾಡಿಸಬೇಕೆನ್ನುವವು. ಆ ಎಲ್ಲ ಸಂದರ್ಭಗಳಲ್ಲಿಯೂ ಆತ್ಮನಲ್ಲಿ ನೆಟ್ಟದೃಷ್ಟಿಯುಳ್ಳವನಾಗಿ ನಡೆದುಕೊಂಡರೆ ಅವನು ಇಷ್ಟಧ್ಯೇಯವನ್ನು ಮುಟ್ಟುವನೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಆತ್ಮನು ನಮ್ಮೆಲ್ಲರಿಗೂ ಇಷ್ಟು ಸಮೀಪದವನಿದ್ದರೂ ನಮ್ಮ ಅಂತರಾಳದಲ್ಲಿಯೆ ವಾಸ ಮಾಡುತ್ತಿದ್ದರೂ ಅವನ ಅರಿವು ನಮಗೆ ಕಡೆಯ ಪಡೆಯಲ್ಲಿಯೆ ಆಗುವದು!

ಇದೊಂದು ಆಶ್ಚರ್ಯದ ಸಂಗತಿಯಿದ್ದರೂ ನಿಜವಿರುವದು. ಕಂಕುಳಲ್ಲಿ ಕೂಸಿಟ್ಟುಕೊಂಡು ದಿಕ್ಕೆಲ್ಲ ಹುಡುಕುತ್ತ ಹೋದ ತಾಯಿಯಂತೆ ನಮ್ಮ ಹಣೇ ಬರಹವಿರುವದು. ಹುಟ್ಟಿದಾಕ್ಷಣ ಹಾಗೂ ಆಮೇಲೆ ನಮಗೆ ಮೊದಲು ನಮ್ಮ ದೇಹದ ಅರಿವಾಗುವದು, ಅದರ ಅಭಿಮಾನಾದಿಗಳು ಬೆಳೆಯುತ್ತ ಹೋಗುವವು. ತಾಯಿ ಮುಂತಾದ ನಮ್ಮ ರಕ್ತಸಂಬಂಧಿಕರ ಅರಿವು ಆ ಬಳಿಕ ಆಗುವದು. ಸುತ್ತಲಿನ ಜಡವಸ್ತುಗಳ ಜ್ಞಾನ, ಪ್ರಾಣಿಗಳ ಜ್ಞಾನ, ದೇವದೇವತೆಗಳ ಜ್ಞಾನ ಇತ್ಯಾದಿ ಆಗುತ್ತ ಹೋಗಿ ಚನ್ನಾಗಿ ಅರಿವು ಹುಟ್ಟಿದ ಮೇಲೆ ಜೀವನ ದಲ್ಲಿ ಹಲವು ಪೆಟ್ಟುಗಳು ಬಿದ್ದಮೇಲೆ, ಅಹಂಕಾರಾದಿಗಳಿಗೆ ಧಕ್ಕೆ ತಗಲಿ ದೃಷ್ಟಿವಿಕಸಿತವಾದ ಮೇಲೆ, ನಾನು ಎಂದರೇನು, ಯಾರು, ಎಲ್ಲಿಂದ ಬಂದೆನು, ಇತ್ಯಾದಿ ವಿಚಾರಗಳ ಉಗಮವಾಗುವದು. ಆಮೇಲೆ ಆತ್ಮಜ್ಞಾನದ ಹಾದಿಯ ಹಸಿವು! ಕದಾಚಿತ್ ಹಲವರಿಗೆ ಆ ಶುಭಪ್ರಸಂಗವು ಜೀವನದಲ್ಲಿ ಬಾರದೇ ಹೋಗುವದು. ಜ್ಞಾನವು ಹಲವು ತೊಂದರೆಗಳಿಗೆ ಕಾರಣವಾದಂತೆ ತೋರಿದರೂ ಅದೇ ನಮ್ಮನ್ನು ಸುಖದುಃಖದಾಚೆಗಿರುವ ದ್ವಂದ್ವಾತೀತಾವಸ್ಥೆಗೆ ಒಯ್ದು ಮುಟ್ಟಿಸಬಲ್ಲದು. ಕಲ್ಲಾಗಿ ಬಿದ್ದುಕೊಂಡಿರುವುದೆ ಲೇಸು, ಮರಳಿ ಅಹಲ್ಯೆ ಯಾಗುವದು ಬೇಡ, ಎಂದು ಹೇಳಿದರೆ ರಾಮನೇನು ಮಾಡಬೇಕು? ಹಾಗೆಯೆ ಆಗಲಿ ಎನ್ನಬಹುದು! ವಿಪರೀತ ಭಾವನೆಯಿದ್ದವರು ಅಥವಾ ಮಾನಸಿಕ ವಿಕೃತಿಯಿಂದ ಬಳಲುತಿರುವವರು ಹಲವರು ಹಾಗೆ ಅಂದರೂ ನಿಸರ್ಗವು, ವಿಶ್ವ ವಿಕಾಸದ ಶಕ್ತಿಗಳು ಯಾರನ್ನೂ ಹಾಗೆ ಕಲ್ಲಾಗಿರಿಸಲು ಒಪ್ಪವು. ಪಂಡಿತ ರನ್ನು ಪಾಮರರನ್ನು, ಮಕ್ಕಳನ್ನು ಮುದುಕರನ್ನು, ಹುಚ್ಚರನ್ನು ಜಾಣರನ್ನು ಎಲ್ಲರನ್ನೂ ವಿಶ್ವಪ್ರವೃತ್ತಿಯು ಮುಂದಕ್ಕೆಳಕೊಂಡು ಹೊರಟಿದೆ. ಈ ಪ್ರಚಂಡ ಮೆರವಣಿಗೆಯಲ್ಲಿ ಹಿಂದುಳಿಯಲು ಆಸ್ಪದವೆ ಇಲ್ಲ. ಆದುದರಿಂದ ಇದನ್ನು ತಿಳಿದುಕೊಂಡು ನಾವಾಗಿ ನಮ್ಮ ಯೋಗ್ಯಪಾತ್ರವನ್ನು ವಹಿಸಿ ಮಹಾಯಾತ್ರಿಕರಾಗಿ ಮುಂದರಿಯಬೇಕು. ಇದರಲ್ಲಿಯೆ ಶ್ರೇಯವಿದೆ, ಪ್ರೇಯವಿದೆ, ಶ್ರೇಯಪ್ರೇಯಗಳ ಸವಿಯಾದ ಸಮನ್ವಯವಿದೆ.

ಮುಪ್ಪಾದ ಮೇಲೆ ಯಾತ್ರೆಗೆ ಹೊರಡುವ ವೃತ್ತಿ ಸರಿಯಾದುದಲ್ಲ ಎಂಬ ಮಾತು ಈ ಮೊದಲೇ ಹೇಳಲಾಗಿದೆ. ಮರಣ ಇದು ಜೀವನಕ್ಕೆ ಒಂದು ಬಗೆಯ ಪೂರ್ಣವಿರಾಮವನ್ನು ಕೊಡುವದು. ಅದನ್ನು ತಪ್ಪಿಸಲಿಕ್ಕಾಗದು. ಜನನ ವಿದ್ದಲ್ಲಿ ಮರಣ ಕಟ್ಟಿಟ್ಟಂತೆ. ಆದರೆ ಅದಕ್ಕೆ ಭಯಪಡುವ ಕಾರಣವಿಲ್ಲ.

ಸಾಯುವ ಮೊದಲು ಅತ್ಯಂತ ಭಯಗ್ರಸ್ತರಿರುವವರು ಅನೇಕರು ಪ್ರತ್ಯಕ್ಷ ಸಾಯುವಾಗ ಅತ್ಯಂತ ಶಾಂತಿಯಿಂದ ಸಾಯುವರು. ಯಾಕಂದರೆ ಸಾವು ಶಾಂತಿದೂತವು. ಆದರೆ ಅದು ಬರುವಷ್ಟರಲ್ಲಿ, ಅದರ ಪೂರ್ವಚಿಹ್ನಗಳು ನಮ್ಮಲ್ಲಿ ಒಡಮೂಡುವದರೊಳಗಾಗಿ ನಾವು ನಮ್ಮ ಇಷ್ಟವನ್ನು ಸಾಧಿಸುವ ಹವಣನ್ನಿಟ್ಟುಕೊಂಡಿರಬೇಕು. ಅಷ್ಟರಲ್ಲಿ ಯಾತ್ರೆಯ ಉದ್ದೇಶವನ್ನು ಸಫಲಗೊಳಿಸಿಕೊಳ್ಳಬೇಕು. ಅಂದರೆ ಮರಣದ ಬಗ್ಗೆ ಇದ್ದಬಿದ್ದ ನಿಜ ಅಥವಾ ಸುಳ್ಳು ಭೀತಿಯು ನಮಗೆ ಯಾವ ಹಾನಿಯನ್ನೂ ಮಾಡಲಾರದು. ನಾವು ನಮ್ಮ ಜೀವನದಲ್ಲಿ ದೇಶಧರ್ಮಗಳ ಮಾನಮರ್ಯಾದೆಗಳ ರಕ್ಷಣಕ್ಕಾಗಿ ಮರಣವನ್ನು ನಿರ್ಭಯತೆಯಿಂದ ಎದುರಿಸುವೆವು. ಹಾಗೆ ಎದುರಿಸಿ ಮರಣಹೊಂದಿದವರನ್ನು ನಾವು ಹುತಾತ್ಮರೆಂದು ಪೂಜಿಸುವೆವು. ಅಂದ ಬಳಿಕ ಆ ಮರಣದ ಭಯವು ನಮಗೆ ಅಷ್ಟೊಂದೇಕೆ?

ಇನ್ನು ಸಾಧನೆಯು ಸಫಲರೀತಿಯಿಂದ ಮುಗಿಯುವಷ್ಟರೊಳಗಾಗಿ ಮರಣ ಬಂದರೆ ಅದು ದುಃಖಕ್ಕೆ ಕಾರಣವಾಗುವದು ಸ್ವಾಭಾವಿಕ. ಆದರೆ ಪುನರ್ಜನ್ಮವಿದ್ದ ಪಕ್ಷದಲ್ಲಿ ಆ ದುಃಖಕ್ಕೂ ಕಾರಣವಿಲ್ಲ. ಇಲ್ಲಿ ಈ ಜನ್ಮದಲ್ಲಿ ಸಾಧಿಸದಿದ್ದುದನ್ನು ಮುಂದಿನ ಜನ್ಮದಲ್ಲಿ ಸಾಧಿಸಿದರಾಯಿತು ಎಂಬ ಆಶೆಗೆ ಅನುವು ಇರುವದು. 'ಅನೇಕಜನ್ಮಸಂಸಿದ್ಧಃ ತತೋ ಯಾತಿ ಪರಾಂ ಗತಿಂ' ಎಂದು ಗೀತೆಯು ಆಶ್ವಾಸನ ಕೊಟ್ಟಿರುವದು. ಪುನರ್ಜನ್ಮವಿಲ್ಲದಿದ್ದರೂ ದುಃಖಪಡುವ ಕಾರಣವಿಲ್ಲ. ಯಾಕಂದರೆ ಪ್ರಯತ್ನಗಳೆಲ್ಲವೂ ಸಫಲವಾಗೇ ತೀರುವವೆಂದು ಹೇಳಲಿಕ್ಕೆ ಬರುವದಿಲ್ಲ. ಪ್ರಯತ್ನವೆ ಮುಖ್ಯ, ಅದರ ಫಲವಲ್ಲ. 'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ' ಎಂಬುದು ಆ ಮಾತನ್ನು ಒತ್ತಿ ಹೇಳುವದು. ನಾವು ಬಿತ್ತಿದ ಬೀಜಗಳೆಲ್ಲ ಹುಟ್ಟಿ ಫಲ ಕೊಟ್ಟೇತೀರುವದಿಲ್ಲ. ಆದರೂ ನಾವು ಬಿತ್ತುವ ಕೆಲಸವನ್ನು ಮಾಡುತ್ತಲಿ ಹೋಗುವೆವು. ಹಾಗೆ ಮರಣವು ಈ ಹೊತ್ತು ಬರಲಿ ಕಾಲಾಂತರದಿಂದ ಬರಲಿ, ಪುನರ್ಜನ್ಮವಿರಲಿ ಬಿಡಲಿ, ಇಷ್ಟ ಫಲವು ದೊರಕಲಿ ದೊರೆಯದಿರಲಿ, ಪ್ರತಿಕ್ಷಣವೂ ಅತ್ಯಂತ ಮಹತ್ವದ್ದು, ಕೊನೆಯದು ಎಂದು ತಿಳಿದು ಫಲಾಸಕ್ತಿ ಬಿಟ್ಟುಕೊಟ್ಟು ಅಖಂಡ ಪ್ರಯತ್ನಮಾಡುತ್ತ ಸತ್ಕಾರ್ಯದಲ್ಲಿ ರತರಿರುವುದೆ ಸರಿಯಾದ ಮಾರ್ಗವು.

ಇದೇ ಮಾತು ನಮ್ಮ ಯಾತ್ರಿಕನಿಗೂ ಅನ್ವಯಿಸುವದು. ಅವನ ಯಾತ್ರೆ

ಮುಗಿದಿರಲಿ ಬಿಟ್ಟಿರಲಿ, ಮರಣ ಬಂದಿತೆಂದರೆ ಎಲ್ಲ ಮಾತುಗಳಿಗೂ ಮುಕ್ತಾಯ. ಪುನರ್ಜನ್ಮವಿದ್ದ ಪಕ್ಷದಲ್ಲಿ ಅದೊಂದು ಹೊಸ ಲೆಕ್ಕ. ಈ ಜನ್ಮದ ಸಂಸ್ಕಾರಗಳೆಲ್ಲ ಅತಿ ಸೂಕ್ಷ್ಮರೂಪದಲ್ಲಿ ಮುಂದಿನ ಜನ್ಮದಲ್ಲಿ ನಮ್ಮನ್ನು ಹಿಂಬಾಲಿಸುತಿದ್ದರೂ ಈ ಯಾವುದರ ಸ್ಮರಣವೂ ಇರದ್ದರಿಂದ ಅದು ಹೊಸ ಲೆಕ್ಕ ಅನ್ನಲು ಅಡ್ಡಿ ಇಲ್ಲ. ಇನ್ನು ಇತರ ಯಾತ್ರಿಕರಿಗೂ ನಮ್ಮ ಯಾತ್ರಿಕನಿಗೂ ಅಂತರವಿದೆ ಎಂಬುದನ್ನು ಈ ಮೊದಲೇ ನೋಡಿದ್ದಾಗಿದೆ. ಯಾತ್ರಿಕರು ವಿಶಿಷ್ಟ ತೀರ್ಥಕ್ಷೇತ್ರಗಳನ್ನು ಗುರಿಯಾಗಿಟ್ಟುಕೊಂಡು ಹೊರಡುವರು. ಆಯಾ ಪುಣ್ಯಸ್ಥಾನಗಳಿಗೆ ಮುಟ್ಟಿ ಅಲ್ಲಿ ಇಷ್ಟದೇವತೆಗೆ ಪೂಜೆಪುರಸ್ಕಾರಗಳನ್ನರ್ಪಿಸುವುದು ಅವರ ಧ್ಯೇಯವು, ಅವರ ಧರ್ಮವು. ಪೂಜೆ ಪುಷ್ಪಾದಿಗಳ ಸಮರ್ಪಣೆ, ದಾನ ದಕ್ಷಿಣೆ ಪ್ರದಕ್ಷಿಣೆ, ಮುಂತಾದವುಗಳು ಆ ಯಾತ್ರಿಕರ ಸಾಧನಗಳು. ಆದರೆ ನಮ್ಮ ಯಾತ್ರಿಕನ ಮಟ್ಟಿಗೆ ವಸ್ತುಮಾತ್ರವು ಈಶಾವಾಸ್ಯವು ಎಂಬ ಭಾವಭಕ್ತಿಗಳಿಂದ ಪ್ರೇಮಾದರಪೂರ್ವಕವಾಗಿ ಸತತ ವರ್ತಿಸಲು ಯತ್ನಿಸುತಿರುವುದೆ ಅವನ ಸಾಧನಸಂಪತ್ತು. ಇತರ ಯಾತ್ರಿಕರಂತೆ ಈ ಯಾತ್ರಿಕನೂ ದೇವರನ್ನು ದೊರಕಿಸಲು ಹೊರಟವನೆ. ಇವನೂ ದೇವರನ್ನು ಕಂಡು, ಉಂಡು, ಕೊಂಡು ಆತ್ಮಸಾತ್ ಮಾಡಿಕೊಳ್ಳುವ ಪಣ ತೊಟ್ಟಿರುವನು. ಆದರೆ ಇವನ ಗುರಿ ಯಾವದೊಂದು ಪುಣ್ಯಸ್ಥಾನವಲ್ಲ, ಪುಣ್ಯಸ್ಥಿತಿಯು. ಇವನು ಹವಣಿಸುವುದು ಮುಕ್ತಿಯನ್ನಲ್ಲ ಮುಕ್ತಕರ್ಮವನ್ನು, ಇವನು ಅನುಭವಿಸಬೇಕೆಂಬುದು ನಿರ್ವಿಕಲ್ಪಸಮಾಧಿಯಲ್ಲ ಬ್ರಹ್ಮಕರ್ಮರೂಪ ಕರ್ಮಸಮಾಧಿ. ಇವನ ದಾರಿ ದೇಶದೇಶಾಂತರದಲ್ಲಿ ಹಾಯ್ದುಹೋಗದೆ ಸತತ ಸತ್ಯಾನುಭವ ಕ್ಷೇತ್ರಕ್ಕೆಯೆ ಸೀಮಿತವಿರುವದು. ಕೇವಲ ಯಾತ್ರಿಕರಷ್ಟೇ ಇವನ ಸಂಗಡಿಗರಲ್ಲ ಇಡೀ ಮಾನವಸಮಾಜವೆ ಇವನಿಗೆ ಜೊತೆ. ವೈಯ್ಯಕ್ತಿಕ ಮೋಕ್ಷ ಇಲ್ಲವೆ ಏಕಾಂತ ಅಂತರಾನಂದವಷ್ಟೇ ಇವನಿಗೆ ಪ್ರೇರಕವಲ್ಲ, ಆದರೆ ವಿಶ್ವಾವಿರ್ಭಾವಕ್ಕೆ ಕಾರಣವಾದ ಅನಂತಶಕ್ತಿಯ ಲೀಲಾಪ್ರಧಾನ ಪರಮಾನಂದವೆ ಇವನ ಪ್ರೇರಣೆಯ ಆದಿಮೂಲವು. ಅಸ್ತು. ಕ್ಷಿಪ್ರಂ ಜಯಂತು ಯಾತ್ರಿಕಾಃ!

ಮನೋಹರ ಗ್ರಂಥಮಾಲೆಯ ಹೊಸ ಆಜೀವ ಚಂದಾದಾರರು

[ಮನೋಹರ ಗ್ರಂಥಮಾಲೆಗೆ ಹೊಸ ವರ್ಷದಿಂದ ಆಜೀವ ಚಂದಾದಾರರಾಗಲೊಪ್ಪಿ, ನೆರವಿತ್ತ ಈ ಉದಾರಿಗಳಿಗೆ ಗ್ರಂಥಮಾಲೆಯು ಎಂದಿಗೂ ಕೃತಜ್ಞವಾಗಿದೆ.
—ಸಂ.]

೧.	ಕ್ಯಾಪ್ಟನ್ ಶ್ರೀ. ಆರ್. ಎಚ್. ದೇಸಾಯಿ, ಬಿ. ಎ.	ಬೆಳಗಾವಿ
೨.	ಶ್ರೀ. ಪಿ. ಆರ್. ಗದಗಕರ, ಬಿ. ಎ. ಎಲ್‌ಎಲ್. ಬಿ.	ಪಾಟಣಾ
೩.	,, ಅಂದಾನೆಪ್ಪನವರು ದೊಡ್ಡಮೇಟಿ, ಎಂ. ಎಲ್. ಎ.	ಜಕ್ಕಲಿ
೪.	,, ಜೆ. ಬಿ ತಟ್ಟಿ ಸಾಹುಕಾರರು	ಲಕ್ಷ್ಮೇಶ್ವರ
೫.	,, ಮೈಲಾರಗೌಡ ಮಾರ್ತಾಂಡಗೌಡ ಪಾಟೀಲ	ಕುರ್ತಕೋಟಿ
೬.	,, ದೇವಜಿ ರಾಮಚಂದ್ರ ಪಾಟೀಲ	ಕೋಳಿವಾಡ
೭.	,, ರಾಮರಾವ ನಾಗೇಶರಾವ ದೇಸಾಯಿ	ಕುಂದಗೋಳ
೮.	,, ಪಾಂಡುರಂಗರಾವ್ ವ್ಹಿ. ದೇಸಾಯಿ	ಕಿನ್ನಾಳ
೯.	,, ಎಸ್. ಸಿ. ಯಳಮಲಿ	ಗದಗ
೧೦.	,, ಎಸ್. ವಿ. ಮಳಗಿ ವಕೀಲರು	ಗದಗ
೧೧.	,, ಡಿ. ಜಿ. ಕಟ್ಟೀಮನಿ, ಬಿ. ಎ.	ಗದಗ
೧೨.	,, ಎ. ಎಸ್. ಪಾಟೀಲ	ಗದಗ-ಬೆಟಗೇರಿ
೧೩.	,, ಬಿ. ಡಿ. ಕುಲಕರ್ಣಿ	ಹಿರೆಹಂದಿಗೋಳ
೧೪.	,, ಬಿ. ಎ. ಪಾಟೀಲ	ಇಟಗಿ
೧೫.	,, ರಂಗನಾಥ ವೆಂಕಟೇಶ ಪಾಟೀಲ	ತಮನಾಳ
೧೬.	,, ಷಣ್ಮುಖಗೌಡ ಸೋಮನಗೌಡ ಪಾಟೀಲ	ಹರ್ಲಾಪುರ
೧೭.	,, ಕೃಷ್ಣಮೂರ್ತಿ ವಾಸುದೇವರಾವ ಪಾಟೀಲ	ಹೊಂಬಳ
೧೮.	,, ಕೃಷ್ಣರಾವ ರಾಮರಾವ ದೇಸಾಯಿ	ಗದಗ
೧೯.	,, ಪಾರ್ಥಸಾರಥಿ ಗಂಡೇರಾವ ಕೌಕೂರ	ಬಾಗಿಲುಕೋಟೆ
೨೦.	,, ವೆಂಕಟರಾವ ಆರ್. ವಡವಡಿಗಿ	ಬಾಗಿಲುಕೋಟೆ
೨೧.	,, ಡಾ. ಜಿ. ಎಸ್. ಕುಲಕರ್ಣಿ ಎಂ. ಬಿ. ಬಿ. ಎಸ್.	ಗದಗ
೨೨.	,, ಗುರುರಾಜ ವ್ಹಿ. ಅಪರಂಜಿ	ಗವಗ
೨೩.	,, ಮಾರ್ತಾಂಡಗೌಡ ಮೇಲ್ಗಿರಿಗೌಡ ಪಾಟೀಲ	ಕುರ್ತಕೋಟಿ
೨೪.	,, ಗಣಪತರಾವ ಶಂಕರರಾವ ದೇಸಾಯಿ	ತಿಮ್ಮಾಪುರ
೨೫.	,, ಈರಪ್ಪ ಚೆನ್ನಬಸಪ್ಪ ವಾಣಿ	ಧಾರವಾಡ

ವಿ. ಸೂಚನೆ: [ಈ ಹೆಸರುಗಳನ್ನು ಕಾಲಾನುಕ್ರಮದಲ್ಲಿ ಕೊಡಲಾಗಿದೆ.]

ಮನೋಹರ ಗ್ರಂಥಮಾಲೆ, ಧಾರವಾಡ

ಈ ಗ್ರಂಥಮಾಲೆಯು ಹದಿನೈದನೆಯ ಅಗಸ್ಟ ೧೯೩೩ ಕ್ಕೆ ಪ್ರಾರಂಭವಾಗಿದೆ.

ಕಾದಂಬರಿ, ಸಣ್ಣಕತೆ, ನಾಟಕ, ಹರಟೆ, ದಿನಚರಿ ಮೊದಲಾದ ಸರಸಸಾಹಿತ್ಯವನ್ನೂ ಕಾವ್ಯ, ವಿಮರ್ಶೆ, ವೇದಾಂತ, ವಿಜ್ಞಾನ ಮೊದಲಾದ ವಿಚಾರಸಾಹಿತ್ಯವನ್ನೂ ಸಂಗೀತ, ನೃತ್ಯ, ಚಿತ್ರಕಲೆ, ಶಿಲ್ಪಕಲೆ, ಆರೋಗ್ಯ, ಗ್ರಹಜೀವನ, ಸೂಚಿಶಿಲ್ಪ, ಗೃಹಾಲಂಕಾರ, ಪ್ರವಾಸ ಪರಿಚಯ ಮೊದಲಾದ ಸರ್ವಜ್ಞಾನ ಪರಿಚಯವನ್ನು ಮಾಡಿಕೊಡುವ ಪ್ರಯೋಜಕಸಾಹಿತ್ಯವನ್ನೂ ಈ ಗ್ರಂಥಮಾಲೆಯು ಪ್ರಕಟಸುತ್ತದೆ.

ಈ ಕಾರ್ಯದಲ್ಲಿ ಶ್ರೀಯುತರಾದ ದ. ರಾ. ಬೇಂದ್ರೆ, ವಿ. ಕೃ. ಗೋಕಾಕ, ರಂ. ಶ್ರೀ. ಮುಗಳಿ ಇವರು ಪ್ರಾರಂಭದಿಂದಲೂ ಈ ಗ್ರಂಥಮಾಲೆಗೆ ಸಾಹಿತ್ಯ ವಿಷಯದಲ್ಲಿ ಸಲಹೆಗಾರರಾಗಿ ಮಾರ್ಗದರ್ಶನ ಮಾಡುತ್ತಿದ್ದಾರೆ.

ಇಡಿ ಕನ್ನಡ ನಾಡಿನ ಸಿದ್ಧಹಸ್ತ ಬರೆಹಗಾರರೆಲ್ಲರೂ ಈ ಗ್ರಂಥಮಾಲೆಗಾಗಿ ಗ್ರಂಥಗಳನ್ನು ಬರೆದುಕೊಟ್ಟು ಅದರ ಗೌರವವನ್ನೂ ಕೀರ್ತಿಯನ್ನೂ ಹೆಚ್ಚಿಸಿದ್ದಾರೆ; ಗ್ರಂಥಮಾಲೆಯು ಸಾಹಿತ್ಯಸ್ಥಾನವನ್ನು ಉನ್ನತವಾಗಿಸಿದ್ದಾರೆ.

ಗ್ರಂಥಮಾಲೆಯು ಹೊಸ ವರ್ಷಾರಂಭವು ಅಗಸ್ಟ ತಿಂಗಳಿಂದಾಗುತ್ತದೆ.

ಅಗಸ್ಟದಿಂದ ಜುಲೈ ವರೆಗಿನ ಒಂದು ವರ್ಷದ ಅವಧಿಯಲ್ಲಿ ಈ ಗ್ರಂಥಮಾಲೆಯು ತನ್ನ ಗ್ರಾಹಕರಿಗೆ, ಅವರಿಂದ ಸಂದ ಚಂದಾಹಣದಲ್ಲಿ ಒಂದು ಸಾವಿರ ಪುಟಗಳ ಸಾಹಿತ್ಯವನ್ನು ಸಲ್ಲಿಸುವುದು. ಅಂಚೆಯ ದರ ಮೊದಲಿಗಿಂತಲೂ ಹೆಚ್ಚೆಚ್ಚು ಆಗುತ್ತ ಬಂದಿದ್ದರಿಂದ ಗ್ರಂಥಗಳನ್ನು ಒಂದೇ ಕಂತಿನಲ್ಲಿ, ಹೆಚ್ಚೆಂದರೆ ಎರಡು ಕಂತುಗಳಲ್ಲಿ ಮಾತ್ರ ಚಂದಾದಾರರಿಗೆ ರಜಿಸ್ಟರದಿಂದ ತಲುಪಿಸಲಾಗುತ್ತದೆ.

ಆಯಾ ವರ್ಷದಲ್ಲಿ ಪ್ರಕಟವಾಗುವ ಗ್ರಂಥಗಳ ಸಂಖ್ಯೆಯು ಅವುಗಳ ಪುಟಸಂಖ್ಯೆಯ ಪ್ರಮಾಣದ ಮೇಲಿಂದ ಹೆಚ್ಚುಕಡಿಮೆಯಾಗಬಹುದು.

ಗ್ರಂಥಮಾಲೆಯು ಸದ್ಯದ ವಾರ್ಷಿಕ ಚಂದಾ ಆರು ರೂಪಾಯಿ ಎಂಟಾಣೆ ಮಾತ್ರ. (೬-೮-೦) ಇದೆ.

[ಅಗಸ್ಟ ೧೯೫೪ರ ಹಿಂದೆ ಗ್ರಂಥಮಾಲೆಯು ವಾರ್ಷಿಕ ಚಂದಾ ೮ ರೂಪಾಯಿ ಇದ್ದುದನ್ನು, ಹೊಸ ವರ್ಷದಿಂದ—ಅಂದರೆ ಅಗಸ್ಟ ೧೯೫೪ರಿಂದ ಪ್ರಾರಂಭವಾಗುವ ವರ್ಷದಿಂದ—ಆರು ರೂಪಾಯಿ ಎಂಟಾಣೆಗೆ ಇಳಿಸಲಾಗಿದೆ.]

ಗ್ರಂಥಮಾಲೆಗೆ ಒಂದೇ ಸಲಕ್ಕೆ ೧೫೦ ರೂಪಾಯಿ ಸಲ್ಲಿಸಿದವರನ್ನು ಆಜೀವ ಚಂದಾದಾರರನ್ನಾಗಿ ಮಾಡಿಕೊಂಡು, ಅವರಿಗೆ ಆ ವರ್ಷದಿಂದ ಪ್ರಾರಂಭ ಮಾಡಿಕೊಂಡು ಅವರ ಆಜನ್ಮಪರ್ಯಂತ ಮಾಲೆಯ ಗ್ರಂಥಗಳನ್ನು ಹಾಗೆಯೆ ಸಲ್ಲಿಸಲಾಗುವುದು. ಮತ್ತು ಬಿಡಿಮುತ್ತುಗಳನ್ನೂ ಅವರಿಗೆ ಅರ್ಧ ಬೆಲೆಗೆ ಕೊಡಲಾಗುವುದು.

ವರ್ಷದಲ್ಲಿ ಯಾವಾಗ ಬೇಕಾದರೂ ಹೊಸದಾಗಿ ಚಂದಾದಾರರಾಗಬಹುದು.

ಚಂದಾಹಣವನ್ನು ಮುಂಗಡವಾಗಿ ಕೆಳಗೆ ಕಾಣಿಸಿದ ವಿಳಾಸಕ್ಕೆ ಮನಿಯಾರ್ಡರ ಮೂಲಕ ಕಳುಹಿಸಿಕೊಡಬೇಕು.

ಗ್ರಂಥಮಾಲೆಯ ಹಿಂದಿನ ಗ್ರಂಥಗಳಿಗೆ ಚಂದಾಸವಲತ್ತು ಅನ್ವಯಿಸುವುದಿಲ್ಲ.

ಗ್ರಂಥಗಳಿಗಾಗಿ ಬೇಡಿಕೆ ಕಳಿಸಿಕೊಡುವವರು "ಮಾರಾಟಕ್ಕೆ ದೊರೆಯುವ ಗ್ರಂಥಗಳ" ಪಟ್ಟಿಯನ್ನು ದಯವಿಟ್ಟು ಗಮನಿಸಬೇಕು.

ಪುಸ್ತಕವ್ಯಾಪಾರಿಗಳಿಗೆ (Recognised) ಮುಖಬೆಲೆಯ ಮೇಲೆ ೧೮$\frac{3}{4}$% ಕಮಿಶನ್ ಕೊಡಲಾಗುವದು. ನೂರು ರೂಪಾಯಿಗಳ ಮೇಲ್ಪಟ್ಟ ಬೇಡಿಕೆಗಳಿಗೆ ೨೫% ಕಮಿಶನ್ ಕೊಡಲಾಗುವದು. ಪ್ಯಾಕಿಂಗ್, ಅಂಚೆವೆಚ್ಚ ಪ್ರತ್ಯೇಕ.

ವಿಳಾಸ :

ಸಂಪಾದಕ :

ಮನೋಹರ ಗ್ರಂಥಮಾಲಾ, ಧಾರವಾಡ

ಮಾರಾಟಕ್ಕೆ ದೊರೆಯುವ ಗ್ರಂಥಗಳು

ಕಾದಂಬರಿಗಳು :

೧.	ಧರ್ಮಸೆರೆ	ಜಡಭರತ	೨	೦	೦
೨.	ನಿಸರ್ಗ	ಮಿರ್ಜಿ ಅಣ್ಣಾರಾಯ	೩	೮	೦
೩.	ಅನಂತ	ಸತ್ಯಬೋಧ	೧	೪	೦
೪.	ಕಾರಣಪುರುಷ	ರಂ. ಶ್ರೀ. ಮುಗಳಿ	೧	೮	೦
೫.	ಗಂಗಾಸಾನಿ	ವರಗಿರಿ	೧	೧೪	೦
೬.	ಮಾದನ ಮಗಳು	ಎಂ. ವಿ. ಸೀ.	೬	೦	೦
೭.	ಮುನಿಯನ ಮಾದರಿ	ಅಶ್ವತ್ಥ	೨	೧೨	೦
೮.	ಮರ್ಯಾದೆ ಮಹಲು	ಅಶ್ವತ್ಥ	೩	೮	೦
೯.	ಮೇದಿನಾಪುರದ ಮಲ್ಲ	ಗುರುರಾಜ ಜೋಶಿ	೧	೮	೦
೧೦.	ಇಂದ್ರಚಾಪ	ತಲ್ಚೇರ ರಂಗರಾವ್	೨	೮	೦
೧೧.	ಎರಡನೆಯ ಸಂಬಂಧ	ಎನ್ಕೆ. ಕುಲಕರ್ಣಿ	೩	೦	೦
೧೨.	ಗೃಹದಾರಣ್ಯಕ	ನಾ. ಕಸ್ತೂರಿ	೧	೮	೦
೧೩.	ಶಾಂತಲಾ	ಕೆ. ವಿ. ಅಯ್ಯರ್	೪	೮	೦
೧೪.	ಔರಂಗಜೇಬ	ಕೆ. ವಾಸುದೆ ವಾಚಾರ್ಯ	೩	೦	೦
೧೫.	ಯವನಸ್ಯೆರಂಧ್ರಿ	ಕೆ. ವಾಸುದೇವಾಚಾರ್ಯ	೨	೪	೦
೧೬.	ವಾಲ್ಮಿಕಿವಿಜಯ	ಕೆ. ವಾಸುದೇವಾಚಾರ್ಯ	೧	೦	೦

ನಾಟಕಗಳು :

೧೭.	ಎತ್ತಿದ ಕೈ	ರಂ. ಶ್ರೀ. ಮುಗಳಿ	೧	೧೪	೦
೧೮.	ಯುಗಾಂತರ	ವಿ. ಕೃ. ಗೋಕಾಕ	೦	೧೨	೦
೧೯.	ಬಿತ್ತಿದ ಬೆಳೆ	ಶಿವರಾಮ ಕಾರಂತ	೧	೦	೦
೨೦.	ವೇಣುಮಾವ	ಶ್ರೀಮತಿ ಪ. ಸೀತಾದೇವಿ	೦	೧೨	೦
೨೧.	ಮಗು	ಅಶ್ವತ್ಥ	೧	೮	೦
೨೨.	ಹೊಸ ಸಂಸಾರ	ದ. ರಾ. ಬೇಂದ್ರೆ	೨	೮	೦
೨೩.	ಪತಿತೋದ್ಧಾರ	ಎನ್ಕೆ ಹುಯಿಲಗೋಳ	೧	೮	೦
೨೪.	ಭಾಗ್ಯಶ್ರೀ	ಲ. ಜಿ. ಬೇಂದ್ರೆ	೧	೦	೦
೨೫.	ನಲದಮಯಂತಿ	ಕೆ. ವಾಸುನೇವಾಚಾರ್ಯ	೧	೮	೦
೨೬.	ವಿಮರ್ಶಕ ವೈದ್ಯ	ವಿ. ಕೃ. ಗೋಕಾಕ	೦	೬	೦

ಸಣ್ಣ ಕತೆ, ಲಲಿತಪ್ರಬಂಧಗಳು :

೨೭.	ಕುರಿಹಿಂಡು	ಜಲಧರ	೨	೮	೦
೨೮.	ಹೂಬಾಣಗಳು	ಪ. ರಮಾನಂದ	೩	೦	೦
೨೯.	ಜಡಭರತನ ಕನಸುಗಳು	ಜಡಭರತ	೧	೮	೦
೩೦.	ಪ್ರೇಮವಿಜಯ	ಕೆ. ವಾಸುದೇವಾಚಾರ್ಯ	೨	೮	೦
೩೧.	ತೊಳೆದ ಮುತ್ತು	,, ,,	೩	೨	೦
೩೨.	ಬೆಳಗಿದ ದೀಪಗಳು	,, ,,	೧	೧೨	೦
೩೩.	ಬಹುಮಾನ ಪಡೆದ ಬರಹಗಳು	ವಿವಿಧ ಲೇಖಕರು	೧	೧೨	೦
೩೪.	ಚೀನದ ಬಾಳು-ಬದುಕು	,, ,,	೭	೦	೦
೩೫.	ಬಾಳ ಹೊಳೆ	ಅಶ್ವತ್ಥ	೨	೮	೦
೩೬.	ಮಾಲಾ ಮತ್ತು ಇತರ ಕತೆಗಳು	ಶ್ರೀಮತಿ ಕಾತ್ಯಾಯಿನಿ	೨	೦	೦
೩೭.	ಕೆಂಪು ಗುಲಾಬಿ	ಶ್ರೀಮತಿ ಸೀತಾರತ್ನ	೧	೮	೦

ಕಾವ್ಯಗಳು:

೩೮.	ಗರಿ	ಅಂಬಿಕಾತನಯದತ್ತ ಒಳ್ಳೆ ಕಾಗದ	೨	೮	೦
೩೯.	ಸಖೀಗೀತ	,, ,,	೨	೮	೦
೪೦.	ಬಾಳದೇಗುಲದಲ್ಲಿ	ವಿ. ಕೃ. ಗೋಕಾಕ ಒಳ್ಳೆ ಕಾಗದ	೫	೦	೦
		ಸಾದಾ	೩	೮	೦
೪೧.	ಸಮುದ್ರ ಗೀತಗಳು	,, ,,	೧	೦	೦
೪೨.	ಬಾಸಿಗ	ರಂ. ಶ್ರೀ. ಮುಗಳಿ	೧	೦	೦
೪೩.	ಮಹಾಯುದ್ಧ	ಅಶ್ವತ್ಥ	೧	೮	೦

ಇತರ ಸಾಹಿತ್ಯ :

೪೪.	ಸಾಹಿತ್ಯ ಮತ್ತು ವಿಮರ್ಶೆ	ದ. ರಾ. ಬೇಂದ್ರೆ	೧	೮	೦
೪೫.	ದತ್ತವಾಣಿ	ಮಿರ್ಜಿ ಅಣ್ಣಾರಾಯ	೧	೪	೦
೪೬.	ಮಾತೃವಾಣಿ	ಮಧುರಚೆನ್ನ	೧	೪	೦
೪೭.	ಯುಗಪ್ರವರ್ತಕ ಬಸವಣ್ಣ	ಚಿಂತಾಮಣಿ	೧	೦	೦
೪೮.	ಯಾತ್ರಿಕ	ರಂಗನಾಥ ದಿವಾಕರ	೨	೦	೦

ಹಿಂದಿನ ಎರಡುವರುಷಗಳ ಗ್ರಂಥಗಳು

[೧೯೫೨ ಆಗಸ್ಟದಿಂದ ೧೯೫೩ ಜುಲೈ ವರೆಗೆ]

೧೧೫ ೧೧೬ } **ತೊಳೆದ ಮುತ್ತು** (ಬೆಳ್ಳೀಚಿಕ್ಕಿ ಸಹಿತ) ಕೆರೂರ ೩೧೦ ೩-೨-೦

೧೧೭ **ಸೆರೆಮನೆ** (ಸಮರಸ ಜೀವನದ ೬ನೇ ಭಾಗ) ಗೋಕಾಕ ೧೩೬ ೧-೮-೦

೧೧೮ ೧೧೯ ೧೨೦ } **ಪರಿಹಾರ** (,, ,, ಕೊನೆಯ ಭಾಗ) ಗೋಕಾಕ ೪೭೨ ೫-೮-೦

(ಒಟ್ಟು ಕೊಟ್ಟ ಪುಟಗಳು : ೯೧೮ ; ಮುಖ ಬೆಲೆ : ೧೦-೨-೦

[೧೯೫೩ ಆಗಸ್ಟದಿಂದ ೧೯೫೪ ಜುಲೈ ವರೆಗೆ]

೧೨೧ **ಮಾಲಾ ಮತ್ತು ಇತರ ಕಥೆಗಳು** ಶ್ರೀಮತಿ ಕಾತ್ಯಾಯನಿ ೨೧೨ ೨-೦-೦

೧೨೨ **ಗೃಹದಾರಣ್ಯಕ** ನಾ. ಕಸ್ತೂರಿ . . ೧೫೦ ೧-೮-೦

೧೨೩ **ಪತಿತೋದ್ಧಾರ** ಎನ್ಕೆ ಹುಯಿಲಗೋಳ . . ೧೩೫ ೧-೮-೦

೧೨೪ ೧೨೫ } **ಶಾಂತಲಾ** ಕೆ. ವಿ. ಅಯ್ಯರ . , ೪೧೦ ೪-೮-೦

೧೨೬ **ಕೆಂಪುಗುಲಾಬಿ** ಶ್ರೀಮತಿ ಎಂ. ಸೀತಾರತ್ನ . ೧೪೩ ೧-೮-೦

(ಒಟ್ಟು ಕೊಟ್ಟ ಪುಟಗಳು : ೧೦೫೦; ಮುಖಬೆಲೆ : ೧೧-೦-೦)

[೧೯೫೪ ಆಗಸ್ಟದಿಂದ ೧೯೫೫ ಜುಲೈ ವರೆಗೆ]

೧೨೭ **ಯಾತ್ರಿಕ** ರಂಗನಾಥ ದಿವಾಕರ ೧೬೦ ೨-೧-೦

೧೨೮ ೧೨೯ } **ಗೃಹದೇವತೆ** (ಸಚೂ) ಶ್ರೀಮತಿ ಬಿ. ವ್ಹಿ. ಚಂಪಕಮಾಲಾ (ಅಚ್ಚಿನಲ್ಲಿ)

ಬರಲಿರುವ ಗ್ರಂಥಗಳು

ಗ್ರಂಥಮಾಲೆಯಲ್ಲಿ :

೧	ಮೂಕಬಲಿ	ನಾಟಕ	ಜಡಭರತ
೨	ಸಾಹಿತ್ಯಕೇಳಿ	ಪ್ರಾಯೋಗಿಕ ಕಾದಂಬರಿ	ವಿವಿಧ ಲೇಖಕರು
೩	ಸ್ವಪ್ನದರ್ಶಿ	ಗೀತನಾಟಕಗಳು	ಕೀರ್ತಿ
೪	ಗಾಳಿಯ ಉಡಿಯಲ್ಲಿ	ಪ್ರಬಂಧಗಳು	ಕೆ. ಆರ್. ಮಹಿಷಿ
೫	‘ ಖೊ ! ’	ಪ್ರಾಯೋಗಿಕ ಕಾದಂಬರಿ	ವಿವಿಧ ಲೇಖಕರು
೬	ಆಶು ನಾಟಕಗಳು		ಜಿ. ಬಿ. ಜೋಶಿ
೭	ಉಭಯ ಸಂಕಟ	ನಾಟಕ	ದ. ರಾ. ಬೇಂದ್ರೆ
೮	ಒಲವಿಗ್ಗೆಲವು	ನಾಟಕ	ದ. ರಾ. ಬೇಂದ್ರೆ
೯	ಒಂಬತ್ತು ಏಕಾಂಕಗಳು		ಶ್ರೀರಂಗ

ಬಿಡಿಮುತ್ತುಗಳಾಗಿ :

೧	ಕವಿ-ಕಾವ್ಯ-ದೃಷ್ಟಿ	ವಿ. ಸೀ.
೨	ಸಂಶೋಧನ ಮತ್ತು ಸಮಾಲೋಚನೆ	ಸದಾನಂದ ನಾಯಕ
೩	ಸಮರಸವೇ ಜೀವನ	ವಿ. ಕೃ. ಗೋಕಾಕ
೪	ನಾಟಕ-ರಂಗ-ಪ್ರಯೋಗ	ಜಿ. ಬಿ. ಜೋಶಿ



ಶ್ರೀ. ರಂಗನಾಥ ದಿವಾಕರರು

ಬಿಹಾರದ ರಾಜ್ಯಪಾಲರಾದ ಶ್ರೀ. ದಿವಾಕರ ರಂಗರಾಯರು ನಿರ್ಮಲ ಹೃದಯದ ರಾಜಕಾರಣಿಗಳು, ತತ್ವವೇತ್ತರು ಹಾಗು ಸಾಹಿತಿಗಳು. ಅವರ 'ಸೆರೆಯ ಮರೆಯಲ್ಲಿ' ರಾಜಕಾರಣದ ಉತ್ತಮ ಗ್ರಂಥ; 'ಅಂತರಾತ್ಮನಿಗೆ' ಕನ್ನಡದ ಗೀತಾಂಜಲಿ: ಉಪನಿಷತ್ತು, ಗೀತೆ, ಹಾಗೂ ಶಿವಶರಣರ ವಚನಗಳ ಮೇಲೆ ಇವರು ಬರೆದ ಪುಸ್ತಕಗಳು ಪ್ರಮಾಣಗ್ರಂಥಗಳಾಗಿವೆ. ಕನ್ನಡದಲ್ಲಿಯ ತತ್ವಜ್ಞಾನವನ್ನೊಳಗೊಂಡ ಸಾಹಿತ್ಯದ ದೊಡ್ಡ ಕೊರತೆಯನ್ನು ತುಂಬಲು ಶ್ರೀಯುತರು ಬಹುವಾಗಿ ಶ್ರಮಿಸಿದ್ದಾರೆ. ಪ್ರಸ್ತುತ ಗ್ರಂಥ ಅವರ ಜೀವನದ ಅನುಭವ, ಅವಲೋಕನ, ವಿಚಾರಗಳ ಸಾರಸಂಗ್ರಹವಾಗಿದೆ.